ಭಾನುವಾರ, ಮಾರ್ಚ್ 27, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಸಪ್ತಾಹ

ನವದೆಹಲಿಯಲ್ಲಿ ನಡೆಯುತ್ತಿರುವ ಲ್ಯಾಕ್ಮೆ ಫ್ಯಾಷನ್ ಸಪ್ತಾಹದಲ್ಲಿ ಶನಿವಾರ ಪಾಲ್ಗೊಂಡಿದ್ದ ರೂಪದರ್ಶಿ



ಫ್ಯಾಷನ್ ಕ್ರಾಂತಿಗೆ ಒಂದು ಪ್ರೇರಣೆ

RAMRAJ COTTON

ನಮ್ಮ ಸಂಪ್ರದಾಯ ಮತ್ತು ಸೊಬಗನ್ನು ಅಳವಡಿಸಿಕೊಳ್ಳುವುದು, ರಾಮ್‌ರಾಜ್ ಪಂಚೆಯನ್ನು ಒಂದು ಸ್ಟೈಲ್ ಉಡುಪಾಗಿ ಮಾರ್ಪಡಿಸಿದೆ.

ನಮ್ಮ ಸ್ವದೇಶಿ ಫ್ಯಾಷನ್ ಅನ್ನು ದೇಶದಾದ್ಯಂತ ಪ್ರಸಾರ ಮಾಡುವುದು, ವಿಶೇಷವಾಗಿ ಯುವ ಪೀಳಿಗೆಗಳಲ್ಲಿ ಹೆಮ್ಮೆಯೆನಿಸಿದೆ.

– ರಾಕಿಂಗ್ ಸ್ಟಾರ್ ಯಶ್

ಗೌರವಾನ್ವಿತರಿಗೆ

RAMRAJ

ಕಾಟನ್

ಪಂಚೆಗಳು • ಷರ್ಟ್‌ಗಳು

SCAN QR CODE FOR STORE LOCATION

India's Most Trusted Dhotis Brands

India's Most Attractive Dhotis Brands

BANGALORE SHOWROOMS

JAYANAGAR - SS PLAZA, 10TH D MAIN ROAD • MALLESHWARAM - 425, 8TH CROSS, SAMPIGE ROAD • KG ROAD - 19/3 KEMPEGOWDA ROAD • RAJAJI NAGAR - DR. MODI EYE HOSPITAL ROAD,860/A, BASAVESHWARNAGAR
VIJAYANAGAR - 72, EAST OF CHORD ROAD • CHINTAMANI - 495/471 SIDLAGHATTA MAIN ROAD CHINTAMANI, KOLAR • SHIVAJI NAGAR - 308, SRI RAMULA SANNIDHI STREET • J.P.NAGAR - 5.RBI GAUTHAM LAYOUT, 7TH STAGE
GANDHI BAZAR - 183,GANDHI BAZAAR MAIN ROAD, BASAVANAGUDI R.T.NAGAR - 647, HMT LAYOUT, GANGANAGAR • HSR LAYOUT - 1656, 27TH MAIN ROAD, SECTOR 2 • KANAKAPURA - OLD VIJAYA BANK BUILDING, MG ROAD
UTTARAHALLI - 04, UTTARAHALLI HOBLI, SUBRAMANYAPURA POST • RAMAMURTHY - 3/8, RAMAMURTHY NAGAR MAIN ROAD • RAMNAGARA - 1382/A, 1 JOOR EXTENSION SOUTH BLOCK • NELAMANGALA - 53-3-209, B.H.ROAD
KENGERI - 177, HOYSALA CIRCLE, KENGERI UPANAGARA • TUMKUR - 1974/A BOOPALAM BUILDING, M.G.ROAD, CELL : 9972880097 • RR NAGAR - 60TH, FEET ROAD, BEML LAYOUT, 4TH STAGE, RR NAGAR, CELL : 8886255000
YESHWANTHPUR - 35, SHOP GOKUL 1ST STAGE 4TH PHASE • MARATHAHALLI - 37, KHATHA, CHINNAPPANAHALLI, K.R.PURAMHOBLI • BANASHANKARI - 241/A, OPP TO KAMAKYA THEATER
KORAMANGALA - NO.7, 17TH MAIN ROAD, 100 FEET ROAD YELHANKA - 792, MIG II STAGE, MOTHER DAIRY ROAD • HESARAGATTA - 1, 1ST CROSS, MALLASANDRA HESARAGATTA MAIN ROAD

Available @ Company Showrooms & All Leading Textile Shops | Shop Online @ www.ramrajcotton.in

ಕುಡಿಯುವ ನೀರು, ಒಳಚರಂಡಿ, ರಸ್ತೆ ಗುಂಡಿ, ಸಂಚಾರ ದಟ್ಟಣೆ, ರಸ್ತೆ ಅಗೆತ ಸಮಸ್ಯೆ– ಇತ್ಯರ್ಥಕ್ಕೆ ಕಾಲಮಿತಿ ನಿಗದಿ

ಬಗೆಹರಿಯಿತು ಬಹುದಿನಗಳ ಬವಣೆ

ಕಾರ್ಯಕ್ರಮದಲ್ಲಿ ಶಾಸಕ ಎಂ.ಸತೀಶ್ ರೆಡ್ಡಿ ಮಾತನಾಡಿದರು. (ಎಡದಿಂದ) ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ರಾಮಕೃಷ್ಣ, ಸ್ಥಳೀಯ ಮುಖಂಡರಾದ ರಮೇಶ್, ಸಿ.ಆರ್.ರಾಮಮೋಹನ್ ರಾಜು, ಎಸಿಪಿ ಎಂ.ಎನ್. ಕರಿಬಸವನಗೌಡ ಇದ್ದಾರೆ (ಎಡಚಿತ್ರ) ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಾರ್ವಜನಿಕರು –ಪ್ರಜಾವಾಣಿ ಚಿತ್ರಗಳು

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಬವಣೆಯಿಂದ ಹೈರಾಣಾದವರು, ಒಳಚರಂಡಿ ಪದೇಪದೇ ಕಟ್ಟಿಕೊಂಡು ಸಮಸ್ಯೆ ಎದುರಿಸುವವರು, ರಸ್ತೆಯ ತಗ್ಗು ದಿಣ್ಣೆಗಳಿಂದ ಬಸವಳಿದವರು, ಸಂಚಾರ ದಟ್ಟಣೆಯಲ್ಲಿ ಬಳಲಿದವರು, ರಸ್ತೆ ಅಗೆಯುವಿಕೆಯ ಸಮಸ್ಯೆಗೆ ತತ್ತರಿಸಿದವರು.... ಹೀಗೆ ಹತ್ತು ಹಲವು ಗೋಳುಗಳನ್ನೆದುರಿಸುತ್ತಿರುವ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಾಗರಿಕರು ಶನಿವಾರ ತುಸು ನಿರಾಳರಾದರು.

ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ತಿಂಗಳಾನುಗಟ್ಟಲೆ ಸರ್ಕಾರಿ ಕಚೇರಿಗಳಿಗೆ ಅಲೆದು ಸುಸ್ತಾಗಿದ್ದ ಅವರಲ್ಲಿ ಬಹುದಿನಗಳ ಬವಣೆ ಬಗೆಹರಿಯುವ ಹೊಸ ಆಶಾಕಿರಣ ಮೂಡಿದೆ. ಇಂತಹದ್ದೊಂದು ಬದಲಾವಣೆಗೆ ಕಾರಣವಾಗಿದ್ದು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಜೆ.ಪಿ.ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಜನಸ್ಪಂದನ ಕಾರ್ಯಕ್ರಮ.

ಈ ಕಾರ್ಯಕ್ರಮದಲ್ಲಿ ಜನರ ಅನೇಕ ದೂರು ದುಮ್ಮಾನಗಳನ್ನು ರಾಜ್ಯ ಸರ್ಕಾರದ ಮುಖ್ಯ ಸಚೇತಕರೂ ಆಗಿರುವ ಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ಎಂ. ಸತೀಶ ರೆಡ್ಡಿ ಅವರು ಸ್ಥಳದಲ್ಲೇ ಇತ್ಯರ್ಥಪಡಿಸಿದರು. ಇನ್ನು ಕೆಲವು ಅಹವಾಲುಗಳಿಗೆ ಕಾಲಮಿತಿಯೊಳಗೆ ಪರಿಹಾರ ನೀಡುವ ಭರವಸೆ ನೀಡಿದರು.

ಸಾರ್ವಜನಿಕರಿಂದ ದೂರು ಬಂದ ಬಳಿಕವೂ ಸಮಸ್ಯೆ ಬಗೆಹರಿಸಲು ಕ್ರಮಕೈಗೊಳ್ಳದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, 'ಈ ರೀತಿಯ ವರ್ತನೆಗಳಿಂದ ನಿಮ್ಮ ಗೌರವಕ್ಕೆ ನೀವೇ ಚ್ಯುತಿ ತಂದುಕೊಳ್ಳುತ್ತಿದ್ದೀರಿ. ಈಗ ಬಿಬಿಎಂಪಿ ಸದಸ್ಯರಿಲ್ಲ. ಹಾಗಾಗಿ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಗುರುತರ ಜವಾಬ್ದಾರಿ ವಾರ್ಡ್ ಮಟ್ಟದ ಅಧಿಕಾರಿಗಳ ಮೇಲಿದೆ. ನಿಮ್ಮ ಹಂತದಲ್ಲಿ ಬಗೆಹರಿಸಲಾಗದ ಸಮಸ್ಯೆಗಳಿದ್ದರೆ, ನನ್ನ ಗಮನಕ್ಕೆ ತನ್ನಿ. ಜನರ ಸೇವೆ ಮಾಡುವುದು ಪುಣ್ಯದ ಕೆಲಸ. ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಸಮಸ್ಯೆಗಳೇ ಇರುವುದಿಲ್ಲ' ಎಂದರು.

'ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ₹ 200 ಕೋಟಿಗೂ ಹೆಚ್ಚು ಅನುದಾನ ನಮ್ಮ ಕ್ಷೇತ್ರಕ್ಕೆ ಬಿಡುಗಡೆಯಾಗಿದ್ದು, ಇದರಲ್ಲಿ ಅನೇಕ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಆಸ್ಪತ್ರೆ, ಶಾಲೆ, ರಸ್ತೆ, ಉದ್ಯಾನಗಳು ಹಾಗೂ ಕೆರೆಗಳ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಕಾಮಗಾರಿಗಳು ಪ್ರಗತಿಯಲ್ಲಿದ್ದು, ವರ್ಷದೊಳಗೆ ಪೂರ್ಣಗೊಳ್ಳಲಿವೆ. ಕ್ಷೇತ್ರದ ಎಂಟೂ ವಾರ್ಡ್‌ಗಳಲ್ಲೂ ಪ್ರಾಥಮಿಕ ಆರೋಗ್ಯ ಕೇಂದ್ರ ಆರಂಭಿಸಿದ್ದೇವೆ. ರಾಜಕಾಲುವೆ ದುರಸ್ತಿಗೆಂದೇ ಸರ್ಕಾರ ಬೊಮ್ಮನಹಳ್ಳಿ ಕ್ಷೇತ್ರಕ್ಕೆ ₹ 200 ಕೋಟಿ ಅನುದಾನ ಒದಗಿಸಿದೆ' ಎಂದು ತಿಳಿಸಿದರು.

'ಈ ಹಿಂದೆ ಪ್ರತಿವರ್ಷವೂ ಮಳೆ ಬಂದಾಗಲೆಲ್ಲ ಸಾರಕ್ಕಿ ಕೆರೆ ಆಸುಪಾಸಿನ ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿ ಪಾತ್ರೆ-ಪಗಡಿಗಳೆಲ್ಲ ತೇಲುವ ಸ್ಥಿತಿ ನಿರ್ಮಾಣವಾಗುತ್ತಿತ್ತು. ದಂಡೆಗಳನ್ನು ಅಭಿವೃದ್ಧಿಪಡಿಸಿದ ಬಳಿಕ ಈ ಸಮಸ್ಯೆ ಬಹುತೇಕ ನಿವಾರಣೆ ಆಗಿದೆ. ಈ ಕೆರೆ ಅಭಿವೃದ್ಧಿಗೆ ಮತ್ತೆ ₹ 3 ಕೋಟಿ ಅನುದಾನ ಒದಗಿಸಿದ್ದೇನೆ' ಎಂದರು.

ಒತ್ತುವರಿ –ಶೂನ್ಯ ಸಹನೆ: 'ಸರ್ಕಾರಿ ಜಾಗ ಒತ್ತುವರಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಒತ್ತುವರಿಯಾಗಿದ್ದ 2.5 ಎಕರೆ ಜಾಗವನ್ನು ತೆರವುಗೊಳಿಸಿ ಜರಗನಹಳ್ಳಿ ಉದ್ಯಾನವನ್ನು ಅಭಿವೃದ್ಧಿಪಡಿಸಿದ್ದೇವೆ. ಬನ್ನೇರುಘಟ್ಟ ರಸ್ತೆಯಲ್ಲಿ ಒತ್ತುವರಿಯಾಗಿದ್ದ 2 ಎಕರೆ ಸರ್ಕಾರಿ ಜಾಗವನ್ನು ತೆರವುಗೊಳಿಸಿ ಆಸ್ಪತ್ರೆ ನಿರ್ಮಿಸಿದ್ದೇವೆ' ಎಂದರು.

ಶೇ 85ರಷ್ಟು ಕಸ ವಿಂಗಡಣೆ: 'ಬಿಬಿಎಂಪಿ ವ್ಯಾಪ್ತಿಯಲ್ಲೇ ಕಸವನ್ನು ಮೂಲದಲ್ಲೇ ಹಸಿ ಮತ್ತು ಒಣ ಕಸವೆಂದು ಬೇರ್ಪಡಿಸುವುದರಲ್ಲಿ ಶೇ 85ರಷ್ಟು ಪ್ರಗತಿ ಸಾಧಿಸಿರುವ ಏಕೈಕ ಕ್ಷೇತ್ರ ಬೊಮ್ಮನಹಳ್ಳಿ. ಹಸಿ ಕಸವನ್ನು ವಾರ್ಡ್‌ನಲ್ಲೇ ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ, ಅಲ್ಲಿನ ಮನೆಗಳ ಟೆರೇಸ್ ಗಾರ್ಡನ್‌ಗಳಲ್ಲೇ ತರಕಾರಿ ಬೆಳೆಸಲು ಬಳಕೆಯಾಗುವಂತೆ ಮಾಡಬೇಕು. ಈಗಾಗಲೇ ಕೆಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಇಂತಹ ವ್ಯವಸ್ಥೆ ಇದೆ' ಎಂದರು.

ಒಳಚರಂಡಿ ಸಮಸ್ಯೆ–ಶಾಶ್ವತ ಪರಿಹಾರಕ್ಕೆ ಒತ್ತಾಯ

ಒಳಚರಂಡಿ ಸಮಸ್ಯೆ ಇರುವ ಕುರಿತು ಅನೇಕ ಸಾರ್ವಜನಿಕರು ಅಹವಾಲು ತೋಡಿಕೊಂಡರು.

'ಪುಟ್ಟೇನಹಳ್ಳಿಯ 26ನೇ ಮುಖ್ಯ ರಸ್ತೆ ಪ್ರದೇಶದಲ್ಲಿ ಒಳಚರಂಡಿ ಆಗಾಗ ಕಟ್ಟಿಕೊಳ್ಳುತ್ತದೆ. ತಿಂಗಳಲ್ಲಿ 2–3 ಸಲ ಜಲಮಂಡಳಿಯವರನ್ನು ಕರೆಸಿ ದುರಸ್ತಿಪಡಿಸಿದರೂ ಸಮಸ್ಯೆ ಬಗೆಹರಿಯುತ್ತಿಲ್ಲ' ಎಂದು ಶಾಂತಮ್ಮ ಅಳಲು ತೋಡಿಕೊಂಡರು.

'ಎರಡು ತಿಂಗಳುಗಳಿಂದ ಒಳಚರಂಡಿ ನೀರು ಕಟ್ಟಿಕೊಳ್ಳುತ್ತಿದೆ' ಎಂದು ಉಮಾದೇವಿ ದೂರಿದರು.

ಜರಗನಹಳ್ಳಿ ವಾರ್ಡ್‌ನ ಲಕ್ಷ್ಮಣ ಗೌಡ, 'ಅಯ್ಯಪ್ಪಸ್ವಾಮಿ ದೇವಸ್ಥಾನ ಬಳಿ ಮೋರಿ ಪದೇ ಪದೇ ಕಟ್ಟಿಕೊಳ್ಳುತ್ತಿದೆ. 2–3 ದಿನಗಳ ಬಳಿಕವೂ ದುರಸ್ತಿ ವಾಹನ ಬರುವುದಿಲ್ಲ' ಎಂದು ತಿಳಿಸಿದರು.

ಶಾಂತಮ್ಮ

ಉಮಾದೇವಿ

ಲಕ್ಷ್ಮಣಗೌಡ

ನಂಜುಂಡಹಳ್ಳಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಗಿರೀಶ್ ಗಂಗೂಲಿ, 'ಇಲ್ಲಿನ ಒಳಚರಂಡಿಯ ನೀರು ಸರಾಗವಾಗಿ ಹರಿಯುತ್ತಿಲ್ಲ. ಮಳೆ ನೀರೂ ಹೊರಗಡೆ ಹರಿಯುತ್ತಿಲ್ಲ. ಭೌಗೋಳಿಕ ಸ್ಥಿತಿಯನ್ನು ಅಧ್ಯಯನ ಮಾಡಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕು' ಎಂದು ಒತ್ತಾಯಿಸಿದರು.

'ತ್ಯಾಜ್ಯ ನೀರು ನಿರ್ವಹಣೆಗೆ ಅನುದಾನ ಮಂಜೂರಾಗಿದ್ದು, ಶೀಘ್ರವೇ ಶಾಶ್ವತ ಪರಿಹಾರ ಸಿಗಲಿದೆ' ಎಂದು ಜಲಮಂಡಳಿಯ ಎಂಜಿನಿಯರ್ ರಾಘವೇಂದ್ರ ಭರವಸೆ ನೀಡಿದರು.

ಸತೀಶ್ ರೆಡ್ಡಿ, 'ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಪ್ರತಿ ವಾರ್ಡ್ ಮಟ್ಟದಲ್ಲಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಜನರ ಅಹವಾಲು ಇತ್ಯರ್ಥಪಡಿಸಬೇಕು' ಎಂದು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

'ದೂರು ಬಂದಾಗ ಒಂದು ಮ್ಯಾನ್‌ಹೋಲ್ ಮಾತ್ರ ಸರಿಪಡಿಸಿದರೆ ಸಾಲದು. ಆಸುಪಾಸಿನ ಎಲ್ಲ ಮ್ಯಾನ್‌ಹೋಲ್‌ಗಳನ್ನು ದುರಸ್ತಿಗೊಳಿಸಬೇಕು. ಜನರಿಂದ ದುಡ್ಡು ವಸೂಲಿ ಮಾಡಿದರೆ ಕ್ರಮ ಕಟ್ಟಿಟ್ಟ ಬುತ್ತಿ' ಎಂದು ಎಚ್ಚರಿಕೆ ನೀಡಿದರು. ಮ್ಯಾನ್‌ಹೋಲ್ ಕಟ್ಟಿಕೊಂಡಿದ್ದನ್ನು ದುರಸ್ತಿಪಡಿಸಿದ ಬಳಿಕವೂ ಸಮಸ್ಯೆ ಬಗೆಹರಿಯದಿದ್ದರೆ ಪರ್ಯಾಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಾಲುತ್ತಿಲ್ಲ ಕುಡಿಯುವ ನೀರು– ಮಹಿಳೆಯರ ಅಳಲು

ಸುಮಿತ್ರಾ

ರೇಣುಕಾ

ವಾರಕ್ಕೆರಡು ಬಾರಿ ಮಾತ್ರ ಕಾವೇರಿ ನೀರು ಪೂರೈಸಲಾಗುತ್ತಿದೆ. ಆದರೆ, ಒತ್ತಡ ಕಡಿಮೆ ಇರುವ ಕಾರಣ ಎತ್ತರದ ಪ್ರದೇಶಗಳಿಗೆ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ ಎಂದು ಅನೇಕ ಮಹಿಳೆಯರು ಅಳಲು ತೋಡಿಕೊಂಡರು.

'ನಮ್ಮ ಪ್ರದೇಶದ ಕೊಳವೆಬಾವಿ ಕೆಟ್ಟಿದ್ದು, ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ' ಎಂದು ಪುಟ್ಟೇನಹಳ್ಳಿಯ ಶಾಂತಮ್ಮ ದೂರಿದರು.

'ವಾರದಲ್ಲಿ ಒಂದೂವರೆ ಗಂಟೆ ಮಾತ್ರ ನೀರು ಪೂರೈಸುತ್ತಾರೆ. ಒತ್ತಡ ಕಡಿಮೆ ಇರುವ ಕಾರಣ ನಮ್ಮ ಪ್ರದೇಶಕ್ಕೆ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ. ದೂರು ನೀಡಲು ದೂರದ ಕೊತ್ತನೂರು ದಿಣ್ಣೆಗೆ ಹೋಗಬೇಕು' ಎಂದು ರೋಸ್‌ಗಾರ್ಡನ್‌ನ ರೇಣುಕಾ ವೈ. ಅಳಲು ತೋಡಿಕೊಂಡರು. ಬ್ಯಾಂಕ್ ಆಫ್ ಬರೋಡಾ ಕಾಲೊನಿಯ ರವಿಕುಮಾರ್ ಅವರೂ ಇದೇ ಸಮಸ್ಯೆ ಹೇಳಿಕೊಂಡರು.

ಅಷ್ಟಲಕ್ಷ್ಮೀ ಬಡಾವಣೆಯಲ್ಲೂ 10 ಮನೆಗಳಿಗೆ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ ಎಂದು ಸುಮಿತ್ರಾ ತಿಳಿಸಿದರು.

ವಾರದಿಂದ ಕುಡಿಯುವ ನೀರು ಬರುತ್ತಿಲ್ಲ ಎಂದು ಉಮಾದೇವಿ ದೂರಿದರು. ಕೊಳವೆಬಾವಿ ನೀರೂ ಸರಿಯಾಗಿ ಪೂರೈಕೆ ಆಗುತ್ತಿಲ್ಲ ಎಂದು ವಿಜಯಮ್ಮ ದೂರಿದರು.

ವಿಜಯಮ್ಮ

'ಕುಡಿಯುವ ನೀರು ಪೂರೈಕೆ ಬಗ್ಗೆ ದೂರು ನೀಡಿದ ಸ್ಥಳಕ್ಕೆ ಭೇಟಿ ನೀಡಿ 2–3 ದಿನಗಳ ಒಳಗೆ ಸಮಸ್ಯೆ ಇತ್ಯರ್ಥಪಡಿಸಲು ಕ್ರಮಕೈಗೊಳ್ಳಬೇಕು. ಎತ್ತರದ ಪ್ರದೇಶದ ಮನೆಗಳಿಗೂ ನೀರು ಸರಾಗವಾಗಿ ಪೂರೈಕೆ ಆಗುವಂತೆ ಒತ್ತಡ ಹೆಚ್ಚಿಸಬೇಕು' ಎಂದು ಶಾಸಕರು ಜಲಮಂಡಳಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

'ಬೋರ್‌ ವೆಲ್ ಹಾಕಿ 3 ವರ್ಷ ಕಳೆದರೂ, ಪಂಪ್‌ಸೆಟ್‌ಗೆ ಸ್ವಿಚ್‌ಬೋರ್ಡ್ ಅಳವಡಿಸಿಲ್ಲ' ಎಂದು ಕೃಷ್ಣಮೂರ್ತಿ ರೆಡ್ಡಿ ದೂರಿದರು. ಈ ಬಗ್ಗೆ ಜಲಮಂಡಳಿಯ ಸ್ಥಳೀಯ ಅಧಿಕಾರಿ ವಿರುದ್ಧ ಕೆಂಡಾಮಂಡಲವಾದ ಶಾಸಕರು, '3 ದಿನದೊಳಗೆ ಸಮಸ್ಯೆ ಇತ್ಯರ್ಥಪಡಿಸದಿದ್ದರೆ, ಕ್ರಮ ಎದುರಿಸಲು ಸಜ್ಜಾಗಬೇಕು' ಎಂದು ತರಾಟೆಗೆ ತೆಗೆದುಕೊಂಡರು.

• **ಮಹೇಶ್ ಮಡಿಯಾಳ, ಎಚ್.ಎಸ್.ಆರ್ ಬಡಾವಣೆ:** ಸಾರಿಗೆ ಅಧಿಕಾರಿಗಳು ಸರ್ವಿಸ್ ರಸ್ತೆಯಲ್ಲೇ ವಾಹನ ತಪಾಸಣೆ ನಡೆಸುತ್ತಾರೆ. ಬೆಳಿಗ್ಗೆ 11 ಗಂಟೆವರೆಗೆ ಈ ಪ್ರದೇಶದ ನಿವಾಸಿಗಳು ಮಕ್ಕಳನ್ನು ಶಾಲೆಗೆ ಕಳುಹಿಸಲು, ಕಚೇರಿಗೆ ಹೋಗಲು ಅಡ್ಡಿಯಾಗುತ್ತಿದೆ. 240 ಮನೆಗಳಿಗೆ ಸಮಸ್ಯೆಯಾಗಿದೆ.

ರೆಡ್ಡಿ: ವಾಹನ ತಪಾಸಣೆ ನಡೆಸುವುದನ್ನು ಬೇರೆಡೆ ಸ್ಥಳಾಂತರಿಸುವಂತೆ ಸಾರಿಗೆ ಅಧಿಕಾರಿಗಳಿಗೆ ಸೂಚಿಸುತ್ತೇನೆ.

• **ಊರ್ಮಿಳಾ ರಾಜ್‌ಕುಮಾರ್, ಕೆ.ಆರ್.ಬಡಾವಣೆ:** 100 ಅಡಿ ರಸ್ತೆಯು ಗುಂಡಿಮಯವಾಗಿದೆ. ವೃದ್ಧರು ನಡೆಯುವುದಕ್ಕೂ ಹರಸಾಹಸ ಪಡಬೇಕು.

ರೆಡ್ಡಿ: ಪ್ರತಿ ವಾರ್ಡ್‌ಗೂ ₹ 20 ಲಕ್ಷ ಅನುದಾನ ನೀಡಿದರೂ ರಸ್ತೆ ಗುಂಡಿ ಮುಚ್ಚಿಸಲು ಎಂಜಿನಿಯರ್‌ಗಳಿಗೆ ಏನು ರೋಗ. ವಾರ್ಡ್ ಮಟ್ಟದ ಈ ಸಣ್ಣ ಸಮಸ್ಯೆ ಬಗ್ಗೆ ಸಾರ್ವಜನಿಕರು ಜನಸ್ಪಂದನದಲ್ಲಿ ದೂರು ಹೇಳುವವರೆಗೆ ಏನು ಮಾಡುತ್ತಿದ್ದೀರಿ. ತಕ್ಷಣ ಕ್ರಮಕೈಗೊಳ್ಳಿ.

ದೂರು ದುಮ್ಮಾನ– ಸ್ಥಳದಲ್ಲೇ ತೀರ್ಮಾನ

ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ದೂರು–ದುಮ್ಮಾನ ಆಲಿಸಿದ ಶಾಸಕ ಎಂ.ಸತೀಶ ರೆಡ್ಡಿ, ಅವುಗಳನ್ನು ಇತ್ಯರ್ಥ ಪಡಿಸಲು ಸ್ಥಳದಲ್ಲೇ ಕ್ರಮಕೈಗೊಂಡರು.

• **ನಂದಕುಮಾರ್:** ತಳ್ಳುಗಾಡಿಗಳಲ್ಲಿ ತರಕಾರಿ ಮಾರುವವರು ಮೈಕ್ ಬಳಸುತ್ತಿದ್ದಾರೆ. ಮನೆಯಲ್ಲಿ ಐದು ತಿಂಗಳ ಮಗುವಿದೆ. ಮಲಗಿಸಿದ ಸ್ವಲ್ಪ ಹೊತ್ತಿನಲ್ಲೇ ಕರ್ಕಶ ಧ್ವನಿ ಮೊಳಗಿ ಮಗು ಏಳುತ್ತದೆ.

ಸತೀಶ್ ರೆಡ್ಡಿ: ಧ್ವನಿವರ್ಧಕದ ಸದ್ದಿನ ತೀವ್ರತೆ ಕಡಿಮೆಗೊಳಿಸುವಂತೆ ಪೊಲೀಸ್ ಅಧಿಕಾರಿಗಳು ವ್ಯಾಪಾರಿಗಳಿಗೆ ತಿಳಿಹೇಳಬೇಕು. ಪಾಲಿಸದಿದ್ದರೆ, ಕ್ರಮ ಕೈಗೊಳ್ಳಬೇಕು.



• **ನಾರಾಯಣಪ್ಪ, ಅಷ್ಟಲಕ್ಷ್ಮಿ ಬಡಾವಣೆ:** ನಮ್ಮ ಬೀದಿಯ ಎರಡು ಖಾಲಿ ನಿವೇಶನಗಳಲ್ಲಿ ಕಸ ತಂದು ಸುರಿಯುತ್ತಾರೆ. ಅವರಲ್ಲಿ ನಿತ್ಯ ಜಗಳವಾಡಿ ಸುಸ್ತಾಗಿದ್ದೇನೆ. ಸ್ಥಳೀಯ ಮೋರಿ ದುರಸ್ತಿಯ ಕಸವನ್ನೂ ಗುತ್ತಿಗೆದಾರರು ಇಲ್ಲೇ ಸುರಿದಿದ್ದಾರೆ

ರೆಡ್ಡಿ: ಕಸದ ರಾಶಿ ತೆರವುಗೊಳಿಸಿ. ಸ್ಥಳದಲ್ಲಿ ಮಾರ್ಷಲ್‌ಗಳನ್ನು ನೇಮಿಸಿ ಕಸ ಹಾಕುವವರಿಗೆ ದಂಡ ಹಾಕಿ. ಇಲ್ಲಿ ಕಸ ಹಾಕಿದ ಗುತ್ತಿಗೆದಾರನಿಗೆ ನೋಟಿಸ್ ನೀಡಿ.

• **ರಮೇಶ್ ಪ್ರಧಾನ್, ಬಿಳೇಕಹಳ್ಳಿ:** ಮನೆಗೆ ಪೂರೈಕೆಯಾಗುತ್ತಿರುವ ಕಾವೇರಿ ನೀರಿನ ಕ್ಲೋರೀನೀಕರಣ ಸರಿಯಾಗಿ ಆಗುತ್ತಿಲ್ಲ. ರಾಜಕಾಲುವೆಗೆ ಅಕ್ರಮವಾಗಿ ಒಳಚರಂಡಿ ಸಂಪರ್ಕ ಕಲ್ಪಿಸಿದ್ದಾರೆ.

ರೆಡ್ಡಿ: ರಾಜಕಾಲುವೆಗೆ ಶುದ್ಧೀಕರಿಸಿದ ತ್ಯಾಜ್ಯನೀರನ್ನು ಮಾತ್ರ ಬಿಡಲು ಅವಕಾಶ ಇದೆ. ಯಾರಾದರೂ ತ್ಯಾಜ್ಯ ನೀರನ್ನು ಶುದ್ಧೀಕರಿಸದೆಯೇ ರಾಜಕಾಲುವೆಗೆ ಬಿಟ್ಟರೆ ಕ್ರಮಕೈಗೊಳ್ಳುತ್ತೇವೆ. ನೀರಿನ ಕ್ಲೋರೀನೀಕರಣದ ದೂರಿನ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುತ್ತೇವೆ.

• **ರಾಮಚಂದ್ರ, ನಾಗಾರ್ಜುನ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘ:** ಜರಗನಹಳ್ಳಿ ಬಿಗ್‌ಮಾರ್ಕೆಟ್ ಬಳಿ ಸದಾ ಸಂಚಾರ ದಟ್ಟಣೆ ಇರುತ್ತದೆ. ಇಲ್ಲಿಂದ ಬನಶಂಕರಿಯತ್ತ ತೆರಳುವ ವಾಹನಗಳು ಬಲಗಡೆ ತಿರುವು ಪಡೆಯಲು ಅವಕಾಶ ನೀಡಿ. ಇಲ್ಲಿನ ವರ್ತುಲ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸುವ ಪ್ರಸ್ತಾವ ಏನಾಯಿತು?

ರೆಡ್ಡಿ: ಸಂಚಾರ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳುತ್ತಾರೆ. ಇಲ್ಲಿ ಮೆಟ್ರೊ ಕಾಮಗಾರಿ ನಡೆಸಬೇಕಾಗಿ ಬಂದಿದ್ದರಿಂದ ಮೇಲ್ಸೇತುವೆ ಪ್ರಸ್ತಾವ ರದ್ದುಪಡಿಸಲಾಗಿದೆ.

• **ಶಿವಮಾದೇಗೌಡ ಮತ್ತು ಸಿಂಧು:** ಜಿಯೊ ಕೇಬಲ್ ಅಳವಡಿಸಲು ಬೇಕಾಬಿಟ್ಟಿ ರಸ್ತೆ ಅಗೆದಿದ್ದಾರೆ. ದುರಸ್ತಿಪಡಿಸುತ್ತಿಲ್ಲ.

ರೆಡ್ಡಿ: ನಾಲ್ಕು ವರ್ಷ ಕೇಬಲ್ ಅಳವಡಿಕೆಗೆ ರಸ್ತೆ ಅಗೆಯಲು ನಾವು ಬಿಟ್ಟಿರಲಿಲ್ಲ. ಇಂಟರ್ನೆಟ್ ಸೌಲಭ್ಯವೂ ಅಗತ್ಯ ಎಂಬ ಕಾರಣಕ್ಕೆ ಸರ್ಕಾರವೇ ಈಗ ಅವಕಾಶ ಕಲ್ಪಿಸಿದೆ. ರಸ್ತೆ ಅಗೆದಿದ್ದರೆ, ಅದನ್ನು ಸರಿಪಡಿಸುವ ಬಗ್ಗೆ ಸ್ಥಳೀಯ ಎಂಜಿನಿಯರ್‌ಗಳು ನಿಗಾ ಇಡಬೇಕು.

• **ನಾಗರಾಜ್, ಎಚ್‌ಎಸ್‌ಆರ್ ಬಡಾವಣೆ:** ಸ್ವತಂತ್ರ ಉದ್ಯಾನದಲ್ಲಿ ವಿಪರೀತ ಸೊಳ್ಳೆಕಾಟ. ಇಲ್ಲಿ ಆಸನ ವ್ಯವಸ್ಥೆಯೂ ಇಲ್ಲ

ರೆಡ್ಡಿ: ಉದ್ಯಾನಕ್ಕೆ ಫಾಗಿಂಗ್ ಮಾಡಿಸುತ್ತೇವೆ. ಆಸನ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇವೆ.

• **ಸುರೇಶ್, ಶ್ಯಾಮಣ್ಣ ಗಾರ್ಡನ್:** ರಾಜಕಾಲುವೆ ತುಂಬಿ ಹರಿಯುತ್ತದೆ. ಏಳೆಂಟು ಮನೆಗಳಿಗೆ ತುಂಬಾ ಸಮಸ್ಯೆಯಾಗುತ್ತಿದೆ

ಹೆಗಡೆ (ಜಲಮಂಡಳಿ ಅಧಿಕಾರಿ): ಇಲ್ಲಿ ಒಳಚರಂಡಿ ವ್ಯವಸ್ಥೆಯ ಪುನರ್ರಚನೆಗೆ ಅನುದಾನ ಮಂಜೂರಾಗಿದೆ. ಸಮಸ್ಯೆ ಶೀಘ್ರವೇ ಇತ್ಯರ್ಥವಾಗಲಿದೆ.

• **ಅಂಜಲಿ ರಾಜ್‌ಕುಮಾರ್, ಕೆ.ಆರ್.ಬಡಾವಣೆ:** ನಮ್ಮ ಮನೆ ಸಮೀಪದಲ್ಲಿ ಅಕ್ರಮವಾಗಿ ನಿರ್ಮಿಸಿದ ಕಟ್ಟಡ ತೆರವುಗೊಳಿಸಿಲ್ಲ. ಇದಕ್ಕೂ ನಮ್ಮಿಂದ ಅಧಿಕಾರಿಗಳು ಲಂಚ ಕೇಳುತ್ತಾರೆ.

ರೆಡ್ಡಿ: ನ್ಯಾಯಾಲಯದಲ್ಲಿ ವ್ಯಾಜ್ಯ ಇಲ್ಲದಿದ್ದರೆ, ಕಟ್ಟಡ ಅಕ್ರಮ ಎಂಬುದು ಸಾಬೀತಾಗಿದ್ದರೆ ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತೇನೆ. ಯಾರಿಗೂ ಲಂಚ ನೀಡಬೇಡಿ.

• **ಗಿರೀಶ್, ಓಂಕಾರನಗರ:** ನಮ್ಮ ಬೀದಿಯ 12 ಬೀದಿದೀಪಗಳನ್ನು ಕಿತ್ತುಹಾಕಿ ಮೂರು ವರ್ಷಗಳಾದವು. ಇನ್ನೂ ಬೇರೆ ದೀಪ ಅಳವಡಿಸಿಲ್ಲ. ಸರಗಳವು ಮಾಡುವವರಿಗೆ ಅನುಕೂಲವಾಗಿದೆ. ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಮೆಟ್ಟಿಲು ನಿರ್ಮಿಸಿದ್ದಾರೆ.

ರೆಡ್ಡಿ: ಒತ್ತುವರಿ ಬಗ್ಗೆ ಜಂಟಿ ಆಯುಕ್ತರಿಗೆ ಲಿಖಿತ ದೂರು ನೀಡಿ. ಬೀದಿ ದೀಪ ಅಳವಡಿಸಲು ಶೀಘ್ರವೇ ಕ್ರಮಕೈಗೊಳ್ಳುತ್ತೇವೆ.

ಬೆಳ್ಳಂದೂರು, ಕಾಡುಬೀಸನಹಳ್ಳಿ ಜಮೀನು ಡಿನೋಟಿಫಿಕೇಷನ್ ಪ್ರಕರಣ

ಏ.19ರಂದು ಬಿಎಸ್‌ವೈ ಹಾಜರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ (ಐ.ಟಿ) ಕಾರಿಡಾರ್ ನಿರ್ಮಾಣಕ್ಕಾಗಿ ನಗರದ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ 15 ಎಕರೆ 30 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವಿಚಾರಣೆಗೆ ಏಪ್ರಿಲ್ 19ರಂದು ಖುದ್ದು ಹಾಜರಾಗುವಂತೆ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಮನ್ಸ್ ಜಾರಿಗೊಳಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಶನಿವಾರ ಆದೇಶ ಹೊರಡಿಸಿದೆ.

ವಾಸುದೇವ ರೆಡ್ಡಿ ಎಂಬುವವರು 2013ರಲ್ಲಿ ಸಲ್ಲಿಸಿದ್ದ ಖಾಸಗಿ ದೂರನ್ನು ವಿಚಾರಣೆಗೆ ಅಂಗೀಕರಿಸಿರುವ ವಿಶೇಷ ನ್ಯಾಯಾಲಯ, ದೂರುದಾರರ ಪ್ರಮಾಣೀಕೃತ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಪೂರ್ಣಗೊಳಿಸಿದೆ. ಏಪ್ರಿಲ್ 19ರಿಂದ ಯಡಿಯೂರಪ್ಪ ಅವರನ್ನು ವಿಚಾರಣೆಗೊಳಪಡಿಸಲು ನಿರ್ಧರಿಸಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 13(1)(ಡಿ) ಮತ್ತು 13(2)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಸಮನ್ಸ್ ಜಾರಿ ಮಾಡುವಂತೆ ನ್ಯಾಯಾಧೀಶ ಬಿ. ಜಯಂತ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ಐ.ಟಿ. ಕಾರಿಡಾರ್ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು ಅಕ್ರಮವಾಗಿ ಡಿನೋಟಿಫೈ ಮಾಡಿದ ಆರೋಪ ಯಡಿಯೂರಪ್ಪ ಮೇಲಿದೆ. ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಮತ್ತು ಯಡಿಯೂರಪ್ಪ ಸೇರಿದಂತೆ ಹತ್ತು ಮಂದಿಯ ವಿರುದ್ಧ ವಾಸುದೇವ ರೆಡ್ಡಿ ಖಾಸಗಿ ದೂರು ಸಲ್ಲಿಸಿದ್ದರು. ದೇಶಪಾಂಡೆ ವಿರುದ್ಧದ ಪ್ರಕರಣವನ್ನು 2015ರಲ್ಲಿ ಹೈಕೋರ್ಟ್ ರದ್ದುಗೊಳಿಸಿತ್ತು.

ಉಳಿದ ಎಂಟು ಜನರ ವಿರುದ್ಧದ ದೂರನ್ನು ವಿಚಾರಣಾ ನ್ಯಾಯಾಲಯ ರದ್ದುಗೊಳಿಸಿತ್ತು. ಯಡಿಯೂರಪ್ಪ ವಿರುದ್ಧದ ಪ್ರಕರಣ ಮಾತ್ರ ಉಳಿದುಕೊಂಡಿದೆ.

ದೂರಿನಲ್ಲಿರುವ ಆರೋಪಗಳ ಕುರಿತು ತನಿಖೆ ನಡೆಸುವಂತೆ ವಿಶೇಷ ನ್ಯಾಯಾಲಯ ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿತ್ತು.

'ಯಡಿಯೂರಪ್ಪ ಅವರ ವಿರುದ್ಧದ ಆರೋಪಗಳಲ್ಲಿ ಹುರುಳಿಲ್ಲ' ಎಂದು ಲೋಕಾಯುಕ್ತ ಪೊಲೀಸರು ಎರಡು ಬಾರಿ 'ಬಿ' ವರದಿ ಸಲ್ಲಿಸಿದ್ದರು. ಎರಡೂ ವರದಿಗಳನ್ನು ನ್ಯಾಯಾಲಯ ತಿರಸ್ಕರಿಸಿತ್ತು. ಎರಡನೇ 'ಬಿ' ವರದಿಯನ್ನು 2021ರ ನವೆಂಬರ್ 27ರಂದು ತಿರಸ್ಕರಿಸಿದ್ದ ನ್ಯಾಯಾಲಯ, ನೇರವಾಗಿ ವಿಚಾರಣೆ ಆರಂಭಿಸುವ ತೀರ್ಮಾನ ಪ್ರಕಟಿಸಿತ್ತು.

ಉಗ್ರರ ದಾಳಿ: ಎಸ್‌ಪಿಒ ಹುತಾತ್ಮ

ಶ್ರೀನಗರ: ಮಧ್ಯ ಕಾಶ್ಮೀರದ ಬುಡ್ಗಾಂ ಜಿಲ್ಲೆಯ ಚಾದ್‌ಬುಗ್ ಪ್ರದೇಶದಲ್ಲಿ ಶನಿವಾರ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ವಿಶೇಷ ಪೊಲೀಸ್ ಅಧಿಕಾರಿ (ಎಸ್‌ಪಿಒ) ಹುತಾತ್ಮರಾಗಿದ್ದಾರೆ.

ಇಶ್ಫಾಕ್ ಅಹ್ಮದ್ ಹುತಾತ್ಮರಾದವರು. ಘಟನೆಯಲ್ಲಿ ಇಶ್ಫಾಕ್ ಅವರ ಸಹೋದರ ಉಮರ್ ಜಾನ್ ಅವರಿಗೂ ಗುಂಡು ತಗಲಿದ್ದು, ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಚಾದ್‌ಬುಗ್ ಪ್ರದೇಶದ ತಮ್ಮ ನಿವಾಸದ ಬಳಿ ನಿಂತಿದ್ದ ಇಶ್ಫಾಕ್ ಅವರ ಮೇಲೆ ರಾತ್ರಿ 8.35ರ ವೇಳೆಗೆ ಉಗ್ರರು ದಾಳಿ ನಡೆಸಿದ್ದು, ಗುಂಡೇಟಿನಿಂದ ತೀವ್ರ ಗಾಯಗೊಂಡಿದ್ದ ಇಶ್ಫಾಕ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮೃತಪಟ್ಟರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನರ್ ವೀಲ್ ಕ್ಲಬ್ ಆಫ್ ಬೆಂಗಳೂರು, ಸೈಟ್‌ಕೇರ್ ಕ್ಯಾನ್ಸರ್ ಆಸ್ಪತ್ರೆ ಹಾಗೂ ಫ್ಲೂಯಿಡ್ ಏರ್ ಸಿಸ್ಟಂ ಸಹಯೋಗದಲ್ಲಿ ಬೌರಿಂಗ್ ಕ್ಲಬ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವೀಲ್ಸ್ ಟು ಫ್ಲೈ' ಮಹಿಳಾ ಕಾರು ರ್‍ಯಾಲಿಗೆ ಐಪಿಎಸ್ ಅಧಿಕಾರಿ ಅಮರ್‌ಕುಮಾರ್ ಪಾಂಡೆ ಚಾಲನೆ ನೀಡಿದರು. ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ವಿರಿನಾ, ಕಾರ್ಯದರ್ಶಿ ಉದಯ ಮತ್ತು ಸುಧಾ ದಿನೇಶ್ ಇದ್ದರು. ಶೆಲ್ ಪೆಟ್ರೋಲ್ ಪ್ರಾಯೋಜಕತ್ವದ ರ್‍ಯಾಲಿಯಲ್ಲಿ 120 ಮಂದಿ ಪಾಲ್ಗೊಂಡಿದ್ದಾರೆ. ಕ್ಯಾನ್ಸರ್ ಪೀಡಿತ ಮಹಿಳೆಯರ ಪೈಕಿ ಅಗತ್ಯವುಳ್ಳವರಿಗೆ ಗಾಲಿ ಕುರ್ಚಿ ಒದಗಿಸಲು ಹಣ ಸಂಗ್ರಹಿಸುವುದು ಈ ರ್‍ಯಾಲಿಯ ಉದ್ದೇಶ

ಹಿಜಾಬ್ ಪ್ರತಿಭಟನೆ ಸಿಗದ ಅನುಮತಿ

ಬೆಂಗಳೂರು: 'ಮುಂಬರುವ ಪರೀಕ್ಷೆಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಬೇಕು' ಎಂದು ಒತ್ತಾಯಿಸಿ ಮುಸ್ಲಿಂ ಸಮುದಾಯದ ಕೆಲ ವಿದ್ಯಾರ್ಥಿನಿಯರು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

ಉಡುಪಿ ಜಿಲ್ಲೆಯಿಂದ ನಗರಕ್ಕೆ ಬಂದಿದ್ದ ಕೆಲ ವಿದ್ಯಾರ್ಥಿನಿಯರು, ಸ್ವಾತಂತ್ರ್ಯ ಉದ್ಯಾನದಲ್ಲಿ ಮಾರ್ಚ್ 26ರಂದು ಪ್ರತಿಭಟನೆ ನಡೆಸಲು ಅನುಮತಿ ಕೋರಿ ಉಪ್ಪಾರಪೇಟೆ ಠಾಣೆಗೆ ಮನವಿ ಸಲ್ಲಿಸಿದ್ದರು. ಅದಕ್ಕೂ ಮುನ್ನವೇ, 'ಸ್ವಾತಂತ್ರ್ಯ ಉದ್ಯಾನದಲ್ಲಿ ಮಾರ್ಚ್ 26ರಂದು ಪ್ರತಿಭಟನೆ ಇದೆ. ಎಲ್ಲರೂ ಬನ್ನಿ' ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿದ್ದರು.

ಪೊಲೀಸರು, ಪ್ರತಿಭಟನೆಗೆ ಅನುಮತಿ ನಿರಾಕರಿಸಿದ್ದಾರೆ. 'ಯಾವುದೇ ಪ್ರತಿಭಟನೆ ಇದ್ದರೂ 5 ದಿನ ಮುಂಚಿತವಾಗಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು. ಏಕಾಏಕಿ ಮನವಿ ಕೊಟ್ಟರೆ, ಪ್ರತಿಭಟನೆಗೆ ಅವಕಾಶ ನೀಡಲಾಗದು' ಎಂದು ಪೊಲೀಸರು ಹೇಳಿದ್ದಾರೆ.

ಜಾತಿಸೂಚಕ ಹಟ್ಟಿ, ಹಾಡಿಗಳ ಹೆಸರು ಬದಲಾವಣೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿಸೂಚಕ ಜನವಸತಿ ಪ್ರದೇಶಗಳ ಹೆಸರುಗಳನ್ನು ರದ್ದುಪಡಿಸುವ ಬಗ್ಗೆ ಕಂದಾಯ ಸಚಿವ ಆರ್. ಅಶೋಕ ನೀಡಿರುವ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಶಾಸಕರ ಭವನದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಅಲೆಮಾರಿ, ಬುಡಕಟ್ಟು, ದಲಿತ ಸಮುದಾಯಗಳ ಪ್ರತಿನಿಧಿಗಳು ಈ ಕುರಿತು ಚರ್ಚಿಸಿದರು.

ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಪ್ರತಿಕ್ರಿಯಿಸಿದ್ದ ಸಚಿವ ಅಶೋಕ, ಕಾಡುಗೊಲ್ಲರಹಟ್ಟಿ, ವಡ್ಡರಹಟ್ಟಿ, ಲಂಬಾಣಿ ತಾಂಡಾ, ಕುರುಬರ ದೊಡ್ಡಿ, ಹಾಡಿ, ಕಾಲೊನಿಗಳ ಹೆಸರುಗಳನ್ನು ರದ್ದುಪಡಿಸುವುದಾಗಿ ಹೇಳಿದ್ದರು. ಈ ತೀರ್ಮಾನ ಜಾರಿಯಾದರೆ ಹಲವಾರು ಅಲಕ್ಷಿತ ಸಮುದಾಯಗಳು ತಮ್ಮ ಸಾಂಸ್ಕೃತಿಕ ಅಸ್ತಿತ್ವ ಕಳೆದುಕೊಳ್ಳಬೇಕಾಗುತ್ತದೆ ಎಂದು ಸಭೆಯಲ್ಲಿ ಪಾಲ್ಗೊಂಡವರು ಆತಂಕ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಆದಿವಾಸಿ, ಅಲೆಮಾರಿ, ಬುಡಕಟ್ಟು ಸಮಯದಾಯದವರು ಇವತ್ತಿಗೂ ತಮ್ಮ ಅನನ್ಯ ಸಾಂಸ್ಕೃತಿಕ ಜೀವನ ವಿಧಾನವನ್ನು ಉಳಿಸಿಕೊಂಡಿದ್ದಾರೆ. ತಾವು ವಾಸಿಸುವ ಸ್ಥಳಗಳೇ ಅವರ ಗುರುತುಗಳಾಗಿವೆ. ಸರ್ಕಾರ ಯಾವುದೇ ಕಾರಣಕ್ಕೂ ಹೆಸರು ಬದಲಾವಣೆ ಮಾಡಬಾರದು ಎಂದರು.

ಲೇಖಕಿ ಬಿ.ಟಿ ಲಲಿತಾನಾಯಕ್, 'ನಮ್ಮ ಸಾಂಸ್ಕೃತಿಕ ನಾಯಕರ ಹೆಸರುಗಳಿರುವ ತಾಂಡಾದ ಹೆಸರನ್ನು ಬದಲಾವಣೆ ಮಾಡುವ ಮೂಲಕ ನಮ್ಮ ಸಂಸ್ಕೃತಿಯನ್ನು ನಾಶಮಾಡಲು ಸರ್ಕಾರ ಮುಂದಾಗಿರುವುದು ಖಂಡನೀಯ' ಎಂದರು.

ಸಭೆಯ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಮುಖಂಡ ಸಿ.ಎಸ್. ದ್ವಾರಕಾನಾಥ್, ಬುಡಕಟ್ಟು ರಾಷ್ಟ್ರೀಯತೆಯೇ ಭಾರತದ ನಿಜವಾದ ರಾಷ್ಟ್ರೀಯತೆ. ಜಗತ್ತಿನ ಬಹುತೇಕ ಅಲೆಮಾರಿ ಬುಡಕಟ್ಟು ಸಮುದಾಯಗಳು ಇಂದಿಗೂ ತಮ್ಮ ಅಸ್ಮಿತೆ ಉಳಿಸಿಕೊಂಡಿವೆ. ಸರ್ಕಾರವು ದಾಖಲೆ ರಹಿತ ಜನವಸತಿ ಪ್ರದೇಶಗಳಾದ ಹಟ್ಟಿ, ಹಾಡಿ, ಕಾಲೊನಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಬೇಕು ಎಂದರು.

ಸಭೆಯಲ್ಲಿ ಲಂಬಾಣಿ ಸಮುದಾಯದ ಮುಖಂಡರಾದ ಅನಂತ ನಾಯಕ್, ಗೋವಿಂದಸ್ವಾಮಿ, ಕುಂಬಾರ ಸಮುದಾಯದ ನಾಗೇಶ್, ಕಾಡುಗೊಲ್ಲ ಅಸ್ಮಿತೆ ಹೋರಾಟ ಸಮಿತಿಯ ಜಿ.ಕೆ. ನಾಗಣ್ಣ, ಉಜ್ಜಜ್ಜಿ ರಾಜಣ್ಣ, ಸುನೀಲ್ ಕುಮಾರ್, ಇರುಳಿಗ ಸಮುದಾಯದ ಸಹದೇವ, ಸುಡುಗಾಡು ಸಿದ್ದ ಸಮುದಾಯದ ಹನುಮಂತಪ್ಪ, ನಾಗರಾಜು ಭಾಗವಹಿಸಿದ್ದರು.

ಕೊರಮ, ಕೊರಚ ಸಮಾಜ ನಿರ್ಲಕ್ಷ್ಯ: ಆಕ್ರೋಶ

ಬೆಂಗಳೂರು: ಕೊರಮ-ಕೊರಚ--ಕೊರವ (ಕುಳುವ) ಸಮುದಾಯದವರನ್ನು ಕಳೆದ 20 ವರ್ಷಗಳಿಂದ ನಿರಂತರವಾಗಿ ಎಲ್ಲಾ ರಾಜಕೀಯ ಪಕ್ಷಗಳು ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ಮಾಡಿವೆ ಎಂದು ಮಾಜಿ ಶಾಸಕ ಜಿ. ಚಂದ್ರಣ್ಣ ಹೇಳಿದರು.

ಅಖಿಲ ಕರ್ನಾಟಕ ಕುಳುವ ಮಹಾ ಸಂಘವು (ಕೊರಮ,ಕೊರಚ, ಕೊರವರ ಒಕ್ಕೂಟ) 'ಕುಳುವರ ಜಾಗತಿಕ ಅಸ್ಮಿತೆ ಹಾಗೂ ಸಮಕಾಲೀನ ರಾಜಕೀಯ ಸವಾಲುಗಳು' ಎಂಬ ವಿಷಯ ಕುರಿತು ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಅಲೆಮಾರಿಗಳೂ ಆಗಿರುವ ಅಲಕ್ಷಿತ ಸಮುದಾಯವನ್ನು ಎಲ್ಲ ರಾಜಕೀಯ ಪಕ್ಷಗಳು ಸಂವಿಧಾನಬದ್ಧ ಮೀಸಲಾತಿಯಿಂದ ವಂಚಿಸುತ್ತಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

2002ರ ಬಳಿಕ ಕೆಲವು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳು ಉದ್ದೇಶಪೂರ್ವಕವಾಗಿ ಕುಳುವ ಸಮಾಜವನ್ನು ತುಳಿಯುವ ಕೆಲಸ ಮಾಡಿವೆ. 2013ರ ಬಜೆಟ್‌ನಲ್ಲಿ ಕೊರಮ-ಕೊರಚ ಅಭಿವೃದ್ಧಿ ನಿಗಮ ಸ್ಥಾಪಿಸುವುದಾಗಿ ಘೋಷಣೆ ಮಾಡಲಾಗಿತ್ತು. ಅನುದಾನವನ್ನೇ ನೀಡದೇ ವಂಚಿಸಲಾಗಿದೆ ಎಂದರು.

ನುಲಿಯ ಚಂದಯ್ಯನವರ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸುವಂತೆ ಕುಳುವ ಸಮಾಜವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿತ್ತು. ಅದನ್ನು ಈಡೇರಿಸದೇ ಅನ್ಯಾಯ ಎಸಗಲಾಗಿದೆ ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ಖಜಾಂಚಿ ದೇವನಹಳ್ಳಿ ನಾಗೇಶ್, ಕುಳುವ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ ಕುಮಾರ್ ಏಕಲವ್ಯ, ಪರಿಶಿಷ್ಟ ಜಾತಿ–ಪಂಗಡದ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ಪ್ರಧಾನ ಕಾರ್ಯದರ್ಶಿ ಕಿರಣಕುಮಾರ್ ಕೊತ್ತಗೆರೆ ಇತರರು ಹಾಜರಿದ್ದರು.

ಕಟ್ಟಡ ನಿಯಮ ಉಲ್ಲಂಘನೆ: ದಿಢೀರ್ ಕ್ರಮ ಬೇಡ –ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡಗಳ ನಿರ್ಮಾಣದಲ್ಲಿ ನಿಯಮ ಉಲ್ಲಂಘನೆ ಆಗಿರುವ ಪ್ರಕರಣಗಳಲ್ಲಿ ರಾಜ್ಯ ಸರ್ಕಾರ ತರಾತುರಿಯಲ್ಲಿ ಕ್ರಮ ಜರುಗಿಸಬಾರದು. ಸುಪ್ರೀಂ ಕೋರ್ಟ್‌ನಲ್ಲಿ ಈ ಸಂಬಂಧ ಬಾಕಿ ಇರುವ ಪ್ರಕರಣದ ವಿಚಾರಣೆ ಮುಗಿಯುವವರೆಗೂ ಕಾಲಾವಕಾಶ ನೀಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಒತ್ತಾಯಿಸಿದರು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕೆ ರೂಪಿಸಿದ್ದ ಕಾಯ್ದೆಯನ್ನು ಪ್ರಶ್ನಿಸಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಆದರೆ, ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವವರಿಗೆ ಹೈಕೋರ್ಟ್ ನಿರ್ದೇಶನದ ಅನುಸಾರ ನೋಟಿಸ್ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದರಿಂದ ಬೆಂಗಳೂರಿನ 20 ಲಕ್ಷಕ್ಕೂ ಹೆಚ್ಚು ಜನರು ತೊಂದರೆಗೆ ಸಿಲುಕುತ್ತಾರೆ' ಎಂದರು.

ಶೇಕಡ 15ರಿಂದ 20ರಷ್ಟು ಪ್ರಮಾಣದ ಉಲ್ಲಂಘನೆ ಇರುವ ಕಟ್ಟಡಗಳನ್ನು ಸಕ್ರಮಗೊಳಿಸಲು ಹಿಂದೆ ಬಿಜೆಪಿ ಸರ್ಕಾರ ತೀರ್ಮಾನಿಸಿತ್ತು. ವಸತಿ ಕಟ್ಟಡಗಳಲ್ಲಿ ಶೇ 50ರಷ್ಟು ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಶೇ 25ರವರೆಗಿನ ಉಲ್ಲಂಘನೆಗಳನ್ನು ಸಕ್ರಮಗೊಳಿಸಲು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತೀರ್ಮಾನಿಸಲಾಗಿತ್ತು. ಅದನ್ನು ಪ್ರಶ್ನಿಸಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ ಎಂದು ಹೇಳಿದರು.

'ಹೈಕೋರ್ಟ್ ನಿರ್ದೇಶನವನ್ನು ಪಾಲಿಸಿ, ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಹೊರಟಿದೆ. ಕಾನೂನು ಪ್ರಕಾರ ಅದು ಸರಿಯಾದ ಕ್ರಮ ಹೌದು. ಆದರೆ, ಇದರಿಂದ ನಿತ್ಯವೂ ಸಾವಿರಾರು ಮಂದಿಗೆ ನೋಟಿಸ್ ನೀಡಬೇಕಾಗುತ್ತದೆ. ಜನರು ಆತಂಕಕ್ಕೆ ಸಿಲುಕುತ್ತಾರೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೂ ಈ ಕ್ರಮ ಕೈಗೊಳ್ಳಬಾರದು. ವಿಧಾನಸಭೆಯಲ್ಲೂ ಈ ವಿಷಯ ಪ್ರಸ್ತಾಪಿಸುತ್ತೇನೆ' ಎಂದು ರಾಮಲಿಂಗಾ ರೆಡ್ಡಿ ಅವರು ತಿಳಿಸಿದರು.

ಭಾನುವಾರ, ಮಾರ್ಚ್ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 86 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದಲಿತ ಮಹಿಳೆಯರೇ ಕಟ್ಟಿ, ಅದರ ಮೂಲಕ ತಮ್ಮ ಅಸ್ತಿತ್ವ ಕಂಡುಕೊಂಡ 'ಖಬರ್ ಲೆಹರಿಯಾ' ಪತ್ರಿಕೆಯ ಸ್ಫೂರ್ತಿಯ ಕಥನ

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ 12

ಮಂಜೂರಾತಿಯ ನಾಲ್ಕು ಪಟ್ಟು ಅಧಿಕಾರಿಗಳು ಪಿಡಬ್ಲ್ಯುಡಿಯಲ್ಲಿ

ರಾಜ್ಯದಲ್ಲಿ ಸಾವಿರದ ಗಡಿಯತ್ತ ಡೆಂಗಿ 5

ಸಿಇ, ಇಐಸಿ ಹಂಚಿಕೆ ಮತ್ತಷ್ಟು ಕಗ್ಗಂಟು 5

ಎಸ್ಸೆಸ್ಸೆಲ್ಸಿ ಪರೀಕ್ಷೆ: ಸಮವಸ್ತ್ರ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 28ರಿಂದ ಆರಂಭವಾಗಲಿರುವ ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಗೆ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿಯೇ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

'ಈ ವಿಷಯದ ಬಗ್ಗೆ ಸರ್ಕಾರ ಹೊರಡಿಸಿರುವ ಆದೇಶಗಳನ್ನು ಮಾರ್ಚ್ 15ರಂದು ಹೈಕೋರ್ಟ್ ಸಿಂಧುಗೊಳಿಸಿದೆ. ಹೀಗಾಗಿ, ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಸರ್ಕಾರ ನಿಗದಿಪಡಿಸಿರುವ ಸಮವಸ್ತ್ರ ಧರಿಸಬೇಕು. ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಆಯಾ ಆಡಳಿತ ಮಂಡಳಿಗಳು ನಿರ್ಧರಿಸಿರುವ ಸಮವಸ್ತ್ರ ಧರಿಸುವುದು ಕಡ್ಡಾಯ' ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಒಳ ಪುಟ
ಕೈಗಾರಿಕೆಗಳಿಗೆ ನೇರ ವಿದ್ಯುತ್ ಖರೀದಿಗೆ ಅವಕಾಶ: ನಿರಾಣಿ 4

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಂಸ್ಕೃತಿ ಇಲಾಖೆ ಅನುದಾನ; ಕೆಲವರ ಏಕಸ್ವಾಮ್ಯ

ಕಾಸಿದ್ದರಷ್ಟೇ ಕನ್ನಡದ ಕೆಲಸ!

• ವರುಣ ಹೆಗಡೆ

ಒಳನೋಟ
ಅರ್ಹರಿಗೆ ಸಿಗದ ಅನುದಾನ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ನೋಂದಣಿಯೇ ಆಗದ ಸಂಘ–ಸಂಸ್ಥೆಗಳಿಗೆ ಲಕ್ಷ ಲಕ್ಷ ಸಹಾಯಧನ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ವೇಳೆ ಪೂರಕ ದಾಖಲೆ ಸಲ್ಲಿಸದಿದ್ದರೂ ಭರಪೂರ ಅನುದಾನ. ಪ್ರಭಾವಿಗಳು, ಗಣ್ಯರ ಶಿಫಾರಸು ತಂದವರಿಗೆ ಅರ್ಜಿ ಸಲ್ಲಿಸದಿದ್ದರೂ ಹಣ...

ಇದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾರ್ಷಿಕ ಧನಸಹಾಯ ಯೋಜನೆಯ ಸ್ಥಿತಿ. ನಾಡಿನ ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ, ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ, ನೋಂದಾಯಿತ ಸಂಘ–ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ಸರ್ಕಾರ ಅನುದಾನ ಒದಗಿಸುತ್ತಿದೆ. ಸದುದ್ದೇಶದಿಂದ ಪ್ರಾರಂಭಿಸಲಾದ ಈ ಯೋಜನೆಯು ಕಲಾವಿದರು ಹಾಗೂ ನೋಂದಾಯಿತ ಸಂಘ–ಸಂಸ್ಥೆಗಳಿಗೆ ನೀರ ಮೇಲಿನ ಗುಳ್ಳೆಯಂತಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಲಕ್ಷಾಂತರ ಹಣ ಖರ್ಚು ಮಾಡುವ ಕಲಾವಿದರು, ಪುಡಿಗಾಸಿಗಾಗಿ ಕನ್ನಡ ಭವನಕ್ಕೆ ಪದೇ ಪದೇ ಎಡತಾಕಬೇಕಾದ ಪರಿಸ್ಥಿತಿ ಇದೆ.

ನಿಯಮದಂತೆ ಕಾರ್ಯಕ್ರಮ ನಡೆಸಿ, ಅನುದಾನಕ್ಕೆ ಅಗತ್ಯ ದಾಖಲೆಗಳನ್ನು ಸಲ್ಲಿಸಿದರೂ ನೆರವು ಸಿಗುವ ಖಚಿತತೆ ಸಂಘ–ಸಂಸ್ಥೆಗಳ ಮುಖ್ಯಸ್ಥರಿಗೆ ಇಲ್ಲ. ಇದರಿಂದಾಗಿ ಬಹುತೇಕ ಸಂಘ–ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ, ಸಾಂಸ್ಕೃತಿಕ ಲೋಕದಿಂದ ಮರೆಯಾಗುತ್ತಿವೆ. ಈ ಯೋಜನೆಯನ್ನೇ ಬಂಡವಾಳ ಮಾಡಿಕೊಂಡಿರುವ ಕೆಲ ಪ್ರಭಾವಿಗಳು, ಕಾರ್ಯಕ್ರಮಗಳನ್ನು ನಡೆಸದಿದ್ದರೂ ₹ 10 ಲಕ್ಷದಿಂದ ₹ 20 ಲಕ್ಷದವರೆಗೆ ಅನುದಾನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಇದು ಕಲಾವಿದರು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಅಸಮಾಧಾನಕ್ಕೆ ಕಾರಣವಾಗಿದೆ.

6ನೇ ಪುಟ ನೋಡಿ

'ಸಾಂಸ್ಕೃತಿಕ ಪರಿಶೀಲನಾ ಸಮಿತಿ ರಚಿಸಿ'



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘ–ಸಂಸ್ಥೆಗಳಿಗೆ ಅನುದಾನ ನೀಡಿ ಕೈತೊಳೆದುಕೊಳ್ಳುತ್ತಿದೆ. ಈ ವ್ಯವಸ್ಥೆ ಸರಿಯಿಲ್ಲ. ಅಧಿಕಾರಿಗಳು ಅನುದಾನ ಪಡೆದ ಸಂಸ್ಥೆಗಳಿಗೆ ತೆರಳಿ, ಕಾರ್ಯಕ್ರಮಗಳು ನಡೆದಿವೆಯೇ ಎಂದು ಪರಿಶೀಲಿಸಬೇಕು. ಈ ಕಾರ್ಯಕ್ಕೆ ಪ್ರತಿವರ್ಷ ಸಾಂಸ್ಕೃತಿಕ ಪರಿಶೀಲನಾ ಸಮಿತಿ ರಚಿಸಬೇಕು. ಬೆಂಗಳೂರು ಕೇಂದ್ರಿತ ಸಂಘ–ಸಂಸ್ಥೆಗಳಿಗೆ ಮಾತ್ರ ಹೆಚ್ಚು ಅನುದಾನ ಹೋಗುತ್ತಿದೆ. ಪ್ರಾದೇಶಿಕ ಪ್ರಾತಿನಿಧ್ಯದ ಜತೆಗೆ ಸಾಮಾಜಿಕ ನ್ಯಾಯವನ್ನೂ ಪರಿಗಣಿಸಬೇಕು.

ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

'ಅಕ್ರಮಕ್ಕೆ ಕಡಿವಾಣ ಬಿದ್ದಿದೆ'



'ಇಲಾಖೆಯಲ್ಲಿ ಹಿಂದೆ ಭಾರೀ ಪ್ರಮಾಣದ ಲಾಬಿ ನಡೆಯುತ್ತಿತ್ತು. ಕೆಲವೇ ಜನರ ಕಪಿಮುಷ್ಠಿಯಲ್ಲಿ ಇತ್ತು. ₹ 1 ಲಕ್ಷದಿಂದ ₹70 ಲಕ್ಷದವರೆಗೂ ಅನುದಾನ ಪಡೆಯುತ್ತಿದ್ದವರೂ ಇದ್ದರು. ಬಹಳಷ್ಟು ಸಂಘಟನೆಗಳು 'ಲೆಟರ್‌ಹೆಡ್' ಸಂಘಟನೆಗಳಾಗಿದ್ದವು. ಕೆಲವು ಸಂಘಟನೆಗಳು ಏನೂ ಮಾಡದೇ ನಿರಂತರ 5 ರಿಂದ 10 ವರ್ಷಗಳಿಂದ ಪತ್ರ ಕೊಟ್ಟು ಅನುದಾನ ಪಡೆದಿವೆ. ಅವರು ಮಾಡಿದ ಕಾರ್ಯಕ್ರಮಗಳಿಗೆ ದಾಖಲೆಗಳಾಗಲಿ, ಅಧಿಕಾರಿ ಗಳು ಮೇಲ್ವಿಚಾರಣೆ ಮಾಡಿದ್ದಾಗಲಿ ಇರಲಿಲ್ಲ. ಈಗ ಕಡಿವಾಣ ಬಿದ್ದಿದೆ'

ವಿ. ಸುನೀಲ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ

ಇನ್ನಷ್ಟು ಸುದ್ದಿಗಳು 6

ಅಗತ್ಯ ಔಷಧ: ಏಪ್ರಿಲ್‌ನಿಂದ ಶೇ 10 ರಷ್ಟು ದರ ಹೆಚ್ಚಳ

ಬೆಂಗಳೂರು: ನೋವು ನಿವಾರಕ, ಸೋಂಕು ನಿವಾರಕ ಸೇರಿದಂತೆ ಸುಮಾರು 850 ಅಗತ್ಯ ಔಷಧಗಳ ದರ ಏಪ್ರಿಲ್ 1ರಿಂದ ಶೇ 10.8ರಷ್ಟು ಏರಿಕೆಯಾಗಲಿದೆ.

ರಾಷ್ಟ್ರೀಯ ಔಷಧ ದರ ಪ್ರಾಧಿಕಾರವು (ಎನ್‌ಪಿಪಿಎ) ಔಷಧಗಳ ದರ ಏರಿಕೆಗೆ ಅನುಮತಿ ನೀಡಿತ್ತು. ಹೀಗಾಗಿ, ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿ ಬೆಲೆ ಪರಿಷ್ಕರಣೆಗೆ ಕೇಂದ್ರ ಸರ್ಕಾರ ಅವಕಾಶ ನೀಡಿದೆ. ಸೋಂಕು, ಜ್ವರ, ಚರ್ಮ ರೋಗ, ಹೃದ್ರೋಗ, ರಕ್ತಹೀನತೆ, ಅಧಿಕ ರಕ್ತದೊತ್ತಡವನ್ನು ಗುಣಪಡಿಸಲು ಬಳಸುವ ಔಷಧಿಗಳ ಬೆಲೆಗಳು ಹೆಚ್ಚಾಗಲಿವೆ.

ಬೆಲೆ ಏರಿಕೆಯಾಗುವ ಔಷಧಗಳ ಪಟ್ಟಿಯಲ್ಲಿ, ಅಜಿಥ್ರೊಮೈಸಿನ್, ಹೈಡ್ರೊಕ್ಲೊರೈಡ್, ಪ್ಯಾರಸಿಟಮಾಲ್, ಫೆನೊಬಾರ್ಬಿಟೊನ್ ಮತ್ತು ಫೆನಿಟೊಯಿನ್ ಸೋಡಿಯಂನಂತಹ ಔಷಧಗಳೂ ಸೇರಿವೆ.

5B ಪುಟ ನೋಡಿ

ರಂಗಭೂಮಿ ಪಿತಾಮಹ ಗುಬ್ಬಿ ವೀರಣ್ಣ ಸಮಾಧಿ ಅನಾಥ!

• ಸುಕೃತ ಎಸ್.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದು ವಿಶ್ವ ರಂಗಭೂಮಿ ದಿನ

ಬೆಂಗಳೂರು: ರಂಗಭೂಮಿ ಮೂಲಕ ಚಿತ್ರರಂಗಕ್ಕೆ ಹಲವು ಮೇರು ಕಲಾವಿದರನ್ನು ಪರಿಚಯಿಸಿದವರು ಗುಬ್ಬಿ ವೀರಣ್ಣ. ರಂಗಭೂಮಿಗೆ ಹಲವು ಪ್ರಥಮಗಳನ್ನು ನೀಡಿದ ಹೆಗ್ಗಳಿಕೆಯೂ ಅವರಿಗೆ ಸಲ್ಲುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿರುವ ಕನ್ನಡ ರಂಗಭೂಮಿಯ 'ಪಿತಾಮಹ' ವೀರಣ್ಣ ಅವರ ಸಮಾಧಿ ಅನಾಥವಾಗಿದೆ.

ಗುಬ್ಬಿಯ ಬಿ.ಎಚ್. ಮುಖ್ಯರಸ್ತೆ ಪಕ್ಕದಲ್ಲಿಯೇ ಡಾ.ಜಿ.ಎಚ್. ವೀರಣ್ಣ (ಗುಬ್ಬಿ ವೀರಣ್ಣ) ಮತ್ತು ಅವರ ಪತ್ನಿಯರಾದ ಭದ್ರಮ್ಮ ಮತ್ತು ಬಿ.ಜಯಮ್ಮ ಅವರ ಸಮಾಧಿಗಳಿವೆ.

5ನೇ ಪುಟ ನೋಡಿ

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಅವಂತ್ರ
ಬೈ ಟ್ರೆಂಡ್ಸ್

ಸೀರೆಗಳು | ಬ್ಲೌಸ್‌ಗಳು | ಕುರ್ತಾಗಳು | ಆಭರಣ | ಪಾದರಕ್ಷೆ | ಅಕ್ಸೆಸರಿಗಳು
ಹೆಚ್ಚುವರಿ ಸೇವೆಗಳು: ಬ್ಲೌಸ್ ಸ್ಟೈಲಿಂಗ್ ಮತ್ತು ಕಸ್ಟಮೈಸೇಶನ್‌ಗಳು | ಸೀರೆ – ಫಾಲ್, ಪಿಕೋ ಮತ್ತು ಕುಚ್ಚು

₹199 ಪಾವತಿ ಮಾಡಿ ಮತ್ತು **ಚಿನ್ನದ ನಾಣ್ಯಗಳನ್ನು ಪಡೆಯಿರಿ*** ₹7999 ಮತ್ತು ಹೆಚ್ಚಿನ ಶಾಪಿಂಗ್ ಮೇಲೆ

*ನಿಯಮ ಮತ್ತು ಷರತ್ತು ಅನ್ವಯ

ಯುಗಾದಿಯ ಶುಭಾಶಯಗಳು

ನಮ್ಮ ಹೊಸ ಕಾನ್ಸೆಪ್ಟ್ ಸ್ಟೋರ್ ಅವಂತರಾ ಬೈ ಟ್ರೆಂಡ್ಸ್ ಜೊತೆಗೆ ಈ ಯುಗಾದಿಯ ಸಂಭ್ರಮಾಚರಣೆ ಮಾಡಿ. ಈ ಯುಗಾದಿಯಂದು, ದೇಶದ ಅತ್ಯುತ್ತಮ ಕೈಮಗ್ಗದಿಂದ ನಿಮಗಾಗಿ ವಿಶೇಷವಾಗಿ ರೂಪಿಸಿರುವ ಕರಕುಶಲ ಸಿಲ್ಕ್ ಸೀರೆ ಕಲೆಕ್ಷನ್ ಧರಿಸಿ ಹೊಸ ವರ್ಷವನ್ನು ಆಚರಿಸಿ.

ಅಶೋಕ ಪಿಲ್ಲರ್ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು

Follow us on

ಮಂಡ್ಯ ತಹಶೀಲ್ದಾರ್ ಅಮಾನತು

ಮಂಡ್ಯ: ಕರ್ತವ್ಯ ಲೋಪದ ಆರೋಪದ ಮೇಲೆ ಮಂಡ್ಯ ತಹಶೀಲ್ದಾರ್ ಚಂದ್ರಶೇಖರ ಶಂ. ಗಾಳಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ತಹಶೀಲ್ದಾರ್ ವಿರುದ್ಧ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರ ಶಿಫಾರಸಿನ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ.

JOCKEY

FACTORY SECONDS

UPTO 50% OFF*

INNERWEAR | LEISUREWEAR | ACTIVEWEAR | KIDSWEAR | SOCKS

• 10 am to 8 pm • Open All Days • Master/Visa Card Accepted

* T & C apply

Venues in Bangalore

- West Of Chord Road: Sri Vidyaranya Prarthana Mandira, (Sri Avani Sringeri Shankar Mutt) Mahalaxmipuram, Next To Anupama English School - 560 086
- Kundalahalli Gate: S K R Convention Hall, #68, Thubarahalli, Varthur Main Road - 560 066
- Malleswaram: The Canara Union, No.42, 8th Main, Canara Union Road - 560 003
- Jayanagar: Premachandra Kalyana Mahal, T.Mariyappa Road, 2nd Block, (Near Ashoka Pillar) - 560 011
- Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
- Infantry Road: Safina Plaza, No.84/85 - 560 001
- Bannerghatta Road: Santhome Parish Church Hall, Hulimavu, Near Meenakshi Mall - 560 076
- Koramangala: Apoorva International, #35A, Raheja Arcade, Opp Star Box - 560 095
- Basavanagudi: Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

11 ವರ್ಷ ಸಂಚಾರ: ಮನೆಗೆ ತೆರಳದಿರಲು ನಿರ್ಧರಿಸಿರುವ ಐಐಟಿ ಪ್ರಾಧ್ಯಾಪಕ

ಸೌರಶಕ್ತಿ ಜಾಗೃತಿಗೆ 'ಇಂಧನ ಸ್ವರಾಜ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುತ್ತಿರುವ ತಾಪಮಾನ ತಡೆಯುವುದು ಮತ್ತು ಸೌರಶಕ್ತಿ ಬಳಸುವ ಮೂಲಕ ಇಂಧನ ಕ್ಷೇತ್ರದಲ್ಲಿ ಆತ್ಮನಿರ್ಭರ ಸಾಧಿಸುವ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಬಾಂಬೆ ಐಐಟಿ ಪ್ರಾಧ್ಯಾಪಕ ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರು ದೇಶದಾದ್ಯಂತ ಬಸ್ ಯಾತ್ರೆ ಕೈಗೊಂಡಿದ್ದಾರೆ.

'ಇಂಧನ ಸ್ವರಾಜ್' ಹೆಸರಿನಲ್ಲಿ 2020ರಿಂದ ಸೋಲಂಕಿ ಆರಂಭಿಸಿರುವ ಯಾತ್ರೆಯು, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಸುತ್ತಾಡಿ ಇದೀಗ ಬೆಂಗಳೂರಿಗೆ ಬಂದಿದೆ. 11 ವರ್ಷಗಳ ಈ ಯಾತ್ರೆಯ ಅವಧಿಯಲ್ಲಿ ಸೋಲಂಕಿ ಅವರು ಬಸ್‌ನಲ್ಲೇ ತಂಗಲು ನಿರ್ಧರಿಸಿದ್ದು, ಮನೆಗೂ ತೆರಳದಿರಲು ನಿರ್ಧರಿಸಿದ್ದಾರೆ.

ಯಾತ್ರೆಗೆ ಸಿದ್ಧಪಡಿಸಿದ ಬಸ್ ಸೋಲಂಕಿ ಅವರಿಗೆ 'ಸಂಚಾರಿ ಮನೆ'ಯಾಗಿದೆ. ಸಾಮಾನ್ಯ ಡಿಸೇಲ್ ಚಾಲಿತ ಈ ಬಸ್‌ನಲ್ಲಿ ಸೌರಶಕ್ತಿ ಬಳಸುವ ಸೌಲಭ್ಯ ಅಳವಡಿಸಲಾಗಿದೆ. ಐಐಟಿ ಸಂಸ್ಥೆಯಿಂದ ರಜೆ ಪಡೆದು ಈ ಯಾತ್ರೆ ಕೈಗೊಂಡಿರುವ ಸೋಲಂಕಿ ಅವರು, ಸೌರಶಕ್ತಿಯನ್ನು ಅಳವಡಿಸುವುದು ಸಾರ್ವಜನಿಕ ಆಂದೋಲನವಾಗಬೇಕು ಎನ್ನುವ ಆಶಯ ಹೊಂದಿದ್ದಾರೆ.

ಇಂಧನ ಸ್ವರಾಜ್ ಪ್ರತಿಷ್ಠಾನದ ಸಂಸ್ಥಾಪಕರಾಗಿರುವ ಸೋಲಂಕಿ ಅವರು, ಮಧ್ಯಪ್ರದೇಶ ಸರ್ಕಾರದ ಸೌರಶಕ್ತಿಯ ಬ್ರ್ಯಾಂಡ್ ರಾಯಭಾರಿಯ ಗೌರವಕ್ಕೆ ಪಾತ್ರರಾಗಿದ್ದಾರೆ. 1 ಲಕ್ಷ ಡಾಲರ್ (ಅಂದಾಜು ₹76.28 ಲಕ್ಷ) ಮೊತ್ತದ ಐಇಇಇ ಜಾಗತಿಕ ಪ್ರಶಸ್ತಿ ಸೇರಿದಂತೆ ಅಂತರರಾಷ್ಟ್ರೀಯ ಪ್ರತಿಷ್ಠಿತ ಪ್ರಶಸ್ತಿಗಳಿಗೂ ಇವರು ಪಾತ್ರರಾಗಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಶನಿವಾರ ತಮ್ಮ ಯಾತ್ರೆಯ ಉದ್ದೇಶ ಮತ್ತು ಪರಿಸರ ರಕ್ಷಣೆಗೆ ಜಾಗೃತಿ ಮೂಡಿಸಲು ಕೈಗೊಂಡಿರುವ ಕಾರ್ಯಗಳ ವಿವರ ನೀಡಿದ ಸೋಲಂಕಿ ಅವರು, 'ಸ್ಥಳೀಯರಿಂದ, ಸ್ಥಳೀಯರಿಗಾಗಿ ಇಂಧನ ಎನ್ನುವ ಆಶಯದೊಂದಿಗೆ ಈ ಯಾತ್ರೆ ಆರಂಭಿಸಲಾಗಿದೆ. ಜನರಿಗೆ ಸೌರಶಕ್ತಿ ಬಳಕೆ ಕುರಿತು ಅರಿವು ಮತ್ತು ತರಬೇತಿ ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಜತೆಗೆ, ವಿದ್ಯಾರ್ಥಿಗಳ ಜತೆ ಸಂವಾದ ನಡೆಸಲಾಗುತ್ತಿದೆ. ಇದಕ್ಕಾಗಿಯೇ ಸೌರಶಕ್ತಿ ಬಸ್ ಮೂಲಕ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ' ಎಂದು ವಿವರಿಸಿದರು.

'ಇಲ್ಲಿಯವರೆಗೆ 484 ದಿನಗಳ ಕಾಲ 18 ಸಾವಿರ ಕಿ.ಮೀ. ಸಂಚರಿಸಲಾಗಿದೆ. 54 ಸಾವಿರ ಜನರನ್ನು ತಲುಪುವ ಪ್ರಯತ್ನ ಮಾಡಲಾಗಿದೆ. ಒಟ್ಟು 28 ರಾಜ್ಯಗಳಲ್ಲಿ ಎರಡು ಲಕ್ಷ ಕಿ.ಮೀ. ಸಂಚರಿಸುವ ಗುರಿ ಹೊಂದಲಾಗಿದ್ದು, ಒಂದು ಲಕ್ಷ ಜನರಿಗೆ ತರಬೇತಿ ನೀಡುವ ಉದ್ದೇಶವಿದೆ' ಎಂದು ತಿಳಿಸಿದರು.

ದೇಶದಾದ್ಯಂತ ಸೌರ ಶಕ್ತಿ ಬಗ್ಗೆ ಅರಿವು ಮೂಡಿಸಲು ರೂಪಿಸಿದ 'ಇಂಧನ ಸ್ವರಾಜ್' ಬಸ್ ನೋಟ (ಎಡಚಿತ್ರ) 'ಇಂಧನ ಸ್ವರಾಜ್'ಬಸ್‌ನಲ್ಲಿನ ಸೌಲಭ್ಯಗಳನ್ನು ವಿವರಿಸಿದ ಪ್ರೊ. ಚೇತನ್ ಸಿಂಗ್ ಸೋಲಂಕಿ —ಪ್ರಜಾವಾಣಿ ಚಿತ್ರ

ಬಸ್ ವಿಶೇಷಗಳು

- **3.2** ಕಿಲೋ ವಾಟ್ ಸೌರಶಕ್ತಿ ಫಲಕಗಳು
- **6** ಕಿಲೋ ವಾಟ್ ಬ್ಯಾಟರಿ
- ಟಿ.ವಿ.
- ಅಡುಗೆ ಮಾಡಲು ವ್ಯವಸ್ಥೆ
- ಲ್ಯಾಪ್‌ಟಾಪ್ ಚಾರ್ಜಿಂಗ್

ಉದ್ಯಾನಕ್ಕೆ ವೇಮನ ಹೆಸರು

ಪ್ರಜಾವಾಣಿ ವಾರ್ತೆ

ಯಲಹಂಕ: ಉಪನಗರದ ಮದರ್ ಡೇರಿ ವೃತ್ತದ ಸಮೀಪದಲ್ಲಿರುವ ಉದ್ಯಾನಕ್ಕೆ 'ಮಹಾಯೋಗಿ ವೇಮನ ಉದ್ಯಾನ' ಎಂದು ನಾಮಕರಣ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಎಸ್.ಆರ್.ವಿಶ್ವನಾಥ್, 'ಮಹಾನ್ ಪುರುಷರು ಹಾಗೂ ದಾರ್ಶನಿಕರ ಹೆಸರುಗಳು ಜನಮಾನಸದಲ್ಲಿ ಚಿರಕಾಲ ಉಳಿಯಬೇಕೆಂಬ ಉದ್ದೇಶದಿಂದ ಯಲಹಂಕದ ಪ್ರತಿಯೊಂದು ಉದ್ಯಾನಗಳಿಗೆ ಅವರ ಹೆಸರುಗಳನ್ನು ಇಡಲಾಗಿದೆ. ಅದೇ ರೀತಿ ವೇಮನರು ಸಹ ಸಮಾಜದಲ್ಲಿ ಸಮಾನತೆಯ ಸಂದೇಶ ಸಾರುವ ಮೂಲಕ ಕ್ರಾಂತಿಕಾರಕ ಬದಲಾವಣೆಗೆ ಕೊಡುಗೆ ನೀಡಿದ್ದಾರೆ. ಅವರ ಹೆಸರನ್ನು ಉದ್ಯಾನಕ್ಕೆ ಇಡುವ ಮೂಲಕ ಗೌರವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಮಾತನಾಡಿ, 'ವೇಮನರು ಕೇವಲ ಒಂದು ಜಾತಿ-ಧರ್ಮಕ್ಕೆ ಸೀಮಿತವಾಗಿರದೆ, ಬಸವಣ್ಣನವರ ನಂತರ ಸಮಾಜದಲ್ಲಿ ಎಲ್ಲರೂ ಒಂದೇ ಎನ್ನುವುದನ್ನು ಸಾರಿ ಹೇಳುವ ಮೂಲಕ ಸಮಾನತೆಗಾಗಿ ಕೊಡುಗೆ ನೀಡುವಲ್ಲಿ ಅವರ ಪಾತ್ರ ದೊಡ್ಡದು. ಅಂತಹ ಮಹಾಪುರುಷರ ಹೆಸರನ್ನು ಉದ್ಯಾನಕ್ಕೆ ನಾಮಕರಣ ಮಾಡಿರುವುದು ಶ್ಲಾಘನೀಯ ಕಾರ್ಯವಾಗಿದೆ' ಎಂದರು.

ಯಲಹಂಕ ಉಪನಗರದ ಮದರ್ ಡೇರಿ ವೃತ್ತದ ಸಮೀಪದಲ್ಲಿರುವ ಉದ್ಯಾನಕ್ಕೆ 'ಮಹಾಯೋಗಿ ವೇಮನ' ಉದ್ಯಾನ' ಎಂದು ನಾಮಕರಣ ಮಾಡಲಾಯಿತು. ಶಾಸಕ ಎಸ್.ಆರ್.ವಿಶ್ವನಾಥ್, ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ, ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್ ಇದ್ದರು.

29ಕ್ಕೆ ಸಾರಿಗೆ ನೌಕರರ ಧರಣಿ

ಬೆಂಗಳೂರು: ಸಾರಿಗೆ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಮಾ.29ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ನ ಅಧ್ಯಕ್ಷ ಎಚ್.ಡಿ.ರೇವಪ್ಪ,'ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಧರಣಿ ಹಮ್ಮಿಕೊಂಡಿದ್ದೇವೆ' ಎಂದರು.

'ಸಾರಿಗೆ ಮುಷ್ಕರದ ವೇಳೆ ವಜಾಗೊಂಡ ಎಲ್ಲ ನೌಕರರನ್ನು ಮರು ನೇಮಕ ಮಾಡಿಕೊಳ್ಳಬೇಕು. ಡೀಸೆಲ್ ದರ ಕಡಿಮೆ ಮಾಡಬೇಕು. ಸಾರಿಗೆ ನಿಗಮಗಳಿಗೆ ಪ್ರತಿ ಬಜೆಟ್‌ನಲ್ಲಿ ಅನುದಾನ ನೀಡಬೇಕು. ವಿದ್ಯುತ್ ಚಾಲಿತ ಬಸ್‌ಗಳನ್ನು ಕಾರ್ಯಾಚರಣೆ ಮಾಡಬೇಕು' ಎಂದು ಆಗ್ರಹಿಸಿದರು.

ಏ.3ರವರೆಗೆ ಬೆಂಗಳೂರು ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಬೆಂಗಳೂರು ಉತ್ಸವ'ದ ಅಂಗವಾಗಿ ಏಪ್ರಿಲ್ 3ರವರೆಗೆ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿದೆ.

ಮೇಳದಲ್ಲಿ 80ಕ್ಕೂ ಹೆಚ್ಚು ಮಳಿಗೆಗಳಿವೆ. ಬೆಳಿಗ್ಗೆ 11 ರಿಂದ ಸಂಜೆ 7 ಗಂಟೆಯವರೆಗೆ ಮೇಳ ನಡೆಯಲಿದ್ದು, ಪ್ರವೇಶ ಉಚಿತ.

ದೇಶದ ವಿವಿಧ ಭಾಗಗಳ ಕುಶಲಕರ್ಮಿಗಳು ತಯಾರಿಸಿದ ತರಹೇವಾರಿ ಕರಕುಶಲ ವಸ್ತುಗಳು, ಆಟಿಕೆಗಳು, ಉಡುಪುಗಳು, ಮನೆಯ ಅಲಂಕಾರಿಕ ಉತ್ಪನ್ನಗಳು, ಆಭರಣಗಳು, ಕಲಾಕೃತಿಗಳು, ಪೀಠೋಪಕರಣಗಳು, ಕೈಮಗ್ಗ, ಪಿಂಗಾಣಿ ವಸ್ತುಗಳು ಸೇರಿದಂತೆ ನೂರಾರು ಬಗೆಯ ಉತ್ಪನ್ನಗಳು ಈ ಪ್ರದರ್ಶನದಲ್ಲಿ ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಆರಂಭ

ನವದೆಹಲಿ, ಮುಂಬೈ (ಪಿಟಿಐ): ಕೋವಿಡ್ ಸಾಂಕ್ರಾಮಿಕ ರೋಗದ ಕಾರಣ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಇಂದಿನಿಂದ (ಮಾರ್ಚ್ 27) ಪುನರಾರಂಭಗೊಳ್ಳಲಿದೆ.

ನಿಗದಿತ ವೇಳಾಪಟ್ಟಿಯ ಪ್ರಕಾರ 40 ದೇಶಗಳ 60 ವಿಮಾನಯಾನ ಸಂಸ್ಥೆಗಳಿಗೆ ಭಾರತಕ್ಕೆ ಮತ್ತು ಭಾರತದಿಂದ ಇತರ ದೇಶಗಳಿಗೆ ಕಾರ್ಯಾಚರಣೆ ನಡೆಸಲು ಅನುಮತಿ ನೀಡಲಾಗಿದೆ. ಈ ವೇಳಾಪಟ್ಟಿಯು ಮಾರ್ಚ್ 27ರಿಂದ ಅಕ್ಟೋಬರ್ 29ರವರೆಗೆ ಜಾರಿಯಲ್ಲಿರುತ್ತದೆ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅಭಿಪ್ರಾಯ

'ಎಲ್ಲವನ್ನೂ ಒಳಗೊಳ್ಳುವುದೇ ನಿಜವಾದ ಸಾಹಿತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಧ್ವನಿ, ಹಕ್ಕಿಗಳ ಚಿಲಿಪಿಲಿ ಹೀಗೆ ಎಲ್ಲವನ್ನೂ ಒಳಗೊಳ್ಳುವುದೇ ನಿಜವಾದ ಸಾಹಿತ್ಯ' ಎಂದು ಕವಿ ಡಾ.ಎಚ್.ಎಸ್. ವೆಂಕಟೇಶಮೂರ್ತಿ ತಿಳಿಸಿದರು.

ಶ್ರೀಮತಿ ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಶಾಂತಿ ಕೆ.ಅಪ್ಪಣ್ಣ (ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು) ಅವರಿಗೆ 2020ನೇ ಸಾಲಿನ ಶ್ರೀಮತಿ ಸರಳಾ ರಂಗನಾಥ ರಾವ್ ಸ್ಮಾರಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರತಿಷ್ಠಾನದ ಅಧ್ಯಕ್ಷರೂ ಆಗಿರುವ ವೆಂಕಟೇಶ ಮೂರ್ತಿ, 'ಶಾಂತಿ ಅವರು ಅಂತರಂಗದ ಕಥೆಗಳನ್ನು ಬರೆಯುತ್ತಾರೆ. ಅವು ಓದುಗರನ್ನು ಕಾಡುತ್ತವೆ. ಬಹುಮಾನಿತ ಕೃತಿಯಲ್ಲಿರುವ 'ಜಯರಾಮ ಹುಚ್ಚನಾದದ್ದು ಹೀಗೆ' ಎಂಬ ಕಥೆ ಪ್ರಬಲವಾದ ಸಾಮಾಜಿಕ ಶಕ್ತಿಗಳ ಹೋರಾಟ ಮತ್ತು ಒಡನಾಟವನ್ನು ಹೇಳುತ್ತದೆ. ಇಂತಹ ಕಥೆಗಳನ್ನು ಓದುವಾಗ ತನ್ಮಯತೆಯ ಅನುಭೂತಿ ಉಂಟಾಗುತ್ತದೆ' ಎಂದರು.

ವಿಮರ್ಶಕ ಚಿಂತಾಮಣಿ ಕೊಡ್ಲೆಕೆರೆ, 'ಶಾಂತಿ ಅವರ ಬರವಣಿಗೆಯಲ್ಲಿ ಪ್ರಬುದ್ಧತೆ ಇದೆ. ಜೀವನ ದೃಷ್ಟಿಯು ಮುಕ್ತ ಹಾಗೂ ಸ್ವತಂತ್ರವಾಗಿದೆ. ದ್ವಂದ್ವವನ್ನು ಒಳಗೊಳ್ಳುವಂತಹ ಸೃಜನಶೀಲ ಶಕ್ತಿಯೂ ಅವರ ಕಥೆಗಳಲ್ಲಿ ಇವೆ. ಸಣ್ಣ ಉಪಮೆಗಳಿಂದಲೇ ಕಥೆಯ ಅರ್ಥ ಹಿಗ್ಗಿಸುವ ಸಾಮರ್ಥ್ಯ ಅವರಿಗಿದೆ' ಎಂದರು.

ಕವಿ ಬಿ.ಆರ್.ಲಕ್ಷ್ಮಣರಾವ್, 'ಕೆಲ ವರ್ಷಗಳ ಹಿಂದೆ ಶಾಂತಿ ಅವರ 'ಮನಸು ಅಭಿಸಾರಿಕೆ' ಪುಸ್ತಕ ಓದಿ ಇಷ್ಟಪಟ್ಟಿದ್ದೆ. ಪುರುಷ ಪ್ರಪಂಚದ ಆಗುಹೋಗುಗಳನ್ನು ತುಂಬಾ ಸೂಕ್ಷ್ಮವಾಗಿ ಗ್ರಹಿಸಿ ಬರೆದಿದ್ದರು. ಅವರ ಎರಡನೇ ಕೃತಿಗೂ ಪ್ರಶಸ್ತಿ ಸಿಕ್ಕಿದೆ. ಕನ್ನಡ ಕಥಾ ಲೋಕಕ್ಕೆ ಅವರಿಂದ ಇನ್ನಷ್ಟು ಕೊಡುಗೆಗಳು ಸಿಗಲಿ' ಎಂದು ಆಶಿಸಿದರು.

ಶಾಂತಿ ಅಪ್ಪಣ್ಣ, 'ನಾನು ನಿರ್ದಿಷ್ಟ ಸಿದ್ಧಾಂತ ಹಾಗೂ ವರ್ಗವನ್ನು ಪ್ರತಿನಿಧಿಸುವುದಿಲ್ಲ. ಬರಹಗಾರರು ಜಾತ್ಯತೀತ ಹಾಗೂ ಪಕ್ಷಾತೀತವಾಗಿ ಇರಬೇಕು. ಪ್ರಶಸ್ತಿಗಳಿಗೆ ಲೇಖಕರೇ ಅರ್ಜಿ ಸಲ್ಲಿಸುವುದು ಮುಜುಗರದ ವಿಚಾರ. ಇದು ಬದಲಾಗಬೇಕು' ಎಂದರು.

ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಜಿ.ಎನ್.ರಂಗನಾಥ ರಾವ್, 'ಪತ್ನಿ ಸರಳಾ, ನನ್ನೆಲ್ಲಾ ಕೃತಿ ಹಾಗೂ ಬರಹಗಳ ಪ್ರಥಮ ವಿಮರ್ಶಕಿಯಾಗಿದ್ದಳು. ಹೊಸ ಲೇಖಕಿಯರನ್ನು ಪ್ರೋತ್ಸಾಹಿಸಬೇಕು. ಅವರ ಕೆಲಸ ಗುರುತಿಸಿ ಗೌರವಿಸಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದಳು. ಹೀಗಾಗಿ ಆಕೆಯ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿದ್ದೇವೆ. ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿರಲಿದೆ' ಎಂದು ತಿಳಿಸಿದರು.

ಶಾಂತಿ ಕೆ.ಅಪ್ಪಣ್ಣ ಅವರಿಗೆ ಕವಿ ಬಿ.ಆರ್.ಲಕ್ಷ್ಮಣ ರಾವ್ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಜಿ.ಎನ್.ರಂಗನಾಥ ರಾವ್, ಎಚ್.ಎಸ್.ವೆಂಕಟೇಶ ಮೂರ್ತಿ, ಪ್ರತಿಷ್ಠಾನದ ಧರ್ಮದರ್ಶಿ ಮಾವಿನಕೆರೆ ರಂಗನಾಥನ್ ಹಾಗೂ ಚಿಂತಾಮಣಿ ಕೊಡ್ಲೆಕೆರೆ ಇದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

EXPERIENCED SALESPERSON for the purpose of selling Clay Bricks and Tiles across the city of Bengaluru. Salary starts at Rs. 30,000/- per month and free single accommodation will be provided at Yelahanka, Bengaluru. Candidates must do field work, must possess a two wheeler and a valid driver's license. If interested, call 8971781677/ 9449435390.

WE REQUIRE: MARKETING ENGINEER For our special Pumps-Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com

Multiple Vacancy

SHEKAR EYE Hospital,JP Nagar,Bangalore requires 1)Senior Accounts Executives ,ladies with good knowledge of tally & minimum 5years experience -Salary 30K . 2)Optometrists with min 3years experience-Salary- 26K 3)Business Development Executives - Freshers / Experienced (minimum 5years) send CV to hr@shekareyehospital.com, coo@shekareyehospital.com Contact: 9108431292

MANAGER, FIELD OFFICER, TELECALLERS, LADY OFFICE ASSISTANTS for our office Vijaya Nagar. Contact: 9341289221/9066990362

Office Boys/ Peon

REQUIRED OFFICE Assistant Cum Delivery Boy with Good English, License in Mathikere Age 30 years Pay 17k: 9008517999

Receptionist/ Secretary

"MALE SECRETARY from J.P.Nagar, Undergraduate MS-Excell Experience, below 35years, Salary 16000/- Negotiable, for Home Office. Contact: 8088174438"

Situation Required

WANTED CHARTERED Accountant having experience of 5 years & knowledge of computers, Tally, Excel Etc. Apply with minimum acceptable salary through E-mail: salomi@shivaferric.com Contact: 9480024697

Security & Detectives

WANTED SECURITY SUPERVISOR/ GUARDS with Computer Knowledge near Jayanagar & Banashankari. Good Pay. Contact: 9538167126/ 9945273400

AUTOMOTIVE

Four Wheelers Selling

Ford

REQUIRE SALVAGE quote with RC & without RC for accident vehicle KA04 MU4699 Ford Ecosport 1.5 Titanium M 2018 model at PPS Ford Yelahanka, Bangalore. Contact 9844096114

BEAUTY & HEALTH

Physiotherapy

MALE PHYSIOTHERAPIST available for massage. Interested contact this number 9901732123.

BUSINESS

Business to Business

Hotel & Restaurant

RESTAURANT AVAILABLE at Sandeep Vihar, a housing colony of 1524 flats near Seegahalli on Whitefield - Hosakote Road invites proposals from reputed and experienced restaurateurs/ caterers for running their restaurant. Respond on svaoa.vendorteam@gmail.com. Contact 7348872675

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

Business For Sale

REPUTED BPO Company readily available with 100 seats. Contact : HR 9538777287

SCHOOL & Building for sale. Contact Mr. Prasad Mob: 9449004900

Machinery & Tools

CNC LASER Spare Capacity Available @ Peenya, MS Upto 16 MM, ALU Upto 8 MM, SS Upto 10 MM, Copper Upto 6 MM.7090573456

WEEKEND CORNER ಕ್ಲಾಸಿಫೈಡ್ಸ್

Yoga Teachers Training Course (ONLINE)

Deepayan yoga Sansthan — You can do it

Good Chance to Earn ₹15000 to ₹30000 Per Month.

Two certificates- Yoga Certification Board (YCB) of India, Yoga Alliance, USA

1. Weekdays Batch: Classes: Monday to Friday, Duration: 3 Months • Time: 12pm to 2pm
2. Weekend Batch: Duration: Three Months, Classes: Saturday & Sundays • Time: 8am to 11am

• Will Cover Both Theory & Practical.

For Registration: +91 99209 62991

Deepayan Yoga Sansthan
Web : www.deepayan.yoga

MATRIMONIAL

Brides Wanted

Bengali

WELL CULTURED Bengali family is looking for a beautiful bride from an intellectual family for marriage for their elder son '94,5'9 working as software engineer in MNC(080-69074900)

KAYASTHA BENGALI Family (Native East Bengal, Dhaka) are looking for a suitable bride for marriage for their only son, CG Employee (080-69074900)

45 YEAR old Bengali Boy , 5'9, Central Govt Officer seeks suitable girl for early marriage (Divorcee/Widow also Acceptable) (080-69074900)

Hindu

FEMALE INDEPENDENT Live-in Partner from Bangalore (No Marriage) within 35years, without Dependents. Contact: 8088174438

Malayalam

NAIR BOY 32yrs MNC employed looking for suitable Bride from Nair Menon Nambiar family Bangalore settled Contact 9448704438

Muslim

WE ARE looking for Cultured, educated Sunni Muslim Girl for our 29 year old B.Tech/ MBA son working as an Engineer in UAE, father Retired Central Govt Employee, mother Associate Professor. Early marriage. (080 6910 3008)

SUNNI MUSLIM Bangalore based family looking for an alliance for their M.Tech son Working as a Software Engineer, Father Retired Govt. Employee, Mother Retired Professor (080-69074922)

Bride Required Others

RICH CASTE No Bar Hindu 44, 5'9', M.A (ECO) Bangalore. Contact. USHODHAYA- mobile No. 9611919477.

Second Marriage

RICH CASTE No Bar Hindu divorcee 39, 5'7',B. E. Bangalore. Contact USHODHAYA- mobile no. 9611919477.

Tamil

ALLIANCE INVITED for Boy (30) of Hindu Christian Parent, BE Graduate, parents retired Central Govt Employees. Bride should be graduate with good job under 28 years with good family background. Interested persons Contact: 9449341945

Grooms Wanted

Kannada

VOKKALIGA GOWDA Rich beautiful vokkaliga 25, 5'5', B.E M.S. (USA) only daughter. Contact. USHODHAYA- 9611919477

Second Marriage

RICH CASTE No Bar Hindu divorcee 33, 5'3', B.Tech, Bangalore. Contact USHODHAYA- mobile No. 9611919477.

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸುಮ ಗೋಪಾಲಕೃಷ್ಣ ದೂರವಾಣಿ: 9886908152

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, UPADHYAYULA SHASHANK (OLD NAME)R/O No. 56, M Ramachandra Gardens, 3rd Cross, Shanthi Layout,Ramamurthy Nagar, Bangaluru -560016 have changed my name as UPADHYAYULASOMESWARA SHASHANK (NEW NAME) For all purpose vide affidavit dated: 24.03.2022 sworn before G. Rajendra Notary of Bangalore.

I ANJALI DEVAIAH BADUVANDA, R/o. #224, Block-1, Brundavan Presidency, HSR Layout, Bangalore- 560102, have changed my name to ANJALLI DEVAIAH BADUVANDA, vide affidavit dated 26.03.2022, before notary N. Kanchivaradaraju, Bangalore.

I DEVAEAH BADUVANDA MUTHAPPA, R/o. #224, Block-1, Brundavan Residency, HSR Layout, Bangalore- 560102, have changed my name to SHLOK DEVAIAH BADUVANDA, vide affidavit dated 18.03.2022, before notary Y.V. Shankar, Bangalore.

I, JAGADISH GOWDA T.C hereby state that I have changed my name from JAGADISH to JAGADISH GOWDA T. C and date of birth is 6th November 1951, sworn in before Notary K.V. NANJAIAH vide affidavit dated 07/03/2022 at Bengaluru.

I,VIJAYA S C W/o Nagaraj Mundas B Residing at B-4 HKB Apartment, 9th Cross JC Nagar, Kurubarahalli, Bangalore-86 have Changed my name from Vijaya Nagaraj Mundas to Vijaya Surgihalli Chandrashekarappa,Vide Affidavit dated 25-03-2022 Before Onkarappa Notary Bangalore.

I NALINI KANNANDA CHITTIAPPA, R/o. Adravalli Sakaleshapura Taluku, Kuniganahalli, Sakleshpur, Hassan- 573214, have changed my name to NALINI BOPAIYA, vide affidavit dated 17.03.2022, before notary Y.V. Shankar, Bangalore.

I TRISHALI DEVAIAH BADUVANDA, R/o. #224, Block-1, Brundavan Presidency, HSR Layout, Bangalore- 560102, have changed my name to B. TRISHALI THANGAMA, vide affidavit dated 17.03.2022, before notary Y.V. Shankar, Bangalore.

TOURS & TRAVEL

Travel

ಸ್ಪೆಷಲ್ ಆಫರ್ 1 ದಿನ ಮಾತ್ರ
5 ದಿನಗಳು ಅಂಡಮಾನ್ 18,000/-
5 ದಿನಗಳು ಲೇಹ್/ಲಡಾಖ್ 18,000/-
5 ದಿನಗಳು ಕಾಶ್ಮೀರ 18,000/-
2 ದಿನಗಳು ಮುಂಬೈ/ಕೊಚ್ಚಿ/ಚೆನ್ನೈ ಗೋವಾ ಹಡಗಿನ ಮುಖಾಂತರ 18,000/-
12 ದಿನಗಳು ಬದ್ರಿನಾಥ್/ಕೇದಾರನಾಥ ಋಷಿಕೇಶ್ - 27,000/
8220834861
KDH Holidays, Bangalore

MORE Classifieds IN SUPPLEMENT

ನಿಲುವು ಪ್ರಕಟಿಸಲು ಸರ್ಕಾರಕ್ಕೆ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯ

2ಎ ಮೀಸಲಾತಿ: ಏ.14ರವರೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸುವ ಕುರಿತು ಏಪ್ರಿಲ್ 14ರ ಒಳಗೆ ಸರ್ಕಾರ ನಿರ್ಧಾರ ಪ್ರಕಟಿಸಬೇಕು. ಇದು ನಮ್ಮ ಕೊನೆಯ ಗಡುವು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಬಸವ ಜಯ ಮೃತ್ಯುಂಜಯ ಸ್ವಾಮೀಜಿ

'ಸಮಾಜಕ್ಕೆ ಮೀಸಲಾತಿ ಕಲ್ಪಿಸುವ ಕುರಿತು ವಿಧಾನಮಂಡಲ ಅಧಿವೇಶನದ ಮುಕ್ತಾಯವಾಗುವ ಮುನ್ನವೇ ಹಿಂದುಳಿದ ವರ್ಗದ ಆಯೋಗದಿಂದ ವರದಿ ಪಡೆಯುವಂತೆ ಆಗ್ರಹಿಸಲಾಗಿತ್ತು. ಆದರೆ, ಅಧಿವೇಶನ ಮುಗಿಯುತ್ತ ಬಂದಿದ್ದರೂ ಸರ್ಕಾರ ಇದುವರೆಗೆ ಯಾವುದೇ ಕ್ರಮಕೈಗೊಂಡಿಲ್ಲ. ಒಂದು ವೇಳೆ, ಸರ್ಕಾರ ಇದೇ ಧೋರಣೆ ಮುಂದುವರಿಸಿದರೆ ಮಾರ್ಚ್ 31ರಂದು ಸಮುದಾಯದ ಮುಖಂಡರ ಸಭೆ ಕರೆದು ಮುಂದಿನ ಹೋರಾಟದ ಕುರಿತು ನಿರ್ಧಾರ ಕೈಗೊಳ್ಳಲಾಗುವುದು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸರ್ಕಾರದ ಮೇಲೆ ನಂಬಿಕೆ ಇಟ್ಟು ಪದೇ ಪದೇ ಗಡುವು ನೀಡಿದ್ದೇವೆ. ಮೀಸಲಾತಿ ಕುರಿತು ಇತ್ತೀಚೆಗೆ ನಡೆದ ಸಭೆಯಲ್ಲೂ ಪಂಚಮಸಾಲಿ ಸಮಾಜದ ಬಗ್ಗೆ ಚರ್ಚೆಯಾಗಿಲ್ಲ. ಅಧಿವೇಶನ ಮುಗಿಯುವ ಮುನ್ನ ಮೀಸಲಾತಿ ಕುರಿತು ಘೋಷಣೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರು. ಆದರೆ, ಈಗ ಮೌನವಹಿಸಿದ್ದಾರೆ. ಬೊಮ್ಮಾಯಿ ಅವರು ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಂತೆ ಸಮುದಾಯಕ್ಕೆ ಕೈ ಕೊಡುವುದಿಲ್ಲ ಎಂದು ನಂಬಿದ್ದೇವೆ. ಹತ್ತು ವರ್ಷಗಳ ಕಾಲ ಪಂಚಮಸಾಲಿ ಸಮಾಜ ಯಡಿಯೂರಪ್ಪ ಅವರನ್ನು ನಂಬಿತ್ತು. ಈಗಿನ ಸನ್ನಿವೇಶಗಳನ್ನು ನೋಡಿದರೆ ಬೊಮ್ಮಾಯಿ ಅವರ ಮೇಲೆಯೂ ಸಮಾಜ ನಂಬಿಕೆ ಕಳೆದುಕೊಳ್ಳಬಹುದು' ಎಂದರು.

'ಇದೇ 30ರ ಒಳಗೆ ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆದು ನಿರ್ಧಾರ ಪ್ರಕಟಿಸಬೇಕು. ಸಮಾಜಕ್ಕೆ ಮೀಸಲಾತಿ ಕಲ್ಪಿಸುವ ಬಗ್ಗೆ ಸ್ಪಷ್ಟವಾದ ನಿಲುವು ತಿಳಿಸಬೇಕು. ಯಾವುದೇ ರೀತಿಯ ದ್ವಂದ್ವ ನಿಲುವು ಅನುಸರಿಸಬಾರದು. ನಮ್ಮ ಜನಾಂಗ ನಂಬಿದರೆ ಪ್ರಾಣ ಕೊಡಲು ಸಿದ್ಧವಿದೆ. ನಂಬಿಕೆ ಕಳೆದುಕೊಂಡರೆ ಪಂಚಮಸಾಲಿ ಸಮುದಾಯ ಅಸಮಾಧಾನಗೊಳ್ಳಲಿದೆ. ಬೇರೆ ಸ್ವಾಮೀಜಿಗಳ ರೀತಿ ಅನುದಾನ ನೀಡಿ ಎಂದು ಮುಖ್ಯಮಂತ್ರಿ ಮನೆ ಬಾಗಿಲಿಗೆ ಹೋಗಿಲ್ಲ. ಸಮಾಜಕ್ಕೆ ನ್ಯಾಯ ಕಲ್ಪಿಸುತ್ತಾರೆ ಎನ್ನುವ ಭರವಸೆ ಮಾತ್ರ ಹೊಂದಿದ್ದೇವೆ' ಎಂದು ಹೇಳಿದರು.

'ಹೈಕೋರ್ಟ್ ಆದೇಶ ಪಾಲಿಸಿ '

ಸ್ವಾಮೀಜಿಗಳ ಪೇಟ ಹೇಳಿಕೆ ಕುರಿತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ಈ ವಿಷಯದಿಂದ ಎಲ್ಲ ಧರ್ಮಗಳು ದೂರ ಉಳಿದಿದ್ದೇವೆ. ನಮ್ಮನ್ನು ಈ ವಿಷಯದಲ್ಲಿ ಎಳೆತರಬೇಡಿ. ಶಾಲಾ ಮಕ್ಕಳ ವಿಚಾರ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ನೀಡಿದೆ. ನ್ಯಾಯಾಲಯದ ತೀರ್ಪು ಪಾಲಿಸಬೇಕು' ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

₹2.50 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಜಕ್ಕೂರು ಹಾಗೂ ಮರಿಯಣ್ಣಪಾಳ್ಯದಲ್ಲಿ ₹2.50 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಅವರು ಚಾಲನೆ ನೀಡಿದರು.

ಜಕ್ಕೂರು ಬಡಾವಣೆಯ ಶ್ರೀರಾಮ ವಿದ್ಯಾಲಯದಿಂದ ಜಕ್ಕೂರು ಗ್ರಾಮದ ಅಂಬೇಡ್ಕರ್ ಭವನದವರೆಗೆ ₹1.50 ಕೋಟಿ ಮತ್ತು ₹1 ಕೋಟಿ ವೆಚ್ಚದಲ್ಲಿ ಮರಿಯಣ್ಣಪಾಳ್ಯದ ಮರಿಯಾ ಸ್ಟ್ರೀಟ್ ಹಾಗೂ ನಾಗವಾರ ಕೆರೆಕೋಡಿ ಪಕ್ಕದ ಸೇಂಟ್ ಫ್ರ್ಯಾಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಕೃಷ್ಣಬೈರೇಗೌಡ, 'ಬಿಬಿಎಂಪಿಗೆ ನೂತನವಾಗಿ ಸೇರ್ಪಡೆಯಾದ ಗ್ರಾಮಗಳಿಗೆ ಕಾವೇರಿನೀರು ಪೂರೈಕೆಮಾಡುವ ಸಲುವಾಗಿ ಜಲಮಂಡಳಿ ವತಿಯಿಂದ ಕಾವೇರಿ 5ನೇ ಹಂತದ ಯೋಜನೆಯಡಿ ಜಕ್ಕೂರು ಬಡಾವಣೆಯಿಂದ ಚೊಕ್ಕನಹಳ್ಳಿಯವರೆಗೆ ಬೃಹತ್ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು. ಇದರಿಂದ ರಸ್ತೆಯು ಹಾಳಾಗಿ ಜನರು ತೊಂದರೆ ಅನುಭವಿಸುತ್ತಿದ್ದರು. ಈಗ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿದ್ದು, ಶೀಘ್ರದಲ್ಲೇ ಸಮಸ್ಯೆ ನಿವಾರಣೆಯಾಗಲಿದೆ' ಎಂದು ತಿಳಿಸಿದರು.

ಬಿಬಿಎಂಪಿ ಮಾಜಿ ಸದಸ್ಯ ಪಿ.ವಿ. ಮಂಜುನಾಥಬಾಬು, ಕಾಂಗ್ರೆಸ್ ಮುಖಂಡರಾದ ರವಿಗೌಡ, ಶ್ರೀನಿವಾಸ್, ಕುಮಾರ್, ಮುನಿರಾಜು, ಗೌರೀಶ್, ಡಿ.ಬಿ.ಸುರೇಶ್ ಗೌಡ, ಡಿ.ಸಿ. ಮುನಿರಾಜು, ಡಿ.ಸಿ.ಮುನಿಸ್ವಾಮಿ ಇದ್ದರು.

ಸಿ ಎಸ್ ಕೆ ಹೊಸ ನಾಯಕ!

ಅಂತಿಮ ಸಿದ್ಧತೆ ಕರ್ನಾಟಕ ಚಿತ್ರಕಲಾ ಪರಿಷತ್ತು ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿರುವ 19ನೇ ಚಿತ್ರಸಂತೆಗೆ ಮುನ್ನಾದಿನವಾದ ಶನಿವಾರ ಅಂತಿಮ ಸಿದ್ಧತೆ ನಡೆಸುತ್ತಿರುವ ಸಿಬ್ಬಂದಿ

ಪ್ರಜಾವಾಣಿ ಚಿತ್ರ

ರೈಲು ನಿಲ್ದಾಣ: ಪ್ರಯಾಣಿಕರನ್ನು ಆಕರ್ಷಿಸಲು ಮಳಿಗೆ

ಚನ್ನಪಟ್ಟಣ ಆಟಿಕೆ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ಪ್ರಯಾಣಿಕರನ್ನು ಆಕರ್ಷಿಸುವ ಹಾಗೂ ಸ್ಥಳೀಯ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದೊಂದಿಗೆ ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗವು ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲ್ವೆ ನಿಲ್ದಾಣದಲ್ಲಿ 'ಚನ್ನಪಟ್ಟಣ ಆಟಿಕೆಗಳ ಮಳಿಗೆ'ಯನ್ನು ಶುಕ್ರವಾರ ಆರಂಭಿಸಿತು.

ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ 'ಒಂದು ನಿಲ್ದಾಣ–ಒಂದು ಉತ್ಪನ್ನ' ಯೋಜನೆಯಡಿ ಈ ಮಳಿಗೆ ತೆರೆಯಲಾಗಿದೆ. ಸ್ಥಳೀಯ ಕುಶಲಕರ್ಮಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರೋತ್ಸಾಹಿಸುವುದು ಈ ಉಪಕ್ರಮದ ಉದ್ದೇಶ. ಕೆಎಸ್‌ಆರ್ ರೈಲು ನಿಲ್ದಾಣವು ಚನ್ನಪಟ್ಟಣದ ಆಟಿಕೆಗಳನ್ನು ಮಾರಾಟ ಮಾಡುವ ರಾಜ್ಯದ ಮೊದಲ ರೈಲು ನಿಲ್ದಾಣವಾಗಿ ಹೊರಹೊಮ್ಮಿದೆ.

ಜನರ ಪ್ರತಿಕ್ರಿಯೆ ಮೇರೆಗೆ ಮಳಿಗೆಯನ್ನು ಮುಂದುವರೆಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಇದಕ್ಕಾಗಿ ಚನ್ನಪಟ್ಟಣ ಕರಕುಶಲ ಕಲಾವಿದರ ಸಂಘದ ಕುಶಲಕರ್ಮಿ ವಿ.ಪ್ರಕಾಶ್ ಅವರಿಗೆ ಪ್ರಾಯೋಗಿಕವಾಗಿ ಚನ್ನಪಟ್ಟಣದ ಆಟಿಕೆಗಳ ಪ್ರಚಾರಕ್ಕಾಗಿ ಈ ಮಳಿಗೆಯನ್ನು ಮಂಜೂರು ಮಾಡಿದೆ.

ಚನ್ನಪಟ್ಟಣದ ಮರದ ಬುಗುರಿ, ದಿಬ್ಬಣ ತಂಡದ ಆಟಿಕೆ ಗೊಂಬೆಗಳು, ದಸರಾ ಗೊಂಬೆಗಳು, ಗೃಹಾಲಂಕಾರದ, ಗೃಹೋಪಯೋಗಿ ವಸ್ತುಗಳು, ಮರದ ಆಭರಣಗಳು ಸೇರಿದಂತೆ ನೂರಾರು ಆಟಿಕೆಗಳನ್ನು ಮಳಿಗೆಯಲ್ಲಿ ಖರೀದಿಸಬಹುದು. ಗುಲಗಂಜಿ ಗಾತ್ರದ ಗೊಂಬೆಗಳಿಂದ ದೊಡ್ಡ ಕೆತ್ತನೆಯ ಗೊಂಬೆಗಳು ಇಲ್ಲಿದ್ದು, ₹50ರಿಂದ ₹10 ಸಾವಿರ ಬೆಲೆಯ ಆಟಿಕೆಗಳೂ ಈ ಮಳಿಗೆಯಲ್ಲಿ ಲಭ್ಯ.

ಮಳಿಗೆ ಉದ್ಘಾಟಿಸಿ ಮಾತನಾಡಿದ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶ್ಯಾಮ ಸಿಂಗ್,'ಒಂದು ನಿಲ್ದಾಣ–ಒಂದು ಉತ್ಪನ್ನ' ಯೋಜನೆಯ ಭಾಗವಾಗಿ ಮಳಿಗೆ ಆರಂಭಿಸಿದ್ದೇವೆ. ರೈಲು ನಿಲ್ದಾಣಗಳನ್ನು ಸಾಂಪ್ರದಾಯಿಕ ಕಲೆಗಳ ಪ್ರದರ್ಶನ ಸ್ಥಳಗಳಾಗಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ಕ್ರಮದಿಂದ ಕರಕುಶಲ ವಸ್ತುಗಳ ಮಾರಾಟಕ್ಕೂ ಪ್ರೋತ್ಸಾಹ ಸಿಗಲಿದೆ' ಎಂದರು.

ನೂತನ ಮಳಿಗೆಯಲ್ಲಿದ್ದ ಚನ್ನಪಟ್ಟಣದ ಆಟಿಕೆಗಳನ್ನು (ಎಡದಿಂದ ಮೂರನೆಯವರು) ರೈಲ್ವೆ ಇಲಾಖೆಯ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶ್ಯಾಮ ಸಿಂಗ್ ವೀಕ್ಷಿಸಿದರು. ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಎ.ಎನ್‌.ಕೃಷ್ಣಾರೆಡ್ಡಿ, ಪ್ರಯಾಣಿಕರ ಸೇವೆಗಳ ಮುಖ್ಯ ವಾಣಿಜ್ಯ ವ್ಯವಸ್ಥಾಪಕ ಅನುಪ್ ದಯಾನಂದ ಸಾಧು ಹಾಗೂ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಹೋಲಿಕೆ ಮಾಡಲಾಗದ ಅಚ್ಚರಿಯ ಪ್ರತಿಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಂತಕ ಪ್ರೊ. ಐಝೂಜ್ ಅಹ್ಮದ್ ಅವರು ಹೋಲಿಕೆ ಮಾಡಲಾಗದ ಅಚ್ಚರಿಯ ಪ್ರತಿಭೆ' ಎಂದು ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ತಿಳಿಸಿದರು.

ಜನಶಕ್ತಿ ಮೀಡಿಯಾ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಐಝೂಜ್ ಬದುಕು–ಬರಹ'ದ ಕುರಿತು ಅವರು ಮಾತನಾಡಿದರು.

'ಐಝೂಜ್ ಅವರು ಜಗತ್ತು ಕಂಡ ಅಪ್ರತಿಮ ವಿದ್ವಾಂಸ. ಅವರ ಕೃತಿಗಳಲ್ಲಿನ ವಿದ್ವತ್ತಿನ ವಿಸ್ತಾರ ಅಚ್ಚರಿ ಮೂಡಿಸುವಂತಹದ್ದು. ಕಾವ್ಯ ಹಾಗೂ ಸಾಹಿತ್ಯ ಕೃತಿಗಳ ಬಗೆಗಿನ ಸೂಕ್ಷ್ಮವಾದ ಓದು ಅವರ ಮೊದಲ ಆಸಕ್ತಿಯಾಗಿತ್ತು. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕದ ಸಮಗ್ರ ಚಿತ್ರಣ ಅವರ ಲೇಖನಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ' ಎಂದರು.

'ಬಾಲ್ಯ ಮತ್ತು ಹದಿಹರೆಯದಲ್ಲೇ ಅವರು ವರ್ಗ ಪ್ರಜ್ಞೆ ಬೆಳೆಸಿಕೊಂಡಿದ್ದರು. ಸೂಕ್ಷ್ಮವಾದ ತಾರತಮ್ಯಗಳನ್ನೂ ಅರ್ಥಮಾಡಿಕೊಳ್ಳಲು ಕಲಿತಿದ್ದರು. ಸಾಮ್ರಾಜ್ಯಶಾಹಿಯನ್ನು ವಿರೋಧಿಸಿದ್ದ ರಾಷ್ಟ್ರೀಯ ಚಳವಳಿಯ ನೆನಪುಗಳು ಹಾಸುಹೊಕ್ಕಾಗಿದ್ದ ಪರಿಸರದಲ್ಲೇ ಅವರು ಬೆಳೆದಿದ್ದರು. ಹೀಗಾಗಿ 70ರ ದಶಕದ ನಂತರ ಅವರಲ್ಲಿ ಭಿನ್ನವಾದ ತಿಳಿವಳಿಕೆ ಬೆಳೆದಿತ್ತು' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮಿದುಳು ನಿಷ್ಕ್ರಿಯ: ನಾಲ್ವರಿಗೆ ನೆರವಾದ ವ್ಯಕ್ತಿ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ 38 ವರ್ಷದ ವ್ಯಕ್ತಿಯೊಬ್ಬರು ಅಂಗಾಂಗಗಳ ದಾನದ ಮೂಲಕ ನಾಲ್ವರಿಗೆ ನೆರವಾಗಿದ್ದಾರೆ.

ಕೋಲಾರ ಜಿಲ್ಲೆಯ ಬಂಗಾರಪೇಟೆಯ ವ್ಯಕ್ತಿ, ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದರು. ಅವರನ್ನು ನಗರದ ಆಸ್ಟರ್ ಆರ್.ವಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಿದುಳು ನಿಷ್ಕ್ರಿಯಗೊಂಡಿದ್ದರಿಂದ ಕುಟುಂಬದವರು ಅಂಗಾಂಗ ದಾನಕ್ಕೆ ಸಮ್ಮತಿಸಿದರು.

ಅವರ ಹೃದಯವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿನ ನಾರಾಯಣ ಹೃದಯ ಕೇಂದ್ರದಲ್ಲಿ 50 ವರ್ಷದ ವ್ಯಕ್ತಿಗೆ ಕಸಿ ಮಾಡಲಾಗಿದೆ. ಯಕೃತ್ತು ಮತ್ತು ಒಂದು ಮೂತ್ರಪಿಂಡವನ್ನು ಆಸ್ಟರ್ ಆರ್‌ವಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳಿಗೆ ಕಸಿ ನಡೆಸಲಾಗಿದೆ. ಇನ್ನೊಂದು ಮೂತ್ರಪಿಂಡವನ್ನು ಎನ್‌ಯು ಆಸ್ಪತ್ರೆಯ ರೋಗಿಗೆ ಕಸಿ ಮಾಡಲಾಗಿದೆ. ಚರ್ಮವನ್ನು ವಿಕ್ಟೋರಿಯಾ ಆಸ್ಪತ್ರೆಯ ಚರ್ಮ ಬ್ಯಾಂಕಿಗೆ ಹಾಗೂ ಕಣ್ಣುಗಳನ್ನು (ಕಾರ್ನಿಯಾ) ಮಿಂಟೊ ಕಣ್ಣಿನ ಬ್ಯಾಂಕ್‌ಗೆ ನೀಡಲಾಗಿದೆ.

ವ್ಯಕ್ತಿಯ ಹೃದಯವನ್ನು ಜಯನಗರದ ಆರ್‌ವಿ ಆಸ್ಪತ್ರೆಯಿಂದ ಹಸಿರು ಕಾರಿಡಾರ್ ಮೂಲಕ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ 20 ನಿಮಿಷಗಳಲ್ಲಿ ಸಾಗಿಸಲಾಯಿತು. ಹೃದಯ ಸಮಸ್ಯೆ ಎದುರಿಸುತ್ತಿದ್ದ ವ್ಯಕ್ತಿಗೆ ಮೂರು ಗಂಟೆಯ ಅವಧಿಯಲ್ಲಿ ಕಸಿ ನಡೆಸಲಾಗಿದೆ. ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗೆ ಎರಡು ತಿಂಗಳ ಹಿಂದೆ ಹೃದಯಾಘಾತವಾಗಿತ್ತು.

'ಹೂಡಿಕೆದಾರರಿಗೆ ಲಾಭ'

ಬೆಂಗಳೂರು: 'ಈಕ್ವಿಟಿಯಿಂದ ಹೂಡಿಕೆದಾರರಿಗೆ ಹೆಚ್ಚು ಲಾಭವಾಗುತ್ತದೆ. ಶೇ 12 ಬಡ್ಡಿಯೊಂದಿಗೆ ಹೂಡಿಕೆ ಮೊತ್ತ ಲಭಿಸುತ್ತದೆ' ಎಂದು ಆನಂದ್ ರಥಿ ಕಂಪನಿಯ ಪ್ರತಿನಿಧಿ ಶಂಕರ್ ರಾಜ್ ತಿಳಿಸಿದರು.

ಷೇರು ಮಾರುಕಟ್ಟೆ, ಈಕ್ವಿಟಿ, ಮ್ಯೂಚುವಲ್ ಫಂಡ್ ಸೇರಿದಂತೆ ವಿವಿಧ ಬಗೆಯ ಹೂಡಿಕೆಗಳ ಕುರಿತು ಕಂಪನಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಹೂಡಿಕೆದಾರರಿಗೆ ಮಾಹಿತಿ ನೀಡಿದರು. 'ಏಕ ಕಾಲಕ್ಕೆ ₹1 ಲಕ್ಷಕ್ಕಿಂತಲೂ ಅಧಿಕ ಮೊತ್ತ ಹೂಡಿಕೆ ಮಾಡಿದರೆ ಶೇ 12ರಿಂದ ಶೇ 14ರಷ್ಟು ಬಡ್ಡಿ ಲಭಿಸುತ್ತದೆ. ಶೇ 50ರಷ್ಟು ಲಾಭದೊಂದಿಗೆ ಹೂಡಿಕೆ ಮೊತ್ತ ಮರಳಿ ಪಡೆಯಬಹುದು. ಯಾವ ವಿಭಾಗದಲ್ಲಿ ಹೂಡಿಕೆ ಮಾಡಿದರೆ ಎಷ್ಟು ಲಾಭ ಗಳಿಸಬಹುದು' ಎಂದರು.

'ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಹಣ ಕಳೆದುಕೊಳ್ಳುವವರು ಹೆಚ್ಚಿದ್ದಾರೆ. ಈಕ್ವಿಟಿ ಹೂಡಿಕೆಗಳಲ್ಲಿ ಮೋಸವಿಲ್ಲ. ಹೂಡಿಕೆಯ ಮೊತ್ತ 5 ವರ್ಷಕ್ಕೇ ದ್ವಿಗುಣವಾಗುತ್ತದೆ' ಎಂದು ಚಂದ್ರಹಾಸ್ ದೇವೂರ್ ತಿಳಿಸಿದರು.

ಸಿಎಂಆರ್‌ಐಟಿಯಲ್ಲಿ ಹ್ಯಾಕಥಾನ್

ಬೆಂಗಳೂರು: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ಆಯೋಜಿಸಿದ್ದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನಲ್ಲಿ ವಿವಿಧ ವಿಭಾಗಗಳ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸೃಜನಶೀಲ ಯೋಜನೆಗಳ ಮೂಲಕ ಗಮನ ಸೆಳೆದರು.

ಭಾಗವಹಿಸಿದ್ದ 48 ತಂಡಗಳೂ ವಿಭಿನ್ನವಾದ ಯೋಜನೆಗಳನ್ನು ಸಿದ್ಧಪಡಿಸಿದ್ದವು. ಕಲ್ಲಿದ್ದಲು ಗಣಿ ಕಾರ್ಮಿಕರ ಸುರಕ್ಷತೆಗಾಗಿ ಸಿದ್ಧಪಡಿಸಲಾಗಿದ್ದ 'ಸ್ಮಾರ್ಟ್ ಉಡುಪು', ಭಾರಿ ವಾಹನಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದ್ದ 'ಸ್ವಯಂ ಚಾಲಿತ ಟಯರ್ ಬದಲಾವಣೆ ಯಂತ್ರ', ಅಪಘಾತ ಪತ್ತೆಗಾಗಿ ಅನ್ವೇಷಿಸಲಾಗಿದ್ದ 'ಮೊಬೈಲ್ ಅಪ್ಲಿಕೇಷನ್' ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾದವು.

ಹ್ಯಾಕಥಾನ್‌ನಲ್ಲಿ ಪಾಲ್ಗೊಂಡಿದ್ದ ತಂಡಗಳ ಪೈಕಿ 15 ತಂಡಗಳು ಮುಂದಿನ ಸುತ್ತಿಗೆ ಅರ್ಹತೆ ಪಡೆದವು. ಕಾಲೇಜಿನ ಪ್ರಾಂಶುಪಾಲ ಡಾ.ಸಂಜಯ್ ಜೈನ್, ಪ್ರಾಧ್ಯಾಪಕಿ ಡಾ.ಶರ್ಮಿಳಾ ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ





ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ
(ಕೈವಾರ ತಾತಯ್ಯ)

ದಿನಾಂಕ : 27-03-2022 ಭಾನುವಾರ, ಸಂಜೆ 4.00 ಗಂಟೆಗೆ
ಸ್ಥಳ : ವಿಧಾನಸೌಧದ ಬ್ಯಾಂಕ್ವೆಟ್ ಹಾಲ್, ಬೆಂಗಳೂರು

ಉದ್ಘಾಟನೆ:
ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿಶೇಷ ಆಹ್ವಾನಿತರು:
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು
ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಗೌರವ ಉಪಸ್ಥಿತಿ:
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಭಾವಚಿತ್ರಕ್ಕೆ ಮಾಲಾರ್ಪಣೆ:
ಶ್ರೀ ವಿ ಸುನಿಲ್ ಕುಮಾರ್
ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ರವರು ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸಿರುವುದು.

ಅಧ್ಯಕ್ಷತೆ:
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಗೌರವಾನ್ವಿತ ಅತಿಥಿಗಳು:
ಶ್ರೀ ಬಿ.ಎಸ್ ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು
ಶ್ರೀ ಸಿದ್ಧರಾಮಯ್ಯ
ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನಸಭೆ ಮತ್ತು ಮಾಜಿ ಮುಖ್ಯಮಂತ್ರಿಗಳು
ಶ್ರೀ ಬಿ.ಕೆ. ಹರಿಪ್ರಸಾದ್
ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್ತು

ಮುಖ್ಯ ಅತಿಥಿಗಳು:
ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್
ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ ಹಾಗೂ ವಿಜ್ಞಾನ – ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಸಚಿವರು
ಶ್ರೀ ಆರ್. ಅಶೋಕ್
ಮಾನ್ಯ ಕಂದಾಯ ಸಚಿವರು
ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವರು
ಶ್ರೀ ಬಿ.ಎ. ಬಸವರಾಜು
ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್
ಮಾನ್ಯ ಸಹಕಾರ ಸಚಿವರು
ಶ್ರೀ ಕೆ. ಗೋಪಾಲಯ್ಯ
ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.)
ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಂ. ಮುನಿರತ್ನ
ಮಾನ್ಯ ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು
ಶ್ರೀ ಕೆ. ಸುಧಾಕರ್
ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್
ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭೆ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ
ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ
ಶ್ರೀ ಸತೀಶ್ ರೆಡ್ಡಿ ಎಂ.
ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ

ಅತಿಥಿಗಳು: ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು

ಸಾಂಸ್ಕೃತಿಕ ಕಾರ್ಯಕ್ರಮ: ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ: ಕೈವಾರ ತಾತಯ್ಯನವರ ತತ್ವಪದಗಳ ಗಾಯನ

ಡಾ. ಎನ್. ಮಂಜುಳಾ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸರ್ವರಿಗೂ ಆದರದ ಸುಸ್ವಾಗತ

ಪ್ರಕಾಶ್ ಜಿ.ಟಿ. ನಿಟ್ಟಾಲಿ, ಕ.ಆ.ಸೇ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

'ಇಸ್ಲಾಮಿಕ್ ರಾಷ್ಟ್ರಗಳೊಂದಿಗೆ ವ್ಯಾಪಾರ ನಿಲ್ಲಿಸ್ತೀರಾ?'

ಬೆಂಗಳೂರು: ಹಿಂದೂ ದೇವಾಲಯಗಳ ಬಳಿ ಮುಸ್ಲಿಮರು ವ್ಯಾಪಾರ ಮಾಡುವುದನ್ನು ವಿರೋಧಿಸುವ ಬಿಜೆಪಿ ನಾಯಕರಿಗೆ 'ಇಸ್ಲಾಮಿಕ್ ರಾಷ್ಟ್ರಗಳ ಜತೆ ವಹಿವಾಟು ನಿಲ್ಲಿಸುವ ಘೋಷಣೆ ಮಾಡುವ ಧೈರ್ಯವಿದೆಯೆ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತಕ್ಕೆ ಇಸ್ಲಾಮಿಕ್ ರಾಷ್ಟ್ರಗಳ ಜತೆ ವಹಿವಾಟು ಬೇಡ ಎಂದು ಹೇಳುವ ಧೈರ್ಯ ಇದೆಯೆ? ಹಾಗೆ ಹೇಳಿದರೆ ಕರ್ನಾಟಕದಲ್ಲಿನ ಅರ್ಧದಷ್ಟು ಹೂಡಿಕೆ ವಾಪಸ್ ಹೋಗುತ್ತದೆ' ಎಂದು ಹೇಳಿದರು.

'ತಳಮಟ್ಟದಲ್ಲಿ ಒಂದು ಸಮುದಾಯದ ವಿರುದ್ಧ ಅಸಹನೆ ತೋರುತ್ತಿರುವ ಬಿಜೆಪಿ, ಅದನ್ನು ಅಂತರರಾಷ್ಟ್ರೀಯಮಟ್ಟದಲ್ಲಿ ವ್ಯಕ್ತಪಡಿಸುವ ಧೈರ್ಯ ಮಾಡಲಿ ನೋಡೋಣ' ಎಂದರು.

ವಿಪ್ರೊ ಕಂಪನಿಯ ಧರ್ಮ ನೋಡ್ತೀರಾ?: 'ಲಕ್ಷಾಂತರ ಮಂದಿಗೆ ಉದ್ಯೋಗ ನೀಡಿರುವ ವಿಪ್ರೊ ಕಂಪನಿ ಯಾವ ಧರ್ಮದವರದ್ದು? ನಿಮ್ಮ ಮಕ್ಕಳು ಕೆಲಸಕ್ಕೆ ಅರ್ಜಿ ಸಲ್ಲಿಸುವಾಗ ಆ ಕಂಪನಿ ಯಾವ ಧರ್ಮದವರದ್ದು ಎಂಬುದನ್ನೂ ನೋಡುತ್ತೀರಾ' ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದರು.

'ವಿಪ್ರೊಗೆ ಪಾಕಿಸ್ತಾನಕ್ಕೆ ಹೋಗಿ ಉದ್ಯಮ ಸ್ಥಾಪಿಸಲು ಅವಕಾಶ ಇತ್ತು. ಆದರೆ, ಇಲ್ಲಿಯೇ ಉಳಿದು ದೇಶ ಕಟ್ಟಿದರು' ಎಂದರು.

ಮೈಸೂರು ಚಾಮುಂಡೇಶ್ವರಿ ದೇವಸ್ಥಾನದ ಸುತ್ತಮುತ್ತ ಅನುಮತಿ ಬೇಡ: ವಿಎಚ್‌ಪಿ ಮನವಿ

'ಮುಸ್ಲಿಮರಿಗೆ ಅಂಗಡಿ ಮರುಪರಿಶೀಲಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಸುತ್ತಲಿನ ಪ್ರದೇಶದಲ್ಲಿ ಮುಸ್ಲಿಮರಿಗೆ ಅಂಗಡಿ ಹಾಕಲು ನೀಡಿರುವ ಅನುಮತಿಯನ್ನು ಮರುಪರಿಶೀಲಿಸಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮೈಸೂರು ನಗರ-ಜಿಲ್ಲಾ ಘಟಕದ ಮುಖಂಡರು ಶನಿವಾರ ಜಿಲ್ಲಾಧಿಕಾರಿ ಕಚೇರಿ ಹಾಗೂ ಮುಜರಾಯಿ ಇಲಾಖೆಗೆ ಮನವಿ ಪತ್ರ ನೀಡಿದರು.

'ಹಿಂದೂಗಳ ಶ್ರದ್ಧಾ ಕೇಂದ್ರವಾಗಿರುವ ಚಾಮುಂಡಿಬೆಟ್ಟದಲ್ಲಿನ ದೇಗುಲದ ಹೃದಯ ಭಾಗದಲ್ಲಿ ಬಟ್ಟೆ ಅಂಗಡಿ ಸೇರಿ ಐದು ಮಳಿಗೆಗಳನ್ನು ಮುಸ್ಲಿಮರಿಗೆ ನೀಡಲಾಗಿದೆ. ನಮ್ಮ ಆಚಾರ–ವಿಚಾರ ಒಪ್ಪದಿದ್ದ ಮೇಲೆ, ನ್ಯಾಯಾಲಯಕ್ಕೆ ಗೌರವ ಕೊಡದಿದ್ದ ಮೇಲೆ ಚಾಮುಂಡೇಶ್ವರಿಗೆ ಅರ್ಪಿಸುವ ಸೀರೆ ಮಾರಾಟ ಮಾಡಿ ಹಿಂದೂ ಭಕ್ತರಿಂದ ಮುಸ್ಲಿಮರು ಹಣ ಗಳಿಸುವುದು ಏಕೆ' ಎಂದು ಮುಖಂಡರು ಪ್ರಶ್ನಿಸಿದರು.

'ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಟ್ಟ ರಾಜ್ಯದ ಎಲ್ಲಾ ದೇವಸ್ಥಾನ, ಜಾತ್ರಾ ಮಹೋತ್ಸವ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಂಗಡಿ ಮಳಿಗೆ ಹಾಕಲು ಟೆಂಡರ್ ಪ್ರಕ್ರಿಯೆಯಲ್ಲಿ ಹಿಂದೂಯೇತರರಿಗೆ ಅವಕಾಶ ನೀಡಬಾರದು. ಇಲಾಖೆಯ ನಿಯಮಗಳಿಗೆ ವಿರುದ್ಧವಾಗಿ ಟೆಂಡರ್ ನೀಡಿದ್ದರೆ ಅದನ್ನು ಮರುಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಈ ನಿಯಮ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು' ಎಂದು ಒತ್ತಾಯಿಸಿದರು.

'ನ್ಯಾಯಾಲಯ ಆದೇಶ ವಿರುದ್ಧ ಈಚೆಗೆ ಮುಸ್ಲಿಮರು ಬಂದ್‌ಗೆ ಕರೆ ನೀಡಿದ್ದರು. ಇದು ಹಿಂದೂ ಸಮುದಾಯದಲ್ಲಿ ಆತಂಕ ಉಂಟು ಮಾಡಿದೆ. ದೇಗುಲದ ಸುತ್ತಲಿನ ಹಿಂದೂಗಳ ಸುರಕ್ಷತೆಯ ಬಗ್ಗೆ ಆತಂಕ ತಂದೊಡ್ಡಿದೆ' ಎಂದರು.

ವಿಎಚ್‌ಪಿ ಮೈಸೂರು ನಗರ–ಜಿಲ್ಲಾ ಘಟಕದ ಕಾರ್ಯದರ್ಶಿ ವಿ.ಬಿ.ಪ್ರದೀಶ್ ಕುಮಾರ್ ಇದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಚಾಮುಂಡೇಶ್ವರಿ ದೇಗುಲದ ಕಾರ್ಯನಿರ್ವಹಣಾಧಿಕಾರಿ ಯತಿರಾಜ್, 'ದೇಗುಲದಿಂದ ಟೆಂಡರ್ ನೀಡಿಲ್ಲ. ಖಾಸಗಿ ಜಾಗದಲ್ಲಿ ಮುಸ್ಲಿಮರು ಮಾರಾಟ ಮಾಡುತ್ತಿದ್ದು, ಅದಕ್ಕೂ ನಮಗೂ ಸಂಬಂಧವಿಲ್ಲ. ವಿಎಚ್‌ಪಿ ಮುಖಂಡರು ನೀಡಿರುವ ಮನವಿ ಪತ್ರವನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು' ಎಂದರು.

'ಟಿಪ್ಪು ಹೆಸರಿನಲ್ಲಿ ಸಲಾಂ ಮಹಾಮಂಗಳಾರತಿ ನಿಲ್ಲಿಸಿ'

ಉಡುಪಿ: ಕೊಲ್ಲೂರು ಮೂಕಾಂಬಿಕ ದೇವಸ್ಥಾನದಲ್ಲಿ ಪ್ರತಿದಿನ ಟಿಪ್ಪು ಹೆಸರಿನಲ್ಲಿ ನಡೆಯುವ ಸಲಾಂ ಮಹಾಮಂಗಳಾರತಿ ನಿಲ್ಲಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ವಿಭಾಗ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ನೇತೃತ್ವದಲ್ಲಿ ಮನವಿ ಸಲ್ಲಿಸಿದೆ.

ಕೊಲ್ಲೂರು ಮೂಕಾಂಬಿಕ ದೇವಸ್ಥಾನ ಐತಿಹಾಸಿಕ ಹಿನ್ನೆಲೆ ಹೊಂದಿರುವ ಪವಿತ್ರ ಕ್ಷೇತ್ರವಾಗಿದ್ದು, 108 ಶಕ್ತಿ ಪೀಠಗಳಲ್ಲಿ ಒಂದಾಗಿದೆ. ಆದಿ ಶಂಕರಾಚಾರ್ಯರು ಮೂಕಾಂಬಿಕಾ ದೇವಿಯನ್ನು ಕೊಲ್ಲೂರಿನಲ್ಲಿ ನೆಲೆಗೊಳಿಸಿದ್ದಾರೆ. ಕ್ರೂರಿ, ಮತಾಂಧ, ಹಿಂದೂ ವಿರೋಧಿ, ದೇವಸ್ಥಾನಗಳನ್ನು ಧ್ವಂಸಗೊಳಿಸಿದ ಟಿಪ್ಪು ಹೆಸರಿನಲ್ಲಿ ಕೊಲ್ಲೂರು ದೇವಸ್ಥಾನದಲ್ಲಿ ಪ್ರತಿ ದಿನ ರಾತ್ರಿ 8 ಗಂಟೆಗೆ ಸಲಾಂ ಹೆಸರಿನಲ್ಲಿ ಮಹಾಮಂಗಳಾರತಿ ನಡೆಯುತ್ತಿರುವುದು ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡಿದೆ ಎಂದು ಅವರು ತಿಳಿಸಿದ್ದಾರೆ.

ಸಲಾಂ ಹೆಸರಿನಲ್ಲಿ ನಡೆಯುವ ಮಹಾಮಂಗಳಾರತಿ ಗುಲಾಮಗಿರಿಯ ಸಂಕೇತವಾಗಿದ್ದು, ತಕ್ಷಣ ಕ್ಷೇತ್ರದ ವ್ಯವಸ್ಥಾಪನಾ ಮಂಡಳಿ ಹಾಗೂ ಧಾರ್ಮಿಕ ದತ್ತಿ ಇಲಾಖೆ 'ಸಲಾಂ' ಹೆಸರು ತೆಗೆದುಹಾಕಿ ದೇವರ ಹೆಸರಿನಲ್ಲಿ ಮಹಾಮಂಗಳಾರತಿ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮನವಿ ಸಲ್ಲಿಕೆ: ಈ ಸಂಬಂಧ ಕೊಲ್ಲೂರು ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ, ಕಾರ್ಯ ನಿರ್ವಹಣಾಧಿಕಾರಿ, ಮುಜರಾಯಿ ಸಚಿವೆ, ಜಿಲ್ಲಾಧಿಕಾರಿ ಮತ್ತು ದತ್ತಿ ಇಲಾಖೆ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.

ನಿರ್ಬಂಧ ಹೊಸದೇನಲ್ಲ: ಗೋಪಾಲಯ್ಯ

ಹಾಸನ: 'ಹಿಂದೂಗಳಲ್ಲದವರಿಗೆ ದೇವಸ್ಥಾನ ಮತ್ತು ಜಾತ್ರೆಗಳಲ್ಲಿ ವ್ಯಾಪಾರ ನಿರ್ಬಂಧ ಕಾನೂನು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ರೂಪುಗೊಂಡಿದ್ದು, ಅದರಂತೆಯೇ ಎಲ್ಲಾ ಕಡೆ ನಡೆಯಲಿ ಎಂದು ಈಗ ಜನ ಮನವಿ ಕೊಡುತ್ತಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಶ್ರವಣಬೆಳಗೊಳದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೇಲೂರು ಚನ್ನಕೇಶವ ರಥೋತ್ಸವ ಸಂದರ್ಭದಲ್ಲಿ ಹಿಂದೂಗಳಲ್ಲದವರಿಗೆ ವ್ಯಾಪಾರಕ್ಕೆ ಅವಕಾಶ ನೀಡಬಾರದು ಎಂಬ ಬಜರಂಗದಳ ಕಾರ್ಯಕರ್ತರ ಮನವಿ ಬಗ್ಗೆ ದೇವಸ್ಥಾನ ಆಡಳಿತ ಮಂಡಳಿ, ಜಿಲ್ಲಾಧಿಕಾರಿ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ' ಎಂದರು.

'ಹಿಂದೂಯೇತರ ನೌಕರರನ್ನು ವರ್ಗಾವಣೆ ಮಾಡಿ'

ಸವದತ್ತಿ: 'ಮುಜರಾಯಿ ಇಲಾಖೆಯಲ್ಲಿನ ಹಿಂದೂಯೇತರ ನೌಕರರನ್ನು ಬೇರೆಡೆ ವರ್ಗಾವಣೆ ಮಾಡಬೇಕು. ಕರ್ನಾಟಕ ಧಾರ್ಮಿಕ ಹಾಗೂ ದತ್ತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ. ಇಲ್ಲದಿದ್ದಲ್ಲಿ, ದೇಶದಾದ್ಯಂತ ಹೋರಾಟ ಅನಿವಾರ್ಯ' ಎಂದು ಶ್ರೀರಾಮಸೇನಾ ಅಧ್ಯಕ್ಷ ಪ್ರಮೋದ ಮುತಾಲಿಕ್ ಎಚ್ಚರಿಸಿದರು.

ಯಲ್ಲಮ್ಮ ದೇವಸ್ಥಾನದ ಸನ್ನಿಧಿಯಲ್ಲಿ ಹಿಂದೂಯೇತರ ವ್ಯಾಪಾರಿಗಳಿಗೆ ಅವಕಾಶ ಕಲ್ಪಿಸಬಾರದೆಂದು ಆಗ್ರಹಿಸಿ ಶಾಸಕ ಆನಂದ ಮಾಮನಿ ಹಾಗೂ ದೇವಸ್ಥಾನದ ಅಧಿಕಾರಿಗೆ ಶನಿವಾರ ಮನವಿ ಸಲ್ಲಿಸಿ ಮಾತನಾಡಿದ ಅವರು, 'ಅಲ್ಲಾ ಒಬ್ಬನೇ ದೇವರು; ಉಳಿದವರೆಲ್ಲ ಕಾಫಿರರು ಎನ್ನುವ ಮುಸ್ಲಿಮರಿಗೆ ಹಿಂದೂ ಕ್ಷೇತ್ರದಲ್ಲಿ ಕೆಲಸ ಏನಿದೆ? ಹಿಂದೂ ದೇವಸ್ಥಾನ, ದೇಶದ ರಕ್ಷಣೆಗೆ ನಾವು ಸಿದ್ಧರಿದ್ದೇವೆ' ಎಂದರು.

ಸುದ್ದಿ 2 ನಿಮಿಷ

ಕೈಗಾರಿಕೆಗಳಿಗೆ ನೇರ ವಿದ್ಯುತ್ ಖರೀದಿಗೆ ಅವಕಾಶ: ನಿರಾಣಿ

ಹುಬ್ಬಳ್ಳಿ: 'ವಿದ್ಯುತ್ ಖರೀದಿಯಿಂದ ಕೈಗಾರಿಕೆಗಳಿಗೆ ಆಗುತ್ತಿರುವ ಹೊರೆ ತಗ್ಗಿಸಲು ಖಾಸಗಿ ವಿದ್ಯುತ್ ಕಂಪನಿಗಳಿಂದ ಕೈಗಾರಿಕೆಗಳೇ ನೇರವಾಗಿ ವಿದ್ಯುತ್ ಖರೀದಿಗೆ ಅವಕಾಶ ಕಲ್ಪಿಸಲಾಗುವುದು' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಶನಿವಾರ ಇಲ್ಲಿ ನಡೆದ 'ಟೈಕಾನ್ ಹುಬ್ಬಳ್ಳಿ-22' ಸಮಾವೇಶದಲ್ಲಿ ಮಾತನಾಡಿದ ಅವರು, 'ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ಪ್ರತಿ ಯೂನಿಟ್‌ಗೆ ₹2ರಿಂದ ₹3ಕ್ಕೆ ಖರೀದಿಸಿ ಅದನ್ನು ಕೈಗಾರಿಕೆಗಳಿಗೆ ₹10ರಿಂದ ₹12ರವರೆಗೆ ಮಾರಾಟ ಮಾಡಲಾಗುತ್ತಿದೆ. ಸಣ್ಣ ಕೈಗಾರಿಕೆಗಳಿಗೆ ಇದು ಹೊರೆಯಾಗಿದೆ. ಇದನ್ನು ತಪ್ಪಿಸಲು ಕೆಪಿಟಿಸಿಎಲ್ ಬದಲು ನೇರವಾಗಿ ವಿದ್ಯುತ್ ಖರೀದಿಗೆ ಕೈಗಾರಿಕೆಗಳಿಗೆ ನೆರವಾಗುತ್ತೇವೆ' ಎಂದರು.

'ಈ ಉದ್ದೇಶಕ್ಕಾಗಿ ಕೈಗಾರಿಕಾ ಸಂಘಗಳನ್ನು ರಚಿಸಿಕೊಳ್ಳಬೇಕು. ಆ ಸಂಘದ ಮೂಲಕವೇ ವಿದ್ಯುತ್ ನೇರವಾಗಿ ಖರೀದಿಸಿದರೆ ಪ್ರತಿ ಯೂನಿಟ್‌ಗೆ ₹5ರ ವರೆಗೆ ಉಳಿತಾಯ ಆಗಲಿದೆ. ಇದಕ್ಕಾಗಿ ತಗುಲುವ ₹1 ಸೇವಾ ಶುಲ್ಕವನ್ನು ಸರ್ಕಾರವೇ ಭರಿಸಲಿದೆ. ಈಗಾಗಲೇ ಹಲವಾರು ಕೈಗಾರಿಕಾ ಸಂಘಗಳು ಹಾಗೂ ವಿದ್ಯುತ್ ಉತ್ಪಾದಕರು ಮುಂದೆ ಬಂದಿದ್ದು, ಇಬ್ಬರ ನಡುವೆ ಒಪ್ಪಂದ ಏರ್ಪಡಲಿದೆ' ಎಂದು ಅವರು ತಿಳಿಸಿದರು.

'ಪರಿಶಿಷ್ಟರಿಗೆ ಕೈಗಾರಿಕಾ ಭೂಮಿ ಖರೀದಿಗಾಗಿ ನೀಡುತ್ತಿರುವ ಶೇ75ರಷ್ಟು ರಿಯಾಯಿತಿಯನ್ನು ಇತರ ವರ್ಗದವರಿಗೂ ವಿಸ್ತರಿಸಲಾಗಿದೆ. ಉಳಿದ ಶೇ25ರಷ್ಟು ಹಣವನ್ನು ಹಲವು ಕಂತುಗಳಲ್ಲಿ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗದವರು ಕೈಗಾರಿಕೆಗಳನ್ನು ಆರಂಭಿಸಬಹುದಾಗಿದೆ' ಎಂದು ತಿಳಿಸಿದರು.

ಬಜೆಟ್ ಘೋಷಣೆಗಳ ತ್ವರಿತ ಅನುಷ್ಠಾನಕ್ಕೆ ಸಮಿತಿ: ಬೊಮ್ಮಾಯಿ

ಹುಬ್ಬಳ್ಳಿ: ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಸಮಿತಿ ರಚಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶನಿವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು 'ಈ ಸಲದ ಬಜೆಟ್ ಘೋಷಣೆಗಳನ್ನು ಶೀಘ್ರ ಅನುಷ್ಠಾನ ಮಾಡಬೇಕು ಎಂದು ಈಗಾಗಲೇ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಿದ್ದೇನೆ. ಎಲ್ಲಾ ಇಲಾಖೆಗಳು ಹಣಕಾಸು ಇಲಾಖೆಯ ಜೊತೆ ಸಂಪರ್ಕದಲ್ಲಿರಬೇಕು. ಇಲಾಖೆಗಳ ನಡುವೆ ಸಂವಹನಕ್ಕೆ ಅನುಕೂಲವಾಗುವಂತೆ ಸಮಿತಿ ಕೆಲಸ ಮಾಡಲಿದೆ' ಎಂದರು.

'ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುತ್ತಿದೆ. ನವೆಂಬರ್‌ನಲ್ಲಿ ವಿಶ್ವ ಹೂಡಿಕೆದಾರರ ಸಮಾವೇಶ ನಡೆಸಲಾಗುವುದು. ಕಳೆದ ಮೂರು ತ್ರೈಮಾಸಿಕದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ವಿದೇಶಿ ಹೂಡಿಕೆದಾರರು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಸಾಕ್ಷಿ ಇದು' ಎಂದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಲಾದ ಪ್ರಶ್ನೆಗೆ 'ಅಮಿತ್ ಶಾ ಅವರು ಸರ್ಕಾರದ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಬರುತ್ತಿರುವುದರಿಂದ ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ನಡೆಯುವುದಿಲ್ಲ. ವರಿಷ್ಠರು ಕರೆದಾಗ ದೆಹಲಿಗೆ ಹೋಗಿ ಚರ್ಚೆ ಮಾಡುವೆ. ಏಪ್ರಿಲ್ 5 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆಗಾಗಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಸಲಹೆ ಸ್ವೀಕರಿಸುವುದು ಸರ್ಕಾರಕ್ಕೆ ಬಿಟ್ಟಿದ್ದು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಮವಸ್ತ್ರದ ಜೊತೆಗೆ ಅದೇ ಬಣ್ಣದ ದುಪ್ಪಟ್ಟಾ ಹಾಕಿಕೊಂಡು ಪರೀಕ್ಷೆ ಬರೆಯಲು ಹೆಣ್ಣುಮಕ್ಕಳಿಗೆ ಅವಕಾಶ ಮಾಡಿಕೊಡಿ ಎಂಬುದಾಗಿ ಸರ್ಕಾರಕ್ಕೆ ಸಲಹೆ ಕೊಟ್ಟಿದ್ದೇನೆ. ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ನನ್ನ ಉದ್ದೇಶ. ಸಲಹೆ ಸ್ವೀಕರಿಸೋದು ಬಿಡೋದು ಸರ್ಕಾರಕ್ಕೆ ಬಿಟ್ಟ ವಿಚಾರ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಮಕ್ಕಳಿಗೆ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ. ಒಂದು ವೇಳೆ ಪರೀಕ್ಷೆಗೆ ಹಾಜರಾಗದೆ ವಿದ್ಯಾರ್ಥಿಗಳ ಭವಿಷ್ಯ ಹಾಳಾದರೆ ಅದಕ್ಕೂ ಸರ್ಕಾರವೇ ಜವಾಬ್ದಾರಿಯಾಗುತ್ತದೆ' ಎಂದರು.

'ನಾನು ಹಿಜಾಬ್ ವಿಚಾರವಾಗಿ ಪ್ರಶ್ನೆಯನ್ನೇ ಮಾಡಿಲ್ಲ. ಹೀಗಿದ್ದಾಗ ಹಿಜಾಬ್‌ಗೂ ಸ್ವಾಮೀಜಿಗಳ ಬಟ್ಟೆಗೂ ಹೋಲಿಕೆ ಮಾಡಲಾಗಿದೆ ಎಂಬ ವಿಚಾರ ಎಲ್ಲಿಂದ ಬರುತ್ತದೆ? ಹಿಜಾಬ್ ಬೇರೆ, ದುಪ್ಪಟ್ಟಾ ಬೇರೆ' ಎಂದು ಸ್ಪಷ್ಟಪಡಿಸಿದರು.

ಗರಂ ಆದ ಸಿದ್ದರಾಮಯ್ಯ: ಮಾಧ್ಯಮದವರ ವಿರುದ್ಧ ಗರಂ ಆದ ಸಿದ್ದರಾಮಯ್ಯ, 'ನೀವೇ ಪ್ರಶ್ನೆ ಕೇಳಿ ಈಗ ವಿವಾದ ಹುಟ್ಟು ಹಾಕಿದ್ದೀರಿ. ನೀವು ಯಾವ ಪಕ್ಷದವರು? ಏನ್ ನೀವು ಆರ್‌ಎಸ್‌ಎಸ್‌ನವರ ರೀತಿ ವರ್ತಿಸುತ್ತೀರಿ. ನಾನು ಈಗ ಹೇಳಿರುವುದನ್ನು ತೋರಿಸಿ; ಇಲ್ಲವೇ ಸುಮ್ಮನೇ ಇರ್ರಿ. ಬಿಜೆಪಿಯವರಿಗೆ ನಾನು ಉತ್ತರ ನೀಡಲ್ಲ' ಎಂದರು.

'ಸ್ವಾಮೀಜಿಗಳ ಜೊತೆ ನಾನು ಯಾವತ್ತೂ ಅಗೌರವದಿಂದ ನಡೆದುಕೊಂಡಿಲ್ಲ. ಮೊದಲಿನಿಂದಲೂ ಅವರೊಂದಿಗೆ ಸಂಬಂಧ ಚೆನ್ನಾಗಿದೆ. ಅಪಾರ ಗೌರವವಿಟ್ಟುಕೊಂಡಿದ್ದು, ಅನೇಕ ಮಠಗಳಿಗೆ ಹೋಗಿ ಸ್ವಾಮೀಜಿಗಳನ್ನು ಮಾತನಾಡಿಸುತ್ತೇನೆ' ಎಂದು ಅವರು ಪುನರುಚ್ಚರಿಸಿದರು.

'ಸ್ವಾಮೀಜಿಗಳು ತಲೆ ಮೇಲೆ ಬಟ್ಟೆ ಹಾಕುವ ವಿಷಯ ಅಪ್ರಸ್ತುತ'

ರಾಯಚೂರು: 'ಸ್ವಾಮೀಜಿಗಳು ತಲೆ ಮೇಲೆ ಬಟ್ಟೆ ಹಾಕುವುದು ಅಪ್ರಸ್ತುತ ವಿಷಯ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಬೇಕು ಎನ್ನುವುದು ಕೋರ್ಟಿನ ತೀರ್ಪು. ಅದನ್ನು ಎಲ್ಲರೂ ಗೌರವಿಸಬೇಕು' ಎಂದು ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಹೇಳಿದರು. ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅಪ್ರಸ್ತುತ ವಿಷಯವನ್ನು ಮಠಾಧೀಶರ ಮೇಲೆ ಎಳೆಯುವುದು ಖಂಡನೀಯ' ಎಂದರು.

ಶ್ರೀಸುಬುಧೇಂದ್ರ ತೀರ್ಥರು

'ರಾಜಕೀಯ ನಿವೃತ್ತಿ ಪಡೆಯಲಿ'

ಶಿವಮೊಗ್ಗ: 'ದೇಶದ ಸಂಸ್ಕೃತಿ ಉಳಿವಿಗೆ ಶ್ರಮಿಸುತ್ತಿರುವ ಸಾಧುಸಂತರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಸಿದ್ದರಾಮಯ್ಯ ರಾಜಕೀಯ ನಿವೃತ್ತಿ ಪಡೆಯಬೇಕು. ಇಲ್ಲದಿದ್ದರೆ ಕಾಂಗ್ರೆಸ್ ವರಿಷ್ಠರೇ ಪಕ್ಷದಿಂದ ವಜಾಗೊಳಿಸಬೇಕು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

'ಹಿಜಾಬ್ ಜತೆ ಸ್ವಾಮೀಜಿಗಳ ಉಡುಪು ಹೋಲಿಕೆ ಮಾಡುತ್ತಿರುವ ಸಿದ್ದರಾಮಯ್ಯ ಮನಸ್ಥಿತಿ ಸಂಪೂರ್ಣ ಹಿಂದೂ ವಿರೋಧಿಯಾಗಿದೆ. ಬಾಯಿ ಮಾತಿನಲ್ಲಿ ಸಾಮರಸ್ಯದ ಮಾತನಾಡುವ ಸಿದ್ದರಾಮಯ್ಯ ನಡವಳಿಕೆ ಪೂರ್ಣ ಹಿಂದೂ ವಿರೋಧಿಯಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಿದ್ದರಾಮಯ್ಯ ಹೇಳಿಕೆ ಖಂಡಿಸಬೇಕು. ಅವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗದಿದ್ದರೆ, ಹೈಕಮಾಂಡ್‌ಗೆ ಶಿಫಾರಸು ಮಾಡಬೇಕು' ಎಂದರು.

'ಕಾವಿಗೆ ಕೈ ಹಾಕಿದ ಸಿದ್ದರಾಮಯ್ಯ; ಕಾಂಗ್ರೆಸ್ ಸರ್ವನಾಶ'

ಮಂಗಳೂರು: 'ಕಾವಿ ಬೆಂಕಿ ಇದ್ದಂತೆ. ಆ ಬೆಂಕಿಗೆ ಸಿದ್ದರಾಮಯ್ಯ ಕೈ ಹಾಕಿದ್ದಾರೆ. ಇದರಲ್ಲಿ ಅವರ ರಾಜಕೀಯ ಭವಿಷ್ಯ ಮತ್ತು ಕಾಂಗ್ರೆಸ್ ಸರ್ವನಾಶವಾಗಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ಸಂಸದ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವೀರಶೈವ ಮತ್ತು ಲಿಂಗಾಯತರನ್ನು ಪ್ರತ್ಯೇಕಿಸುವ ಕೆಲಸ ಮಾಡಿದ ಸಿದ್ದರಾಮಯ್ಯ ಅವರಿಗೆ ಮುಂದೇನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ಮಾಂಸಾಹಾರ ಮಾಡಿ ಧರ್ಮಸ್ಥಳಕ್ಕೆ ಹೋದರೆ ಏನು ಎಂದು ಸವಾಲು ಹಾಕಿ ಮುಖ್ಯಮಂತ್ರಿ ಸ್ಥಾನವನ್ನೇ ತೊರೆಯಬೇಕಾಗಿ ಬಂತು' ಎಂದರು.

ಬಿಜೆಪಿಗೆ ಲಾಭ: ಸಚಿವ ಪೂಜಾರಿ

ಕಾರವಾರ: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಗಳು ಕಾಲಕಾಲಕ್ಕೆ 'ಸ್ಫೋಟ'ಗೊಂಡಾಗ ಬಿಜೆಪಿಗೆ ಅನುಕೂಲವಾಗುತ್ತದೆ. ನ್ಯಾಯಾಲಯದ ತೀರ್ಪನ್ನು ಗೌರವಿಸುವ ಸ್ಥಿತಿಯಲ್ಲಿ ಅವರ ಮಾನಸಿಕತೆಯಿಲ್ಲ. ಯಾಕಿಲ್ಲ ಎಂದು ಅವರಿಗೇ ಕೇಳಬೇಕು' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದರು.

ಧಾರವಾಡದಲ್ಲಿ ಶನಿವಾರ ನಡೆದ ರಾಜ್ಯ ಕಾನೂನು ವಿ.ವಿ ಘಟಿಕೋತ್ಸವದಲ್ಲಿ, ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿದ್ದ ಮೋಹನ ಎಂ. ಶಾಂತನಗೌಡರ ಅವರಿಗೆ ಮರಣೋತ್ತರವಾಗಿ ನೀಡಿದ ಗೌರವ ಡಾಕ್ಟರೇಟ್ ಸ್ವೀಕರಿಸಿದ ಸಂದರ್ಭದಲ್ಲಿ ಅವರ ಪತ್ನಿ ಸುನೀತಾ ಎಂ. ಶಾಂತನಗೌಡರ ಭಾವುಕರಾದರು. ಸಚಿವ ಜೆ.ಸಿ. ಮಾಧುಸ್ವಾಮಿ,ರಾಜ್ಯಪಾಲ ಥಾವರಚಂದ್ ಗೆಹಲೋತ್ ಇದ್ದಾರೆ

ಶಿಕ್ಷಣವೇ ಎಲ್ಲರ ಆದ್ಯತೆಯಾಗಲಿ: ಡಿಕೆಶಿ

ಬೆಂಗಳೂರು: 'ಹಿಜಾಬ್ ವಿಚಾರದಲ್ಲಿ ಮಕ್ಕಳು ಹಟ ಹಿಡಿದು ಭವಿಷ್ಯ ಹಾಳು ಮಾಡಿಕೊಳ್ಳಲು ಅವಕಾಶ ನೀಡಬಾರದು. ಸದ್ಯದ ಸ್ಥಿತಿಯಲ್ಲಿ ಶಿಕ್ಷಣವೇ ಎಲ್ಲರ ಆದ್ಯತೆಯಾಗಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಹಿಜಾಬ್ ಧರಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಸರ್ಕಾರದ ಆದೇಶದ ಕುರಿತು ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರದಲ್ಲಿ ಪೋಷಕರು, ಧರ್ಮ ಗುರುಗಳು ಮತ್ತು ಶಿಕ್ಷಕರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವ ಕೆಲಸ ಮಾಡಬೇಕು. ಸರ್ಕಾರವೂ ಮಕ್ಕಳ ಶಿಕ್ಷಣದ ಬಗ್ಗೆ ಗಮನಹರಿಸಬೇಕು' ಎಂದರು.

'ಮಕ್ಕಳಿಗೆ ಹಟವಿರಬಹುದು, ಅವರು ತಪ್ಪು ಮಾಡಬಹುದು. ಅವರ ಭವಿಷ್ಯ ಹಾಳಾಗುವುದಕ್ಕೆ ಯಾರೂ ಉತ್ತೇಜನ ನೀಡಬಾರದು. ಈ ವಿಚಾರದಲ್ಲಿ ಎಲ್ಲರೂ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು' ಎಂದು ಹೇಳಿದರು.

ಸಮವಸ್ತ್ರ ಬಣ್ಣದ ದುಪ್ಪಟ್ಟಾ ಹಾಕಿಕೊಂಡು ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂಬ ಸಿದ್ದರಾಮಯ್ಯ ಸಲಹೆ ಕುರಿತು ಕೇಳಿದಾಗ, 'ಸಂವಿಧಾನದಲ್ಲಿ ಇರುವ ಅವಕಾಶಗಳ ಪರವಾಗಿ ಕಾಂಗ್ರೆಸ್ ಇರುತ್ತದೆ' ಎಂದರು.

'ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಪರೀಕ್ಷಕರಿಂದ ನಿಯಮ ಉಲ್ಲಂಘನೆ'

ಬೆಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ (ಆರ್‌ಜಿಯು ಎಚ್‌ಎಸ್) ನೇಮಕಗೊಂಡ ಪ್ರಾಯೋಗಿಕ ಪರೀಕ್ಷೆಗಳ ಪರೀಕ್ಷಕರು ಕ್ಲಿನಿಕಲ್ ಪರೀಕ್ಷೆಯಲ್ಲಿ ಪದೇಪದೇ ನಿಯಮ ಉಲ್ಲಂಘಿಸುತ್ತಿರುವ ಕಾರಣ ಅವರನ್ನು ಕಪ್ಪುಪಟ್ಟಿಗೆ ಸೇರಿಸಲು ಇದು ಸಕಾಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ನಾಲ್ಕನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಾದ ದಾಸರಿ ಚಕ್ರಧರ್ ಮತ್ತು ಶಶಿಕುಮಾರ್ ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ. ಕೃಷ್ಣಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ತಪ್ಪು ಎಸಗಿರುವ ಮತ್ತು ನಿಯಮಗಳನ್ನು ಉಲ್ಲಂಘಿಸುವ ಪರೀಕ್ಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿದೆ.

'ವಿಶ್ವವಿದ್ಯಾಲಯವು ನೇಮಿಸಿದ ಪರೀಕ್ಷಕರು ಕ್ಲಿನಿಕಲ್ ಪರೀಕ್ಷೆ ನಡೆಸುವಲ್ಲಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಾರೆ' ಎಂಬ ಅರ್ಜಿದಾರರು ಆಕ್ಷೇಪಣೆಯನ್ನು ಪರಿಗಣಿಸಿರುವ ನ್ಯಾಯಪೀಠವು, 'ಅರ್ಜಿದಾರರಿಗೆ ಮೂರು ವಾರಗಳಲ್ಲಿ ಕ್ರಮವಾಗಿ ಶಸ್ತ್ರಚಿಕಿತ್ಸೆ ಮತ್ತು ಪೀಡಿಯಾಟ್ರಿಕ್ಸ್‌ನ ಅನುತ್ತೀರ್ಣ ವಿಷಯಗಳಿಗೆ ಹೊಸದಾಗಿ ಪ್ರಾಯೋಗಿಕ ಪರೀಕ್ಷೆ ನಡೆಸಿ' ಎಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದೆ.

ಬಸ್ ಅಪಘಾತ: ಸಾವಿನ ಸಂಖ್ಯೆ 7ಕ್ಕೆ ಏರಿಕೆ

ಪಾವಗಡ: ತಾಲ್ಲೂಕಿನ ಪಳವಳ್ಳಿ ಕಟ್ಟೆ ಬಳಿ ಕಳೆದ ವಾರ ಸಂಭವಿಸಿದ ಖಾಸಗಿ ಬಸ್ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ದ್ವಿತೀಯ ಪಿಯು ವಿದ್ಯಾರ್ಥಿ ಶನಿವಾರ ಮೃತಪಟ್ಟಿದ್ದಾನೆ. ಇದರಿಂದ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 7ಕ್ಕೆ ಏರಿದೆ.

ತಲೆ ಹಾಗೂ ಬೆನ್ನು ಮೂಳೆಗೆ ತೀವ್ರ ಪೆಟ್ಟಾಗಿದ್ದ ಪಾವಗಡ ತಾಲ್ಲೂಕಿನ ಬುಡ್ಡಾರೆಡ್ಡಿಹಳ್ಳಿ ಶ್ರೀನಿವಾಸ್ ಅವರ ಪುತ್ರ ಮಹೇಂದ್ರ (18) ಮೃತ ವಿದ್ಯಾರ್ಥಿ. ಅಪಘಾತ ನಡೆದ ದಿನವೇ ಆತನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗಲಿಲ್ಲ.

ಮಹೇಂದ್ರ ಚಿಕಿತ್ಸೆಗೆ ಸುಮಾರು ₹10 ಲಕ್ಷದಿಂದ ₹15 ಲಕ್ಷ ವೆಚ್ಚ ಆಗುತ್ತದೆ ಎಂದು ಖಾಸಗಿ ಆಸ್ಪತ್ರೆ ತಿಳಿಸಿತ್ತು. ತಾಲ್ಲೂಕಿನ ಸಂಘ–ಸಂಸ್ಥೆಗಳು, ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿ ಚಿಕಿತ್ಸೆಗೆ ಹಣ ಸಂಗ್ರಹಿಸಿ ಕಳಿಸಿದ್ದರು.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ಪ್ರಾದೇಶಿಕ ಕಚೇರಿ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಸ್ಟ್ರೀಟ್ ಕೋಟಿ ಹೈದ್ರಾಬಾದ್, ಮೊ: 9440609745/9392926236

ಸಾರ್ವಜನಿಕ ಸೂಚನೆ

ಬ್ಯಾಂಕ್‌ನ ಗೌರವಾನ್ವಿತ ಗ್ರಾಹಕರ ಗಮನಕ್ಕಾಗಿ ಕೆವೈಸಿ ಮತ್ತು ಗ್ರಾಹಕರ ಪ್ರೊಫೈಲ್ ಮಾಹಿತಿಯ ಅಪ್‌ಡೇಷನ್

RBIಯ KYC & AML ಮಾರ್ಗಸೂಚಿಗಳ ಪ್ರಕಾರ, ಗ್ರಾಹಕರು ತಮ್ಮ ಪ್ರೊಫೈಲ್ ವಿವರಗಳನ್ನು ನಿಯತಕಾಲಿಕವಾಗಿ ಅಪ್‌ಡೇಟ್ ಮಾಡಬೇಕಾಗುತ್ತದೆ ಎಂದು ಈ ಸಾರ್ವಜನಿಕ ಸೂಚನೆಯ ಮೂಲಕ ಗ್ರಾಹಕರಿಗೆ ತಿಳಿಸಲಾಗಿದೆ. ಆದ್ದರಿಂದ ಗ್ರಾಹಕರು ತಮ್ಮ ಅಪ್‌ಡೇಟ್ ಪ್ರೊಫೈಲ್ ಮಾಹಿತಿ/ಮೊಬೈಲ್ ಸಂಖ್ಯೆ (ಲಭ್ಯವಿದ್ದಲ್ಲಿ), ಪ್ಯಾನ್ ಕಾರ್ಡ್ ಅಥವಾ ಫಾರ್ಮ್ 60/61, ಆದಾಯ ವಿವರಗಳು, ಉದ್ಯೋಗ, ವ್ಯವಹಾರ ಇತ್ಯಾದಿಗಳನ್ನು ಐಡಿ/ವಿಳಾಸಗಳ ಪುರಾವೆ ದಾಖಲೆಗಳೊಂದಿಗೆ ತಕ್ಷಣವೇ ತಮ್ಮ ಹೋಮ್ ಬ್ರಾಂಚ್‌ಗೆ ಸಲ್ಲಿಸುವಂತೆ ಕೋರಲಾಗಿದೆ. ಬಾಕಿ ಉಳಿದಿರುವ ಖಾತೆಗಳಲ್ಲಿ ಡೆಬಿಟ್ ವಹಿವಾಟುಗಳನ್ನು 01.04.2022 ರಿಂದ ಫ್ರೀಜ್ ಮಾಡಲಾಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ. ಅಡೆತಡೆಯಿಲ್ಲದ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಗ್ರಾಹಕರು ಮೇಲಿನಂತೆ ತಮ್ಮ ಪ್ರೊಫೈಲ್ ಮತ್ತು ಕೆವೈಸಿ ವಿವರಗಳನ್ನು ಅಪ್‌ಡೇಟ್ ಮಾಡಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ, ಗ್ರಾಹಕರು ತಮ್ಮ ಹೋಮ್ ಶಾಖೆಯನ್ನು ಸಂಪರ್ಕಿಸಬಹುದು/ ವೆಬ್‌ಸೈಟ್ www.centralbankofindia.co.in ಅಥವಾ ಗ್ರಾಹಕ ಸೇವಾ ಸಂಖ್ಯೆ 1800 22 1911 ಗೆ ಭೇಟಿ ನೀಡಿ.

ಅಧಿಕೃತ ಅಧಿಕಾರಿ, ಯೋಜನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ಇಲಾಖೆ, ಕೇಂದ್ರ ಕಚೇರಿ, ಮುಂಬೈ

ರೈಲು ಗಾಲಿ ಕಾರ್ಖಾನೆ

ಉಪ ಮುಖ್ಯ ಸಾಮಗ್ರಿ ಪ್ರಬಂಧಕರ ಕಛೇರಿ / ಜಿಎಸ್‌ಡಿ

ಆಜಾದೀ का अमृत महोत्सव

ಫೋ : 080–28072710/61/63, ಇ–ಮೇಲ್ : dycmmd@rwf.railnet.gov.in
ವೆಬ್‌ಸೈಟ್: www.rwf.indianrailways.gov.in

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ವಿವಿಧ ವರ್ಗದ ಅಪಾಯಕಾರಿ ತ್ಯಾಜ್ಯ / ಇ–ತ್ಯಾಜ್ಯ / ಇತರೆ ತ್ಯಾಜ್ಯ ಐಟಂಗಳಿಗಾಗಿ ನೋಂದಾಯಿತರಾದ ಸಾಮರ್ಥ್ಯವುಳ್ಳ / ಪ್ರಮಾಣೀಕರಿಸಲಾದ ಮರುಬಳಕೆಗಾರರ ಗಮನಕ್ಕೆ ತರುವುದೇನೆಂದರೆ ರೈಲು ಗಾಲಿ ಕಾರ್ಖಾನೆ, ಯಲಹಂಕ ಬೆಂಗಳೂರು ಇಲ್ಲಿ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯ / ಇ–ತ್ಯಾಜ್ಯ / ಇತರೆ ತ್ಯಾಜ್ಯ ಮತ್ತು ಇತರ ಅನುಪಯುಕ್ತ ಐಟಂಗಳ ಬಿಡ್ಡಿಂಗ್ ಮಾಡಲು ಮತ್ತು ಕೊಳ್ಳಲು ಭಾರತೀಯ ರೈಲ್ವೆಯ ಐಆರ್‌ಇಪಿಎಸ್ ಇ–ಹರಾಜು ಮಾರಾಟ ಮಾಡ್ಯೂಲ್ (https://ireps.gov.in) ನಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳಲು ಈ ಮೂಲಕ ವಿನಂತಿಸಲಾಗಿದೆ. ಅಗತ್ಯವಿದ್ದಲ್ಲಿ, ನೋಂದಣಿಯ ಪ್ರಕ್ರಿಯೆಯಲ್ಲಿ ಎಲ್ಲಾ ಬಗೆಯ ತಾಂತ್ರಿಕ ಸಹಾಯ / ಮಾರ್ಗದರ್ಶನವನ್ನು ರೈಲು ಗಾಲಿ ಕಾರ್ಖಾನೆಯ ಸಾಮಾನ್ಯ ಉಗ್ರಾಣ ಡಿಪೋ ಒದಗಿಸುತ್ತದೆ.

ಉಪ ಮುಖ್ಯ ಸಾಮಗ್ರಿ ಪ್ರಬಂಧಕರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂರವಾಣಿ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2021–22/725 ದಿ:21–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 3 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.64.66 ಲಕ್ಷಗಳಿಂದ 354.52 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 24–03–2022 ರಿಂದ ದಿನಾಂಕ: 07–04–2022 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ 31–03–2022 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 11–04–2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 13–04–2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http:// eproc. karnataka.gov.in/e-portal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ವಾ.ಸಾ.ಇ./ಕೊಪ್ಪಳ/625/2021–22/ದೇಶಪಾಂಡೆ ಪಬ್ಲಿಸಿಟಿ

भारतीय प्रतिभूति और विनिमय बोर्ड
SECURITIES AND EXCHANGE BOARD OF INDIA

ಪಿಎಸಿಎಲ್ ಹೂಡಿಕೆದಾರರು – ರಿಫಂಡ್‌ಗಾಗಿ ಅಸಲಿ ಪ್ರಮಾಣಪತ್ರಗಳನ್ನು ಸಲ್ಲಿಸುವುದು

ಪಿಎಸಿಎಲ್ ಪ್ರಕರಣದಲ್ಲಿ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯಿಂದ ಎಸ್‌ಎಂಎಸ್‌ಗಳನ್ನು ಸ್ವೀಕರಿಸಿರುವ ಪಿಎಸಿಎಲ್ ಹೂಡಿಕೆದಾರರು ಪಿಎಸಿಎಲ್ ನೀಡಿರುವ ಅಸಲಿ ಪ್ರಮಾಣಪತ್ರಗಳನ್ನು (Original Certificates) ಸಲ್ಲಿಸುವ ಅಗತ್ಯವಿದೆ. ಅವುಗಳನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ:

P.O. Box 66, Belapur Post Office,
Navi Mumbai - 400614

ಲಕೋಟೆಯ ಮೇಲೆ ಪ್ರಮಾಣಪತ್ರದ ಸಂಖ್ಯೆಯನ್ನು ಬರೆಯಬೇಕು.

ಅಧಿಕೃತ ಪ್ರಮಾಣಪತ್ರಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಜೂನ್ 30, 2022.

ಈ ಕುರಿತ ಎಲ್ಲಾ ಮಾಹಿತಿಗಳು www.sebipaclrefund.co.in ಮತ್ತು www.sebi.gov.in ವೆಬ್‌ಸೈಟ್‌ನಲ್ಲಿ ಲಭ್ಯವಿದೆ

ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿ,
ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿ

ಸಹಾಯ ಸಂಖ್ಯೆ: 022-61216966

ಜಂಟಿ ನಿರ್ದೇಶಕರು ಮತ್ತು ತನಿಖಾಧಿಕಾರಿಗಳು, ಆಯುಕ್ತರ ಕಾರ್ಯಾಲಯ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಸಂಖ್ಯೆ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052. ಕ್ಯಾಂಪ್: ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆ.
ದೂರವಾಣಿ ಸಂಖ್ಯೆ: 080–22262187 ಇ–ಮೇಲ್: ddit.fcs-ka@nic.in

ಸಂಖ್ಯೆ: ಸಿಎಫ್‌ಎಸ್/ಐಟಿ–5/04/2021–22 ದಿನಾಂಕ: 26–03–2022

ಸಾರ್ವಜನಿಕ ಪ್ರಕಟಣೆ

ವಿಷಯ: ಬಂಗಾರಪೇಟೆ ಪಟ್ಟಣದ ಮೆ॥ ಪಿ.ಆರ್.ಎಸ್. ಆಗ್ರೋಟೆಕ್ ರೈಸ್ ಮಿಲ್‌ನಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ಮತ್ತು ಅಕ್ಕಿ ನುಚ್ಚು ಬಹಿರಂಗ ಹರಾಜಿನ ಬಗ್ಗೆ.

ಉಲ್ಲೇಖ: 1. ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ ಜಿಲ್ಲೆ ಆದೇಶ ಸಂಖ್ಯೆ: ಇಸಿಎ:ಸಿಆರ್:04/2021–22, ದಿನಾಂಕ: 04–03–2022.
2. ಈ ಕಛೇರಿ ಸಮ ಸಂಖ್ಯೆ ಪ್ರಕಟಣೆ ದಿನಾಂಕ: 24–03–2022.
3. ಘನ ಉಚ್ಚ ನ್ಯಾಯಾಲಯದ ಆದೇಶ ರಿಟ್ ಅರ್ಜಿ ಸಂಖ್ಯೆ: 5872/2022 (ಐಎ ನಂ.1/2022) ದಿನಾಂಕ: 25–03–2022

1) ಈ ಕಛೇರಿಯ ದಿನಾಂಕ: 24–03–2022 ರ ಪ್ರಕಟಣೆಯನ್ನು ಹಿಂಪಡೆದು ರದ್ದುಪಡಿಸಿದೆ. ಕೋಲಾರ ಜಿಲ್ಲೆಯ ಬಂಗಾರಪೇಟೆ ಪಟ್ಟಣದ ಮೆ॥ ಪಿ.ಆರ್.ಎಸ್. ಆಗ್ರೋಟೆಕ್ ರೈಸ್ ಮಿಲ್‌ನಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ಮತ್ತು ಅಕ್ಕಿ ನುಚ್ಚನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ ಜಿಲ್ಲೆ ದಿನಾಂಕ: 04–03–2022ರಂದು ಆದೇಶಿಸಿದೆ. ಈ ರೀತಿ ಮುಟ್ಟುಗೋಲು ಹಾಕಿಕೊಂಡಿರುವ ವಸ್ತುಗಳನ್ನು ಬಹಿರಂಗ ಹರಾಜು ಮಾಡಲು ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ 5872/2022 ರಲ್ಲಿ ದಿನಾಂಕ: 25–03–2022 ರಂದು ಆದೇಶ ನೀಡಿದ್ದು ಅದರಂತೆ ಬಹಿರಂಗ ಹರಾಜು ಮಾಡಲಾಗುವುದು. ಹರಾಜಿನ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಅಗತ್ಯ ವಸ್ತುಗಳ ವಿವರ	ಚೀಲಗಳ ಸಂಖ್ಯೆ	ಅಂದಾಜು ತೂಕ (ಕ್ವಿಂ)	ಪ್ರತಿ ಕ್ವಿಂಟಾಲ್ ಅಂದಾಜು ಬೆಲೆ	ಒಟ್ಟು ಮೊತ್ತ
1	ಅಕ್ಕಿ	17538 (10 ಲಾಟ್)	8497.00	ರೂ. 2500.00	ರೂ. 2,12,42,500.00
2	ಅಕ್ಕಿ ನುಚ್ಚು	2498 (03 ಲಾಟ್)	1213.70	ರೂ. 1600.00	ರೂ. 19,41,920.00

2) ಮೇಲೆ ಕಾಣಿಸಿದ ವಿವಿಧ ಬಗೆಯ ಅಕ್ಕಿ / ಅಕ್ಕಿ ನುಚ್ಚನ್ನು **ಮೆ॥ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಯಲ್ಲಿ ದಿನಾಂಕ: 13–04–2022ರಂದು ಮಧ್ಯಾಹ್ನ 12.00 ಗಂಟೆಯಿಂದ ಬಹಿರಂಗ ಹರಾಜು ಮಾಡಲಾಗುವುದು.**

3) ಬಹಿರಂಗ ಹರಾಜಿನ ಷರತ್ತುಗಳು ಕೆಳಕಂಡಂತಿವೆ:

ಅ) ಅಗತ್ಯ ವಸ್ತುಗಳ ಸಗಟು / ಚಿಲ್ಲರೆ ವ್ಯಾಪಾರಸ್ಥರು ಮತ್ತು ಕಮಿಷನ್ ಏಜೆಂಟರು ಹಾಗೂ ಅಕ್ಕಿ ಗಿರಣಿ ಮಾಲೀಕರು ಹಾಗೂ ದೊಡ್ಡ ಪ್ರಮಾಣದ ಬಳಕೆದಾರ ಸಂಸ್ಥೆಗಳು ಹರಾಜಿನಲ್ಲಿ ಭಾಗವಹಿಸಬಹುದು.

ಆ) ಅಕ್ಕಿ / ಅಕ್ಕಿನುಚ್ಚು ಹರಾಜಿನಲ್ಲಿ ಭಾಗವಹಿಸುವವರು **ರೂ. 350000–00 (ಮೂರು ಲಕ್ಷದ ಐವತ್ತು ಸಾವಿರ)** ಮೌಲ್ಯದ ಡಿ.ಡಿ. ಯನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ **"ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ"** ಹೆಸರಿಗೆ ಪಡೆದು ಹರಾಜಿಗೆ ಮುನ್ನ ಠೇವಣಿಯಾಗಿ ಸಲ್ಲಿಸಬೇಕು.

ಇ) ಈ ಪದಾರ್ಥಗಳನ್ನು **"ಎಲ್ಲಿವೆಯೋ ಅಲ್ಲಿ ಹಾಗೂ ಹೇಗಿವೆಯೋ ಹಾಗೆ"** ಷರತ್ತಿನಡಿ ಹರಾಜು ಮಾಡಲಾಗುತ್ತಿರುವುದರಿಂದ ಹರಾಜಿನಲ್ಲಿ ಭಾಗವಹಿಸುವವರು ಅದಕ್ಕೂ ಮುನ್ನ ದಿನಾಂಕ: **13–04–2022ರಂದು ಬೆಳಿಗ್ಗೆ 10.00 ಗಂಟೆಗೆ ಮೆ॥ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಗೆ** ಭೇಟಿ ನೀಡಿ ಅಕ್ಕಿಯ ಪರಿಶೀಲನೆ ಮಾಡಿಕೊಳ್ಳಬಹುದು.

ಈ) ಹರಾಜು ಮಾಡುವ ಅಕ್ಕಿ / ಅಕ್ಕಿ ನುಚ್ಚಿನ ವಿವರಗಳನ್ನು ಹರಾಜು ಸ್ಥಳದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ಹರಾಜನ್ನು ಲಾಟ್ ಪ್ರಕಾರವಾಗಿ ಮಾಡಲಾಗುವುದು.

ಉ) ಹರಾಜಿನಲ್ಲಿ ಭಾಗವಹಿಸಲು ಬಯಸುವವರು ದಿನಾಂಕ: **13–04–2022ರಂದು ಬೆಳಿಗ್ಗೆ 10.00 ಗಂಟೆಗೆ ಮೆ॥ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಯಲ್ಲಿ** ಹೆಸರು ನೋಂದಾಯಿಸಿಕೊಳ್ಳಬೇಕು.

ಊ) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ವ್ಯಾಪಾರಿ ನೋಂದಣಿ ಪತ್ರ / ಸಂಸ್ಥೆ ನೋಂದಣಿ ಪತ್ರ / ಪ್ಯಾನ್ ಕಾರ್ಡ್ / ಆಧಾರ್ ದಾಖಲಾತಿಗಳನ್ನು ನೋಂದಾವಣೆ ಸಮಯದಲ್ಲಿ ಹಾಜರುಪಡಿಸಬಹುದು.

ಋ) ಹರಾಜಿಗೆ ಇಟ್ಟಿರುವ ಅಕ್ಕಿ / ಅಕ್ಕಿ ನುಚ್ಚಿನ ಮಾರುಕಟ್ಟೆ ಮೌಲ್ಯದ ಅಂದಾಜನ್ನು ನಮೂದಿಸಲಾಗಿದ್ದು ಇವುಗಳನ್ನು ಬಿಡ್ಡುದಾರರು ಗಮನಿಸಬೇಕು.

ಎ) ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಪ್ರಕರಣಕ್ಕೆ ಒಳಗಾಗಿರುವ ವ್ಯಕ್ತಿ ಮತ್ತು ಸಂಸ್ಥೆಗಳು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಏ) ಬಹಿರಂಗ ಹರಾಜಿನಲ್ಲಿ ಬರುವ ಸ್ಪರ್ಧಾತ್ಮಕ ದರಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಥವಾ ಈ ಹರಾಜನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.

ಐ) ಬಿಡ್‌ನಲ್ಲಿ ನಮೂದಾಗುವ ದರಗಳನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿದ ನಂತರ ಬಿಡ್ಡಿನ ಒಟ್ಟು ಮೌಲ್ಯವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ನಿಗದಿತ ಗಡುವಿನೊಳಗಾಗಿ ಜಮಾ ಮಾಡಿ ಚಲನ್ ಹಾಜರುಪಡಿಸಿದ ನಂತರ ಹರಾಜಾದ ಪದಾರ್ಥ ಎತ್ತುವಳಿಗೆ ಅವಕಾಶ ನೀಡಲಾಗುವುದು.

ಒ) ಬಹಿರಂಗ ಹರಾಜಾದ ಅಕ್ಕಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಆದೇಶ ನೀಡಿದ 7 (ಏಳು) ದಿನಗಳಲ್ಲಿ ಮೆ॥ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆ ಯಿಂದ ಎತ್ತುವಳಿ ಮಾಡಬೇಕು.

ಓ) ಹರಾಜು ಷರತ್ತು ಉಲ್ಲಂಘಿಸಿದರೆ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಮಾಹಿತಿಗಾಗಿ **ಜಂಟಿ ನಿರ್ದೇಶಕರು (ಐಟಿ) ರವರ ನಂ: 9611165367 ಗೆ ಅಥವಾ ಉಪ ನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕೋಲಾರ ಜಿಲ್ಲೆ ರವರ ನಂ: 9449559926** ಇವರನ್ನು ಸಂಪರ್ಕಿಸಲು ಕೋರಿದೆ.

(ಘನ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/– (ಡಾ. ಕೆ. ರಾಮೇಶ್ವರಪ್ಪ)
ಜಂಟಿ ನಿರ್ದೇಶಕರು (ಐಟಿ) ಮತ್ತು ತನಿಖಾಧಿಕಾರಿಗಳು,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/3940/ಅಡ್ವರ್ಟೋರ್/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–4/ಅ.ಟೆಂಡರ್ ಅವಧಿ ವಿಸ್ತರಣೆ/2021–22/555 ದಿ:25.03.2022

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ

ಉಲ್ಲೇಖ: ಸಂ:ಕಾ.ಸಾ.ಚಿ/ಪಿ.ಬಿ–4/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–27/2021–22/535 ದಿನಾಂಕ: 23.03.2022

[illegible]

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

RO.No.1103:DIPR/CTA/MCA/2021-22

ಮಂಜೂರಾತಿಯ ನಾಲ್ಕು ಪಟ್ಟು ಅಧಿಕಾರಿಗಳು ಪಿಡಬ್ಲ್ಯುಡಿಯಲ್ಲಿ

ಸಿಇ, ಇಐಸಿ ಹಂಚಿಕೆ ಮತ್ತಷ್ಟು ಕಗ್ಗಂಟು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 13 ಮಂಜೂರಾದ ಹುದ್ದೆಗಳಿರುವ ಲೋಕೋಪಯೋಗಿ ಇಲಾಖೆಗೆ 53 ಮಂದಿ ಮುಖ್ಯ ಎಂಜಿನಿಯರ್ (ಸಿಇ), ಪ್ರಧಾನ ಎಂಜಿನಿಯರ್‌ಗಳು (ಐಇಸಿ). 39 ಹುದ್ದೆಗಳ ಮಂಜೂರಾತಿ ಇರುವ ಜಲ ಸಂಪನ್ಮೂಲ ಇಲಾಖೆಗೆ ಕೇವಲ 15 ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳು!

ಇದು ಎಂಜಿನಿಯರ್‌ಗಳ ಸೇವೆಯನ್ನು ವಿವಿಧ ಇಲಾಖೆಗಳಲ್ಲಿ ವರ್ಗೀಕರಿಸಿ ಶಾಶ್ವತವಾಗಿ ವಿಲೀನಗೊಳಿಸಲು ನಡೆಸಿದ 'ಸಹಮತ' ಪ್ರಕ್ರಿಯೆ ಸೃಷ್ಟಿಸಿರುವ ಅಸಮತೋಲನ. ಯಾವ ಇಲಾಖೆಯನ್ನೂ ಆಯ್ಕೆ ಮಾಡಿಕೊಳ್ಳದ 32 ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ನೀಡಿದ್ದು, ಹಿರಿಯ ಅಧಿಕಾರಿಗಳ ಸೇವಾ ವಿಷಯದ ನಿರ್ವಹಣೆ ಕಗ್ಗಂಟಾಗಿ ಪರಿಣಮಿಸಿದೆ.

> **ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳ ಇಲಾಖಾವಾರು ಹಂಚಿಕೆಯಲ್ಲಿನ ಅಸಮತೋಲನ ಕುರಿತು ಪರಿಶೀಲನೆ ನಡೆಸಲಾಗುವುದು. ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ**
> **ಪಿ. ರವಿಕುಮಾರ್,** ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ

ಪ್ರಜಾವಾಣಿ ವಿಶೇಷ

ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳ ಸೇವಾ ವಿಲೀನಕ್ಕೆ ನಡೆಸಿದ 'ಸಹಮತ' ಪ್ರಕ್ರಿಯೆಯಲ್ಲಿ 21 ಅಧಿಕಾರಿಗಳು ಲೋಕೋಪಯೋಗಿ ಇಲಾಖೆ ಮತ್ತು 15 ಅಧಿಕಾರಿಗಳು ಜಲ ಸಂಪನ್ಮೂಲ ಇಲಾಖೆಯನ್ನು ಆಯ್ದುಕೊಂಡಿದ್ದರು. ಈ ಹಂತದಲ್ಲೇ ಅಸಮತೋಲನ ಸೃಷ್ಟಿಯಾಗಿತ್ತು. ತಟಸ್ಥವಾಗಿ ಉಳಿದವರನ್ನೂ ಲೋಕೋಪಯೋಗಿ ಇಲಾಖೆಗೆ ಕಳುಹಿಸಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ ಎಂದು ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಸಹಮತ' ಪಡೆಯುವಾಗಲೇ ಲೋಪ: ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ತಲಾ ಮೂರು ಹುದ್ದೆಗಳಿದ್ದರೂ ಸಹಮತ ಕೇಳಿಲ್ಲ. ಹೀಗಾಗಿ ಈ ಎರಡೂ ಇಲಾಖೆಗಳನ್ನು ಯಾರೊಬ್ಬರೂ ಆಯ್ಕೆ ಮಾಡಿಕೊಂಡಿಲ್ಲ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಒಟ್ಟು 51 ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್ ಹುದ್ದೆಗಳಿಗೆ ಮಂಜೂರಾತಿ ಇದೆ. ಆದರೆ, ಇತರ ಇಲಾಖೆಗಳಲ್ಲಿ ನಿಯೋಜನೆ ಮೇಲೆ ವರ್ಗಾವಣೆ ಮಾಡಬಹುದಾದ ಹುದ್ದೆಗಳನ್ನೂ ಗಣನೆಗೆ ತೆಗೆದುಕೊಂಡು 70 ಅಧಿಕಾರಿಗಳಿಗೆ ಈ ಶ್ರೇಣಿಗೆ ಬಡ್ತಿ ನೀಡಲಾಗಿತ್ತು.

'ಸಹಮತ ಪಡೆಯುವಾಗ ಒಂದೇ ಇಲಾಖೆಯನ್ನು ಆಯ್ಕೆ ಮಾಡುವ ಅವಕಾಶ ನೀಡಲಾಗಿತ್ತು. ಮಂಜೂರಾದ ಮೂಲ ಹುದ್ದೆಗಳು ಮತ್ತು ಹೆಚ್ಚುವರಿಯಾಗಿ ಬಡ್ತಿ ನೀಡಿದ ಹುದ್ದೆಗಳನ್ನು ವಿಂಗಡಿಸುವ ಕೆಲಸವೂ ಆಗಿಲ್ಲ. ವಿವಿಧ ಇಲಾಖೆಗಳ ನಡುವೆ ಆದ್ಯತೆಗಳನ್ನು ದಾಖಲಿಸುವುದಕ್ಕೂ ಅವಕಾಶ ನೀಡಿರಲಿಲ್ಲ. ಈ ಎಲ್ಲ ಲೋಪಗಳಿಂದಾಗಿ ಸಮಸ್ಯೆ ಜಟಿಲವಾಗಿದೆ' ಎನ್ನುತ್ತಾರೆ ಅಧಿಕಾರಿಗಳು.

ಬಿಕ್ಕಟ್ಟಿನ ಮಧ್ಯೆಯೇ ಬಡ್ತಿ?: ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳ ಹಂಚಿಕೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಹೆಚ್ಚುವರಿಯಾಗಿ ಲೋಕೋಪಯೋಗಿ ಇಲಾಖೆಯಲ್ಲಿರುವ ಅಧಿಕಾರಿಗಳನ್ನು ವಿವಿಧ ಇಲಾಖೆಗೆ ಹಂಚಿಕೆ ಮಾಡಲು ಪುನಃ ಕ್ರಮಬದ್ಧವಾಗಿ 'ಸಹಮತ' ಪಡೆದು ಪ್ರಕ್ರಿಯೆ ಅಂತಿಮಗೊಳಿಸುವಂತೆ ಹಲವು ಅಧಿಕಾರಿಗಳು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ಮಧ್ಯದಲ್ಲೇ ಕಡಿಮೆ ಅಧಿಕಾರಿಗಳು 'ಸಹಮತ' ನೀಡಿರುವುದರ ಆಧಾರದಲ್ಲಿ ಮುಖ್ಯ ಎಂಜಿನಿಯರ್ ಹುದ್ದೆಗಳು ಖಾಲಿ ಇವೆ ಎಂದು ಪರಿಗಣಿಸಿ 19 ಮಂದಿ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳಿಗೆ ಬಡ್ತಿ ನೀಡಲು ಜಲ ಸಂಪನ್ಮೂಲ ಇಲಾಖೆಯಲ್ಲಿ ಸಿದ್ಧತೆ ನಡೆದಿದೆ. ಇಲಾಖಾ ಬಡ್ತಿ ಸಮಿತಿ ಸಭೆ ನಿಗದಿಗೆ ಸೂಚನೆ ನೀಡಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಂಡಲ್ಲಿ ಮಜೂರಾತಿ ಇಲ್ಲದ ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್ ಹುದ್ದೆಗಳ ಸಂಖ್ಯೆ 33ಕ್ಕೆ ಏರಿಕೆಯಾಗಲಿದೆ.

ಸೇವಾ ವಿಸ್ತರಣೆಯಿಂದಲೂ ಸಮಸ್ಯೆ

ಮಂಜೂರಾದ ಹುದ್ದೆಗಳಿಗಿಂತ ಹೆಚ್ಚು ಮಂದಿ ಮುಖ್ಯ ಎಂಜಿನಿಯರ್ ಮತ್ತು ಪ್ರಧಾನ ಎಂಜಿನಿಯರ್‌ಗಳು ಇರುವಾಗಲೂ ಈ ಹುದ್ದೆಗಳಿಂದ ನಿವೃತ್ತರಾಗುತ್ತಿರುವ ಕೆಲವರನ್ನು ಸೇವೆಯಲ್ಲಿ ಮುಂದುವರಿಸಿ ಆದೇಶ ಹೊರಡಿಸಲಾಗಿದೆ.

ನಿವೃತ್ತರಾಗಿದ್ದ ಎನ್.ಜಿ. ಗೌಡಯ್ಯ ಮತ್ತು ಪ್ರಸನ್ನಕುಮಾರ್ ಅವರನ್ನು ಹುದ್ದೆಯಲ್ಲಿ ಮುಂದುವರಿಸಲಾಗಿದೆ. ನಿವೃತ್ತಿಯ ಅಂಚಿನಲ್ಲಿರುವ ಬಿ. ಗುರುಪ್ರಸಾದ್ ಮತ್ತು ಕೆ. ಜೈಪ್ರಕಾಶ್ ಅವರನ್ನೂ ಸೇವೆಯಲ್ಲಿ ಮುಂದುವರಿಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಸಂಸದ್ ರತ್ನ ಪ್ರಶಸ್ತಿ ಸಮಿತಿ ಮತ್ತು ಚೆನ್ನೈನ ಫೈಮ್ ಪಾಯಿಂಟ್ ಪ್ರತಿಷ್ಠಾನವು ನವದೆಹಲಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ಎಂ. ವೀರಪ್ಪ ಮೊಯಿಲಿ ಅವರಿಗೆ 'ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಜೀವಮಾನ ಶ್ರೇಷ್ಠ ಸಾಧನೆ–2022' ಪ್ರಶಸ್ತಿಯನ್ನು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಅವರು ಪ್ರದಾನ ಮಾಡಿದರು. ಕೇಂದ್ರ ಸಂಸದೀಯ ವ್ಯವಹಾರ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಇದ್ದಾರೆ.

ರಾಷ್ಟ್ರೀಯ ಹೋಮಿಯೋಪತಿ ಸಂಸ್ಥೆ: ಶ್ರೀಪಾದ ಹೆಗಡೆಗೆ ಗೌರವ ಸದಸ್ಯತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಮಿಯೋಪತಿ ವೈದ್ಯ ಡಾ.ಶ್ರೀಪಾದ ಹೆಗಡೆ ಹುಕ್ಲಮಕ್ಕಿ ಅವರನ್ನು ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯವು ರಾಷ್ಟ್ರೀಯ ಹೋಮಿಯೋಪತಿ ಸಂಸ್ಥೆಯ ಗೌರವ ಸದಸ್ಯರನ್ನಾಗಿ ನೇಮಿಸಿದೆ.

ಶ್ರೀಪಾದ ಅವರು ಕೋಲ್ಕತ್ತದಲ್ಲಿರುವ ಈ ಸಂಸ್ಥೆಯ ಸದಸ್ಯತ್ವ ಹೊಂದಿದ ದಕ್ಷಿಣ ಭಾರತದ ಏಕೈಕ ವೈದ್ಯ ಎನಿಸಿದ್ದಾರೆ.

ಬೆಂಗಳೂರಿನ ಸರ್ಕಾರಿ ಹೋಮಿಯೋಪತಿ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು.

ಡಾ.ಶ್ರೀಪಾದ ಹೆಗಡೆ

ಹೊಸನಗರದ ರಾಮಚಂದ್ರಾಪುರ ಮಠದ ಆಶ್ರಯದಲ್ಲಿ 14 ವರ್ಷಗಳಿಂದ 150ಕ್ಕೂ ಹೆಚ್ಚು ಆರೋಗ್ಯ ಶಿಬಿರಗಳನ್ನು ಉಚಿತವಾಗಿ ಆಯೋಜಿಸಿದ್ದಾರೆ.

ಕೇಂದ್ರ ಸರ್ಕಾರವು ಇವರನ್ನು ಕೇಂದ್ರೀಯ ಹೋಮಿಯೋಪತಿ ಪರಿಷತ್‌ನ ಗೌರವ ಸದಸ್ಯರನ್ನಾಗಿ ಈ ಹಿಂದೆ ನೇಮಿಸಿತ್ತು.

ರಾಜ್ಯದಲ್ಲಿ ಸಾವಿರದ ಗಡಿಯತ್ತ ಡೆಂಗಿ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಏರುಗತಿ ಪಡೆದುಕೊಂಡಿದ್ದು, ಮೂರು ತಿಂಗಳು ಕಳೆಯುವುದರೊಳಗೆ 907 ಪ್ರಕರಣಗಳು ವರದಿಯಾಗಿವೆ.

ಕಳೆದ ವರ್ಷ ಐದು ತಿಂಗಳಲ್ಲಿ ಇಷ್ಟು ಪ್ರಕರಣಗಳು ವರದಿಯಾಗಿದ್ದವು. ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 205 ಮಂದಿ ಡೆಂಗಿ ಜ್ವರಕ್ಕೆ ಒಳಗಾಗಿದ್ದಾರೆ. 20 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ತಲುಪಿದೆ.

ಮೈಸೂರಿನಲ್ಲಿ 83, ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 70, ಬಳ್ಳಾರಿಯಲ್ಲಿ 68, ಚಿತ್ರದುರ್ಗದಲ್ಲಿ 64, ಕೊಪ್ಪಳದಲ್ಲಿ 62 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆ ಇವೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ಕೊಡಗು, ಚಿಕ್ಕಮಗಳೂರು, ಹಾಸನ, ಮಂಡ್ಯ, ಚಾಮರಾಜನಗರ, ಬೀದರ್, ಕಲಬುರಗಿ ಹಾಗೂ ಉತ್ತರ ಕನ್ನಡದಲ್ಲಿ ಡೆಂಗಿ ನಿಯಂತ್ರಣದಲ್ಲಿದ್ದು, ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿವೆ.

22 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 232 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕೋಲಾರದಲ್ಲಿ 42, ವಿಜಯಪುರದಲ್ಲಿ 40, ತುಮಕೂರಿನಲ್ಲಿ 28, ಬೆಂಗಳೂರು ಗ್ರಾಮಾಂತರದಲ್ಲಿ 27, ಚಿತ್ರದುರ್ಗದಲ್ಲಿ 17 ಹಾಗೂ ದಾವಣಗೆರೆಯಲ್ಲಿ 14 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

'ಕಳೆದ ವರ್ಷ ಡೆಂಗಿ ಜ್ವರ ನಿಯಂತ್ರಣದಲ್ಲಿತ್ತು. ಈಗ ಕೆಲವರಲ್ಲಿ ಈ ಜ್ವರ ಕಾಣಿಸಿಕೊಳ್ಳುತ್ತಿದೆ. ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ನೀರಿನಿಂದ ಈಡಿಸ್ ಜಾತಿಯ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಆ ಸೊಳ್ಳೆಗಳ ಕಡಿತದಿಂದ ಡೆಂಗಿ ಜ್ವರ ಬರುತ್ತದೆ. ಅಕಾಲಿಕ ಮಳೆಯಿಂದ ಈ ಜ್ವರ ಹೆಚ್ಚುವ ಸಾಧ್ಯತೆ ಇದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬೆಸ್ತರ ಬಲೆಯಲ್ಲಿ ಅಳಿವಿನಂಚಿನ ಮಹಶೀರ್

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು ಜಿಲ್ಲೆ): ಅಳಿವಿನಂಚಿನ ಮಹಶೀರ್ ಮೀನು ಬೆಸ್ತರ ಬಲೆ ಸೇರುತ್ತಿದ್ದು, ನೂರಾರು ಮೀನುಗಳ ಮಾರಾಟ ನಿರಂತರವಾಗಿ ನಡೆಯುತ್ತಿದೆ.

ಸಿದ್ದಾಪುರದ ಅರೆಕಾಡು ಗ್ರಾಮದ ಮಧುರಕೂಪು ಎಂಬಲ್ಲಿ ಹದಿನೈದು ದಿನಗಳಿಂದ ಸುಮಾರು 30 ಬೆಸ್ತರು ಠಿಕಾಣಿ ಹೂಡಿ ಕಾವೇರಿ ಹೊಳೆಯಲ್ಲಿ ಮೀನು ಹಿಡಿಯುತ್ತಿದ್ದು, ನೆಲ್ಯಹುದಿಕೇರಿ, ಸಿದ್ದಾಪುರ ಭಾಗದಲ್ಲಿ ಮಾರುತ್ತಿದ್ದಾರೆ ಎಂದು ಮೀನು ಪ್ರೇಮಿಗಳಾದ ಎಚ್.ರಶೀರ್ ಕವಿರಾಜ್, ಎನ್.ಬಿ.ಪವಿನ್ ದೂರಿದ್ದಾರೆ. ಮಹಶೀರ್ ಹಿಡಿಯುವುದನ್ನು ಸರ್ಕಾರ ಅಪರಾಧ ಎಂದು ಘೋಷಿಸಿದೆ.

ಸಂಪೂರ್ಣ ಬೆಳೆದ ಮೀನು ಸುಮಾರು 60 ಕೆ.ಜಿ ತೂಕ ಇರುತ್ತದೆ. ದೇಶದ ಈಶಾನ್ಯ ರಾಜ್ಯಗಳಲ್ಲಿ ಹೆಚ್ಚು. ದಕ್ಷಿಣದಲ್ಲಿ ವಿರಳ. ಪ್ರವಾಹದ ಸಂದರ್ಭ ವಿರುದ್ಧ ದಿಕ್ಕಿನಲ್ಲಿ ಈಜುವ ಸಾಮರ್ಥ್ಯ ಹೊಂದಿದೆ.

ರಾಜ್ಯದ ಏಕೈಕ ಮಹಶೀರ್ ಮೀನು ತಳಿ ಉತ್ಪಾದನಾ ಕೇಂದ್ರ ಹಾರಂಗಿಯಲ್ಲಿದ್ದು, ಉತ್ಪಾದಿಸಲಾದ ಮರಿಗಳನ್ನು ಪ್ರತಿ ವರ್ಷ ಕಾವೇರಿ ನದಿ ಭಾಗದಲ್ಲಿ ಬಿಡಲಾಗುತ್ತಿದೆ. ಕೇಂದ್ರದಲ್ಲಿ ಪ್ರತಿ ವರ್ಷವೂ 30-35 ಸಾವಿರ ಮೀನು ಉತ್ಪಾದನೆಯಾಗುತ್ತಿದ್ದು, ಕಾವೇರಿ ನದಿ, ರೈತರ ಕೆರೆ ಹಾಗೂ ಹೊರ ರಾಜ್ಯಕ್ಕೂ ಒದಗಿಸಲಾಗುತ್ತಿದೆ. ಸದ್ಯ, ಹಾರಂಗಿ ಕೇಂದ್ರದ ಅಧಿಕಾರಿ ಮಹದೇವ್ ಸ್ಥಳಕ್ಕೆ ಭೇಟಿ ನೀಡಿ ಬೆಸ್ತರಿಗೆ ಎಚ್ಚರಿಕೆ ನೀಡಿದ್ದಾರೆ.

ಮಾರಾಟಕ್ಕೆ ಇಟ್ಟಿರುವ ಮಹಶೀರ್ ಮೀನುಗಳು

'ಮೀನು ಸಿಕ್ಕಿದ ಕೂಡಲೇ ನದಿಗೆ ಬಿಡುತ್ತಿದ್ದೇವೆ'

ಸರ್ಕಾರ ಮಹಶೀರ್ ತಳಿಯ ಉತ್ಪಾದನೆಗಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಬೆಸ್ತರು ಕಳೆದ 15 ದಿನಗಳಿಂದ ನೂರಾರು ಮಹಶೀರ್ ಮೀನುಗಳನ್ನು ಹಿಡಿದು ಮಾರಾಟ ಮಾಡುತ್ತಿದ್ದು, ಮೀನಿನ ಮಹತ್ವದ ಬಗ್ಗೆ ಮಾಹಿತಿ ನೀಡಿದ್ದೇವೆ. ಬಳಿಕ ಅಧಿಕಾರಿಗಳಿಗೂ ಮಾಹಿತಿ ನೀಡಿದ್ದೇವೆ. ನಾವು ಗಾಣ ಹಾಕುವ ಸಂದರ್ಭ ಮಹಶೀರ್ ಸಿಕ್ಕಿದ ಕೂಡಲೇ ನದಿಗೆ ಬಿಡುತ್ತಿದ್ದೇವೆ.

ಕವಿರಾಜ್, ಮೀನು ಪ್ರೇಮಿ, ಸಿದ್ದಾಪುರ.

'ಮೀನಿನ ಸಂರಕ್ಷಣೆ ಎಲ್ಲರ ಜವಾಬ್ದಾರಿ'

ನದಿ ಹಾಗೂ ಮಹಶೀರ್ ಮೀನು ಸಂರಕ್ಷಣೆಯ ನಿಟ್ಟಿನಲ್ಲಿ ಸರಕಾರ ಕೂರ್ಗ್ ವೈಲ್ಡ್ ಲೈಫ್ ಸೊಸೈಟಿಗೆ ಸಿದ್ದಾಪುರದಿಂದ ಶಿರಂಗಾಲದವರೆಗೆ ಸುಮಾರು 35 ಕಿ.ಮೀ ಗುತ್ತಿಗೆ ನೀಡಿದೆ. ಈ ಭಾಗದಲ್ಲಿ ಮೂವರು ಕಾವಲುಗಾರರು ಇದ್ದು, ನಿತ್ಯ ಮೀನುಗಾರಿಕೆ ನಡೆಯದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ. ಅಳಿವಿನಂಚಿನಲ್ಲಿರುವ ಮಹಶೀರ್ ಮೀನಿನ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ಜನರು ಕೈಜೋಡಿಸಬೇಕು.

ಸಿ.ಪಿ.ಅಯ್ಯಪ್ಪ, ಅಧ್ಯಕ್ಷ, ಮೀನಿನ ಉಪಸಮಿತಿ, ಕೂರ್ಗ್ ವೈಲ್ಡ್ ಲೈಫ್ ಸೊಸೈಟಿ, ಕೊಡಗು.

ರಂಗಭೂಮಿ ಪಿತಾಮಹ ಗುಬ್ಬಿ ವೀರಣ್ಣ ಸಮಾಧಿ ಅನಾಥ!

ಒಂದನೇ ಪುಟದಿಂದ

'ಗುಬ್ಬಿ ವೀರಣ್ಣ ಅವರ ಸಮಾಧಿಗೆ ದಾರಿ' ಎನ್ನುವ ಸಣ್ಣ ನಾಮಫಲಕ ಇದ್ದೂ ಇಲ್ಲದಂತಿದೆ. ಸಮಾಧಿ ಪಕ್ಕದಲ್ಲಿ ಮದ್ಯದಂಗಡಿ ಇದೆ. ಸಂಜೆಯಾದರೆ ಸಮಾಧಿ ಸ್ಥಳ ಮದ್ಯ ಸೇವನೆಗೆ ಅಡ್ಡೆಯಾಗುತ್ತದೆ. ಸುತ್ತಲೂ ಕಸದ ರಾಶಿ, ಮದ್ಯದ ಬಾಟಲಿಗಳಿಂದ ಜಾಗ ತಿಪ್ಪೆಗುಂಡಿಯಾಗಿದೆ. ಸಾರ್ವಜನಿಕರು ಇಲ್ಲಿಯೇ ಮಲ, ಮೂತ್ರ ವಿಸರ್ಜನೆ ಮಾಡುವುದರಿಂದ ಮೂಗು ಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲದಷ್ಟು ಗಬ್ಬೆದ್ದು ನಾರುತ್ತದೆ.

'ಮೇರು ಕಲಾವಿದನ ಸಮಾಧಿ ಇರುವ ಜಾಗದ ಈ ದುಃಸ್ಥಿತಿ ಬಗ್ಗೆ ಸ್ಥಳೀಯ ಆಡಳಿತ ಕೂಡ ತಲೆಕೆಡಿಸಿಕೊಂಡಂತಿಲ್ಲ. ಇಲ್ಲಿನ ಜನ ವೀರಣ್ಣನವರನ್ನು ಸಂಪೂರ್ಣ ಮರೆತಿದ್ದಾರೆ. ತಾಲ್ಲೂಕಿನ ಯಾವುದೇ ಸಂಘ, ಸಂಸ್ಥೆಗಳು ಸಮಾಧಿ ಇರುವ ಜಾಗದ ಸ್ವಚ್ಛತೆಗೆ ಪ್ರಯತ್ನ ಮಾಡುತ್ತಿಲ್ಲ' ಎನ್ನುತ್ತಾರೆ ಸ್ಥಳೀಯ ನಿವಾಸಿ ಶಾಂತರಾಜು.

'ಡಾ.ಗುಬ್ಬಿ ವೀರಣ್ಣ ಟ್ರಸ್ಟ್ ವತಿಯಿಂದ ಸಚಿವರು, ಸಂಸದ, ಶಾಸಕ ಮತ್ತು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ. ಹಲವಾರು ಬಾರಿ ಪ್ರತಿಭಟನೆಗಳನ್ನೂ ಮಾಡಲಾಗಿದೆ. ಆದರೆ, ಯಾವುದೂ ಪ್ರಯೋಜನವಾಗಿಲ್ಲ' ಎನ್ನುತ್ತಾರೆ ಟ್ರಸ್ಟ್ ಪದಾಧಿಕಾರಿಗಳು.

ಗುಬ್ಬಿ ವೀರಣ್ಣ ಅವರ ಸಮಾಧಿ

'ಮದ್ಯದ ಅಂಗಡಿ ಸ್ಥಳಾಂತರ ಮಾಡುವಂತೆ ಮನವಿ ಮಾಡಲಾಗಿದೆ. ಸರ್ಕಾರ ಮನಸ್ಸು ಮಾಡುತ್ತಿಲ್ಲ. ಸಮಾಧಿ ಇರುವ ಜಮೀನಿಗೆ ಸಂಬಂಧಿಸಿದಂತೆ ಕುಟುಂಬ ಸದಸ್ಯರ ನಡುವೆ ತಕರಾರಿದೆ. ವ್ಯಾಜ್ಯ ನ್ಯಾಯಾಲಯದಲ್ಲಿದೆ. ಈ ಕಾರಣಕ್ಕೆ ನಾವು ಏನನ್ನೂ ಮಾಡಲು ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ' ಎಂದು ಗುಬ್ಬಿ ವೀರಣ್ಣ ಟ್ರಸ್ಟ್‌ನ ಟ್ರಸ್ಟಿ ಗುಬ್ಬಿ ರಾಜೇಶ್ ಅವರು ಹೇಳಿದರು.

'ಗುಬ್ಬಿ ವೀರಣ್ಣ ಮತ್ತು ಗುಬ್ಬಿ ಕಂಪನಿಯ ಹೆಸರು ಹೇಳಿಕೊಂಡು ನಾವು ಬದುಕು ಕಟ್ಟಿಕೊಂಡಿದ್ದೇವೆ. ಆದರೆ, ಅವರ ಸಮಾಧಿಯ ಇಂಥ ದುಃಸ್ಥಿತಿಯ ಬಗ್ಗೆ ಏನೂ ಮಾಡುತ್ತಿಲ್ಲ. ಕಲಾವಿದರು, ರಂಗಾಸಕ್ತರು ಎಲ್ಲರೂ ಒಗ್ಗೂಡಿ, ಕನಿಷ್ಠಪಕ್ಷ ಜಾಗವನ್ನು ಚೊಕ್ಕವಾಗಿ ಇಟ್ಟುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಇನ್ನಾದರೂ ಈ ಕೆಲಸ ಪ್ರಾರಂಭವಾಗಲಿ' ಎನ್ನುವುದು ರಂಗಕರ್ಮಿ ಡಾ. ಲಕ್ಷ್ಮಣದಾಸ್ ಅವರ ಅಭಿಪ್ರಾಯ.

> **ಕೋರ್ಟ್‌ನಲ್ಲಿ ವ್ಯಾಜ್ಯ ಇರುವುದರಿಂದ ಸಮಾಧಿ ಜಾಗಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಸ್ವಚ್ಛತೆ ಕಾಪಾಡುವಂತೆ ಮದ್ಯದ ಅಂಗಡಿಗೆ ನೋಟಿಸ್ ನೀಡಲಾಗಿದೆ**
> **ಅಣ್ಣಪ್ಪಸ್ವಾಮಿ**
> ಅಧ್ಯಕ್ಷ, ಪಟ್ಟಣ ಪಂಚಾಯಿತಿ, ಗುಬ್ಬಿ

ಸ್ವಾತಂತ್ರ್ಯ ಅಮೃತಮಹೋತ್ಸವದ ಪ್ರಯುಕ್ತ ಚಿತ್ರಕಲಾ ಪ್ರದರ್ಶನ

ಕಲಾ ಸಾಧಕರಿಗೆ 'ಚಿತ್ರಕಲಾ ಸಮ್ಮಾನ್' ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪ್ರೊ. ರತನ್ ಪರಿಮು ಸೇರಿದಂತೆ ಐವರು ಕಲಾವಿದರಿಗೆ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸ್ವಾತಂತ್ರ್ಯ ಅಮೃತಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಕಲಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. 'ಪ್ರೊ. ಎಂ.ಎಸ್. ನಂಜುಂಡರಾವ್ ಪ್ರಶಸ್ತಿ'ಯನ್ನು ಗುಜರಾತಿನ ಪ್ರೊ. ರತನ್ ಪರಿಮು ಸ್ವೀಕರಿಸಿದರು. ಈ ಪ್ರಶಸ್ತಿಯು ₹ 1 ಲಕ್ಷ ನಗದು ಬಹುಮಾನ ಹಾಗೂ ಫಲಕ ಒಳಗೊಂಡಿದೆ.

ಎನ್. ಪುಷ್ಪಮಾಲಾ ಅವರಿಗೆ 'ಡಿ. ದೇವರಾಜ ಅರಸು ಪ್ರಶಸ್ತಿ', ನರೇಂದ್ರ ವಿ.ಜಿ. ಅವರಿಗೆ 'ವೈ.ಸುಬ್ರಹ್ಮಣ್ಯರಾಜು ಪ್ರಶಸ್ತಿ', ಬಸವರಾಜ್ ಮುಸಾವಳಗಿ ಅವರಿಗೆ 'ಎಂ.ಆರ್ಯಮೂರ್ತಿ ಪ್ರಶಸ್ತಿ' ಹಾಗೂ ಪ್ರೊ. ವಿಶ್ವಂಭರ ಕೆ.ಎಸ್. ಅವರಿಗೆ 'ಎಚ್.ಕೆ.ಕೇಜ್ರಿವಾಲ್ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ಮತ್ತು ಫಲಕಗಳನ್ನು ಒಳಗೊಂಡಿವೆ.

'ಕರ್ನಾಟಕ ಚಿತ್ರಕಲಾ ಪರಿಷತ್ತು ಗುಣಮಟ್ಟದ ಕಲಾ ಶಿಕ್ಷಣ ನೀಡುತ್ತಿದೆ. ಈ ಕಾರ್ಯಕ್ಕೆ ಸರ್ಕಾರದಿಂದ ಅಗತ್ಯ ಸಹಕಾರ ನೀಡಲಾಗುವುದು' ಎಂದು ಎಸ್.ಟಿ. ಸೋಮಶೇಖರ್ ಹೇಳಿದರು.

ಕಲಾವಿದರಾದ ಎನ್. ಪುಷ್ಪಮಾಲಾ, ಬಸವರಾಜ್ ಮುಸಾವಳಗಿ, ಪ್ರೊ. ರತನ್ ಪರಿಮು, ಪ್ರೊ. ವಿಶ್ವಂಭರ ಕೆ.ಎಸ್. ಹಾಗೂ ವಿ.ಜಿ. ನರೇಂದ್ರ ಅವರಿಗೆ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಿತ್ರಕಲಾ ಪರಿಷತ್ತಿನ ಪ್ರಾಧ್ಯಾಪಕ ಆರ್.ಎಚ್. ಕುಲಕರ್ಣಿ, ಅಧ್ಯಕ್ಷ ಬಿ.ಎಲ್. ಶಂಕರ್, ಸಚಿವ ಎಸ್.ಟಿ. ಸೋಮಶೇಖರ್, ಕಲಾವಿದ ಕೃಷ್ಣಮಾಚಾರಿ ಬೋಸ್ ಹಾಗೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪ್ರೊ.ಕೆ.ಎಸ್. ಅಪ್ಪಾಜಯ್ಯ ಇದ್ದಾರೆ – ಪ್ರಜಾವಾಣಿ ಚಿತ್ರ

ಇಂದು 19ನೇ ಚಿತ್ರಸಂತೆ

ಕರ್ನಾಟಕ ಚಿತ್ರಕಲಾ ಪರಿಷತ್ತು 19ನೇ ಚಿತ್ರಸಂತೆಯನ್ನು ಭಾನುವಾರ ಹಮ್ಮಿಕೊಂಡಿದ್ದು, ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿ ಕಲಾ ಜಗತ್ತು ಅನಾವರಣಗೊಳ್ಳಲಿದೆ. ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಈ ಬಾರಿ ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಳಿಗ್ಗೆ 10.30ಕ್ಕೆ ಚಿತ್ರಸಂತೆಗೆ ಚಾಲನೆ ನೀಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು 'ಕಲಾ ಪ್ರದರ್ಶನ' ಉದ್ಘಾಟಿಸಲಿದ್ದಾರೆ.

ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಈ ಬಾರಿ ಚಿತ್ರಸಂತೆಯನ್ನು ಸ್ವಾತಂತ್ರ್ಯ ಯೋಧರಿಗೆ ಸಮರ್ಪಿಸಲಾಗಿದೆ. ಪರಿಷತ್ತಿನ 12 ಗ್ಯಾಲರಿಗಳಲ್ಲಿ ಆಯ್ದ ಕಲಾವಿದರ ಕಲಾಕೃತಿಗಳು 10 ದಿನಗಳವರೆಗೆ ಪ್ರದರ್ಶನ ಕಾಣಲಿವೆ. ಚಿತ್ರಸಂತೆಗೆ ಈ ಬಾರಿ 4 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ ಇದೆ.

'ವಿಚ್ಛೇದನಕ್ಕೆ ಕಲಹವಷ್ಟೇ ಕಾರಣವಾಗಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಂಪತಿ ಮಧ್ಯೆ ಜಗಳವಿದೆ ಹಾಗೂ ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದ ಮಾತ್ರಕ್ಕೆ ವಿವಾಹ ವಿಚ್ಛೇದನದ ಮನವಿಯನ್ನು ಒಪ್ಪಿ ಡಿಕ್ರಿ ನೀಡುವುದು ಸಮಂಜಸವಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಪತಿಯ ವಿವಾಹ ವಿಚ್ಛೇದನಕ್ಕೆ ಡಿಕ್ರಿಯ ಮುದ್ರೆಯೊತ್ತಿದ್ದ ಬೆಂಗಳೂರಿನ ನಾಲ್ಕನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರ ಆದೇಶವನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ಹಾಗೂ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ತಳ್ಳಿ ಹಾಕಿದೆ. ಹಿಂದೂ ವಿವಾಹ ಕಾಯ್ದೆ–1955ರ ಕಲಂ 13 (1)(ಐಎ) ಮತ್ತು (ಐಬಿ) ಅನ್ವಯ ಕೋರಲಾಗಿದ್ದ ವಿವಾಹ ವಿಚ್ಛೇದನದ ಡಿಕ್ರಿಯನ್ನು ರದ್ದುಗೊಳಿಸಿದೆ.

'ಅರ್ಜಿದಾರ ದಂಪತಿಯ ಮಧ್ಯೆ ಸರಿಪಡಿಸಲಾಗದಂತಹ ಕಂದಕವಿದೆ. ಒಂಬತ್ತು ವರ್ಷಗಳಿಂದ ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ಹಾಗಾಗಿ ಇದು ವಿವಾಹ ವಿಚ್ಛೇದನಕ್ಕೆ ಅರ್ಹವಾಗಿದೆ ಎಂಬ ಅಭಿಪ್ರಾಯದೊಂದಿಗೆ ಕೌಟುಂಬಿಕ ನ್ಯಾಯಾಲಯ ವಿಚ್ಛೇದನದ ಡಿಕ್ರಿ ನೀಡಿರುವುದು ಸರಿಯಲ್ಲ. ಪತಿ–ಪತ್ನಿಯರ ಆರೋಪಗಳನ್ನು ಆಯಾ ಸಮಾಜದ ರೀತಿ ರಿವಾಜುಗಳ ನಿರ್ದಿಷ್ಟ ತಳಹದಿಯಲ್ಲಿ ಗಮನಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 'ನನ್ನ ಹೆಂಡತಿ ಮದುವೆಯಾದ ತಕ್ಷಣ ಪ್ರತ್ಯೇಕ ಮನೆ ಮಾಡಬೇಕು ಎಂದು ಒತ್ತಾಯಿಸಿ ಪದೇ ಪದೇ ಜಗಳ ತೆಗೆಯುತ್ತಿದ್ದಳು. ಹೇಳದೇ ಕೇಳದೇ ತವರಿಗೆ ಮತ್ತು ಸಹೋದರಿಯ ಮನೆಗೆ ಹೋಗುತ್ತಿದ್ದಳು. ನನ್ನ ತಾಯಿ ಮತ್ತು ತಮ್ಮನನ್ನು ತೊರೆದು ಬರುವಂತೆ ಒತ್ತಾಯಿಸುತ್ತಿದ್ದಳು. ಇದನ್ನು ನಾನು ಒಪ್ಪಿರಲಿಲ್ಲ. ಇದಕ್ಕೆ ಮುನಿಸಿಕೊಂಡು ತವರಿಗೆ ಹೇಳದೇ ಕೇಳದೆ ಹೋದವಳನ್ನು ನಾನು ಎಷ್ಟು ಕರೆದರೂ ಬರಲಿಲ್ಲ. ಆಗ ವಕೀಲರ ಮುಖಾಂತರ ನೋಟಿಸ್ ಕೊಡಿಸಿದ್ದಕ್ಕೆ ನನ್ನ ಮತ್ತು ಕುಟುಂಬದ ಸದಸ್ಯರ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಳು. ಹೀಗಾಗಿ, ನನಗೆ ಪತ್ನಿಯಿಂದ ವಿಚ್ಛೇದನ ಬೇಕು' ಎಂದು ಕೋರಿದ್ದ ಪತಿಯ ಮನವಿಯನ್ನು ಕೌಟುಂಬಿಕ ನ್ಯಾಯಾಲಯ ಮಾನ್ಯ ಮಾಡಿತ್ತು.

ಈ ಮನವಿಯನ್ನು ಪ್ರಶ್ನಿಸಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು. 'ಪತ್ನಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದ ಮಾತ್ರಕ್ಕೆ ಅದನ್ನು ಕ್ರೌರ್ಯ ಎಂದು ಒಪ್ಪಲಾಗದು. ಕ್ರೌರ್ಯ ಎಂಬ ಪದವನ್ನು ಗಮನಿಸುವಾಗ ಅದು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಪಾಯ ಒಡ್ಡುವಂತಿದೆಯೇ ಎಂಬುದನ್ನು ಪರಿಶೀಲಿಸಬೇಕು. ಮಾನಸಿಕ ಅಪಾಯಗಳಿವೆ ಎಂದಾದರೆ ಆ ಪತಿ–ಪತ್ನಿ ಹೊಂದಿರುವ ಸಾಮಾಜಿಕ ಮೌಲ್ಯ, ಅಂತಸ್ತು ಮತ್ತು ಅವರು ಎಂತಹ ಪರಿಸರದಲ್ಲಿ ಜೀವನ ನಡೆಸುತ್ತಿದ್ದಾರೆ ಎಂಬುದನ್ನು ಗುರುತಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.



ತಂದೆ ಠಾಣೆ ವ್ಯಾಪ್ತಿಯಲ್ಲೇ ಮಗನ ಕೊಲೆ ● ಆರೋಪಿಗಳ ಜೊತೆ ಕೆಲ ಪೊಲೀಸರು ಶಾಮೀಲು

ಪಿಎಸ್‌ಐ ಕುಟುಂಬಕ್ಕೆ ಜೀವ ಭಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯ ಗಾಂಧಿ ವೃತ್ತ ಠಾಣೆಯ ಅಪರಾಧ ವಿಭಾಗದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಆರ್.ಬಿ. ಕೂಡಗಿ ಅವರ ಮಗ ಮುಸ್ತಕಿನ್ (28) ಕೊಲೆ ಪ್ರಕರಣದ ತನಿಖೆಯನ್ನು ಪೊಲೀಸರೇ ದಿಕ್ಕು ತಪ್ಪಿಸುತ್ತಿದ್ದು, ಇದೀಗ ಪಿಎಸ್‌ಐ ಕುಟುಂಬಕ್ಕೆ ಜೀವ ಭಯ ಕಾಡುತ್ತಿದೆ.

ಪಿಎಸ್‌ಐ ಅವರ ಎರಡನೇ ಮಗ, ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದಾರೆ. ಮೊದಲ ಮಗ ಮುಸ್ತಕಿನ್ ಸಹ ಪಿಎಸ್‌ಐ ಆಗಲು ತಯಾರಿ ನಡೆಸುತ್ತಿದ್ದರು. ಅದರ ಮಧ್ಯೆಯೇ ಅವರು, ಸಂಬಂಧಿಯೂ ಆಗಿದ್ದ ಅತೀಕಾ ಉಮೇಸ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ಮದುವೆಗೆ ಯುವತಿ ಕುಟುಂಬದವರ ವಿರೋಧವಿತ್ತು.

ತಂದೆ ಕರ್ತವ್ಯ ನಿರ್ವಹಿಸುತ್ತಿರುವ ಠಾಣೆ ವ್ಯಾಪ್ತಿಯಲ್ಲಿ ಫೆ. 15ರಂದು ಮಗ ಮುಸ್ತಕಿನ್ ಕೊಲೆಯಾಗಿತ್ತು. ಈ ಪ್ರಕರಣದಲ್ಲಿ ಇಬ್ಬರನ್ನು ಮಾತ್ರ ಬಂಧಿಸಲಾಗಿದ್ದು, ಉಳಿದ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ತನಿಖೆ ಹೊಣೆ ಹೊತ್ತಿರುವ ಕೆಲ ಪೊಲೀಸರು, ಆರೋಪಿಗಳ ಜೊತೆ ಕೈ ಜೋಡಿಸಿ ತಮ್ಮದೇ ಇಲಾಖೆಯ ಪಿಎಸ್‌ಐ ಕುಟುಂಬಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಲಾಗಿದೆ.

ಮುಸ್ತಕಿನ್ ಹಾಗೂ ಅತೀಕಾ ಉಮೇಸ

ಈ ಬಗ್ಗೆ, ಮೃತ ಮುಸ್ತಕಿನ್ ಪತ್ನಿ ಅತೀಕಾ ಉಮೇಸ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಮಾರ್ಚ್ 25ರಂದು ದೂರು ಸಲ್ಲಿಸಿದ್ದಾರೆ. ತಮಗೆ ಹಾಗೂ ಪಿಎಸ್‌ಐ ಕುಟುಂಬಕ್ಕೆ ಭದ್ರತೆ ಒದಗಿಸುವಂತೆ ಕೋರಿದ್ದಾರೆ.

'ಪತಿ ಮುಸ್ತಕಿನ್ ಅವರನ್ನು ಮಾಜಿ ಕಾರ್ಪೊರೇಟರ್ ಆಗಿರುವ ನನ್ನ ತಂದೆ, ಸಹೋದರರು ಹಾಗೂ ಸಂಬಂಧಿಕರು ಸೇರಿಕೊಂಡು ಅಪಘಾತದ ಸೋಗಿನಲ್ಲಿ ಕೊಲೆ ಮಾಡಿದ್ದಾರೆ. ತಂದೆ–ಸಹೋದರನಷ್ಟೇ ಪೊಲೀಸರು ಬಂಧಿಸಿದ್ದು, ಉಳಿದವರು ಹೊರಗಡೆ ಇದ್ದಾರೆ. ರಾಜಕೀಯ ಹಾಗೂ ಹಣದ ಪ್ರಭಾವಕ್ಕೆ ಒಳಗಾಗಿ ಆರೋಪಿಗಳನ್ನು ರಕ್ಷಿಸಲು ಕೆಲ ಪೊಲೀಸರು ಪ್ರಯತ್ನಿಸುತ್ತಿದ್ದಾರೆ' ಎಂದು ಅತೀಕಾ ದೂರಿನಲ್ಲಿ ತಿಳಿಸಿದ್ದಾರೆ.

'ಮುಸ್ತಕಿನ್ ಹಾಗೂ ನಾನು ಹಲವು ವರ್ಷಗಳಿಂದ ಪ್ರೀತಿಸಿ ಮದುವೆಯಾಗಿದ್ದೆವು. ಇದನ್ನು ವಿರೋಧಿಸಿದ್ದ ನನ್ನ ಕುಟುಂಬದವರು, ತಮ್ಮ ಮರ್ಯಾದೆ ಹೋಗಿತೆಂದು ಹೇಳಿ ಮುಸ್ತಕಿನ್ ಅವರನ್ನು ಕೊಂದಿದ್ದಾರೆ. ಜೈಲಿನಿಂದಲೇ ಸಂಬಂಧಿಕರೊಬ್ಬರಿಗೆ ಇತ್ತೀಚೆಗೆ ಕರೆ ಮಾಡಿದ್ದ ತಂದೆ, '₹ 50 ಕೋಟಿ ಖರ್ಚಾದರೂ ಪರವಾಗಿಲ್ಲ. ಎಲ್ಲರನ್ನೂ ಕೊಲೆ ಮಾಡಿಸುತ್ತೇನೆ' ಎಂಬುದಾಗಿ ಹೇಳಿದ್ದಾರೆ. ನನಗೆ ಹಾಗೂ ಮಾವ ಆರ್.ಬಿ. ಕೊಡಗಿ ಕುಟುಂಬದವರಿಗೆ ಜೀವ ಭಯವಿದ್ದು, ಯಾವುದೇ ತೊಂದರೆಯಾದರೂ ಆರೋಪಿಗಳೇ ಹೊಣೆ' ಎಂದೂ ಅತೀಕಾ ದೂರಿನಲ್ಲಿ ವಿವರಿಸಿದ್ದಾರೆ.

'ಮಾವ ಆರ್.ಬಿ. ಕೂಡಗಿ, ಅಪರಾಧ ವಿಭಾಗದ ಪಿಎಸ್‌ಐ. ಮೈದುನ, ಬೆಂಗಳೂರಿನಲ್ಲಿ ಕಾನ್‌ಸ್ಟೆಬಲ್ ಕೆಲಸ ಮಾಡುತ್ತಿದ್ದಾರೆ. 7 ತಿಂಗಳ ಗರ್ಭಿಣಿ ಆಗಿರುವ ನನ್ನನ್ನು ತಮ್ಮ ಮನೆಯಲ್ಲಿರಿಸಿಕೊಂಡು ಆರೈಕೆ ಮಾಡುತ್ತಿದ್ದಾರೆ. ಪಿಎಸ್‌ಐ, ಕಾನ್‌ಸ್ಟೆಬಲ್ ಇರುವ ಕುಟುಂಬಕ್ಕೆ ಪೊಲೀಸರಿಂದ ಅನ್ಯಾಯವಾಗುತ್ತಿದ್ದು, ಜನಸಾಮಾನ್ಯರ ಪರಿಸ್ಥಿತಿ ಏನು ? ಮುಸ್ತಕಿನ್ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಬೇಕು. ಆರೋಪಿಗಳ ಜೊತೆ ಶಾಮೀಲಾಗಿರುವ ಪೊಲೀಸರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಕೊಲೆ ಪ್ರಕರಣವನ್ನು ಸಿಐಡಿ ಅಥವಾ ಸಿಬಿಐಗೆ ವಹಿಸಬೇಕು' ಎಂದೂ ಅತೀಕಾ ಉಮೇಸ ಕೋರಿದ್ದಾರೆ.

'ಸುಪಾರಿ ಹಂತಕರು'

'ವಿಜಯಪುರದ ರಾಷ್ಟ್ರೀಯ ಹೆದ್ದಾರಿ ರೇಡಿಯೊ ಕೇಂದ್ರದ ಬಳಿ ಮುಸ್ತಕಿನ್ ಕೊಲೆ ಆಗಿದೆ. ಆರೋಪಿಗಳ ಪೈಕಿ ಕೆಲವರು, ಸುಪಾರಿ ಹಂತಕರು. ಅವರ ಮೇಲೆ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಅಷ್ಟಾದರೂ ಅವರ ವಿರುದ್ಧ ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಅತೀಕಾ ದೂರಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಗೆ ಬಿಜೆಪಿ ವಿರೋಧ: ಸುರೇಶ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ಕಲ್ಪಿಸುವ ಮಸೂದೆಗೆ ಲೋಕಸಭೆಯಲ್ಲಿ ಅನುಮೋದನೆ ಲಭಿಸಿತ್ತು. ಆದರೆ, ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಬಿಜೆಪಿ ಸದಸ್ಯರೇ ವಿರೋಧಿಸಿದ್ದರು' ಎಂದು ಸಂಸದ ಡಿ.ಕೆ. ಸುರೇಶ್ ದೂರಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್, 'ಜನಪರ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಕಾಂಗ್ರೆಸ್ ಕಾರ್ಯಕರ್ತರಿಗೆ ಪೊಲೀಸರ ಮೂಲಕ ಬೆದರಿಸುವ ಕೆಲಸವನ್ನು ಶಾಸಕ ಎಂ.ಕೃಷ್ಣಪ್ಪ ಮಾಡುತ್ತಿದ್ದಾರೆ. ಆಪ್ತರು ಹಾಗೂ ಬೆಂಬಲಿಗರ ಒಡೆತನದ ಲೇಔಟ್‌ಗಳಲ್ಲಷ್ಟೇ ಡಾಂಬರೀಕರಣ ಮಾಡುವಂತೆ ಸೂಚಿಸಿದ್ದಾರೆ. ಬಡವರು ವಾಸಿಸುವ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಕಿಡಿಕಾರಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕಾಂಗ್ರೆಸ್ ಮುಖಂಡರಾದ ಕುಸುಮಾ ಹನುಮಂತರಾಯಪ್ಪ ಇದ್ದರು.

ಕೋವಿಡ್ ಸೇನಾನಿಗಳನ್ನು ಸಂಸದ ಡಿ.ಕೆ.ಸುರೇಶ್ ಸನ್ಮಾನಿಸಿದರು. ಆರ್.ಕೆ.ರಮೇಶ್, ಪುಷ್ಪಾ ಅಮರನಾಥ್, ಕುಸುಮಾ ಹನುಮಂತರಾಯಪ್ಪ, ಬೆಂಗಳೂರು ದಕ್ಷಿಣ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀಗೌಡ, ಜಯಶ್ರೀ ಅಚ್ಯುತ್, ಶೋಭಾಗೌಡ, ಪಾರಿಜಾತ ದೊರೆಸ್ವಾಮಿ, ಹೆಣ್ಣಾಗ್ರಾಮ ಪಂಚಾಯಿತಿ ಅಧ್ಯಕ್ಷೆ ಮುನಿರತ್ನಮ್ಮ ಮುನಿರಾಜು, ಸುಷ್ಮಾ ರಾಜಗೋಪಾಲರೆಡ್ಡಿ ಹಾಗೂ ಚಂಚಲ ಚಂದ್ರು ಇದ್ದಾರೆ

ಪ್ರತಿಷ್ಠಾನ ಮಲ್ಲೇಶ್ವರದ ದಕ್ಷಿಣ ಮುಖ ನಂದಿ ತೀರ್ಥ ಕಲ್ಯಾಣಿ ದೇವಸ್ಥಾನದ ಆವರಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಭಾರತ ವಿಕಾಸ ಪ್ರತಿಷ್ಠಾನವನ್ನು ಉದ್ಘಾಟಿಸಲಾಯಿತು. ಕಾಡುಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಮ್, ಇತಿಹಾಸ ಸಂಶೋಧಕ ಕೆಂಗೇರಿ ಚಕ್ರಪಾಣಿ, ಟಿ.ಎಸ್.ಗೋಪಾಲ್ ಮತ್ತು ಪತ್ರಕರ್ತ ಸತ್ಯನಾರಾಯಣ ನಾಡಿಗ್, ಮಲ್ಲಿಕಾರ್ಜುನ್, ರಮೇಶ್ ಮತ್ತು ಶಬರೀಶ್, ಪತ್ರಕರ್ತ ಶ್ರೀವತ್ಸ ನಾಡಿಗ್ ಹಾಗೂ ಇತರರು ಇದ್ದಾರೆ.

ತರಬೇತಿ ಶಾಲೆಗಳಿಂದಲೇ ಎಲ್‌ಎಲ್‌ಆರ್: ಆಗ್ರಹ

ಬೆಂಗಳೂರು: 'ಕಲಿಕಾ ಪರವಾನಗಿಯನ್ನು (ಎಲ್.ಎಲ್.ಆರ್) ವಾಹನ ಚಾಲನಾ ತರಬೇತಿ ಶಾಲೆಗಳಿಂದಲೇ ನೇರವಾಗಿ ಪಡೆಯಲು ಸರ್ಕಾರ ಅವಕಾಶ ಕಲ್ಪಿಸಬೇಕು ಹಾಗೂ ಶಾಲೆಗಳಿಗೆ ಏಕರೂಪದ ದರ ನಿಗದಿ ಮಾಡಬೇಕು' ಎಂದು ರಾಜ್ಯ ಮೋಟಾರ್ ವಾಹನ ಚಾಲನಾ ತರಬೇತಿ ಶಾಲೆಗಳ ಮಾಲೀಕರ ಒಕ್ಕೂಟ ಆಗ್ರಹಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಆನಂದ್ ಪಾಟೀಲ, 'ಚಾಲಕರು ಪರವಾನಗಿ ಪಡೆಯಲು ಆನ್‌ಲೈನ್ ಅರ್ಜಿ ಸಲ್ಲಿಕೆ, ಪರವಾನಗಿ ಸಂಬಂಧಿಸಿದ ಎಲ್ಲ ವಿಧಾನಗಳನ್ನು ಪೂರೈಸಲು ತರಬೇತಿ ಶಾಲೆಗಳಿಗೆ ಲಾಗಿನ್ ಐಡಿ ನೀಡಬೇಕು' ಎಂದರು.

'ಪರವಾನಗಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆ ಸ್ವಾಗತಾರ್ಹ. ಆದರೆ ಕೆಲವರು ಸುಲಭವಾಗಿ ಎಲ್.ಎಲ್.ಆರ್ ಪಡೆದುಕೊಂಡು, ಅಜಾಗರೂಕವಾಗಿ ವಾಹನ ಚಾಲನೆ ಮಾಡುತ್ತಿದ್ದಾರೆ. ಇದು ಅಪಘಾತಗಳು ಹೆಚ್ಚಾಗಲು ಕಾರಣವಾಗಿದೆ' ಎಂದರು.

'ತರಬೇತಿ ಶಾಲೆಯ ಮುಖ್ಯಸ್ಥರಿಗೆ ಅಭ್ಯರ್ಥಿಗಳ ದಾಖಲಾತಿ ಪರಿಶೀಲಿಸುವ ಹಾಗೂ ಕಲಿಕಾ ಪರವಾನಗಿ ಪಡೆಯಲು ಬರುವ ಅಭ್ಯರ್ಥಿಗಳ ಆರೋಗ್ಯ ಸ್ಥಿತಿ ಪರಿಶೀಲಿಸುವ ಅವಕಾಶ ನೀಡಬೇಕು. ಆನ್‌ಲೈನ್ ಜ್ಞಾನವಿಲ್ಲದವರಿಗೆ ಹಾಗೂ ಅಂಗವಿಕಲರಿಗೆ ರಸ್ತೆ ಸುರಕ್ಷಾ ನಿಯಮಗಳನ್ನು ಬೋಧಿಸಿ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ಬೆಳಗಾವಿ ಸೇರಿ 21 ಕಡೆ ಹೊಸ ಸೈನಿಕ ಶಾಲೆ

ನವದೆಹಲಿ(ಪಿಟಿಐ): ರಾಜ್ಯದ ಬೆಳಗಾವಿ ಸೇರಿದಂತೆ 21 ಕಡೆ ಹೊಸ ಸೈನಿಕ ಶಾಲೆಗಳನ್ನು ಆರಂಭಿಸಲು ರಕ್ಷಣಾ ಸಚಿವಾಲಯ ಶನಿವಾರ ಅನುಮೋದನೆ ನೀಡಿದೆ.

ಸ್ವಯಂ ಸೇವಾ ಸಂಸ್ಥೆಗಳು, ಖಾಸಗಿ ಶಾಲೆಗಳು ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ದೇಶದಾದ್ಯಂತ 100 ಹೊಸ ಸೈನಿಕ ಶಾಲೆಗಳನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರ ಘೋಷಿಸಿತ್ತು. ಇದರ ಅಂಗವಾಗಿ 21 ಶಾಲೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲಾಗಿದೆ.

ಅಕ್ರಮ: ಶರಣಾದ ತಂದೆ–ಮಗ

ಬೆಂಗಳೂರು: ಶ್ರೀವಸಿಷ್ಠ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಪ್ರಕರಣ ಸಂಬಂಧ, ಆರೋಪಿಗಳಾದ ಅಧ್ಯಕ್ಷ ಕೆ.ಎನ್. ವೆಂಕಟನಾರಾಯಣ ಹಾಗೂ ಅವರ ಮಗನಾದ ನಿರ್ದೇಶಕ ಕೆ.ವಿ. ಕೃಷ್ಣಪ್ರಸಾದ್ ನಗರದ ನ್ಯಾಯಾಲಯಕ್ಕೆ ಶರಣಾಗಿದ್ದಾರೆ.

ಹೆಚ್ಚಿನ ಬಡ್ಡಿ ಆಮಿಷವೊಡ್ಡಿ ಠೇವಣಿದಾರರಿಂದ ಹಣ ಸಂಗ್ರಹಿಸಿ ವಂಚಿಸಿದ್ದ ಆರೋಪದಡಿ ಹನುಮಂತನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಂಧನದಿಂದ ಪಾರಾಗಲು ಆರೋಪಿಗಳು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ಸಹ ನ್ಯಾಯಾಲಯದಲ್ಲಿ ತಿರಸ್ಕೃತಗೊಂಡಿತ್ತು.

ತನಿಖಾಧಿಕಾರಿ ಎದುರು ಹಾಜರಾಗಿದ್ದ ತಂದೆ–ಮಗ, ಹೇಳಿಕೆ ದಾಖಲಿಸಿದ್ದರು. ತನಿಖೆಗೆ ಸಹಕರಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದರು. ಇದೀಗ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ತಮ್ಮ ವಕೀಲರ ಸಮ್ಮುಖದಲ್ಲಿ ವೆಂಕಟನಾರಾಯಣ, ಕೃಷ್ಣಪ್ರಸಾದ್ ಮಾರ್ಚ್ 24 ಶರಣಾದರು. ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇಲ್: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:– 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ/590/2021–22/ದಿನಾಂಕ: 24–03–2022

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಹಾಗೂ ತಿದ್ದುಪಡಿ ಪ್ರಕಟಣೆ

ಉಲ್ಲೇಖ: 1) ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 11/2021–22/279/ದಿ: 18–02–2022. 2) ಈ ಕಛೇರಿ 1ನೇ ಅಲ್ಪಾವಧಿ ಮುಂದೂಡಿಕೆ ಟೆಂಡರ್ ಪ್ರಕಟಣೆ ಸಂಖ್ಯೆ: 11/21–22/355/ದಿ:25–02–22.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 05 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–3&4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 03ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಕಾಮಗಾರಿಗಳ ಟೆಂಡರ್‌ಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಿ ತಿದ್ದುಪಡಿ ಮಾಡಲಾಗಿರುತ್ತದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 108.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ.95.80 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ಮೂಲಕ www.eproc.karnataka.gov.in ದಿನಾಂಕ: 05/04/2022 ರಿಂದ 19/04/2022 ರವರೆಗೆ ಪಡೆಯಬಹುದು (Download), ಪ್ರೀ ಬಿಡ್ ಸಭೆಯ ದಿನಾಂಕ: 13/04/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:20/04/2022ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಜಿಮ್: ಕುಸಿದು ಬಿದ್ದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದ ವೇಳೆ ದಿಢೀರ್ ಕುಸಿದು ಬಿದ್ದು ವಿನಯಾ ಕುಮಾರಿ (44) ಎಂಬುವವರು ಮೃತಪಟ್ಟಿದ್ದು, ಈ ಸಂಬಂಧ ಬೈಯಪ್ಪನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೃತ ವಿನಯಾಕುಮಾರಿ, ಅವಿವಾಹಿತೆ. ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಮಲ್ಲೇಶಪಾಳ್ಯದಲ್ಲಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು. 'ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿದ್ದ ಮಹಿಳೆ, ಮನೆ ಬಳಿಯ ಜಿಮ್‌ನಲ್ಲಿ ನಿತ್ಯವೂ ಕಸರತ್ತು ನಡೆಸುತ್ತಿದ್ದರು. ಶನಿವಾರವೂ ಬೆಳಿಗ್ಗೆ ಜಿಮ್‌ಗೆ ಹೋಗಿದ್ದರು. ಕಸರತ್ತು ನಡೆಸುತ್ತಿದ್ದ ವೇಳೆಯಲ್ಲೇ ದಿಢೀರ್ ಕುಸಿದು ಬಿದ್ದಿದ್ದರು. ಪ್ರಜ್ಞೆ ಕಳೆದುಕೊಂಡಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, ಮಹಿಳೆ ಮೃತಪಟ್ಟಿರುವುದಾಗಿ ಹೇಳಿದರು' ಎಂದರು.

ತಲೆಗೆ ಪೆಟ್ಟು: 'ಕಸರತ್ತು ನಡೆಸುತ್ತಿದ್ದ ವೇಳೆ ಅವರು ತಲೆ ಸುತ್ತಿ ಬಿದ್ದಿದ್ದರು. ಇದರಿಂದಾಗಿ ತಲೆಗೆ ತೀವ್ರ ಪೆಟ್ಟು ಬಿದ್ದು, ಅವರು ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮಹಿಳೆ ಕುಸಿದು ಬಿದ್ದಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದೂ ತಿಳಿಸಿದರು.

ಕೊಂಡ ಹಾಯುವಾಗ ಆಯತಪ್ಪಿ ಬಿದ್ದ ಅರ್ಚಕ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಸುಳ್ಳೇರಿ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ ಕೊಂಡ ಹಾಯುವಾಗ ಅರ್ಚಕರೊಬ್ಬರು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಗ್ರಾಮದೇವತೆ ಪಟ್ಟಲದಮ್ಮ ದೇವಿಯ ಕೊಂಡಮಹೋತ್ಸವದಲ್ಲಿ ಅರ್ಚಕ ರಾಜು ಕಳಸ ಹೊತ್ತು ಕೊಂಡವನ್ನು ಹಾಯುತ್ತಿದ್ದರು. ಈ ವೇಳೆ ಅವರು ಆಕಸ್ಮಿಕವಾಗಿ ಆಯತಪ್ಪಿ ಕೊಂಡಕ್ಕೆ ಬಿದ್ದರು. ನಂತರ ಸಾವರಿಸಿಕೊಂಡು ಮೇಲೆದ್ದು ಬಂದರು. ಗಾಯಗೊಂಡ ಅವರನ್ನು ಇಲ್ಲಿಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ.

ಪ್ರತ್ಯೇಕ ಪ್ರಕರಣ: ಪತಿಯಂದಿರನ್ನು ಬಂಧಿಸಿದ ಪೊಲೀಸರು

ಕೌಟುಂಬಿಕ ಕಲಹ: ಮಹಿಳೆಯರಿಬ್ಬರ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರ ಹಾಗೂ ಬ್ಯಾಡರಹಳ್ಳಿ ಠಾಣೆಗಳ ವ್ಯಾಪ್ತಿಯಲ್ಲಿ ಇಬ್ಬರು ಮಹಿಳೆಯರ ಕೊಲೆ ನಡೆದಿದ್ದು, ಈ ಸಂಬಂಧ ಅವರ ಪತಿಯಂದಿರನ್ನು ಪೊಲೀಸರು ಬಂಧಿಸಿದ್ದಾರೆ.

'ಬಿ. ಚನ್ನಸಂದ್ರದಲ್ಲಿ ಕಮಲಾದೇವಿ (45) ಹಾಗೂ ಮುನೇಶ್ವರನಗರದಲ್ಲಿ ಸೌಮ್ಯಾ (25) ಎಂಬುವರ ಕೊಲೆ ಆಗಿದೆ. ಈ ಸಂಬಂಧ ತೇಜ್ ಬಹದ್ದೂರ್ ಜಪ್ರೇಲ್ (52) ಹಾಗೂ ಯೋಗೀಶ್ (28) ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನೇಪಾಳದಿಂದ ಬಂದು ವಾಸ: 'ನೇಪಾಳದ ಕಮಲಾದೇವಿ, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಬಿ. ಚನ್ನಸಂದ್ರದಲ್ಲಿ ನೆಲೆಸಿದ್ದರು. ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಪತಿ ತೇಜ್ ಬಹದ್ದೂರ್ ಅವರೇ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ಕಮಲಾದೇವಿ ಹಾಗೂ ತೇಜ್ ಬಹದ್ದೂರ್, 20 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಇಬ್ಬರು ಹೆಣ್ಣು ಮಕ್ಕಳ ಜೊತೆ ತೇಜ್ ಬಹದ್ದೂರ್, ನೇಪಾಳದಲ್ಲೇ ನೆಲೆಸಿದ್ದರು. ಕಮಲಾದೇವಿ, ಗಂಡು ಮಗನ ಜೊತೆ ಬೆಂಗಳೂರಿನಲ್ಲಿ ವಾಸವಿದ್ದರು. ಮಗ ಅಂಗಡಿಯೊಂದರಲ್ಲಿ ಕೆಲಸಕ್ಕೆ ಹೋಗುತ್ತಿದ್ದ' ಎಂದೂ ಹೇಳಿದರು.

'ನಾಲ್ಕು ದಿನಗಳ ಹಿಂದಷ್ಟೇ ನಗರಕ್ಕೆ ಬಂದಿದ್ದ ತೇಜ್ ಬಹದ್ದೂರ್, ನಿತ್ಯವೂ ಪತ್ನಿ ಜೊತೆ ಜಗಳ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ಜಗಳ ವಿಕೋಪಕ್ಕೆ ಹೋಗಿತ್ತು. ಅವಾಗಲೇ ಆರೋಪಿ, ಪತಿಯನ್ನು ಕೊಂದ' ಎಂದೂ ತಿಳಿಸಿದರು.

ವರದಕ್ಷಿಣೆ ತರದಿದ್ದಕ್ಕೆ ಕೊಲೆ: 'ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಮುನೇಶ್ವರ ನಗರದಲ್ಲಿ ಸೌಮ್ಯಾ ಕೊಲೆ ಆಗಿದ್ದು, ಪತಿ ಯೋಗೀಶ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಸೌಮ್ಯಾ ಹಾಗೂ ಯೋಗೀಶ್, ಪರಸ್ಪರ ಪ್ರೀತಿಸಿ ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದರು. ವರದಕ್ಷಿಣೆಗಾಗಿ ಪತ್ನಿಗೆ ಕಿರುಕುಳ ನೀಡುತ್ತಿದ್ದರು. ಶುಕ್ರವಾರ ಸಂಜೆ ಜಗಳ ತೆಗೆದಿದ್ದ ಆರೋಪಿ, ಸೌಮ್ಯಾ ಅವರ ಕುತ್ತಿಗೆಗೆ ವೇಲ್‌ನಿಂದ ಬಿಗಿದು ಕೊಲೆ ಮಾಡಿದ್ದರು' ಎಂದೂ ತಿಳಿಸಿದರು.

ರೌಡಿ ಆತ್ಮಹತ್ಯೆ

ಬೆಂಗಳೂರು: ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ನವೀನ್ ಅಲಿಯಾಸ್ ವಿಲಿಯಂ (32) ಎಂಬಾತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

'ಅಶೋಕನಗರ ಠಾಣೆ ರೌಡಿ ಪಟ್ಟಿಯಲ್ಲಿ ನವೀನ್ ಹೆಸರಿತ್ತು. ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಕೊಠಡಿಯಲ್ಲಿ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ. ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದರು.

ಅಪರಾಧ ಸುದ್ದಿ

ಕೆಲಸದಿಂದ ತೆಗೆದಿದ್ದಕ್ಕೆ ವ್ಯವಸ್ಥಾಪಕನ ಕೊಲೆಗೆ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕ ರಾಜಶೇಖರ್ ಅವರ ಕೊಲೆಗೆ ಯತ್ನಿಸಿದ್ದ ಆರೋಪದಡಿ ಡಿ. ಮಧು (30) ಎಂಬುವವರನ್ನು ಬಾಗಲೂರು ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಸಾದಹಳ್ಳಿಯ ಮಧು, ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದರು. ರಾಜಶೇಖರ್ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜರಾಜೇಶ್ವರಿನಗರದ ರಾಜಶೇಖರ್, ಮಾರ್ಚ್ 8ರಂದು ಕೆಲಸ ಮುಗಿಸಿ ಕಾರಿನಲ್ಲಿ ಮನೆಗೆ ಹೊರಟಿದ್ದರು. ಬಿ.ಕೆ. ಪಾಳ್ಯದಲ್ಲಿ ಕಾರು ಅಡ್ಡಗಟ್ಟಿದ್ದ ಆರೋಪಿಗಳು, ಮಾರಕಾಸ್ತ್ರ ಹಿಡಿದು ಹಲ್ಲೆಗೆ ಯತ್ನಿಸಿದ್ದರು. ಕಾರಿನ ಗಾಜು ಹೊಡೆದಿದ್ದರು. ರಾಜಶೇಖರ್, ಅಲ್ಲಿಂದ ತಪ್ಪಿಸಿಕೊಂಡಿದ್ದರು' ಎಂದೂ ಅವರು ತಿಳಿಸಿದರು.

'ರಾಜಶೇಖರ್ ಅವರ ಕಂಪನಿಯಲ್ಲಿ ಆರೋಪಿ ಮಧು ಕೆಲಸ ಮಾಡುತ್ತಿದ್ದರು. ಕೆಲ ದಿನಗಳ ಹಿಂದಷ್ಟೇ ಅವರನ್ನು ಕೆಲಸದಿಂದ ತೆಗೆಯಲಾಗಿತ್ತು. ಇದರಿಂದ ಸಿಟ್ಟಾಗಿದ್ದ ಮಧು, ರಾಜಶೇಖರ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು. ಇದಕ್ಕೆ ಆರೋಪಿಗಳಾದ ಪ್ರಮೋದ್, ಡಿ. ಅಲೆಕ್ಸಾಂಡರ್, ಟಿ. ಚಿನ್ನರಾಜು ಹಾಗೂ ಇಮ್ರಾನ್ ಪಾಷಾ ಎಂಬುವರ ಸಹಾಯ ಪಡೆದಿದ್ದರು. ಅವರೆಲ್ಲ ಸದ್ಯ ತಲೆಮರೆಸಿಕೊಂಡಿದ್ದಾರೆ' ಎಂದೂ ಹೇಳಿದರು.

ಅಗತ್ಯ ಔಷಧ: ಏಪ್ರಿಲ್‌ನಿಂದ ಶೇ 10 ರಷ್ಟು ದರ ಹೆಚ್ಚಳ

ಒಂದನೇ ಪುಟದಿಂದ

'ಇದು ಅಗತ್ಯ ಔಷಧಗಳ ಗರಿಷ್ಠ ಏರಿಕೆಯಾಗಿದೆ. ಈ ಹೆಚ್ಚಳದಿಂದ ರೋಗಿಗಳು ಸಂಕಷ್ಟ ಅನುಭವಿಸಬೇಕಾಗುತ್ತದೆ' ಎಂದು ಬೆಂಗಳೂರಿನ ಔಷಧ ಮಾರಾಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ.

'ಇದೇ ಮೊದಲ ಬಾರಿಗೆ ಶೇ 10 ರಷ್ಟು ನಾನ್ ಶೆಡ್ಯೂಲ್ ಔಷಧಗಳ ದರ ಹೆಚ್ಚಿಸಲಾಗುತ್ತಿದೆ. 2021ರಲ್ಲಿ ಕೇವಲ ಶೇ 0.53 ರಷ್ಟು ದರ ಹೆಚ್ಚಿಸಲಾಗಿತ್ತು. 2020ರಲ್ಲಿ ಶೇ 1.88 ರಷ್ಟು ಏರಿಕೆ ಮಾಡಲಾಗಿತ್ತು' ಎಂದು ಕರ್ನಾಟಕ ಔಷಧ ಉತ್ಪಾದಕರ ಸಂಸ್ಥೆ (ಕೆಡಿಪಿಎಂಎ) ಅಧ್ಯಕ್ಷ ಹರೀಶ್ ಜೈನ್ ತಿಳಿಸಿದರು.

ನಗರದಲ್ಲಿ ಇಂದು

ಅಂಗವಿಕಲ ಮಕ್ಕಳಿಗೆ ಅಶ್ವಚಿಕಿತ್ಸೆ: ಆಯೋಜನೆ–ಹೀಲಿಂಗ್ ಹಾರ್ಸಸ್, ಸ್ಥಳ–ಎಆರ್‌ಪಿಎ, ಎಎಸ್‌ಸಿ ಸೆಂಟರ್ ಮತ್ತು ಕಾಲೇಜು, ಕಮಾಂಡ್ ಆಸ್ಪತ್ರೆ ಎದುರು, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 9

ಉಚಿತ ಸಾಮೂಹಿಕ ವಿವಾಹ: ಸಾನ್ನಿಧ್ಯ–ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸ್ವಾಮಿ ಮಧುಸೂದನಾನಂದ ಪುರಿ, ಅಧ್ಯಕ್ಷತೆ–ಸಚಿವ ಆರ್.ಅಶೋಕ, ಉದ್ಘಾಟನೆ–ಶಶಿಕಲಾ ಜೊಲ್ಲೆ, ತೇಜಸ್ವಿ ಸೂರ್ಯ, ಪ್ರಮಾಣ ಪತ್ರ ವಿತರಣೆ–ರಾಮಲಿಂಗಾರೆಡ್ಡಿ, ಆಯೋಜನೆ–ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ–ಬನಶಂಕರಿ ದೇವಸ್ಥಾನದ ಆವರಣ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 9

ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಲ್ಯಾಪ್‌ಟಾಪ್ ವಿತರಣೆ: ಸಚಿವ ಕೋಟ ಶ್ರೀನಿವಾಸ ಪೂಜಾರಿ, ಅತಿಥಿಗಳು–ಸಚಿವ ಬಿ.ಶ್ರೀರಾಮುಲು, ಪ್ರತಾಪ್ ಸಿಂಹ ನಾಯಕ್, ಪಿ.ಎಸ್.ಹರ್ಷ, ಅಧ್ಯಕ್ಷತೆ–ಸದಾನಂದ ಶೆಣೈ, ಸ್ಥಳ–ಪ್ರೆಸ್‌ಕ್ಲಬ್, ಬೆಳಿಗ್ಗೆ 9.30

ಬಬ್ಬೂರುಕಮ್ಮೆ ಸೇವಾ ಸಮಿತಿ ವಾರ್ಷಿಕ ಬಳಗಕೂಟ: ಅತಿಥಿಗಳು–ಸಚಿವ ಬಿ.ಸಿ. ನಾಗೇಶ್, ಟಿ.ವಿ.ವೆಂಕಟಾಚಲಶಾಸ್ತ್ರಿ, ಅಧ್ಯಕ್ಷತೆ–ಎ.ವಿ.ಪ್ರಸನ್ನ, ಸ್ಥಳ–ಸಮಿತಿ ಸಭಾಂಗಣ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

ಹೊನಲು: ವಾರ್ಷಿಕೋತ್ಸವ ಮತ್ತು ಈ ಹೊತ್ತಿಗೆ ಪ್ರಶಸ್ತಿ ಪ್ರದಾನ, ಉದ್ಘಾಟನೆ (ಬೆಳಿಗ್ಗೆ 10)–ಜಯಶ್ರೀ ದೇಶಪಾಂಡೆ, ಚಂಪಾ ಅವರು ಬರೆದ ನಾಟಕದ ಓದು–ಜಿ.ಪ್ರವೀಣ ಕುಮಾರ್, ಜಯಲಕ್ಷ್ಮಿ ಪಾಟೀಲ್, ಮಧ್ಯಾಹ್ನ 12.10ಕ್ಕೆ ಪ್ರಶಸ್ತಿ ಪ್ರದಾನ, ಅತಿಥಿಗಳು–ಎಚ್.ಎಲ್.ಪುಷ್ಪ, ಎನ್.ಸಂಧ್ಯಾರಾಣಿ, ಶ್ರೀಕಾಂತ ಉಡುಪ, ಆಯೋಜನೆ–ಈ ಹೊತ್ತಿಗೆ ಟ್ರಸ್ಟ್, ಸ್ಥಳ–ಕಪ್ಪಣ್ಣ ಅಂಗಳ, ಐಟಿಐ ಕಾಲೊನಿ, ಜೆ.ಪಿ. ನಗರ 1ನೇ ಹಂತ

ಪುಸ್ತಕಗಳ ಬಿಡುಗಡೆ: ಸತ್ಯಮಂಗಲ ಮಹಾದೇವ, ಉದ್ಘಾಟನೆ–ಹನುಮಂತಯ್ಯ, ಅತಿಥಿ–ಪ್ರೇಮ ಸಿದ್ಧರಾಜು, ಅಧ್ಯಕ್ಷತೆ–ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ–ಚಂದನ ಪುಸ್ತಕ ಮಾಲೆ ಪ್ರಕಾಶನ, ಸ್ಥಳ–ದತ್ತಿ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 10.30

ನಟ ಪುನೀತ್ ರಾಜ್‌ಕುಮಾರ್ ಪುತ್ಥಳಿ ಲೋಕಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಅತಿಥಿಗಳು–ಸಂಸದ ಪಿ.ಸಿ.ಮೋಹನ್, ನಟ ಶಿವರಾಜ್‌ಕುಮಾರ್, ರಾಘವೇಂದ್ರ ರಾಜಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ರಾಕೇಶ್ ಸಿಂಗ್, ಗೌರವ್ ಗುಪ್ತ, ಎನ್.ಮಂಜುನಾಥ್ ಪ್ರಸಾದ್, ಮನೋಜ್ ಜೈನ್, ಜೆ.ಮಂಜುನಾಥ್, ಆಯೋಜನೆ–ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ, ಸ್ಥಳ–ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಸಂಜೆ 5.30

ಪುನೀತ್ ರಾಜ್‌ಕುಮಾರ್

'40% ಕಮಿಷನ್: ಯಾರಿಗೂ ಆಘಾತ ತರದ ಭಾರಿ ಹಗರಣ–ಕರ್ನಾಟಕಕ್ಕೇನು ಕಾದಿದೆ?'

ಸಂವಾದ: ಭಾಗವಹಿಸುವವರು–ಟಿ.ಆರ್. ರಘುನಂದನ್, ಡಿ.ಕೆಂಪಣ್ಣ, ಅಧ್ಯಕ್ಷತೆ–ಆರ್.ಆಂಜನೇಯ ರೆಡ್ಡಿ, ಆಯೋಜನೆ–ಜಾಗೃತ ಕರ್ನಾಟಕ, ಸ್ಥಳ–ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರ್ ಟೆಕ್ನಾಲಜಿಸ್ಟ್ಸ್ (ಐಎಟಿ), ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ಹನುಮದ್ವಿಲಾಸ ವಾಚನ: ಶೋಭಾ ಶಶಿಧರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಚಿತ್ರಸಂತೆ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಲಾಪ್ರದರ್ಶನ ಉದ್ಘಾಟನೆ–ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು–ಪ್ರೊ.ರತನ್ ಪರಿಮು, ಎಸ್.ಟಿ.ಸೋಮಶೇಖರ್, ಪಿ.ಸಿ.ಮೋಹನ್, ರಿಜ್ವಾನ್ ಅರ್ಷದ್, ಅಧ್ಯಕ್ಷತೆ–ಬಿ.ಎಲ್. ಶಂಕರ್, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು ಆವರಣ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಮೇಕಿಂಗ್ ಆಫ್ 'ದಿ ಕಾಶ್ಮೀರ್ ಫೈಲ್ಸ್' ವಿಮರ್ಶೆ ಮತ್ತು ಸಂವಾದ: ಅತಿಥಿಗಳು–ಪ್ರಕಾಶ್ ಬೆಳವಾಡಿ, ಜಿ.ಬಿ. ಹರೀಶ್, ರೋಹಿತ್ ಚಕ್ರತೀರ್ಥ, ಆಯೋಜನೆ–ಮಂಥನ, ಸ್ಥಳ–ಮಿಥಿಕ್ ಸೊಸೈಟಿ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಚನ್ನಕೇಶವ ಅವರ ಪುಸ್ತಕಗಳ ಬಿಡುಗಡೆ: ಅತಿಥಿಗಳು–ರಘುನಂದನ, ನಟರಾಜ್ ಹುಳಿಯಾರ್, ವಿವೇಕ್ ಶಾನಭಾಗ್, ಮೀರಾ ಚಕ್ರವರ್ತಿ, ವಿಶಾಲಾ ವಾರಣಾಶಿ, ಗಿರಿಜಾ ಸಿದ್ದಿ, ಸತೀಶ್ ನೀನಾಸಂ, ಆಯೋಜನೆ–ಥಿಯೇಟರ್ ತತ್ಕಾಲ್ ಬುಕ್ಸ್ ಮತ್ತು ಲೋಕಚರಿತ, ಸ್ಥಳ–ನಾಣಿ ಅಂಗಳ, ಸುಚಿತ್ರ ಆವರಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

ಯುಗಾದಿ ವಿಶೇಷ ಸಂತೆ: ಆಯೋಜನೆ ಮತ್ತು ಸ್ಥಳ–ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ

ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4ರಿಂದ

ಮಹಾಲಕ್ಷ್ಮೀಪುರ ಬ್ರಾಹ್ಮಣ ಸಭಾ ವಾರ್ಷಿಕೋತ್ಸವ ಹಾಗೂ ಕುಬೇರ ಲಕ್ಷ್ಮೀ ಮಂತ್ರ ಜಪ, ಮಹಾಯಾಗ: ಸನ್ಮಾನಿತರು–ಅಶೋಕ ಹಾರನಹಳ್ಳಿ, ಅತಿಥಿಗಳು–ಕೆ.ಗೋಪಾಲಯ್ಯ, ಸಿ.ಎನ್.ಅಶ್ವತ್ಥನಾರಾಯಣ, ಸಚ್ಚಿದಾನಂದಮೂರ್ತಿ, ಹೇಮಲತಾ ಗೋಪಾಲಯ್ಯ, ಸ್ಥಳ–ಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನ, ಮಹಾಲಕ್ಷ್ಮೀ ಬಡಾವಣೆ, ಬೆಳಿಗ್ಗೆ 11ರಿಂದ

ಪುಟ್ಟರಾಜ ಗವಾಯಿ ಅವರ ಪುಣ್ಯಸ್ಮರಣೆ ಹಾಗೂ ಸಂಗೀತೋತ್ಸವ: ಉದ್ಘಾಟನೆ–ಗುರುರಾಜ, ಪ್ರಶಸ್ತಿ ಪ್ರದಾನ–ಗೀತಾರಾಮನುಜಂ, ಪುರಸ್ಕೃತರು–ಸತೀಶ್ ಹಂಪಿಹೊಳಿ, ಅತಿಥಿ–ವಿಜಯ ಕಿರೇಸೂರ, ಆಯೋಜನೆ–ಸಂಗೀತ ಸ್ವರ ಸಂಸ್ಕಾರ ಸೇವಾ ಟ್ರಸ್ಟ್, ಸ್ಥಳ–ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ವಿಜಯನಗರ, ಮಧ್ಯಾಹ್ನ 12

ವಿಶ್ವ ರಂಗಭೂಮಿ ದಿನಾಚರಣೆ ಹಾಗೂ ಪರಂಪರಾ ರಂಗಪುರಸ್ಕಾರ (ಮಧ್ಯಾಹ್ನ 3.30): ಚಾಲನೆ–ರಾಮಲಿಂಗಾರೆಡ್ಡಿ, ಅಧ್ಯಕ್ಷತೆ–ಎಂ.ಮುನಿರಾಜು, ಸಂಜೆ 6ಕ್ಕೆ 'ಏಗ್ದಾಗೆಲ್ಲಾ ಐತೆ' ನಾಟಕ ಪ್ರದರ್ಶನ, ಆಯೋಜನೆ–ಪರಂಪರಾ, ಸ್ಥಳ–ನಯನ ಸಭಾಂಗಣ

ವಿಶ್ವ ರಂಗಭೂಮಿ ದಿನ: ರಂಗಭೂಮಿ ಮತ್ತು ಚಲನಶೀಲತೆ–ಒಂದು ಅವಲೋಕನ' ಚರ್ಚೆ, ಉದ್ಘಾಟನೆ–ಜಿ.ಎನ್.ಮೋಹನ್, ಅಧ್ಯಕ್ಷತೆ–ಜೆ.ಲೋಕೇಶ್, ಎಸ್.ಜಿ.ಸಿದ್ಧರಾಮಯ್ಯ, ಚರ್ಚೆ–ಸಿ.ಕೆ.ಗುಂಡಣ್ಣ, ಅತಿಥಿಗಳು–ಪ್ರಕಾಶ್ ಜಿ.ಟಿ.ನಿಟ್ಟಾಲಿ, ಪ್ರಕಾಶ್ ಮತ್ತಿಹಳ್ಳಿ, ನಾಟಕ ಪ್ರದರ್ಶನ–ಬಸ್ ಕಂಡಕ್ಟರ್, ಆಯೋಜನೆ–ರಂಗಭೂಮಿ ಕ್ರಿಯಾ ಸಮಿತಿ, ಬಸವ ಇಂಟರ್‌ನ್ಯಾಷನಲ್ ಫೌಂಡೇಷನ್, ಸ್ಥಳ–ಕಲಾಗ್ರಾಮ, ಬಯಲು ರಂಗಮಂದಿರ, ಸಂಜೆ 4

ಸ್ಪಂದನ: ನಿಧಿ ಸಮರ್ಪಣಾ ಕಾರ್ಯಕ್ರಮ:ಉದ್ಘಾಟನೆ–ರಮೇಶ್ ಭಟ್, ಸಾನ್ನಿಧ್ಯ–ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರ ಕೃಷ್ಣ ಬ್ಯಾಂಡ್ ತಂಡದಿಂದ ಸಂಗೀತ ಕಾರ್ಯಕ್ರಮ, ಆಯೋಜನೆ–ನೋಬಲ್ ಹಾರ್ಟ್ಸ್, ಸ್ಥಳ–ಕುವೆಂಪು ಕಲಾಕ್ಷೇತ್ರ, ಕಿಮ್ಸ್ ಆವರಣ, ಸಂಜೆ 4

ಎಂ.ಎಚ್.ಕೃಷ್ಣಯ್ಯ ಅವರ 'ಗ್ರಹಿಕೆ ಮತ್ತು ಪ್ರಜ್ಞೆ' ಪುಸ್ತಕ ಬಿಡುಗಡೆ: ಎಸ್. ಜಿ.ವಾಸುದೇವ್, ಅತಿಥಿ–ಡಿ.ಮಹೇಂದ್ರ, ಆಯೋಜನೆ–ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ–ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಸಂಜೆ 4

'ಪಲ್ಲವಿ ಸಮ್ಮೇಳ' ಸಂಗೀತ ಕಛೇರಿಗಳು: ಆಯೋಜನೆ ಮತ್ತು ಸ್ಥಳ–ಶ್ರೀರಾಮ ಲಲಿತಕಲಾ ಮಂದಿರ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9ರಿಂದ ಸಂಜೆ 4.45

ಒನಕೆ ಓಬವ್ವ ಮತ್ತು ಸ್ವಾಮಿ ವಿವೇಕಾನಂದ ಸಹೃದಯ ಸೇವಾ ಪ್ರಶಸ್ತಿಗಳ ಪ್ರದಾನ: ಉದ್ಘಾಟನೆ–ಎನ್.ಎಲ್.ನಾರಾಯಣಸ್ವಾಮಿ, ಅಧ್ಯಕ್ಷತೆ–ಸಂಧ್ಯಾರೆಡ್ಡಿ, ಪ್ರಶಸ್ತಿ ಪ್ರದಾನ–ಚಂದ್ರಶೇಖರ್ ವಿ.ಸ್ಥಾವರ್‌ಮಠ್, ಆಯೋಜನೆ–ಕರ್ನಾಟಕ ಸಹೃದಯರ ಸೇವಾ ಪ್ರತಿಷ್ಠಾನ, ಸ್ಥಳ–ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ವಿಶ್ವ ರಂಗಭೂಮಿ ದಿನ: ಉದ್ಘಾಟನೆ–ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ, ರಂಗನಮನ–ಕಲಾ ನಿರ್ದೇಶಕ ಶಶಿಧರ್ ಅಡಪ ಹಾಗೂ ರಂಗ ಸಂಘಟಕ ಸಿ.ಕೆ.ಗುಂಡಣ್ಣ, ಭಾಗವಹಿಸುವವರು–ಬಿ.ವಿ.ದತ್ತಾತ್ರೇಯ, ಮಂಜುನಾಥ್, ರಂಗಚಂದಿರ ತಂಡದಿಂದ 'ಬಿದ್ದೂರಿನ ಬಿಗ್ ಬೆನ್' ಹಾಸ್ಯ ನಾಟಕ ಪ್ರದರ್ಶನ, ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ರಂಗಚಂದಿರ ಟ್ರಸ್ಟ್ ಹಾಗೂ ಶ್ರೀರಾಂಪುರ ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ–ಬಯಲು ರಂಗಮಂದಿರ, ಟೆಲಿಕಾಂ ಬಡಾವಣೆ, ಸಂಜೆ 5

ವಿಶ್ವ ರಂಗಭೂಮಿ ದಿನ: ಅತಿಥಿ–ಆರ್. ಪಿ.ಮೋಹನ್, ಅಧ್ಯಕ್ಷತೆ–ಡಿ.ಸಂತೋಷ್ ಕುಮಾರ್, ಹೇಮಾ, ಕಮಿನಿಧರನ್, ಆಯೋಜನೆ–ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ–ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ನಾದಜ್ಯೋತಿ ಸಂಗೀತ ಸಂಭ್ರಮ: ವೀಣಾ ವಿದ್ವಾಂಸ ರಾ.ವಿಶ್ವೇಶ್ವರನ್ ಅವರಿಗೆ 'ಜೀವಮಾನ ಸಾಧನೆ ಪುರಸ್ಕಾರ', ಮೃದಂಗ ವಾದಕ ಜಿ.ವಿ.ಕೃಷ್ಣಪ್ರಸಾದ್ ಅವರಿಗೆ 'ಕಲಾಜ್ಯೋತಿ' ಪ್ರಶಸ್ತಿ ಹಾಗೂ ವಿದುಷಿ ಚಂದನಬಾಲ ಕಲ್ಯಾಣ್ ಅವರಿಗೆ 'ನಾದಜ್ಯೋತಿ ಪುರಸ್ಕಾರ' ಪ್ರದಾನ:ಅತಿಥಿಗಳು–ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಆಯೋಜನೆ–ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ–ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. B/TRD.2021-22/05
ದಿನಾಂಕ: 15.03.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ	ರೂ. 1,92,00,110.63/–

ಯಲಹಂಕದಲ್ಲಿ ಮುಂಬರುವ ಟಿಎಸ್‌ಎಸ್ ಕಾರಣ ಟ್ರಾಕ್ಷನ್ ಪವರ್ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಸುಧಾರಿಸಲು ಎಸ್‌ಪಿ ಕಟ್ಟಡ, ಸಿವಿಲ್ ಕೆಲಸಗಳು, ಸಿಗ್ನಲಿಂಗ್ ಕೆಲಸಗಳು, ಎಲೆಕ್ಟ್ರಿಕಲ್ ಟಿಆರ್‌ಡಿ ಕೆಲಸಗಳು ಮತ್ತು ಎಸ್‌ಎಸ್‌ಪಿಗಳನ್ನು ಎಸ್‌ಪಿ ಗಳನ್ನಾಗಿ ಪರಿವರ್ತಿಸುವುದು ಒಳಗೊಂಡಂತೆ ಎಂಡಬ್ಲ್ಯೂಎಂ ಎಸ್‌ಪಿ ಯ ರಚನೆ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–04–2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನೀಯರ್ ಟ್ರಾಕ್ಷನ್ ಡಿಸ್ಟ್ರಿಬ್ಯೂಷನ್ / ಬೆಂಗಳೂರು

PUB/483/AAV/PRB/SWR/2021-22

S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೆ॥ ಎ.ಟಿ.ಬಿ. ಲಾಗಿಸ್ಟಿಕ್ಸ್ ಅಂಡ್ ಇಂಡಸ್ಟ್ರೀಯಲ್ ಪಾರ್ಕ್ಸ್ ಪ್ರೈವೇಟ್ ಲಿಮಿಟೆಡ್, ನೋಂದಾಯಿತ ಕಛೇರಿ ನಂ. 237, ಎ.ಟಿ.ಬಿ. ಕಾಂಪ್ಲೆಕ್ಸ್, ಕ್ರೈಸ್ಟ್ ಅಕಾಡಮಿ ಎದುರು, ಎಸ್. ಬಿಂಗಿಪುರ, ಬೇಗೂರು–ಕೊಪ್ಪ ರಸ್ತೆ, ಬೆಂಗಳೂರು ಗ್ರಾಮಾಂತರ–560 083, ಇದರ ನಿರ್ದೇಶಕರಾದ ಶ್ರೀ ಟಿ. ಪ್ರಕಾಶ್ ರೆಡ್ಡಿ, ಇವರುಗಳು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಆನೇಕಲ್ ಗ್ರಾಮದಲ್ಲಿರುವ ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಮತ್ತು ಇನ್ನು ಮುಂದೆ ಇವುಗಳನ್ನು ಒಟ್ಟಾರೆಯಾಗಿ ಷೆಡ್ಯೂಲ್ ಸ್ವತ್ತುಗಳು ಎಂದು ಪ್ರಸ್ತಾಪಿಸಲಾಗಿರುವ ಜಮೀನುಗಳಲ್ಲಿ ವಾಣಿಜ್ಯ ಯೋಜನೆಯೊಂದನ್ನು ಅಭಿವೃದ್ಧಿ ಪಡಿಸಲು ಕೆಳಕಂಡ ಜಮೀನುಗಳ ಮಾಲೀಕರ ಜೊತೆ ವ್ಯವಹರಿಸಲು ಉದ್ದೇಶಿಸಿದ್ದಾರೆ.

ಯಾವುದೇ ವ್ಯಕ್ತಿಯು ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಕ್ರಯ, ವಿನಿಮಯ, ಬಾಡಿಗೆ, ಗುತ್ತಿಗೆ, ಪರವಾನಗಿ, ಆಧಾರ, ಪಿತ್ರಾರ್ಜಿತ, ದಾನ, ಧರಣಾಧಿಕಾರ, ಪ್ರಭಾರ, ನಿರ್ವಹಣೆ, ಅನುಭೋಗ, ಟ್ರಸ್ಟ್, ಸ್ವಾಧೀನ, ಅಡಮಾನ, ಗೇಣಿ, ನಿಯೋಜನೆ, ಋಣಭಾರ, ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯ, ಒಪ್ಪಂದ, ಸೆಟಲ್‌ಮೆಂಟ್ ಅಥವಾ ಇನ್ನಿತರೆ ಯಾವುದೇ ಸ್ವರೂಪದಲ್ಲಿ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಆಸಕ್ತಿ ಹೊಂದಿದ್ದರೆ ಈ ಪ್ರಕಟಣೆ ಪ್ರಕಟವಾದ 10 (ಹತ್ತು) ದಿನಗಳೊಳಗಾಗಿ ದಾಖಲಾತಿ ಪುರಾವೆಯೊಡನೆ ಕೆಳಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಯಾವುದೇ ವ್ಯಕ್ತಿಯು (ಜಮೀನಿನ ಮಾಲೀಕರನ್ನು ಹೊರತುಪಡಿಸಿ) ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಯಾವುದೇ ಹಕ್ಕು, ಹಕ್ಕು ಭಾಧ್ಯತೆ ಅಥವಾ ಆಸಕ್ತಿ ಹೊಂದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತುಗಳು ಋಣಭಾರ ರಹಿತವಾದವುಗಳು ಎಂಬ ಆಧಾರದ ಮೇಲೆ ನನ್ನ ಕಕ್ಷಿದಾರರು ವ್ಯವಹಾರ ನಡೆಸಲು ಮುಂದುವರೆಯುವರು.

ಷೆಡ್ಯೂಲ್

ಕ್ರ.ಸಂ.	ಸರ್ವೆ ನಂ.	ಜಮೀನಿನ ವಿಸ್ತೀರ್ಣ	ಜಮೀನಿನ ಮಾಲೀಕರು
1.	428	13 ಗುಂಟೆಗಳು	ಶ್ರೀ ಎಲ್. ಸಾಯಿರಾಮ್ ಬಿನ್ ಯಲ್ಲಾಳು ಲಕ್ಷ್ಮಯ್ಯ ವಾಸ ನಂ. 2/199, ಜನಪರ ರಸ್ತೆ, ಆನೇಕಲ್ ಟೌನ್, ಬೆಂಗಳೂರು ಜಿಲ್ಲೆ – 562 106.
2.	429	01 ಎಕರೆ 04 ಗುಂಟೆಗಳು	
3.	433/2ಎ	28 ಗುಂಟೆಗಳು	
4.	433/2ಬಿ	17 ಗುಂಟೆಗಳು	
5.	616	01 ಎಕರೆ 11 ಗುಂಟೆಗಳು	
6.	430	01 ಎಕರೆ 12 ಗುಂಟೆಗಳು	ಶ್ರೀಮತಿ ಸರಳಾವತಿ ಕೋಂ ಎಲ್. ಸತ್ಯನಾರಾಯಣ ಮತ್ತು ಶ್ರೀ ಎಲ್. ಸಾಯಿರಾಮ್ ಬಿನ್ ಯಲ್ಲಾಳು ಲಕ್ಷ್ಮಯ್ಯ, ವಾಸ ನಂ. 2/199, ಜನಪರ ರಸ್ತೆ, ಆನೇಕಲ್ ಟೌನ್, ಬೆಂಗಳೂರು ಜಿಲ್ಲೆ – 562 106.
7.	431/2ಎ	10 ಗುಂಟೆಗಳು	
8.	431/2ಬಿ	20 ಗುಂಟೆಗಳು	
9.	431/2ಸಿ	05 ಗುಂಟೆ ಖುಷ್ಕಿ ಮತ್ತು 07 ಗುಂಟೆ 'ಎ' ಖರಾಬು	
10.	465/2	24 ಗುಂಟೆಗಳು	
11.	433/1	31 ಗುಂಟೆಗಳು	ಶ್ರೀ ವಿ. ಸತೀಶ್ ಬಿನ್ ಎಸ್.ಕೆ. ವೆಂಕಟೇಶಯ್ಯ, ವಾಸ ನಂ. 86, 7ನೇ ಕ್ರಾಸ್, ಪಾಮ್ ಸ್ಪ್ರಿಂಗ್ ಲೇಔಟ್, ಗುಬ್ಬಲಾಳ ಗೇಟ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–560062

ಬೆಂಗಳೂರು
ದಿನಾಂಕ: 25–03–2022

ಶ್ರೀ ಕೆ.ಟಿ. ನಂಜುಂಡ ಗೌಡ, ವಕೀಲರು
ನಂ. 26/2, ಅವೆನ್ಯೂ ರಸ್ತೆ, ಶ್ರೀ ಕೃಷ್ಣ ಬಿಲ್ಡಿಂಗ್, ಬೆಂಗಳೂರು–560 002

ಕರ್ನಾಟಕ ಸರ್ಕಾರ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇಲ್: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:– 08152–200049

ಸಂಖ್ಯೆ: ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ/2021–22/ದಿನಾಂಕ: 19–03–2022

2ನೇ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ

ಉಲ್ಲೇಖ: 1) ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2021–22/279/ದಿ:18–02–2022. 2) ಈ ಕಛೇರಿ 1ನೇ ಅಲ್ಪಾವಧಿ ಮುಂದೂಡಿಕೆ ಟೆಂಡರ್ ಪ್ರಕಟಣೆ ಸಂಖ್ಯೆ: 12/21–22/355/ದಿ:25–02–22.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 04 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2&4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 02ನೇ ಹಾಗೂ 03ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಏಕ–ಲಕೋಟೆ ಹಾಗೂ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಕಾಮಗಾರಿಗಳಲ್ಲಿ ಕ್ರಮ ಸಂಖ್ಯೆ (3)ರ ಕಾಮಗಾರಿಯನ್ನು ತಾಂತ್ರಿಕ ಕಾರಣಗಳಿಂದ ಅನಿರ್ಧಿಷ್ಠ ಅವಧಿಗೆ ಮುಂದೂಡಲಾಗಿದೆ. ಉಳಿದಂತೆ ಕ್ರಮ ಸಂ 01, 02 ಮತ್ತು 04ರ ಕಾಮಗಾರಿಗಳ ಟೆಂಡರ್ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿರುತ್ತದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ.155.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ.40.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ಮೂಲಕ www.eproc.karnataka.gov.in ದಿನಾಂಕ:01/04/2022 ರಿಂದ 16/04/2022 ರವರೆಗೆ ಪಡೆಯಬಹುದು (Download), ಪ್ರೀ ಬಿಡ್ ಸಭೆಯ ದಿನಾಂಕ:06/04/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18/04/2022ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಸಾಂಸ್ಕೃತಿಕ ವಲಯದ ಕೆಂಗಣ್ಣಿಗೆ ಗುರಿಯಾಗಿದ್ದ ಡಿ.ಕೆ. ಶಿವಕುಮಾರ್

‘ಅನುದಾನ’ಕ್ಕೆ ಪೆಟ್ಟು ‘ಅನುಮಾನ’ದ ಪೆಟ್ಟು!

ಅನುದಾನ ದುರುಪಯೋಗದ ಅನುಮಾನದಿಂದ ಸಂಘ ಸಂಸ್ಥೆಗಳಿಗೆ, ಕಲಾವಿದರಿಗೆ 2018-2019ನೇ ಸಾಲಿನ ಅನುದಾನ ಬಿಡುಗಡೆ ಮಾಡದೇ, 2019-2020ರ ಸಾಲಿನ ಅನುದಾನ ಸ್ಥಗಿತಗೊಳಿಸಲು ಸಮ್ಮಿಶ್ರ (ಜೆಡಿಎಸ್ - ಕಾಂಗ್ರೆಸ್) ಸರ್ಕಾರ ಮುಂದಾಗಿತ್ತು. ಆಗಿನ ಸರ್ಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅವರ ನಡೆ ನಾಡಿನ ಸಾಂಸ್ಕೃತಿಕ ವಲಯವನ್ನು ಕೆರಳಿಸಿತ್ತು. ಶಿವಕುಮಾರ್ ಅವರು ಕಲಾವಿದರ ಕೆಂಗಣ್ಣಿಗೆ ಗುರಿಯಾಗಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವ ಸಂಘ–ಸಂಸ್ಥೆಗಳಿಗೆ ಸರ್ಕಾರ ಕೊಡುವ ಅನುದಾನವನ್ನು ವ್ಯಾಪಕವಾಗಿ ದುರ್ಬಳಕೆ ಮಾಡಲಾಗುತ್ತಿದೆ. ಸುಳ್ಳು ದಾಖಲೆ ನೀಡುವ ಮೂಲಕ ನಕಲಿ ಕಲಾ ಸಂಘಗಳು ಹಣವನ್ನು ಲಪಟಾಯಿಸುತ್ತಿವೆ. ಹೀಗಾಗಿ, ಅನುದಾನ ಸ್ಥಗಿತಗೊಳಿಸುವುದಾಗಿ ಶಿವಕುಮಾರ್ ಸಮರ್ಥಿಸಿಕೊಂಡಿದ್ದರು.

‘ಕೆಲವರ ವಿದೇಶ ಪ್ರವಾಸ ಸೇರಿದಂತೆ ವರ್ಷದಲ್ಲಿ ಬೊಕ್ಕಸದ ₹ 20 ಕೋಟಿ ಹಣ ಪೋಲಾಗುತ್ತಿದೆ. ಅಧಿಕಾರಿಗಳಿಗೆ ಬೆದರಿಸಿ ತೆಗೆದುಕೊಂಡವನೇ ಮತ್ತೆ ಮತ್ತೆ ತೆಗೆದುಕೊಳ್ಳುವುದು ನಿಲ್ಲಬೇಕು. ಕನ್ನಡ ಮತ್ತು ಸಂಸ್ಕೃತಿ ಉಳಿವಿಗಾಗಿ ಯಾವ ತ್ಯಾಗಕ್ಕಾದರೂ ನಾನು ಸಿದ್ಧ. ನನ್ನ ವಿರುದ್ದ ಪ್ರತಿಭಟನೆ ಮಾಡಲಿ, ನನ್ನನ್ನು ಸುಡಲಿ, ಟೀಕೆ ಮಾಡಲಿ’ ಎಂದು ಶಿವಕುಮಾರ್ ಗುಡುಗಿದ್ದರು. ಕಳೆದ ಹತ್ತು ವರ್ಷಗಳಲ್ಲಿ ಯಾರು ಯಾರು ಎಷ್ಟು ಹಣ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಪಟ್ಟಿ ಬಿಡುಗಡೆಗೆ ಸಿದ್ಧ, ಇಲಾಖೆಯನ್ನು ಸ್ವಚ್ಛಗೊಳಿಸುವುದು ನನ್ನ ಗುರಿ’ ಎಂದೂ ಸಾರಿದ್ದರು.

ಅನುದಾನ ಬಿಡುಗಡೆ ಮಾಡದೇ ರಾಜ್ಯದ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಮಾನ ಮಾಡಿದ್ದಾರೆ. ಅನುಮಾನಪಟ್ಟು ಅನುದಾನ ಸ್ಥಗಿತಗೊಳಿಸಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ್ದ ಕಲಾವಿದರು, ಸಂಘ ಸಂಸ್ಥೆಯವರು, ಸಾಂಸ್ಕೃತಿಕ ಪ್ರಜ್ಞೆ ಇರುವವರಿಗೆ ಇಲಾಖೆಯನ್ನು ವಹಿಸಬೇಕೆಂದು ಆಗ್ರಹಿಸಿದ್ದರು. ಆಗ ಮಾತು ಬದಲಿಸಿದ್ದ ಶಿವಕುಮಾರ್, ಅರ್ಹರಿಗೆ ಮಾತ್ರ ಧನಸಹಾಯ ಎಂದಿದ್ದರು.

ಬಳಿಕ ಸಂಸ್ಥೆಗಳು ಹಾಗೂ ಕಲಾವಿದರಿಗೆ ತಡೆಹಿಡಿದಿದ್ದ 2018-19ನೇ ಸಾಲಿನ ಧನ ಸಹಾಯವನ್ನು ಆ ವರ್ಷಾಂತ್ಯದಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿತ್ತು. ಆಯ್ಕೆ ಸಲಹಾ ಸಮಿತಿ ₹ 13 ಕೋಟಿಯ ಪ್ರಸ್ತಾವ ಸಲ್ಲಿಸಿದ್ದರೆ, ಸರ್ಕಾರ, ₹ 11.60 ಕೋಟಿ ಅನುದಾನಕ್ಕೆ ಮಂಜೂರಾತಿ ನೀಡಿತ್ತು. ಆದರೆ, ಅದರ ಬೆನ್ನಿಗೆ, 2019-20ನೇ ಸಾಲಿನ ಅನುದಾನ ಬಿಡುಗಡೆ ಮಾಡುವ ಕುರಿತು ಹೊಸ ನೀತಿ ಜಾರಿಗೆ ತರುವ ಉದ್ದೇಶದಿಂದ ಧನಸಹಾಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಕರೆಯುವ ಪ್ರಕ್ರಿಯೆ ನಿಲ್ಲಿಸಲಾಗಿದೆ ಎಂದೂ ಹೇಳಿತ್ತು.

ಇದಕ್ಕೆ ಸಂಘ-ಸಂಸ್ಥೆಗಳು ಮತ್ತು ಕಲಾವಿದರಿಂದ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಗ್ರಾಮೀಣ ಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಸಹಾಯಧನವನ್ನೇ ನಂಬಿಕೊಂಡು ನೂರಾರು ರಂಗ ತಂಡಗಳು ಮತ್ತು ಸಾವಿರಾರು ಕಲಾವಿದರು ಕೆಲಸ ಮಾಡುತ್ತಿದ್ದಾರೆ. ವರ್ಷವಿಡೀ ತಮ್ಮ ಜೇಬಿನಿಂದ ಹಣ ಖರ್ಚು ಮಾಡಿ ನಾಡಿನ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಕಾರ್ಯದಲ್ಲಿ ಮಗ್ನವಾಗಿದ್ದಾರೆ. ಹೀಗಿರುವಾಗ ಸರ್ಕಾರ ಧನ ಸಹಾಯ ನಿಲ್ಲಿಸುವ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ ಎಂದು ಕೋಪಗೊಂಡಿದ್ದರು.

ಮೈತ್ರಿ ಸರ್ಕಾರ ಉರುಳಿ ಯಡಿಯೂರಪ್ಪ ಸರ್ಕಾರ ಬಂದ ಬಳಿಕ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಿ.ಟಿ. ರವಿ ಹೆಗಲೇರಿತ್ತು. ಕಲಾವಿದರನ್ನು ಅನುಮಾನದಿಂದ ನೋಡುವುದು ಸರಿಯಲ್ಲ. ಸಾಂಸ್ಕೃತಿಕ ಸಂಘಗಳಿಗೆ ಅನುದಾನ ನೀಡುವ ವ್ಯವಸ್ಥೆ ಸ್ಥಗಿತಗೊಳಿಸಿರುವ ಬಗ್ಗೆ ಅನೇಕ ಕಲಾವಿದರು, ಸಂಘಟನೆಗಳು ನೊಂದಿದ್ದಾರೆ. ಈ ಬಗ್ಗೆ ತಜ್ಞರ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಮೊದಲು ಹೇಳಿದ್ದ ಅವರು, ನಂತರ ಹಳೆ ವ್ಯವಸ್ಥೆಗೆ ಮರಳಿದ್ದರು.

ಅಕ್ರಮಗಳಿಗೆ ಕಡಿವಾಣ; ಸರಳ ಪ್ರಕ್ರಿಯೆ

ಕಿರು ಸಂದರ್ಶನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾರ್ಷಿಕ ಧನಸಹಾಯ ಯೋಜನೆಯ ಅನುದಾನ ಹಂಚಿಕೆಯಲ್ಲಿ ಅಕ್ರಮ, ಅವ್ಯವಹಾರ ನಡೆಯುತ್ತಿದೆ ಎಂಬ ದೂರುಗಳಿಗೆ ಸಂಬಂಧಿಸಿ ಇಲಾಖೆಯ ಸಚಿವ **ವಿ.ಸುನೀಲ್ ಕುಮಾರ್** ಅವರೊಡನೆ ನಡೆಸಿದ ಪುಟ್ಟ ಸಂದರ್ಶನ ಇಲ್ಲಿದೆ.

- **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅವ್ಯಾಹತವಾಗಿ ಅಕ್ರಮ ನಡೆಯುತ್ತಿದೆಯಲ್ಲ?**

ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದ್ದ ಅಕ್ರಮಗಳಿಗೆ ಕಡಿವಾಣ ಹಾಕಲು ಕೆಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗಿದೆ. ಎಲ್ಲರಿಗೂ ಸಲ್ಲುವ ಸರಳ ಮತ್ತು ಸುಗಮ ಪ್ರಕ್ರಿಯೆ ಅಳವಡಿಸಲಾಗಿದೆ.

- **ರವೀಂದ್ರ ಕಲಾಕ್ಷೇತ್ರದ ಆಡಿಟೋರಿಯಂ ಬುಕ್ಕಿಂಗ್ ಕಡಿವಾಣ ಹಾಕಿದ್ದೇಕೆ?**

ಹೌದು, ಕೆಲವು ಪಟ್ಟಭದ್ರರು ತಮ್ಮ ಹೆಸರಲ್ಲಿ ಬುಕ್ ಮಾಡಿ ಅದನ್ನು ಬೇರೆಯವರಿಗೆ ಹೆಚ್ಚಿನ ಹಣಕ್ಕೆ ಮಾರಿಕೊಳ್ಳುತ್ತಿದ್ದರು. ಈಗ ಬುಕ್ಕಿಂಗ್‌ಗೆ ಆನ್‌ಲೈನ್ ವ್ಯವಸ್ಥೆ ಮಾಡಿದ್ದೇವೆ. ಇದರಿಂದ ಯಾವುದೇ ಒಬ್ಬ ವ್ಯಕ್ತಿ ದೊಡ್ಡ ಪ್ರಮಾಣದಲ್ಲಿ (ಬಲ್ಕ್) ಬುಕ್ಕಿಂಗ್ ಮಾಡಲು ಸಾಧ್ಯವಿಲ್ಲ.

- **ಅರ್ಹ ವ್ಯಕ್ತಿ, ಸಂಸ್ಥೆಗಳಿಗೆ ಅನುದಾನ ಸಿಗುತ್ತಿಲ್ಲ ಎಂಬ ಆರೋಪ ಇದೆಯಲ್ಲ?**

ಈಗ ಹೊಸ ನಿಯಮ ತರಲಾಗಿದೆ. ಈಗ ₹50 ಸಾವಿರದಿಂದ ₹2.50 ಲಕ್ಷದವರೆಗೆ ಅನುದಾನ ನೀಡಲಾಗುವುದು. ನಿರಂತರವಾಗಿ 3 ವರ್ಷ ಮತ್ತು 5 ವರ್ಷ ಅನುದಾನ ಪಡೆದವರು ಮತ್ತು ಹೊಸಬರು ಎಂಬ ಮೂರು ವರ್ಗಗಳನ್ನು ಮಾಡಲಾಗಿದ್ದು, 2022ರ ಅನುದಾನದಲ್ಲಿ ಹೊಸಬರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಆನ್‌ಲೈನ್ ಮೂಲಕವೇ ಅನುದಾನಕ್ಕೆ ಅರ್ಜಿ ಸಲ್ಲಿಸಬೇಕು. ಕಾರ್ಯಕ್ರಮಗಳನ್ನು ಮಾಡಿದ್ದಕ್ಕೆ ಪೂರಕ ದಾಖಲೆಗಳನ್ನು ಕೊಟ್ಟ ಬಳಿಕವೇ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕೆಲವೇ ಜನರು ಮಾತ್ರ ಅನುದಾನ ಪಡೆಯುವುದನ್ನು ತಪ್ಪಿಸಿ ಹೊಸ ಕಲಾವಿದರು ಮತ್ತು ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲು ತೀರ್ಮಾನಿಸಲಾಗಿದೆ. ‘ಕೆಲವೇ ಜನರ ಸಂಸ್ಕೃತಿ ಇಲಾಖೆ’ ಎಂಬ ಅಪವಾದ ಕಳಚಿ, ‘ಎಲ್ಲರ ಸಂಸ್ಕೃತಿ ಇಲಾಖೆ’ ಆಗಬೇಕು ಎಂಬುದು ಸರ್ಕಾರದ ಉದ್ದೇಶ.

- **ನೈಜ ಸಂಸ್ಥೆಗಳಿಗೆ ಅನ್ಯಾಯವಾಗುವುದಿಲ್ಲವೇ?**

ಕೆಲವು ನೈಜ ಸಂಸ್ಥೆಗಳಿಗೆ ಅನುದಾನದ ಪ್ರಮಾಣ ಕಡಿಮೆ ಆಗಬಹುದು. ಇಂತಹ ನೈಜ ಸಂಸ್ಥೆಗಳನ್ನು ಎರಡನೇ ಹಂತದಲ್ಲಿ ಪರಿಶೀಲಿಸಲಾಗುವುದು. ಆದರೆ ಒಂದು ಬಾರಿಗೆ ಗರಿಷ್ಠ ₹2.50 ಲಕ್ಷಕ್ಕಿಂತಲೂ ಹೆಚ್ಚು ಅನುದಾನ ಕೊಡುವುದಿಲ್ಲ. ಯಾವುದೇ ಪ್ರಭಾವಕ್ಕೂ ಮಣಿಯುವುದಿಲ್ಲ

ಚಿನ್ನದ ಪದಕಗಳೇ ಕಣ್ಮರೆಯಾಗಿದ್ದವು!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸದೇ ಇದ್ದವರ ಪಾಲಿನ ಚಿನ್ನದ ಪದಕಗಳನ್ನೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಕಣ್ಮರೆ ಮಾಡಿರುವುದನ್ನು 2013ರಲ್ಲಿ ಲೋಕಾಯುಕ್ತ ಪೊಲೀಸರು ಪತ್ತೆಹಚ್ಚಿದ್ದರು. ಪುರಸ್ಕೃತರಿಗೆ ನೀಡುವ ಪದಕಗಳಲ್ಲಿ ಶೇಕಡ 28ರಷ್ಟು ಇತರ ಲೋಹ ಮಿಶ್ರಣ ಮಾಡಿ ವಂಚಿಸಿದ್ದೂ ತನಿಖೆಯಲ್ಲಿ ಬಯಲಾಗಿತ್ತು.

ಇಲಾಖೆಯಲ್ಲಿ ಅನುದಾನದ ವ್ಯಾಪಕ ದುರ್ಬಳಕೆ ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ನೀಡಬೇಕಾದ ಚಿನ್ನದ ಪದಕಗಳನ್ನು ಲಪಟಾಯಿಸುತ್ತಿರುವ ದೂರುಗಳು ಲೋಕಾಯುಕ್ತ ಪೊಲೀಸರಿಗೆ ಬಂದಿದ್ದವು. 2013ರ ಜೂನ್‌ನಲ್ಲಿ ಇಲಾಖೆಯ ನಿರ್ದೇಶಕರ ಕಚೇರಿ ಸೇರಿದಂತೆ ಹಲವು ಕಚೇರಿಗಳ ಮೇಲೆ ದಾಳಿಮಾಡಿದ್ದ ತನಿಖಾ ತಂಡ, ಶೋಧ ನಡೆಸಿತ್ತು.

25 ಮಂದಿ ಪ್ರಶಸ್ತಿ ಪಡೆಯದೇ ಇದ್ದವರಿಗೆ ನೀಡಬೇಕಾದ ಚಿನ್ನದ ಪದಕಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಕಚೇರಿಯಿಂದಲೇ ನಾಪತ್ತೆಯಾಗಿದ್ದವು. ಲೋಕಾಯುಕ್ತ ಪೊಲೀಸರು ತನಿಖೆ ಚುರುಕುಗೊಳಿಸುತ್ತಿದ್ದಂತೆಯೇ 18 ಪದಕಗಳನ್ನು ತನಿಖಾ ತಂಡದ ಮುಂದೆ ಹಾಜರುಪಡಿಸಿದ್ದ ಇಲಾಖೆಯ ಅಧಿಕಾರಿಗಳು, ‘ಈ ಪದಕಗಳು ಬೇರೊಂದು ಕಚೇರಿಯಲ್ಲಿ ಇದ್ದವು’ ಎಂಬ ಸಬೂಬು ನೀಡಿದ್ದರು. ಐದು ಪದಕಗಳು ಕೊನೆಗೂ ಪತ್ತೆಯಾಗಲೇ ಇಲ್ಲ.

ಗುಣಮಟ್ಟದಲ್ಲೂ ವಂಚನೆ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ 22 ಕ್ಯಾರೆಟ್ ಗುಣಮಟ್ಟದ ಚಿನ್ನದಿಂದ ಮಾಡಿದ ಪದಕವನ್ನು ನೀಡಬೇಕು ಎಂಬುದು ನಿಯಮ. ಪದಕಗಳ ಖರೀದಿಗೂ ಅದೇ ದರ ವಿಧಿಸಲಾಗುತ್ತಿತ್ತು. ಆದರೆ, ಕಳಪೆ ಗುಣಮಟ್ಟದ ಚಿನ್ನ ಬಳಸಿ ಪದಕಗಳನ್ನು ತಯಾರಿಸಲಾಗಿತ್ತು ಎಂಬುದು ಲೋಕಾಯುಕ್ತ ಪೊಲೀಸರ ತನಿಖೆಯಲ್ಲಿ ಬಯಲಾಗಿತ್ತು.

‘ರಾಜ್ಯೋತ್ಸವ ಪ್ರಶಸ್ತಿ ಜತೆ ನೀಡಲು ತರಿಸಿದ್ದ ಚಿನ್ನದ ಪದಕಗಳಲ್ಲಿ ಶೇಕಡ 72ರಷ್ಟು ಮಾತ್ರ ಚಿನ್ನವಿದೆ. ಬೇರೆ ಲೋಹವನ್ನು ಮಿಶ್ರಣ ಮಾಡಿರುವುದು ಪರೀಕ್ಷೆಯಲ್ಲಿ ಕಂಡುಬಂದಿದೆ’ ಎಂದು ಲೋಕಾಯುಕ್ತ ಪೊಲೀಸರು 2014ರ ಮಾರ್ಚ್‌ನಲ್ಲಿ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ವರದಿಯಲ್ಲಿ ತಿಳಿಸಿದ್ದರು.

ಚಿನ್ನದ ಪದಕಗಳ ಕಣ್ಮರೆ ಮತ್ತು ಕಳಪೆ ಗುಣಮಟ್ಟದ ಚಿನ್ನ ಬಳಸಿ ವಂಚಿಸಿದ ಪ್ರಕರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ನಿರ್ದೇಶಕ ಮನು ಬಳಿಗಾರ, ನಿವೃತ್ತ ಜಂಟಿ ನಿರ್ದೇಶಕ ಕಾ.ತ. ಚಿಕ್ಕಣ್ಣ, ವ್ಯವಸ್ಥಾಪಕ ಎಸ್.ಐ. ಬಾವಿಕಟ್ಟಿ, ಪ್ರಥಮ ದರ್ಜೆ ಸಹಾಯಕ ಶಿವಪ್ರಕಾಶ್ ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿದೆ ಎಂದು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ವರದಿಯಲ್ಲಿ ತಿಳಿಸಲಾಗಿತ್ತು.

ನಂತರ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದಿತ್ತು. ಮನು ಬಳಿಗಾರ ಮತ್ತಿತರರನ್ನು ಆರೋಪ ಮುಕ್ತಗೊಳಿಸಿ ನ್ಯಾಯಾಲಯ ಆದೇಶ ಹೊರಡಿಸಿತ್ತು.

ಧನಸಹಾಯದ ವಿವರ

₹10.19 ಕೋಟಿ 2020–21ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ

719 ಅನುದಾನ ಪಡೆದ ಸಂಘ–ಸಂಸ್ಥೆಗಳು

1,010 ಅನುದಾನ ಪಡೆದ ಕಲಾವಿದರು

₹14 ಕೋಟಿ 2021–22ನೇ ಸಾಲಿನಲ್ಲಿ ಅನುಮೋದನೆಗೊಂಡ ಅನುದಾನ

ಕಾಸಿದ್ದರಷ್ಟೇ ಕನ್ನಡದ ಕೆಲಸ!

ಒಂದನೇ ಪುಟದಿಂದ

ದಮನಿತ ಹಾಗೂ ಅಲಕ್ಷಿತ ಸಮುದಾಯಕ್ಕೆ ವಿಶೇಷ ಪ್ರೋತ್ಸಾಹ ನೀಡಲು ರೂಪಿಸಿದ ವಿಶೇಷ ಘಟಕ ಯೋಜನೆಯ ಅನುದಾನವೂ ದುರ್ಬಳಕೆಯಾಗುತ್ತಿದೆ. ಸಾಂಸ್ಕೃತಿಕ ಭವನ ಕಟ್ಟಲು ನೀಡಿದ್ದ ಅನುದಾನದಲ್ಲಿ ಮದುವೆ ಛತ್ರ, ವಸತಿಗೃಹ, ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ ಎಂದು ಭಾರತೀಯ ಮಹಾಲೇಖಪಾಲರ ವರದಿ (ಸಿಎಜಿ) ಆಕ್ಷೇಪ ವ್ಯಕ್ತಪಡಿಸಿದೆ.

ಪಟ್ಟಭದ್ರರ ಆಟ: ‘ಲೆಟರ್ ಹೆಡ್’ ಸಂಘಟನೆಗಳ ಕೆಲ ಪಟ್ಟಭದ್ರರು ವಾರ್ಷಿಕ ₹ 25 ಲಕ್ಷದಿಂದ ₹ 50 ಲಕ್ಷ ಅನುದಾನ ಪಡೆದ ನಿದರ್ಶನಗಳೂ ಇವೆ. ಇನ್ನೊಂದೆಡೆ, ಬಿಡುಗಡೆಯಾದ ಹಣವನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ಬದಲು ಕಟ್ಟಡ ನಿರ್ಮಾಣದಂತಹ ಅನ್ಯ ಕಾರ್ಯಗಳಿಗೆ ಬಳಸಿರುವ ಸಂಘ–ಸಂಸ್ಥೆಗಳೂ ರಾಜ್ಯದಲ್ಲಿವೆ.

2016–17ನೇ ಸಾಲಿನಲ್ಲಿ ನಿಸರ್ಗ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ಎಂಬ ಸಂಸ್ಥೆಯು ₹ 10 ಲಕ್ಷ ಧನಸಹಾಯ ಪಡೆದಿತ್ತು. ಆದರೆ, ಈ ಹೆಸರಿನ ಸಂಸ್ಥೆಯೇ ಅಸ್ತಿತ್ವದಲ್ಲಿ ಇರಲಿಲ್ಲ. 2017–18ನೇ ಸಾಲಿನಲ್ಲಿ 30ಕ್ಕೂ ಅಧಿಕ ಸಂಘ–ಸಂಸ್ಥೆಗಳಿಗೆ ಅವಧಿ ಮೀರಿದ ಬಳಿಕವೂ ₹ 6.8 ಕೋಟಿ ಧನಸಹಾಯ ಒದಗಿಸಲಾಗಿತ್ತು. ಪ್ರಭಾವಿ ಶಾಸಕರು, ಸಚಿವರ ಶಿಫಾರಸು ಇದಕ್ಕೆ ಕಾರಣ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

ಧನಸಹಾಯ ನಿಯಮದ ಪ್ರಕಾರ ಶುದ್ಧ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುತ್ತಿರುವ ಸಂಘ–ಸಂಸ್ಥೆಗಳಿಗೆ ಮಾತ್ರ ವಿಶೇಷ ಸಂದರ್ಭದಲ್ಲಿ ಆರ್ಥಿಕ ನೆರವು ನೀಡುವ ಅಧಿಕಾರ ಸರ್ಕಾರಕ್ಕಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಕೆಲ ಸಂಘ–ಸಂಸ್ಥೆಗಳು ಮುಖ್ಯಮಂತ್ರಿ, ಸಚಿವರ ಶಿಫಾರಸು ಬಳಸಿಕೊಂಡು, ಅಗತ್ಯ ದಾಖಲಾತಿ ಸಲ್ಲಿಸದೇ ನಿಯಮ ಮೀರಿ ಅನುದಾನ ಪಡೆದುಕೊಳ್ಳುತ್ತಿವೆ ಎಂಬ ಆರೋಪ ಇದೆ.

ಇಲಾಖೆಯಲ್ಲಿನ ದಲ್ಲಾಳಿಗಳು ಹಾಕಿಕೊಟ್ಟಿರುವ ‘ಒಳದಾರಿ’ಗಳಿಂದಾಗಿ ಕಾರ್ಯಕ್ರಮ ಮಾಡದ ಸಂಸ್ಥೆಗಳಿಗೆ ₹ 10 ಲಕ್ಷದಿಂದ ₹ 20 ಲಕ್ಷ ದೊರೆಯುತ್ತಿದೆ. ₹ 5 ಲಕ್ಷದಿಂದ ₹ 10 ಲಕ್ಷ ಖರ್ಚು ಮಾಡಿ ಕಾರ್ಯಕ್ರಮಗಳನ್ನು ನಡೆಸಿದವರಿಗೆ ₹10 ಸಾವಿರದಿಂದ ₹ 50 ಸಾವಿರ ಸಿಗುತ್ತಿದೆ.

ಈ ಹಿಂದೆ ರಾಮನಗರದಲ್ಲಿ ಪ್ರಭಾವಿ ಮುಖಂಡರೊಬ್ಬರ ಸಂಸ್ಥೆಯು ಭಜನಾ ಮಂದಿರ ನಿರ್ಮಾಣಕ್ಕೆ ಸಂಸ್ಕೃತಿ ಸಚಿವರ ಶಿಫಾರಸಿನ ಮೂಲಕ ₹ 45 ಲಕ್ಷ ಅನುದಾನ ಪಡೆದಿತ್ತು. ಆಡಳಿತಾರೂಢ ಪಕ್ಷಗಳು ಬದಲಾದಂತೆ ತಮ್ಮ ತತ್ವ, ಸಿದ್ಧಾಂತಗಳಿಗೆ ಒಗ್ಗುವ ಸಂಘ–ಸಂಸ್ಥೆಗಳಿಗೆ ಪ್ರಾತಿನಿಧ್ಯ ನೀಡಲಾಗುತ್ತಿದೆ ಎಂಬ ದೂರುಗಳೂ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿವೆ.

ಜಿಲ್ಲಾ ಮಟ್ಟದ ಅರ್ಜಿ ಪರಿಶೀಲನಾ ಸಮಿತಿ ಮತ್ತು ರಾಜ್ಯ ಮಟ್ಟದ ಧನಸಹಾಯ ಮಂಜೂರಾತಿ ಸಮಿತಿಯಿಂದ ತಿರಸ್ಕರಿಸಲ್ಪಟ್ಟ ಅರ್ಜಿಗಳಿಗೂ ಕಾಣದ ಕೈಗಳು (ಮಧ್ಯವರ್ತಿಗಳು) ಧನಸಹಾಯ ಒದಗಿಸಿಕೊಡುತ್ತಿವೆ. ಅನುಮೋದನೆಗೊಂಡ ಅನುದಾನದ ಅನುಸಾರ ಕಮಿಷನ್ ಹಂಚಿಕೆಯಾಗುತ್ತಿದೆ ಎಂಬ ಆರೋಪವನ್ನು ಕಲಾವಿದರು ಮಾಡುತ್ತಾರೆ.

‘ಧನಸಹಾಯ ವ್ಯವಸ್ಥೆಯಲ್ಲಿ ಪಾರದರ್ಶಕ ವ್ಯವಸ್ಥೆ ಸಂಪೂರ್ಣ ಮರೆಯಾಗಿದೆ. ನಿನ್ನೆ ಮೊನ್ನೆ ಹುಟ್ಟಿಕೊಂಡ ಸಂಘ–ಸಂಸ್ಥೆಗಳು ಲಕ್ಷಾಂತರ ರೂಪಾಯಿ ಪಡೆದುಕೊಳ್ಳುತ್ತಿವೆ. ಮಧ್ಯವರ್ತಿಗಳ ಮೂಲಕ ವ್ಯವಹಾರಕ್ಕೆ ಇಳಿಯುವ ಅಧಿಕಾರಿಗಳು, ಸೂಕ್ತ ದಾಖಲೆಗಳನ್ನು ನೀಡದಿದ್ದರೂ ಅನುದಾನ ಒದಗಿಸಿಕೊಡುತ್ತಿದ್ದಾರೆ. ಎಲ್ಲ ದಾಖಲಾತಿ ಇರುವ ಸಂಘ–ಸಂಸ್ಥೆಗಳಿಗೆ ತಾಂತ್ರಿಕ ಕಾರಣ ನೀಡಿ, ಅರ್ಜಿ ತಿರಸ್ಕರಿಸಲಾಗುತ್ತಿದೆ’ ಎಂದು ಕಲಾವಿದ ಡಾ. ಜಯಸಿಂಹ ಬೇಸರ ವ್ಯಕ್ತಪಡಿಸಿದರು.

ಗೊಂದಲದಲ್ಲಿ ಸಂಸ್ಥೆಗಳು: ಧನಸಹಾಯಕ್ಕಾಗಿ ಸರ್ಕಾರವು ಪ್ರತಿವರ್ಷ ₹ 15 ಕೋಟಿಯಿಂದ ₹ 20 ಕೋಟಿ ಖರ್ಚು ಮಾಡುತ್ತಿದೆ. ರಾಜ್ಯದಲ್ಲಿ 7,000ಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿದ್ದರೂ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರಕ್ಕೆ ಬೇಸತ್ತು, ಕೆಲ ಸಂಸ್ಥೆಗಳು ಧನಸಹಾಯಕ್ಕೆ ಅರ್ಜಿ ಸಲ್ಲಿಸುವ ಗೋಜಿಗೆ ಹೋಗುತ್ತಿಲ್ಲ. ಅರ್ಜಿ ಸಲ್ಲಿಸುವ 4 ಸಾವಿರಕ್ಕೂ ಅಧಿಕ ಸಂಘ–ಸಂಸ್ಥೆಗಳಲ್ಲಿ 900ರಿಂದ 1,000 ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ. 15ರಿಂದ 20 ಹಾಗೂ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಕಾರ್ಯಕ್ರಮಗಳನ್ನು ನಿಯಮಿತವಾಗಿ ಮಾಡಿಕೊಂಡು ಬಂದಿರುವ ಹಲವು ಸಂಘ–ಸಂಸ್ಥೆಗಳೂ ಅನುದಾನದಿಂದ ವಂಚಿತವಾಗುತ್ತಿವೆ.

‘ನಮ್ಮ ಸಂಸ್ಥೆ 42 ವರ್ಷಗಳ ಇತಿಹಾಸ ಹೊಂದಿದೆ. ಪ್ರತಿ ತಿಂಗಳಿಗೆ ನಾಲ್ಕು–ಐದು ಕಾರ್ಯಕ್ರಮ ನಡೆಸುತ್ತಿದ್ದೇವೆ. ವರ್ಷದ ಕಾರ್ಯಕ್ರಮಗಳನ್ನು 200 ಪುಟಗಳಲ್ಲಿ ಇಲಾಖೆಗೆ ಕಳುಹಿಸಲಾಗುತ್ತಿದೆ. ಆದರೂ ಎರಡು ವರ್ಷಗಳಿಂದ ಅನುದಾನ ನೀಡಿಲ್ಲ. ನಮ್ಮದು ವಾರ್ಷಿಕ ಬಜೆಟ್ ₹ 10 ಲಕ್ಷದಿಂದ ₹ 14 ಲಕ್ಷ ಇದೆ. ಇಲಾಖೆ ಬೆನ್ನುತಟ್ಟಿ ಪ್ರೋತ್ಸಾಹಿಸಬೇಕಾಗಿತ್ತು. ಬೇಕಾಬಿಟ್ಟಿ ತಮ್ಮವರಿಗೆ ಅನುದಾನ ನೀಡಲಾಗುತ್ತಿದೆ’ ಎಂದು ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಬೇಸರ ವ್ಯಕ್ತಪಡಿಸಿದರು.

‘ಅನುದಾನ ಹಂಚಿಕೆಯಲ್ಲಿ ಪಾರದರ್ಶಕತೆ ತರುವ ನೆಪದಲ್ಲಿ ಸರ್ಕಾರವು ಈ ಬಾರಿ ಧನಸಹಾಯದ ಮೊತ್ತವನ್ನು ಗರಿಷ್ಠ ₹ 2.5 ಲಕ್ಷಕ್ಕೆ ಮಿತಿಗೊಳಿಸಿದೆ. ಆದರೆ, ಇಷ್ಟು ಕಡಿಮೆ ಅನುದಾನದಲ್ಲಿ ವರ್ಷಪೂರ್ತಿ ಕಾರ್ಯಕ್ರಮ ನಡೆಸುವುದು ಹೇಗೆ’ ಎಂದು ಉದಯಭಾನು ಕಲಾಸಂಘ, ಬಿ.ಎಂ.ಶ್ರೀ. ಪ್ರತಿಷ್ಠಾನ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಹಾಗೂ ಕಲಾವಿದರು ಪ್ರಶ್ನಿಸಿವೆ.

‘ನಮ್ಮ ಸಂಸ್ಥೆ ಆರು ದಶಕಗಳಿಂದ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ಎಲ್ಲ ದಾಖಲಾತಿಗಳನ್ನೂ ಒದಗಿಸಿದರೂ ಅನುದಾನ ನೀಡಿಲ್ಲ. ಸಂಸ್ಕೃತಿ ಇಲಾಖೆಯಲ್ಲಿ ಹೇಳುವವರು ಕೇಳುವವರು ಇಲ್ಲ. ಅನುದಾನವನ್ನು ₹ 2.5 ಲಕ್ಷಕ್ಕೆ ಮಿತಿಗೊಳಿಸಿರುವುದು ಸರಿಯಲ್ಲ. ಸಾವಿರ ಆಮಂತ್ರಣ ಪತ್ರಿಕೆಗೆ ₹ 15 ಸಾವಿರ ಆಗುತ್ತದೆ. ಹೀಗಾದಲ್ಲಿ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಿಲ್ಲ’ ಎನ್ನುತ್ತಾರೆ ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ.

ಪಾರದರ್ಶಕವಲ್ಲದ ವ್ಯವಸ್ಥೆ

ಧನಸಹಾಯಕ್ಕೆ ಈಗ ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದೆ. ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಪ್ರತಿಯ ಜತೆಗೆ ನಡೆಸಿರುವ ಕಾರ್ಯಕ್ರಮಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ವಿವರ ಸೇರಿದಂತೆ ಅಗತ್ಯ ದಾಖಲಾತಿಗಳ ಸ್ಕ್ಯಾನ್ ಪ್ರತಿಗಳನ್ನು ಒದಗಿಸಬೇಕು. ಈ ವ್ಯವಸ್ಥೆ ಜಾರಿಯಾದ ಬಳಿಕ ತಂತ್ರಜ್ಞಾನದ ನೆರವಿನಿಂದ ನಕಲಿ ದಾಖಲಾತಿ, ಪತ್ರಿಕೆಗಳ ಮುದ್ರಣ ಪ್ರತಿ ಸೃಷ್ಟಿಸಲಾಗುತ್ತಿದೆ. 2018–19ನೇ ಸಾಲಿನ ಧನಸಹಾಯದ ಆಯ್ಕೆಯಲ್ಲಿ ಕೆಲ ಸಂಸ್ಥೆಗಳು ಈ ರೀತಿ ನಕಲಿ ದಾಖಲಾತಿ ಸೃಷ್ಟಿಸಿರುವುದು ಪತ್ತೆಯಾಗಿತ್ತು.

ಇಲಾಖೆಯಡಿ ನಡೆಯುತ್ತಿರುವ ಕಾರ್ಯಕ್ರಮಗಳ ಪ್ರಾಯೋಜನೆ ಕೆಲ ಕಲಾ ತಂಡಗಳ ಪಾಲಾಗುತ್ತಿವೆ. ಮಧ್ಯವರ್ತಿಗಳು ತಮಗೆ ಬೇಕಾದ ಕಲಾವಿದರ ಸಂಪರ್ಕ ಕಾಯ್ದುಕೊಂಡು, ಪ್ರತಿ ಬಾರಿ ಅವರಿಗೆ ಪ್ರಾಯೋಜನೆ ಕೊಡಿಸಲು ಯಶಸ್ವಿ ಆಗುತ್ತಿದ್ದಾರೆ. ಮಧ್ಯವರ್ತಿಗಳ ಮೂಲಕ ಅಧಿಕಾರಿಗಳಿಗೆ ಹಣ ಸಂದಾಯ ಆಗುತ್ತಿದೆ. ಬೆಂಗಳೂರು ನಗರ, ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ರಾಮನಗರ ಹಾಗೂ ಮೈಸೂರು ಜಿಲ್ಲೆಯ ಕಲಾ ತಂಡಗಳಿಗೆ ಮಾತ್ರ ಕಾರ್ಯಕ್ರಮಗಳು ಸಿಗುತ್ತಿವೆ. ಉತ್ತರ ಕರ್ನಾಟಕದ ಕಲಾ ತಂಡಗಳನ್ನು ಗುರುತಿಸುವ ಕೆಲಸ ಆಗುತ್ತಿಲ್ಲ ಎನ್ನುವುದು ಕಲಾವಿದರ ಆರೋಪ.

ಆಯ್ಕೆ ವ್ಯವಸ್ಥೆ ಬಗ್ಗೆ ಅನುಮಾನ

ಧನಸಹಾಯಕ್ಕೆ ಅರ್ಜಿ ಸಲ್ಲಿಸಿದ ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸುವ ಇಲಾಖೆಯ ಸಹಾಯಕ ನಿರ್ದೇಶಕರ ಅಧ್ಯಕ್ಷತೆಯ ಸಮಿತಿ, ಅಂತಿಮಗೊಂಡ ಪಟ್ಟಿಯನ್ನು ರಾಜ್ಯಮಟ್ಟದ ಧನಸಹಾಯ ಮಂಜೂರಾತಿ ಆಯ್ಕೆ ಸಮಿತಿಗೆ ಕಳುಹಿಸುತ್ತದೆ. ಈ ಸಮಿತಿಗೆ ಇಲಾಖೆಯ ನಿರ್ದೇಶಕರೇ ಅಧ್ಯಕ್ಷರು. ವಿವಿಧ ಅಕಾಡೆಮಿಗಳು ಹಾಗೂ ಪ್ರಾಧಿಕಾರದ ಅಧ್ಯಕ್ಷರೂ ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಈ ಸಮಿತಿಯಲ್ಲಿರುವ ಸದಸ್ಯರು ತಮಗೆ ಬೇಕಾದ ನಾಲ್ಕರಿಂದ ಐದು ಸಂಸ್ಥೆಗಳಿಗೆ ಅನುದಾನ ಒದಗಿಸಿಕೊಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ ಎಂಬ ಆರೋಪವಿದೆ.

‘ರಾಜ್ಯ ಮಟ್ಟದ ಸಮಿತಿಯ ಸದಸ್ಯರು ತಮಗೆ ಬೇಕಾದ ಸಂಸ್ಥೆಗಳಿಗೆ ಅನುದಾನ ಒದಗಿಸಿಕೊಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಒಬ್ಬರೇ ನಾಲ್ಕರಿಂದ ಐದು ಸಂಸ್ಥೆಗಳ ಮುಖ್ಯಸ್ಥರಾಗಿರುತ್ತಾರೆ. ಧನಸಹಾಯಕ್ಕಾಗಿ ಬೇರೆಯವರೇ ಹೆಸರು ನಮೂದಿಸುತ್ತಾರೆ. ಆದರೆ, ಬ್ಯಾಂಕ್ ಖಾತೆ ಮಾತ್ರ ಒಂದೇ ಆಗಿರುತ್ತದೆ. ಈ ಸಾಲಿನ ಧನಸಹಾಯದಲ್ಲಿಯೂ ಸಮಿತಿ ಸದಸ್ಯರಾದ ಟಿ.ಎಸ್. ನಾಗಾಭರಣ ಸೇರಿದಂತೆ ಕೆಲವರ ಸಂಸ್ಥೆಗಳಿಗೆ ಅನುದಾನ ಸಂದಾಯವಾಗಿದೆ’ ಎಂದು ಬೆಂಗಳೂರಿನ ಕಲಾವಿದರೊಬ್ಬರು ಬೇಸರ ವ್ಯಕ್ತಪಡಿಸಿದರು.

ವ್ಯವಸ್ಥೆ ಸುಧಾರಣೆ: ಆಗಬೇಕಾಗಿರುವುದು ಏನು?

‘ಪ್ರಭಾವಿಗಳ ಶಿಫಾರಸುಗಳಿಗೆ ಮಣಿಯಬಾರದು’



ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಧನಸಹಾಯ ನೀಡುವಾಗ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ನಕಲಿ ಸಂಸ್ಥೆಗಳನ್ನು ಪತ್ತೆ ಮಾಡಿ, ಅಂತಹವುಗಳ ವಿರುದ್ಧ ಕ್ರಮಕೈಗೊಳ್ಳಬೇಕು. ಪ್ರಭಾವಿಗಳ ಶಿಫಾರಸುಗಳಿಗೆ ಮಣಿಯಬಾರದು. ಶಿಫಾರಸುಗಳ ಅನುಸಾರ ಅನುದಾನ ನೀಡುತ್ತಾ ಹೋದರೆ ನಮ್ಮ ಸಂಸ್ಕೃತಿ ಉಳಿಯುವುದಿಲ್ಲ.

ದೊಡ್ಡರಂಗೇಗೌಡ, ಕವಿ

‘ಪ್ರಾಮಾಣಿಕ ಕಾರ್ಯಕ್ಕೆ ಪ್ರೋತ್ಸಾಹ ಅಗತ್ಯ’

ಕೋವಿಡ್ ನಡುವೆಯೂ ಹಲವಾರು ಸಂಘ–ಸಂಸ್ಥೆಗಳು ಆನ್‌ಲೈನ್ ಮೂಲಕ ಕಾರ್ಯಕ್ರಮಗಳನ್ನು ನಡೆಸಿವೆ. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿದ್ದರಿಂದ ಭೌತಿಕ ಕಾರ್ಯಕ್ರಮಗಳು ನಡೆಯಲಾರಂಭಿಸಿವೆ. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘ–ಸಂಸ್ಥೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸವಾಗಬೇಕು. ನಾಲ್ಕೈದು ದಶಕಗಳ ಇತಿಹಾಸ ಇರುವ ಸಂಸ್ಥೆಗಳನ್ನು ಸಂಶಯದಿಂದ ನೋಡುವುದನ್ನು ಬಿಡಬೇಕು.

ವನಮಾಲಾ ಸಂಪನ್ನಕುಮಾರ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ

‘ಮರ್ಜಿ ಹಿಡಿದು ವಿಧಾನಸೌಧಕ್ಕೆ ಹೋಗುವವರೂ ಇದ್ದಾರೆ’

‘ಸರ್ಕಾರ ನೀಡುವ ಅನುದಾನ ಸರಿಯಾದ ಸಂಸ್ಥೆಗೆ ಹೋಗಬೇಕು. ಅರ್ಜಿಯ ಜತೆಗೆ ಮರ್ಜಿಯನ್ನು ಹಿಡಿದುಕೊಂಡು ವಿಧಾನಸೌಧಕ್ಕೆ ಹೋಗುವ ಸಂಸ್ಥೆಗಳ ಮುಖ್ಯಸ್ಥರೂ ಇದ್ದಾರೆ. ಆಯ್ಕೆ ಸಮಿತಿಯಲ್ಲಿ ಇರುವವರಿಗೆ ವಾಸ್ತವ ಜ್ಞಾನ, ಅನುಭವ ಇರಬೇಕು. ಯಾರು ಅನುದಾನ ಪಡೆದುಕೊಳ್ಳುತ್ತಾರೋ ಅವರು ಸಮಿತಿಯಲ್ಲಿ ಇರಬಾರದು. ಪಾರದರ್ಶಕ ವ್ಯವಸ್ಥೆ ತರುವುದು ಕಠಿಣವಲ್ಲ. ಇಚ್ಛಾಶಕ್ತಿ ಹಾಗೂ ವಾಸ್ತವಿಕ ಜ್ಞಾನ ಇರಬೇಕು. ಆರ್ಥಿಕವಾಗಿ ಹಿಂದುಳಿದ, ಆಸಕ್ತಿಯಿಂದ ಕಾರ್ಯಕ್ರಮ ಮಾಡುತ್ತಿರುವವರಿಗೆ ಬೆಂಬಲ ನೀಡಬೇಕು.’

ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

‘ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಬೇಕು’

ಆಳ್ವಾಸ್ ನುಡಿಸಿರಿಯಂತಹ ಸಮ್ಮೇಳನಕ್ಕೆ ಪ್ರತಿವರ್ಷ ಅನುದಾನ ನೀಡಲಾಗುತ್ತಿದೆ. ಸರ್ಕಾರ ತನಗೆ ಬೇಕಾದ ಸಂಘ–ಸಂಸ್ಥೆಗಳಿಗೆ ಮಾತ್ರ ಅನುದಾನ ಒದಗಿಸುತ್ತಿದೆ. ಆಯ್ಕೆಗೆ ಸಂಬಂಧಿಸಿದಂತೆ ಪಾರದರ್ಶಕತೆ ತರಲು ವ್ಯವಸ್ಥೆಯ ಲೋಪದೋಷಗಳನ್ನು ಗುರುತಿಸಿ, ಸರಿಪಡಿಸುವ ಕೆಲಸ ಆಗುತ್ತಿಲ್ಲ. ಕೆಲಸ ಮಾಡದ ಸಂಘ–ಸಂಸ್ಥೆಗಳಿಗೆ ಪ್ರಭಾವಿಗಳು ಅನುದಾನ ಒದಗಿಸುವುದಕ್ಕೆ ಕಡಿವಾಣ ಹಾಕಬೇಕು. ಸಂಘ–ಸಂಸ್ಥೆಗಳು ಈ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಬೇಕು.

ಕೆ. ಷರೀಫಾ, ಲೇಖಕಿ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮಾರ್ಚ್ 27, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮೀನ ಮಾಸದ 13 ನೇ ದಿನ
ತಿಥಿ: (ಫಾಲ್ಗುಣ ಕೃಷ್ಣ) ದಶಮಿ ಗಂ. 18-05 **ನಕ್ಷತ್ರ:** ಉತ್ತರಾಷಾಢಾ ಗಂ. 13-32
ಯೋಗ: ಶಿವ ಗಂ. 20-15, **ಕರಣ:** ವಣಜ ಗಂ. 07-03.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-34 **ಸೂರ್ಯಾಸ್ತ:** 06-38
ಮುಸ್ಲಿಂ ದಿನಾಂಕ: 23 ಶಬನ್
ಅದೃಷ್ಟ ಸಂಖ್ಯೆ: 10, 14

ಮೇಷ: ಸದ್ಯಕ್ಕೆ ರಾಜಕೀಯ ಜೀವನದಲ್ಲಿ ನಿಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅನುಕೂಲವಾಗುವ ಅವಕಾಶಗಳು ದೊರೆಯಲಿದೆ. ಅಕ್ಕಪಕ್ಕದವರ ವದಂತಿಗಳಿಗೆ ಕಿವಿಗೊಡದಿರಿ.

ವೃಷಭ: ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವಾಗಲಿದೆ. ಇದು ನೀವು ಸಾಧನೆಯಲ್ಲಿ ಮೇಲಕ್ಕೆ ಸಾಗಲು ಸಹಕಾರಿಯಾಗಲಿದೆ. ಸಮಯ ಕಳೆಯಲು ಮಾಡಿದ ಕೆಲಸದಿಂದ ನಿಮ್ಮ ಸೃಜನಶೀಲತೆ ಹಾಗೂ ಚಾಣಾಕ್ಷತನ ಹೆಚ್ಚಲಿದೆ.

ಮಿಥುನ: ನಿಮ್ಮ ಬಾಲ್ಯ ಜೀವನ, ನೀವು ನಡೆದು ಬಂದ ದಾರಿಯತ್ತ ಒಮ್ಮೆ ಕಣ್ಣು ಹಾಯಿಸುವುದು ಉತ್ತಮ. ಅನುಭವಿಗಳ ಸಲಹೆಗಳನ್ನು ಪಡೆದು ಸರಿಯಾದ ಮಾರ್ಗದಲ್ಲಿ ಸಾಗಿರಿ. ಭೂಮಿ ಅಥವಾ ಪ್ಲಾಟ್ ಖರೀದಿಸುವ ಯೋಗವಿದೆ.

ಕರ್ಕಾಟಕ: ವ್ಯಾಪಾರ ವ್ಯವಹಾರದಲ್ಲಿ ಸ್ವಲ್ಪ ಬುದ್ಧಿವಂತಿಕೆಯಿಂದ ಕಾರ್ಯ-ನಿರ್ವಹಿಸಬೇಕಾಗುವುದು. ನಿಮ್ಮ ಅವಿರತ ಶ್ರಮದ ಫಲ ಏನು ಎಂಬುದು ಮಕ್ಕಳಿಗೆ ಅರಿವಾಗಲಿದೆ. ನವ ದಂಪತಿಗಳಿಗೆ ಸಂತಾನ ಭಾಗ್ಯ.

ಸಿಂಹ: ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಮನೆಯಲ್ಲಿ ಹೆಚ್ಚಿನ ಸಂಭ್ರಮವಿರುವುದು. ಗುತ್ತಿಗೆ ಕೆಲಸದ ಬಾಕಿ ಹಣವು ಇಂದು ಸಂದಾಯವಾಗುವುದು. ಅನವಶ್ಯಕ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು.

ಕನ್ಯಾ: ಗಂಭೀರ ಅಧ್ಯಯನ ಹಾಗೂ ಅನ್ವೇಷಣೆಗೆ ಮಾಡುವವರಿಗೆ ಶುಭವಾಗುವುದು. ಸನ್ನಿವೇಶವೂ ಕೂಡ ಇದಕ್ಕೆ ಪೂರಕವಾಗಿರುವುದು. ಆರ್ಥಿಕವೃದ್ಧಿ, ಆರೋಗ್ಯವೃದ್ಧಿ, ಅಕಸ್ಮಿಕ ಧನಪ್ರಾಪ್ತಿ ಯೋಗ ಈ ದಿನದಲ್ಲಿದೆ.

ತುಲಾ: ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಹಾಗೂ ಕೆಲವು ಯೋಜನೆಗಳಲ್ಲಿ ಎಡವಿದ ಅನುಭವ ನಿಮಗಾಗಬಹುದು. ಕೌಟುಂಬಿಕ ಸವಾಲುಗಳನ್ನು ಎದುರಿಸಬೇಕಾಗಲಿದೆ.

ವೃಶ್ಚಿಕ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚಿಸಿ. ಹೊಸದನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿದೆ. ಬದುಕಿನ ಅನುಭವಗಳು ನಿಮ್ಮನ್ನು ಯಶಸ್ಸಿನತ್ತ ಕರೆದೊಯ್ಯಬಹುದು.

ಧನು: ನೂತನ ಮನೆ ಕಟ್ಟಲೇಬೇಕೆಂಬ ನಿಮ್ಮ ಆಸೆಯು ಪ್ರಾರಂಭದ ಹಾದಿಯನ್ನು ಕಾಣಲಿದೆ. ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ.

ಮಕರ: ತಂದೆ-ತಾಯಿಯ ಅಥವಾ ಮನೆಯವರ ಮಾತಿನತ್ತ ವಿಶೇಷ ಗಮನ ಹರಿಸಬೇಕಾಗುವುದು. ಎಲ್ಲರ ಅಭಿಪ್ರಾಯವನ್ನೂ ಕೇಳಿ ತೀರ್ಮಾನಿಸುವ ಮನಸ್ಥಿತಿ ಬೆಳೆಸಿಕೊಳ್ಳಿ. ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆ ಇರಲಿ

ಕುಂಭ: ಸಾಕು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಮಾವುತರಿಗೆ ಹೆಚ್ಚಿನ ಜಾಗರೂಕತೆ ಅವಶ್ಯಕ. ಕೌಟುಂಬಿಕ ಸಮಸ್ಯೆಗಳು ಹೊಸದೊಂದು ಆಯಾಮ ಪಡೆಯಲಿದೆ.

ಮೀನ: ಭೂ ವ್ಯವಹಾರ ಪೂರ್ಣಗೊಂಡು ಹಣ ಕೈ ಸೇರುತ್ತದೆ. ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ. ಇನ್ನೊಬ್ಬರಿಗೆ ಗೌರವ ಕೊಟ್ಟು ನೀವು ಗೌರವವನ್ನು ಅಪೇಕ್ಷಿಸುವ ಮನಸ್ಥಿತಿ ಇಟ್ಟುಕೊಳ್ಳಿರಿ.

ಪದಬಂಧ 4910

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಕಣ್ಣಿಗೆ ಕಾಣದಿರುವುದು ಪಕ್ಷದೊಳಗಿದೆ (3)
4. ಈತ ಓದು ಬರಹ ಬಲ್ಲವನು (3)
5. ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ (4)
6. ನಡುವೆ ಕರ ತಿರುಗಿಸಿದರೆ ಪಚ್ಚೆ ಕಾಣುವುದೇ? (4)
7. ಸಮ್ಮುಖದಲ್ಲಿರುವ ಗೆಳೆಯ (2)
9. ಅಂಗವಿಕಲ ತೋರಿದ ಗುಹೆ (2)
13. ಪ್ರಾಣಿಗಳನ್ನು ಪ್ರದರ್ಶನಕ್ಕಾಗಿ ಇಟ್ಟಿರುವ ಜಾಗ (4)
14. ಅಂಗದಲ್ಲಿ ಸುಗಂಧ ಲೇಪನ ದ್ರವ್ಯ (4)
15. ವ್ಯಾಕರಣಶಾಸ್ತ್ರವನ್ನು ತಿಳಿಸುವವನು (3)
16. ಇದು ಅಸಲಿಯಂತೂ ಅಲ್ಲವೇ ಅಲ್ಲ! (3)

ಮೇಲಿಂದ ಕೆಳಕ್ಕೆ
1. ವಲಸೆ ಹೊರಟವರು ನೆಲೆನಿಂತ ಪ್ರದೇಶ (4)
2. ಶ್ರೇಷ್ಠವರ್ಗದ ಸನ್ಯಾಸಿ (5)
3. ಇದು ಅನ್ಯ ಜಾತಿ (3)
5. ಒಳಗಿನ ಅಭಿಪ್ರಾಯವಿದು (4)
8. ಕಾಡುಕೋಣ ಇಲ್ಲಿದೆ (4)
10. ಗೆಲುವನ್ನು ಪಡೆದವನು (4)
11. ಕತ್ತು ಬಗ್ಗಿಸಿ ಹಾಕಿದ ಸಹಿ! (5)
12. ಚಲುವಾದ ಅಂಗಗಳನ್ನು ಹೊಂದಿದವಳು (3)



4909ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಲಹ 4.ಸಭಾಸದ 6.ನಿಶಾಚರಿ 8.ಖಚಿತ 11.ಗುಲಾಮ 13.ಪರಿಹಾಸ 17.ಮಹಾರಾಜ 18.ರುಸುಮು

ಮೇಲಿಂದ ಕೆಳಕ್ಕೆ: 1.ಕರುಬು 2.ಹಸನ್ಮುಖಿ 3.ಚಮಚ 5.ದನಿ 7.ರಿವಾಜು 9.ತರಗು 10.ಪ್ರತಾಪ 12.ಮಹಜರು 14.ರಿಕಾಪು 15.ಸಮ 16.ಗೋದಾಮು

ಸುಡೊಕು 5296

	7			2		3		
3		6	5		8			
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5295 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಟಾಲಿನ್ ವಿರುದ್ಧ ಟೀಕೆ ಅಣ್ಣಾಮಲೈ ಕ್ಷಮೆಗೆ ಡಿಎಂಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಪ್ರವಾಸ ಕುರಿತು ಸುಳ್ಳು ಹಾಗೂ ಮಾನಹಾನಿಕಾರಕ ಹೇಳಿಕೆಗಳನ್ನು ನೀಡಿದ್ದಾರೆ ಎಂಬ ಆರೋಪದ ಮೇರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ವಿರುದ್ಧ ಡಿಎಂಕೆ ಪಕ್ಷವು ಶನಿವಾರ ನೋಟಿಸ್ ಜಾರಿ ಮಾಡಿದೆ.

ಡಿಎಂಕೆಯ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಅವರು ನೋಟಿಸ್ ಜಾರಿ ಮಾಡಿದ್ದು, 'ಅಣ್ಣಾಮಲೈ ಅವರು ತಾವು ನೀಡಿರುವ ಹೇಳಿಕೆಗಳನ್ನು ವಾಪಸ್ ಪಡೆದು 24 ಗಂಟೆಗಳ ಒಳಗೆ ಸಾರ್ವಜನಿಕವಾಗಿ ಕ್ಷಮೆಯಾಚಿಸದಿದ್ದರೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಮತ್ತು ಎರಡು ದಿನಗಳೊಳಗಾಗಿ ಮುಖ್ಯಮಂತ್ರಿ ಅವರ ಸಾರ್ವಜನಿಕ ಪರಿಹಾರ ನಿಧಿಗೆ ₹100 ಕೋಟಿ ಪಾವತಿಸುವಂತೆ ಮಾನ ನಷ್ಟ ಮೊಕದ್ದಮೆ ಹೂಡಲಾಗುವುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮಾರ್ಚ್ 24 ಮತ್ತು 25ರಂದು ಬಿಜೆಪಿ ಆಯೋಜಿಸಿದ್ದ ಪ್ರತಿಭಟನಾ ಕಾರ್ಯಕ್ರಮಗಳಲ್ಲಿ ಅಣ್ಣಾಮಲೈ ಅವರು, ಸ್ಟಾಲಿನ್ ಅವರ ಯುಎಇ ಭೇಟಿಗೆ ವೈಯಕ್ತಿಕ ಉದ್ದೇಶಗಳು ಕಾರಣವೆಂದು ಆರೋಪ ಮಾಡಿದ್ದರು.

ರಷ್ಯಾದ ಜಲಾಂತರ್ಗಾಮಿ ನೌಕೆಯಿಂದ ಕ್ರೂಸ್ ಕಲಿಬ್ ಕ್ಷಿಪಣಿಗಳ ಸರಣಿ ದಾಳಿ

ಉಕ್ರೇನ್‌ನ ಮತ್ತೊಂದು ಶಸ್ತ್ರಕೋಠಿ ಧ್ವಂಸ

ಮಾಸ್ಕೊ: ಉಕ್ರೇನಿನ ಮಿಲಿಟರಿ ಪ್ರತಿದಾಳಿ ಶಕ್ತಿಯನ್ನು ಕುಗ್ಗಿಸಲು ನಿಖರ ಗುರಿ ಭೇದಿಸುವ ಕ್ಷಿಪಣಿಗಳ ದಾಳಿ ಮುಂದುವರಿಸಿರುವ ರಷ್ಯಾ, ಉಕ್ರೇನಿನ ವಾಯವ್ಯ ಭಾಗದ ಜೈಟೊಮಿರ್ ನಗರದ ಬಳಿ ಉಕ್ರೇನ್ ಸೇನೆಯ ಶಸ್ತ್ರಾಸ್ತ್ರ ಮತ್ತು ಮಿಲಿಟರಿ ಉಪಕರಣಗಳ ರಹಸ್ಯ ಸಂಗ್ರಹಾಗಾರವನ್ನು ಧ್ವಂಸಗೊಳಿಸಿದೆ.

'ಉಕ್ರೇನ್ ಜೈಟೊಮಿರ್ ನಗರದ ಬಳಿ ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಸಂಗ್ರಹಿಸಿಟ್ಟಿದ್ದ ಶಸ್ತ್ರಾಗಾರವನ್ನು ನಾಶ ಮಾಡಲಾಗಿದೆ. ಇದು ಶತ್ರುವಿನ ಅತ್ಯಂತ ಶಕ್ತಿಯುತ ಕೇಂದ್ರವಾಗಿತ್ತು. ಶುಕ್ರವಾರ ಜಲಾಂತರ್ಗಾಮಿ ನೌಕೆಯಿಂದ ಬಹುವಿಧದ ಕಲಿಬ್ ಕ್ರೂಸ್ ಕ್ಷಿಪಣಿಗಳ ಸರಣಿ ದಾಳಿ ನಡೆಸಲಾಯಿತು. ಕಲಿಬ್ ಕ್ಷಿಪಣಿಗಳು ಯಶಸ್ವಿಯಾಗಿ ಗುರಿ ಭೇದಿಸಿವೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ. ಜಲಾಂತರ್ಗಾಮಿನೌಕೆಯಿಂದ ಕಲಿಬ್ ಕ್ಷಿಪಣಿಗಳನ್ನು ಉಡಾಯಿಸಿ, ಉಕ್ರೇನಿನ ಶಸ್ತ್ರಾಗಾರವನ್ನು ನಾಶಪಡಿಸಿರುವ ವಿಡಿಯೊವನ್ನು ರಷ್ಯಾ ರಕ್ಷಣಾ ಸಚಿವಾಲಯ ಶನಿವಾರ ಟ್ವಿಟರ್ ಮತ್ತು ಫೇಸ್‌ಬುಕ್ ಜಾಲತಾಣಗಳಲ್ಲಿನ ತನ್ನ ಅಧಿಕೃತ ಖಾತೆಯಲ್ಲಿ ಬಿಡುಗಡೆ ಮಾಡಿದೆ. ಈ ಬಗ್ಗೆ 'ಅಲ್ ಜಝೀರಾ' ಕೂಡ ವರದಿ ಮಾಡಿದೆ.

'ಈವರೆಗೆ ಉಕ್ರೇನ್‌ನಲ್ಲಿ 111 ಮಿಲಿಟರಿ ಸೌಲಭ್ಯ ತಾಣಗಳನ್ನು ನಾಶಪಡಿಸಲಾಗಿದೆ. ಒಂಬತ್ತು ಶಸ್ತ್ರ ಸಂಗ್ರಹಾಗಾರ ಮತ್ತು ಎರಡು ಇಂಧನ ಸಂಗ್ರಹಗಾರ, ಶಶಸ್ತ್ರ ಪಡೆಯ 92 ಬಲಿಷ್ಠ ತಾಣ ನಾಶಪಡಿಸಲಾಗಿತ್ತು. ಒಂದೇ ದಿನದಲ್ಲಿ ಮೂರು ಯುದ್ಧ ವಿಮಾನಗಳು, 6 ಮಾನವ ರಹಿತ ಡ್ರೋನ್‌ಗಳು, ಕ್ಷಿಪಣಿಗಳ ತಾಂತ್ರಿಕ ಸಂಕೀರ್ಣ ನಾಶಪಡಿಸಲಾಗಿದೆ' ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಶನಿವಾರ ತಿಳಿಸಿದ್ದಾರೆ.

ಸೇನಾ ಕಾರ್ಯಾಚರಣೆ 24ನೇ ದಿನಕ್ಕೆ ಕಾಲಿಟ್ಟ ಸಂದರ್ಭದಲ್ಲಿ ರಷ್ಯಾ ಮೊದಲ ಬಾರಿಗೆ ತನ್ನ ಬತ್ತಳಿಕೆಯ ಬ್ರಹ್ಮಾಸ್ತ್ರ 'ಕಿಂಜಾಲ್' ಹೈಪರ್ ಸಾನಿಕ್ ಕ್ಷಿಪಣಿ ಬಳಸಿ, ಪಶ್ಚಿಮ ಉಕ್ರೇನ್‌ನ ಕಾರ್ಪಾಥಿಯನ್ ಪರ್ವತಗಳ ತಪ್ಪಲಿನ ಡಿಲ್ಯಾಟಿನ್ ಗ್ರಾಮದಲ್ಲಿದ್ದ ಉಕ್ರೇನ್ ಸೇನೆಯ ಬೃಹತ್ ಶಶ್ತ್ರಾಸ್ತ್ರ ಮತ್ತು ಕ್ಷಿಪಣಿಗಳ ಸಂಗ್ರಹದ ನೆಲಮಾಳಿಗೆಯ ಗೋದಾಮನ್ನು ಧ್ವಂಸ ಮಾಡಿತ್ತು.

ಇತ್ತೀಚೆಗಷ್ಟೇ ಮೈಕೊಲೈವ್‌ನ ಅಜೋವಾ ಕಪ್ಪು ಸಮುದ್ರದ ಬಂದರು ಸಮೀಪದ ಕೋಸ್ಟಿಯಾಂಟಿನಿವ್ಕಾದಲ್ಲಿನ ಉಕ್ರೇನ್ ಸೇನೆಗೆ ಇಂಧನ ಪೂರೈಸುವ ಬೃಹತ್ ಇಂಧನ ಸಂಗ್ರಹಾಗಾರವನ್ನು ಕಲಿಬ್ ಕ್ರೂಸ್ ಕ್ಷಿಪಣಿಗಳಿಂದ ರಷ್ಯಾ ಪಡೆಗಳು ಧ್ವಂಸ ಮಾಡಿದ್ದವು.

'ರಾಜಧಾನಿ ಕೀವ್ ನಗರಕ್ಕೆ 146 ಕಿ.ಮೀ ದೂರದಲ್ಲಿರುವ ಚೆರ್ನಿವ್ ಸೇರಿದಂತೆ ಉಕ್ರೇನಿನ ಪ್ರಮುಖ ನಗರಗಳ ಮೇಲೆ ರಷ್ಯಾ ಪಡೆಗಳ ಶೆಲ್ ದಾಳಿ ದಾಳಿ ಮುಂದುವರಿದಿದೆ. ನಾಗರಿಕರ ಪ್ರದೇಶಗಳನ್ನು ಗುರಿಯಾಗಿಸಿ ಮತ್ತಷ್ಟು ಪ್ರಬಲ ಶಶ್ತ್ರಾಸ್ತ್ರಗಳನ್ನು ರಷ್ಯಾ ಬಳಸುವ ಸಾಧ್ಯತೆ ಇದೆ' ಎಂದು ಬ್ರಿಟನ್ ರಕ್ಷಣಾ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ರಷ್ಯಾ ಸೇನೆಯ ದಾಳಿಗೆ ಉಕ್ರೇನ್ ಸೇನೆಗೆ ಆದ ನಷ್ಟ

267	207	1,618	116	14,533
ಮಾನವ ರಹಿತ ಡ್ರೋನ್‌ಗಳು	ವಿಮಾನ ಹೊಡೆದುರುಳಿಸುವ ಕ್ಷಿಪಣಿ ವ್ಯವಸ್ಥೆ	ಟ್ಯಾಂಕ್‌ಗಳು	ಬಹುವಿಧದ ಕ್ಷಿಪಣಿ ಉಡಾವಣೆ ವ್ಯವಸ್ಥೆ	ವಿಶೇಷ ಮಿಲಿಟರಿ ವಾಹನಗಳು

ಉಕ್ರೇನ್ ಸೇನೆಯ ಕಲಿನಿವ್ಕಾ ಇಂಧನ ಪೂರೈಕೆ ದಾಸ್ತಾನು ಘಟಕ ರಷ್ಯಾದ ಕ್ಷಿಪಣಿ ದಾಳಿಗೆ ಧ್ವಂಸವಾಗಿದೆ — ಎಎಫ್‌ಪಿ ಚಿತ್ರ

31ನೇ ದಿನದ ಬೆಳವಣಿಗೆಗಳು

- ಶುಕ್ರವಾರ ಒಂದೇ ದಿನ ರಷ್ಯಾದ 3 ಯುದ್ಧ ವಿಮಾನಗಳು, 5 ಕ್ರೂಸ್ ಕ್ಷಿಪಣಿಗಳು, 3 ಮಾನವ ರಹಿತ ಡ್ರೋನ್‌ಗಳು ಮತ್ತು ಒಂದು ಹೆಲಿಕಾಪ್ಟರ್ ನಾಶಪಡಿಸಲಾಗಿದೆ –ಉಕ್ರೇನ್ ಸಶಸ್ತ್ರ ಪಡೆಗಳ ಕಮಾಂಡರ್
- ಲುವಿವ್ ನಗರದಲ್ಲಿ ಮೂರು ಬಾರಿ ಭಾರೀ ಸ್ಫೋಟದ ಸದ್ದು ಕೇಳಿಸಿದೆ. ಕ್ಷಿಪಣಿಗಳ ದಾಳಿ ನಡೆದಿದೆ –ನಗರದ ಗವರ್ನರ್ ಹೇಳಿಕೆ
- ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ವಾರ್ಸಾದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು 'ಕಟುಕ' ಎಂದು ನಿಂದಿಸಿದ್ದಾರೆ
- ಡಾನ್‌ಬಾಸ್ ಪ್ರದೇಶದಲ್ಲಿ ಆಕ್ರಮಣಕ್ಕೆ ತನ್ನ ಸೇನೆಗೆ ಬಲ ತುಂಬಲು ರಷ್ಯಾ ಜಾರ್ಜಿಯಾದಿಂದ ಸೇನಾಪಡೆಗಳನ್ನು ಉಕ್ರೇನ್‌ಗೆ ಕಳುಹಿಸುತ್ತಿರುವ ಸೂಚನೆಗಳು ಕಂಡುಬಂದಿವೆ– ಅಮೆರಿಕದ ಹಿರಿಯ ರಕ್ಷಣಾ ಅಧಿಕಾರಿ ಹೇಳಿಕೆ
- ಮರಿಯುಪೋಲ್‌ನಲ್ಲಿ ಸಿಲುಕಿರುವ ನಾಗರಿಕರನ್ನು ಮಾನವೀಯ ಕಾರಿಡಾರ್‌ಗಳ ಮೂಲಕ ಸ್ಥಳಾಂತರಿಸಲು ಫ್ರಾನ್ಸ್, ಟರ್ಕಿ, ಗ್ರೀಸ್ ಜಂಟಿ ಕಾರ್ಯಾಚರಣೆ ನಡೆಸಲಿವೆ– ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್
- ಉಕ್ರೇನ್ ಯುದ್ಧದಲ್ಲಿ ಇಲ್ಲಿಯವರೆಗೆ ರಷ್ಯಾದ 7 ಮಂದಿ ಹಿರಿಯ ಸೇನಾಧಿಕಾರಿಗಳು ಹತರಾಗಿದ್ದಾರೆ.
- ಅಮೆರಿಕ ಅಧ್ಯಕ್ಷ ಜೋ ಬೈಡನ್ ವಾರ್ಸಾದಲ್ಲಿ ಉಕ್ರೇನಿನ ವಿದೇಶಾಂಗ ಸಚಿವ ಡಿಮಿಟ್ರ ಕುಲೆಬಾ, ರಕ್ಷಣಾ ಸಚಿವ ಒಲೆಕ್ಸಿ ರೆಜ್ನಿಕಾವ್ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಿದರು
- ಅಣ್ವಸ್ತ್ರಗಳ ಬಳಕೆ ಮಾಡುವ ರಷ್ಯಾದ ಬಡಾಯಿ ಅಪಾಯಕಾರಿ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಉತ್ತೇಜಿಸುತ್ತಿದೆ. ಒಂದು ನಿರ್ದಿಷ್ಟ ದೇಶವನ್ನಷ್ಟೇ ಅಲ್ಲದೆ ಇಡೀ ಗ್ರಹವನ್ನು ಅಣ್ವಸ್ತ್ರಗಳಿಂದ ನಾಶಪಡಿಸಬಹುದು– ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ದೋಹಾದ ರಾಜಕಾರಣಿಗಳು ಮತ್ತು ಉದ್ಯಮಿಗಳನ್ನು ಉದ್ದೇಶಿ ಮಾಡಿದ ವಿಡಿಯೊ ಭಾಷಣದಲ್ಲಿ ಹೇಳಿಕೆ
- ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದಿಂದ ಉಂಟಾದ ಅಣು ದಾಳಿಯ ಬೆದರಿಕೆ ಇಡೀ ಜಗತ್ತನ್ನು ಆತಂಕಕ್ಕೆ ದೂಡಿದೆ. ಅಣ್ವಸ್ತ್ರ ದಾಳಿಗೆ ತುತ್ತಾದ ಏಕೈಕ ದೇಶ ನಮ್ಮದು– ಆ 'ದುರಂತ' ಮತ್ತೆಂದಿಗೂ ಮರುಕಳಿಸಬಾರದು– ಜಪಾನ್ ಪ್ರಧಾನಿ ಫುಮಿಯೊ ಕಿಶಿಡ
- ಪುಟಿನ್ ಉಕ್ರೇನ್ ಮೇಲೆ ಅನಾದಿಕಾಲದ 'ಅನಾಗರಿಕ ಯುದ್ಧ' ನಡೆಸುತ್ತಿದ್ದಾರೆ. ಇದರಲ್ಲಿ ಅವರಿಗೆ ಗೆಲುವು ಸಿಗದು– ನ್ಯಾಟೊ ಉಪ ಪ್ರಧಾನ ಕಾರ್ಯದರ್ಶಿ ಮಿರ್ಸಿಯಾ ಜಿಯೋನಾ ಹೇಳಿಕೆ
- ಮರಿಯುಪೋಲ್‌ನಲ್ಲಿ ಇನ್ನೂ ಒಂದು ಲಕ್ಷಕ್ಕೂ ಹೆಚ್ಚು ನಾಗರಿಕರು ಸಿಲುಕಿದ್ದಾರೆ– ಉಕ್ರೇನ್ ಉಪ ಪ್ರಧಾನಿ ಇರೆನಾ ವೆರೆಸ್‌ಚುಕ್
- ಉಕ್ರೇನ್‌ನಲ್ಲಿ ರಷ್ಯಾ 34 ಆರೋಗ್ಯ ಕೇಂದ್ರಗಳ ಮೇಲೆ ದಾಳಿ ನಡೆಸಿದೆ

ಉಕ್ರೇನ್ ಮೇಲೆ 2ನೇ ಹಂತದ ಸೇನಾ ಕಾರ್ಯಾಚರಣೆಗೆ ಪುಟಿನ್ ಪಡೆ ಸಜ್ಜು

ರಷ್ಯಾದಿಂದ ಎಸ್–400 ಕ್ಷಿಪಣಿ ತಾಲೀಮು

ಮಾಸ್ಕೊ (ರಾಯಿಟರ್ಸ್): ಉಕ್ರೇನ್ ಮೇಲೆ ಮೊದಲ ಹಂತದ ವಿಶೇಷ ಸೇನಾ ಕಾರ್ಯಾಚರಣೆ ಪೂರ್ಣಗೊಳಿಸಿರುವ ರಷ್ಯಾ ತನ್ನ ಬತ್ತಳಿಕೆಯಲ್ಲಿರುವ ಅತ್ಯಾಧುನಿಕ ಮತ್ತು ಮಾರಕ ಎಸ್–400 ಕ್ಷಿಪಣಿ ವ್ಯವಸ್ಥೆಯ ತಾಲೀಮನ್ನು ಪಶ್ಚಿಮ ಕಲಿನನ್‌ಗ್ರಾಡ್‌ನ ಗಡಿಯಲ್ಲಿ ನಡೆಸುತ್ತಿದೆ ಎಂದು 'ಇಂಟರ್ ಫಾಕ್ಸ್' ಸುದ್ದಿ ಸಂಸ್ಥೆ ಶನಿವಾರ ಹೇಳಿದೆ.

ಉಕ್ರೇನ್ ಆಕ್ರಮಣದಲ್ಲಿ ನಿರೀಕ್ಷಿತ ಜಯ ಸಿಗದೆ ನಿರಾಸೆಗೊಂಡಂತಿರುವ ರಷ್ಯಾ ಯುದ್ಧ ತಂತ್ರ ಬದಲಿಸುವ ಮತ್ತು ಉಕ್ರೇನ್ ಮೇಲೆ ಮತ್ತಷ್ಟು ಭೀಕರ ದಾಳಿಗೆ ಇಳಿಯುವ ಸುಳಿವು ನೀಡಿದೆ.

ಸುಖೊಯ್ –27 ಯುದ್ಧ ವಿಮಾನಗಳನ್ನು ಸಹ ಸಮರಾಭ್ಯಾಸಕ್ಕೆ ನಿಯೋಜಿಸಿದೆ. ಜಪಾನ್ ಹಕ್ಕು ಸಾಧಿಸುತ್ತಿರುವ ದ್ವೀಪದಲ್ಲೂ ರಷ್ಯಾ ಎಸ್–400 ಕ್ಷಿಪಣಿ ವ್ಯವಸ್ಥೆಯ ತಾಲೀಮು ನಡೆಸಿತು ಎಂದು ಅದು ವರದಿ ಮಾಡಿದೆ.

ಮೊದಲ ಹಂತದ ಆಕ್ರಮಣ ಯಶಸ್ವಿ(ರಷ್ಯಾ ಸೇನೆ ಕೀವ್ ವರದಿ): ಉಕ್ರೇನ್‌ನಲ್ಲಿ ಮೊದಲ ಹಂತದ ವಿಶೇಷ ಸೇನಾ ಕಾರ್ಯಾಚರಣೆ ಯಶಸ್ವಿಯಾಗಿ ಮುಗಿದಿದೆ. ಈಗ ಪೂರ್ವ ಉಕ್ರೇನಿನ ಡಾನ್‌ಬಾಸ್ ಪ್ರದೇಶದ ಸಂಪೂರ್ಣ ವಿಮೋಚನೆಯ ಮೇಲೆ ತಮ್ಮ ಪಡೆಗಳು ಗಮನ ಕೇಂದ್ರೀಕರಿಸಿವೆ ಎಂದು ರಷ್ಯಾ ಸೇನೆ ಹೇಳಿದೆ.

ರಷ್ಯಾ ಉಕ್ರೇನ್ ಮೇಲಿನ ಪೂರ್ಣ ಪ್ರಮಾಣದ ಆಕ್ರಮಣದಿಂದ ಹಿಂದೆ ಸರಿಯುವ ಮತ್ತು ತನ್ನ ಗಮನವನ್ನು ರಷ್ಯಾ ಪರ ಪ್ರತ್ಯೇಕವಾದಿಗಳು ಹಕ್ಕು ಸಾಧಿಸುತ್ತಿರುವ ತನ್ನ ಗಡಿಯಲ್ಲಿನ ಪೂರ್ವ ಪ್ರದೇಶದ ಮೇಲೆ ಗಮನ ಕೇಂದ್ರೀಕರಿಸುವ ಸೂಚನೆ ನೀಡುತ್ತಿದ್ದಂತೆ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಮತ್ತೆ ನೇರ ಶಾಂತಿ ಮಾತುಕತೆ ಆರಂಭಿಸಲು ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಒತ್ತಾಯಿಸಿದ್ದಾರೆ.

ಕಾರ್ಯಚಟುವಟಿಕೆ ಸ್ಥಗಿತಗೊಳಿಸಿರುವ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದ ಕಾರ್ಮಿಕರು ವಾಸಿಸುವ ಸ್ಲವ್ಯುಟಿಕ್ ಪಟ್ಟಣವನ್ನು ರಷ್ಯಾದ ಪಡೆಗಳು ನಿಯಂತ್ರಣಕ್ಕೆ ತೆಗೆದುಕೊಂಡಿವೆ ಎಂದು ಕೀವ್ ಗವರ್ನರ್ ಒಲೆಕ್ಸಾಂಡರ್ ಪ್ಯಾವುಲಕ್ ಹೇಳಿದ್ದಾರೆ.

ರಾಜಧಾನಿ ಕೀವ್‌ನಲ್ಲಿ ಶನಿವಾರ ರಾತ್ರಿ 8ರಿಂದ ಜಾರಿಗೆ ಬರುವಂತೆ ಸೋಮವಾರ ಬೆಳಿಗ್ಗೆ 7ರವರೆಗೆ ಕರ್ಫ್ಯೂ ವಿಧಿಸಲಾಗಿದೆ. ಕರ್ಫ್ಯೂ ಬಿಗಿಗೊಳಿಸಲು ಮಿಲಿಟರಿ ಕಮಾಂಡ್ ನಿರ್ಧರಿಸಿದೆ' ಎಂದು ನಗರದ ಮೇಯರ್ ವಿಟಾಲಿ ಕ್ಲಿಟ್‌ಸ್ಕೊ ತಿಳಿಸಿದರು.

'ಉಚಿತ ಪಡಿತರ ವಿತರಣೆ ಮತ್ತೆ 6 ತಿಂಗಳು ವಿಸ್ತರಣೆ'

ನವದೆಹಲಿ (ಪಿಟಿಐ): ದೇಶದ ಬಲಿಷ್ಠತೆ ಪ್ರತಿ ನಾಗರಿಕನ ಶಕ್ತಿಯ ಮೇಲೆ ನಿಂತಿದೆ. ಹಾಗಾಗಿ ಉಚಿತ ಆಹಾರಧಾನ್ಯ ವಿತರಿಸುವ ಯೋಜನೆಯನ್ನು ಇನ್ನೂ ಆರು ತಿಂಗಳವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ತಿಳಿಸಿದರು.

ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ಇದೇ ವರ್ಷದ ಸೆಪ್ಟೆಂಬರ್‌ವರೆಗೆ ವಿಸ್ತರಿಸಲಾಗುತ್ತಿದ್ದು, 80 ಕೋಟಿಗೂ ಹೆಚ್ಚು ನಾಗರಿಕರು ಮೊದಲಿನಂತೆಯೇ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ ಎಂದು ಮೋದಿ ಅವರು ಹೇಳಿದರು.

ಕೊರೊನಾ ಪಿಡುಗಿನ ಹಿನ್ನೆಲೆಯಲ್ಲಿ 2020ರ ಮಾರ್ಚ್‌ನಿಂದ ಪಿಎಂಜಿಕೆಎವೈ ಪ್ರಾರಂಭಿಸಲಾಗಿದೆ.

ಉತ್ತರಪ್ರದೇಶದಲ್ಲೂ ಮೂರು ತಿಂಗಳು ವಿಸ್ತರಣೆ(ಲಖನೌ ವರದಿ): ಇದಕ್ಕೂ ಮೊದಲು, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಆರಂಭಿಸಲಾಗಿದ್ದ ಉಚಿತ ಪಡಿತರ ಯೋಜನೆಯನ್ನು ಇನ್ನೂ ಮೂರು ತಿಂಗಳು ಮುಂದುವರಿಸಲು ಯೋಗಿ ಆದಿತ್ಯನಾಥ ನೇತೃತ್ವದ ಉತ್ತರ ಪ್ರದೇಶ ಸಚಿವ ಸಂಪುಟವು ಶನಿವಾರ ನಿರ್ಧರಿಸಿದೆ. ಎರಡನೇ ಅವಧಿಗೆ ಅಧಿಕಾರಕ್ಕೆ ಬಂದ ಯೋಗಿ ನೇತೃತ್ವದ ಸಚಿವ ಸಂಪುಟದ ಮೊದಲ ಪ್ರಮುಖ ನಿರ್ಧಾರ ಇದು. ಉಚಿತ ಪಡಿತರ ಯೋಜನೆಯು ಮಾರ್ಚ್ ತಿಂಗಳಲ್ಲಿ ಕೊನೆಗೊಳ್ಳಬೇಕಿತ್ತು. ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯ ವರೆಗೆ ಉಚಿತ ಪಡಿತರ ಯೋಜನೆಯು ವಿಸ್ತರಣೆಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಉತ್ತರ ಪ್ರದೇಶ ವಿರೋಧ ಪಕ್ಷದ ನಾಯಕನಾಗಿ ಅಖಿಲೇಶ್ ಆಯ್ಕೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಶನಿವಾರ ಆಯ್ಕೆ ಆದರು.

ಶನಿವಾರ ನಡೆದ ಎಸ್‌ಪಿ ಶಾಸಕರ ಸಭೆಯಲ್ಲಿ ಅಖಿಲೇಶ್ ಅವರನ್ನು ಎಸ್‌ಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ಕುರಿತು ಉತ್ತರ ಪ್ರದೇಶ ಎಸ್‌ಪಿ ಅಧ್ಯಕ್ಷ ನರೇಶ್ ಉತ್ತಮ್ ಅವರು ಘೋಷಿಸಿದ್ದರು. ಅದಾದ ಕೆಲವೇ ಗಂಟೆಗಳಲ್ಲಿ ಅಖಿಲೇಶ್ ಅವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆ ಆಗಿರುವುದನ್ನು ಘೋಷಿಸಲಾಯಿತು.

ಉತ್ತರ ಪ್ರದೇಶ ವಿಧಾನಸಭೆಯ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ದುಬೆ ಅವರು ಈ ಕುರಿತು ಪ್ರಕಟಣೆ ಹೊರಡಿಸಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ಅಖಿಲೇಶ್ ಯಾದವ್ ಅವರನ್ನು ನೇಮಿಸಲಾಗಿದೆ. ಮಾರ್ಚ್ 26ರಿಂದಲೇ ಅಖಿಲೇಶ್ ಅವರ ಕರ್ತವ್ಯ ಅವಧಿ ಜಾರಿಗೆ ಬಂದಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕರ್ಹಾಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಖಿಲೇಶ್ ಅವರು, ಬಿಜೆಪಿ ಸಂಸದ ಎಸ್.ಪಿ. ಬಘೇಲ್ ಎದುರು ಭಾರಿ ಅಂತರದಿಂದ ಗೆದ್ದಿದ್ದರು. ರಾಜ್ಯ ರಾಜಕಾರಣದಲ್ಲಿ ಉಳಿಯುವ ಸಲುವಾಗಿ ಆಜಂಗಡದ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಅಖಿಲೇಶ್ ಅವರ ನಾಯಕತ್ವದಲ್ಲಿ ಸಮಾಜವಾದಿ ಪಕ್ಷವು ಜನರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಲಿದೆ. ಸರ್ಕಾರದ ತಪ್ಪು ಮಾಹಿತಿ ಮತ್ತು ತಪ್ಪು ನೀತಿಗಳನ್ನು ವಿರೋಧಿಸಲಿದೆ' ಎಂದು ನರೇಶ್ ಉತ್ತಮ್ ಹೇಳಿದರು.

ಶಿವಪಾಲ್ ಯಾದವ್‌ಗೆ ಆಹ್ವಾನ ಇಲ್ಲ

ಸಮಾಜವಾದಿ ಪಕ್ಷದ ಶಾಸಕಾಂಗ ಪಕ್ಷದ ಸಭೆಗೆ ತಮ್ಮನ್ನು ಆಹ್ವಾನಿಸಿಲ್ಲ ಎಂದು ಎಸ್‌ಪಿ ಮಿತ್ರಪಕ್ಷವಾದ ಪ್ರಗತಿಶೀಲ ಸಮಾಜವಾದಿ ಪಕ್ಷ–ಲೋಹಿಯ (ಪಿಎಸ್‌ಪಿ-ಎಲ್) ಮುಖ್ಯಸ್ಥ, ಅಖಿಲೇಶ್ ಯಾದವ್ ಅವರ ಚಿಕ್ಕಪ್ಪ ಶಿವಪಾಲ್ ಸಿಂಗ್ ಯಾದವ್ ಅವರು ಆರೋಪಿಸಿದ್ದಾರೆ.

'ಸಭೆಯ ಕುರಿತು ನನಗೆ ಮಾಹಿತಿ ಇಲ್ಲ. ಎಸ್‌ಪಿ ನಾಯಕರನ್ನು ಸಂಪರ್ಕಿಸಲು ನಾನು ಪ್ರಯತ್ನಿಸಿದೆ. ಆದರೂ ನನಗೆ ಯಾವುದೇ ಮಾಹಿತಿ ದೊರಕಲಿಲ್ಲ' ಎಂದು ಅವರು ಮಾಧ್ಯಮಗಳ ಎದುರು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಉತ್ತರ ಪ್ರದೇಶ ಎಸ್‌ಪಿ ಅಧ್ಯಕ್ಷ ನರೇಶ್ ಉತ್ತಮ್, ಶನಿವಾರ ನಡೆದ ಸಭೆಗೆ ಎಸ್‌ಪಿ ಶಾಸಕರನ್ನು ಮಾತ್ರ ಆಹ್ವಾನಿಸಲಾಗಿತ್ತು. ಶಿವಪಾಲ್ ಅವರು ಸ್ವಂತ ಪಕ್ಷವನ್ನು ಹೊಂದಿದ್ದಾರೆ. ಮಾರ್ಚ್ 28ರಂದು ಮತ್ತೊಂದು ಸಭೆ ಆಯೋಜಿಸಲಾಗಿದೆ. ಆ ಸಭೆಗೆ ಎಸ್‌ಪಿಯ ಎಲ್ಲಾ ಮಿತ್ರಪಕ್ಷಗಳನ್ನೂ ಆಹ್ವಾನಿಸಲಾಗುತ್ತದೆ. ಆಗ ಶಿವಪಾಲ್ ಅವರಿಗೂ ಆಹ್ವಾನ ಇರಲಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಉತ್ತರಾಖಂಡದ ಮೊದಲ ಮಹಿಳಾ ಸ್ಪೀಕರ್ ರಿತು ಖಂಡೂರಿ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ವಿಧಾನಸಭೆಯ ಮೊದಲ ಮಹಿಳಾ ಸ್ಪೀಕರ್ ಆಗಿ ಬಿಜೆಪಿ ಶಾಸಕಿ ರಿತು ಖಂಡೂರಿ ಅವರು ಅವಿರೋಧವಾಗಿ ಶನಿವಾರ ಚುನಾಯಿತರಾದರು.

ರಿರು ಅವರು ಆಯ್ಕೆ ಆದ ಕುರಿತು ಹಂಗಾಮಿ ಸ್ಪೀಕರ್ ಬನ್ಶೀಂದರ್ ಭಗತ್ ಅವರು ಘೋಷಿಸಿದರು.

ರಾಜ್ಯದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಿತು ಅವರನ್ನು ಅಭಿನಂದಿಸಿದರು.

'ಇದು ನಮಗೆಲ್ಲಾ ಐತಿಹಾಸಿಕ ದಿನವಾಗಿದೆ. ರಿತೂ ಮೂಲಕ ನಾವು ಮೊದಲ ಮಹಿಳಾ ಸ್ಪೀಕರ್ ಅವರನ್ನು ಪಡೆದಿದ್ದೇವೆ. ಉತ್ತರಾಖಂಡ ರಾಜ್ಯ ರಚನೆಯಲ್ಲಿ ಪಾಲ್ಗೊಂಡಿದ್ದ ರಾಜ್ಯದ ಎಲ್ಲಾ ಮಹಿಳೆಯರಿಗೆ ನೀಡಿದ ಗೌರವವಿದು' ಎಂದು ಧಾಮಿ ಹೇಳಿದರು.

ಸ್ಪೀಕರ್ ಆಗಿ ಆಯ್ಕೆ ಆದ ಬಳಿಕ ಶಾಸಕರನ್ನು ಉದ್ದೇಶಿಸಿ ಭಾಷಣ ಮಾಡಿದ ರಿತು, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆ ಆಗಿರುವವರು ಈ ಐದು ವರ್ಷದ ಅವಧಿಯಲ್ಲಿ ಶಾಸನ ಸಭೆಯ ಕಾರ್ಯವಿಧಾನ ಕಲಿಯಲು ಬಳಸಿಕೊಳ್ಳಬೇಕು. ಸಾರ್ವಜನಿಕರ ಹಿತಾಸಕ್ತಿ ಕುರಿತಂತೆ ಚರ್ಚೆಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ರಿತು ಅವರು ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಬಿ.ಸಿ. ಖಂಡೂರಿ ಅವರ ಮಗಳು. ಕೋಟದ್ವಾರ್ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಇವರು ಮಾಜಿ ಮಂತ್ರಿ ಎಸ್. ಎಸ್. ನೇಗಿ ಅವರ ವಿರುದ್ಧ ಜಯ ಸಾಧಿಸಿದ್ದರು.

> **ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆಯು ರಿತೂ ಅವರ ನೇತೃತ್ವದಲ್ಲಿ ಜಾರಿ ಆಗುವಂತಾಗಲಿ**
> **ಪುಷ್ಕರ್ ಸಿಂಗ್ ಧಾಮಿ**
> ಉತ್ತರಾಖಂಡ ಮುಖ್ಯಮಂತ್ರಿ

ವಿದೇಶಕ್ಕೆ ತೆರಳುವವರಿಗೆ ಬೂಸ್ಟರ್ ಡೋಸ್

ನವದೆಹಲಿ (ಪಿಟಿಐ): ಶಿಕ್ಷಣ, ಉದ್ಯೋಗ ಹಾಗೂ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ವಿದೇಶಗಳಿಗೆ ತೆರಳುವ ಭಾರತೀಯರಿಗೆ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ಮುಂಜಾಗ್ರತೆ ದೃಷ್ಟಿಯಿಂದ ಲಸಿಕೆಯ ಬೂಸ್ಟರ್ ಡೋಸ್ ನೀಡಬೇಕು ಎಂಬುದು ಸರ್ಕಾರದ ನಿಲುವಾಗಿದ್ದು, ಶೀಘ್ರವೇ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ಮಾರ್ಚ್ 27ರಿಂದ ಮತ್ತೆ ಆರಂಭಗೊಳ್ಳಲಿದೆ. ಪ್ರಯಾಣಿಕರು ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ಹಾಕಿಸಿಕೊಂಡಿರಬೇಕು ಎಂಬುದು ಸೇರಿ ಹಲವಾರು ನಿರ್ಬಂಧಗಳನ್ನು ಕೆಲ ದೇಶಗಳು ಜಾರಿಗೊಳಿಸಿವೆ. ಇದರ ಬೆನ್ನಲ್ಲೇ ಕೇಂದ್ರ ಈ ನಿರ್ಧಾರ ಕೈಗೊಂಡಿದೆ.

ಸಜೀವ ದಹನ ಪ್ರಕರಣ: ಗ್ರಾಮದಲ್ಲಿ ಸ್ಮಶಾನ ಮೌನ

ಪಶ್ಚಿಮ ಬಂಗಾಳದ ಬಿರ್‌ಭೂಮ್: ಪರಾರಿಯಾದ ಜನರಿಗೆ ಮನೆಗೆ ಮರಳಲು ಜೀವ ಭಯ

ಬೋಗ್‌ತುಇ (ಪಶ್ಚಿಮ ಬಂಗಾಳ) (ಪಿಟಿಐ): ಎಂಟು ಜನರು ಸಜೀವ ದಹನಗೊಂಡ ಬೋಗ್‌ತುಇ ಗ್ರಾಮದಲ್ಲಿ ಸ್ಮಶಾನ ಮೌನ ಆವರಿಸಿದೆ.

ರಾಮ್‌ಪುರಹಾಟ್‌ನ ಸಮೀಪದ ಈ ಗ್ರಾಮದ ಹಲವು ಜನರು ಪರಾರಿಯಾಗಿದ್ದಾರೆ. ಟಿಎಂಸಿಯ ಸ್ಥಳೀಯ ಮುಖಂಡ ಭಾಡು ಶೇಖ್ ಹತ್ಯೆಯ ಬಳಿಕ, ಇಡೀ ದೇಶವನ್ನು ಆಘಾತಗೊಳಿಸಿದ ಸಜೀವ ದಹನ ಪ್ರಕರಣ ನಡೆದಿತ್ತು. ಇನ್ನಷ್ಟು ಹಿಂಸೆ ನಡೆಯಬಹುದು ಎಂಬ ಭೀತಿಯಲ್ಲಿ ಹಲವು ಜನರು ಗ್ರಾಮ ಬಿಟ್ಟು ಹೋಗಿದ್ದಾರೆ.

ಸುತ್ತಮುತ್ತಲಿನ ಹಳ್ಳಿಗಳಾದ ಪುರ್ಬಪಾರಾ, ಪಶ್ಚಿಮಪಾರಾ ಮತ್ತು ಮಯರ್‌ಪಾರಾದ ನಿವಾಸಿಗಳು ಕೂಡ ತಮ್ಮ ಮನೆ ಬಿಟ್ಟು ಹೋಗಿದ್ದಾರೆ. ಇಲ್ಲಿ ಒಂದು ಸರ್ಕಾರಿ ಶಾಲೆ ಇದೆ, ಆದರೆ ವಿದ್ಯಾರ್ಥಿಗಳು ಯಾರೂ ಶಾಲೆಯತ್ತ ಸುಳಿದಿಲ್ಲ. ಇಲ್ಲಿನ ಅಂಗನವಾಡಿಯ ಬಾಗಿಲು ತೆರೆದೇ ಇದೆ. ಆದರೆ, ಮಕ್ಕಳನ್ನು ತಂದು ಅಲ್ಲಿ ಯಾರೂ ಬಿಡುತ್ತಿಲ್ಲ.

ಗ್ರಾಮಕ್ಕೆ ಈಗ ಪತ್ರಕರ್ತರು, ಅಧಿಕಾರಿಗಳು ಮತ್ತು ಪೊಲೀಸರು ಪದೇ ಪದೇ ಭೇಟಿ ಕೊಡುತ್ತಿದ್ದಾರೆ. ಆದರೆ, ಅವರನ್ನು ಸ್ವಾಗತಿಸಲು ಜನರು ಮಾತ್ರ ಇಲ್ಲ. ಬಾಗಿಲು ಅಥವಾ ಕಿಟಕಿ ಸಂಧಿಯಿಂದ ಒಳಕ್ಕೆ ಇಣುಕಿದರೆ, ಜನರು ಆತುರಾತುರವಾಗಿ ಮನೆ ಬಿಟ್ಟಿದ್ದಾರೆ ಎಂಬುದು ತಿಳಿಯುತ್ತದೆ. ವಸ್ತುಗಳೆಲ್ಲ ನೆಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ತರಕಾರಿಗಳು ಹಾಗೆಯೇ ಇವೆ, ಒಣ ಹಾಕಿದ ಬಟ್ಟೆಗಳನ್ನು ಅಲ್ಲಿಯೇ ಬಿಡಲಾಗಿದೆ. ಸದ್ದಾಂ ಶೇಖ್ ಅವರ ಮನೆಯ ಸ್ಥಿತಿಯೂ ಹಾಗೆಯೇ ಇದೆ. ಸಜೀವ ದಹನಗೊಂಡ ಏಳು ಮೃತದೇಹಗಳು ಪತ್ತೆಯಾದ ಸೋನು ಶೇಖ್ ಅವರ ಮನೆಯ ಪಕ್ಕದ ಮನೆಯೇ ಸದ್ದಾಂ ಅವರದ್ದು.

ಜನರಿಗೆ ಪೂರ್ಣ ಭದ್ರತೆ ಒದಗಿಸಲಾಗುವುದು ಎಂದು ಗ್ರಾಮಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭರವಸೆ ಕೊಟ್ಟಿದ್ದಾರೆ. ಆದರೆ, ಹಲವು ಮನೆಗಳ ಜನರು ಈಗಲೂ ಬಾಗಿಲು ಹಾಕಿಕೊಂಡು ಮನೆಯೊಳಗೇ ಕುಳಿತಿದ್ದಾರೆ.

'ಓಡಿಹೋದವರು ಎಲ್ಲಿ ಹೋಗಿದ್ದಾರೆ ಎಂಬುದೇ ತಿಳಿದಿಲ್ಲ. ಅವರಿಗೆ ಬೇರೆ ಆಯ್ಕೆಯೇ ಇರಲಿಲ್ಲ. ನನ್ನ ಮಗ ಕೂಡ ಇಲ್ಲಿ ಇಲ್ಲ. ಅವರೆಲ್ಲರೂ ಗ್ರಾಮದಿಂದ ದೂರ ಇರುವ ಸಂಬಂಧಿಕರ ಮನೆಯಲ್ಲಿ ಇದ್ದಾರೆ' ಎಂದು ಸೋನು ಶೇಖ್ ಅವರ ಮಾವ ಸಾಹಿ ಆಲಂ ಶೇಖ್ ಹೇಳಿದ್ದಾರೆ.

ಆಲಂ ಅವರು ಸಜೀವ ದಹನ ಕೃತ್ಯವನ್ನು ಕಣ್ಣಾರೆ ಕಂಡವರು. ಆದರೆ, ಘಟನೆಯ ಬಗ್ಗೆ ಅವರು ಏನನ್ನೂ ಹೇಳುತ್ತಿಲ್ಲ.

'ಇದು ಪ್ರತೀಕಾರದ ಹತ್ಯೆ. ನಾವು ಮನೆಯ ಒಳಗಿನಿಂದಲೇ ಎಲ್ಲವನ್ನೂ ನೋಡಿದ್ದೇವೆ. ಸೋನು ಅವರ ಮನೆಯತ್ತ ಜನರ ಗುಂಪು ಬಾಂಬ್ ಎಸೆಯುವುದನ್ನು ಕಂಡು ನಾವು ಮನೆಯ ಒಳಕ್ಕೆ ಓಡಿದೆವು. ಆ ಬಳಿಕ ಏನಾಯಿತು ಎಂಬುದು ತಿಳಿದಿಲ್ಲ' ಎಂದು ಹೇಳಿದ್ದಾರೆ.

ಗ್ರಾಮದಲ್ಲಿ ಇರುವ 15 ಮನೆಗಳಿಗೆ ರಕ್ಷಣೆ ಕೊಡಲು ದೊಡ್ಡ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ. ಗ್ರಾಮದಲ್ಲಿ ಒಟ್ಟು ಏಳು ಸಾವಿರ ಜನರಿದ್ದಾರೆ.

'ನನ್ನ ಮಕ್ಕಳೂ ಅಡಗಿಕೊಂಡಿದ್ದಾರೆ. ಗ್ರಾಮದ ಜನರು ಎಲ್ಲಿ ಹೋಗಿದ್ದಾರೆ ಎಂಬುದು ಗೊತ್ತಿಲ್ಲ. ನನಗೆ ಈ ಬಗ್ಗೆ ಮಾತನಾಡುವುದೇ ಬೇಡವಾಗಿದೆ. ನಮ್ಮ ಜೀವದ ಬಗ್ಗೆ ಭೀತಿ ಎದುರಾಗಿದೆ' ಎಂದು ಮುಮ್ತಾಜ್ ಹೇಳುತ್ತಾರೆ. 'ನನ್ನ ಮಕ್ಕಳು ಹೊರಗೆ ಹೋಗಿದ್ದಾರೆ. ಆದಷ್ಟು ಬೇಗನೆ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಲಿ' ಎಂದು ಅವರು ಹಾರೈಸುತ್ತಿದ್ದಾರೆ. ಆದರೆ, ಪರಾರಿಯಾದವರಿಗೆ ಗ್ರಾಮಕ್ಕೆ ಮರಳುವ ಭರವಸೆಯೇ ಇಲ್ಲ.

'ಹೇಗೆ ನಾವು ಹಿಂದಿರುಗುವುದು? ನಮಗೆ ಜೀವ ಭಯ ಇದೆ. ಪೊಲೀಸರು ಗ್ರಾಮ ಬಿಟ್ಟು ಹೋದ ಬಳಿಕ ಏನಾಗಬಹುದು?' ಎಂದು ಸೋನು ಶೇಖ್ ಸಂಬಂಧಿಕರೊಬ್ಬರು ಪ್ರಶ್ನಿಸಿದ್ದಾರೆ.

ಸಜೀವ ದಹನ ಪ್ರಕರಣವು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ಬಿಜೆಪಿ, ಕಾಂಗ್ರೆಸ್ ಮತ್ತು ಎಡಪಕ್ಷಗಳು ಆಡಳಿತ ಪಕ್ಷದ ವಿರುದ್ಧ ಭಾರಿ ಟೀಕೆ ಮಾಡಿವೆ. ಆರೋಪಿಗಳನ್ನು ತಕ್ಷಣವೇ ಬಂಧಿಸಬೇಕು, ಅವರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಸಿಬಿಐ ಅಧಿಕಾರಿಗಳು ಮತ್ತು ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯದ ತಂಡವು ಬಿರ್‌ಭೂಮ್‌ನ ಬೋಗ್‌ತುಇ ಗ್ರಾಮದಲ್ಲಿ ಸಜೀವ ದಹನ ನಡೆದ ಮನೆಗಳಿಗೆ ಶನಿವಾರ ಭೇಟಿ ಕೊಟ್ಟಿದೆ –ಪಿಟಿಐ ಚಿತ್ರ

ಸ್ಥಳಕ್ಕೆ ಭೇಟಿ ನೀಡಿದ ಸಿಬಿಐ ತಂಡ

ರಾಮ್‌ಪುರಹಾಟ್ (ಪಿಟಿಐ): ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯಲ್ಲಿ ನಡೆದ ಸಜೀವ ದಹನ ಪ್ರಕರಣದ ತನಿಖೆಯನ್ನು ಸಿಬಿಐ ಆರಂಭಿಸಿದೆ. ಸಿಬಿಐ ತಂಡವು ಪ್ರಕರಣ ನಡೆದ ಬೋಗ್‌ತುಇ ಗ್ರಾಮಕ್ಕೆ ಶನಿವಾರ ಭೇಟಿ ನೀಡಿದೆ.

ಸುಮಾರು 20 ಸದಸ್ಯರ ತಂಡ ಇದಾಗಿದೆ. ಸುಟ್ಟು ಕರಕಲಾಗಿದ್ದ ಏಳು ಮೃತ ದೇಹಗಳು ಪತ್ತೆಯಾದ ಮನೆ ಒಳಗೆ ಹೋಗಿ ಸಿಬಿಐ ಸಿಬ್ಬಂದಿ ಪರಿಶೀಲನೆ ನಡೆಸಿದರು.

'ಇಂದಿನಿಂದ (ಶನಿವಾರ) ನಾವು ತನಿಖೆ ಆರಂಭಿಸಿದ್ದೇವೆ. ತನಿಖೆ ನಡೆಸಲು ನಮಗೆ ಸಮಯದ ಗಡುವು ನೀಡಲಾಗಿದೆ. ಹೀಗಾಗಿ ನಾವು ಯುದ್ಧೋಪಾದಿಯಲ್ಲಿ ತನಿಖೆ ನಡೆಸಬೇಕಿದೆ' ಎಂದು ಸಿಬಿಐ ಅಧಿಕಾರಿಗಳು ತಿಳಿಸಿದರು.

ಸಿಬಿಐನ ಘಟಕವಾದ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯದ (ಸಿಎಸ್‌ಎಫ್‌ಎಲ್) ತಜ್ಞರ ತಂಡವು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದೆ.

ಬಿರ್‌ಭೂಮ್ ಸಜೀವ ದಹನ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಕಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶ ನೀಡಿತ್ತು. ತನಿಖೆ ನಡೆಸಲು ಏಪ್ರಿಲ್ 7ರ ವರೆಗೆ ಸಮಯಾವಕಾಶವನ್ನು ಕೋರ್ಟ್ ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಸ್ತುವಾರಿಗಳ ಸಭೆಯಲ್ಲಿ ನಿರ್ಧಾರ

ದರ ಏರಿಕೆ ಖಂಡಿಸಿ 3 ಹಂತಗಳ ಅಭಿಯಾನ

ನವದೆಹಲಿ (ಪಿಟಿಐ): ಬೆಲೆ ಏರಿಕೆ ವಿರುದ್ಧ 'ತುಟ್ಟಿ ಮುಕ್ತ ಭಾರತ ಅಭಿಯಾನ' ಎಂಬ ಮೂರು ಹಂತಗಳ ಚಳವಳಿ ನಡೆಸಲು ಕಾಂಗ್ರೆಸ್ ಶನಿವಾರ ನಿರ್ಧರಿಸಿದೆ. ಮಾರ್ಚ್ 31ರಿಂದ ಏಪ್ರಿಲ್ 7ರವರೆಗೆ ರ‍್ಯಾಲಿಗಳು, ಜಾಥಾಗಳನ್ನು ದೇಶದಾದ್ಯಂತ ನಡೆಸಲು ತೀರ್ಮಾನಿಸಲಾಗಿದೆ.

ಮೊದಲ ಹಂತದಲ್ಲಿ, ಕಾಂಗ್ರೆಸ್ ಕಾರ್ಯಕರ್ತರು ಮತ್ತು ಜನರು ತಮ್ಮ ಮನೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾರ್ಚ್ 31ರಂದು ಪ್ರತಿಭಟನೆ ನಡೆಸಲಿದ್ದಾರೆ. ಜನರು ಎಲ್‌ಪಿಜಿ ಸಿಲಿಂಡರ್‌ಗಳಿಗೆ ಹಾರ ಹಾಕಿ, ಡೋಲು ಮತ್ತು ಗಂಟೆ ಬಾರಿಸಲಿದ್ದಾರೆ. ಹಣದುಬ್ಬರದ ಬಗ್ಗೆ ಗಮನ ಸೆಳೆಯಲಿದ್ದಾರೆ. ಅಡುಗೆ ಅನಿಲ, ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಆಗಿರುವ ಭಾರಿ ಏರಿಕೆಯ ಬಗ್ಗೆ 'ಕಿವುಡ' ಬಿಜೆಪಿ ಸರ್ಕಾರದ ಗಮನ ಸೆಳೆಯಲು ಯತ್ನಿಸಲಿದ್ದಾರೆ ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಎರಡನೇ ಹಂತವು ಏಪ್ರಿಲ್ 2ರಿಂದ ಏಪ್ರಿಲ್ 4ರವರೆಗೆ ನಡೆಯಲಿದೆ. ಎನ್‌ಜಿಒಗಳು, ಸಾಮಾಜಿಕ ಸಂಘಟನೆಗಳು, ನಿವಾಸಿ ಅಭಿವೃದ್ಧಿ ಸಂಘಗಳು ಜಿಲ್ಲಾ ಮಟ್ಟದಲ್ಲಿ ಧರಣಿ ಮತ್ತು ಜಾಥಾಗಳನ್ನು ನಡೆಸಲಿವೆ. ಏಪ್ರಿಲ್ 7ರಂದು ಪಕ್ಷವು 'ತುಟ್ಟಿ ಮುಕ್ತ ಭಾರತ' ಧರಣಿ ಮತ್ತು ಜಾಥಾಗಳನ್ನು ನಡೆಸಲಿದೆ. ಇದು ರಾಜ್ಯ ರಾಜಧಾನಿಗಳಲ್ಲಿ ನಡೆಯಲಿದೆ. ಎನ್‌ಜಿಒಗಳು, ಸಾಮಾಜಿಕ ಸಂಘಟನೆಗಳೂ ಇದರಲ್ಲಿ ಭಾಗಿಯಾಗಲಿವೆ ಎಂದು ಸುರ್ಜೇವಾಲಾ ಹೇಳಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಭಾರತದ ಜನರನ್ನು ಕೈಬಿಟ್ಟಿದೆ ಮತ್ತು ವಂಚಿಸಿದೆ. ಜನರ ಮತಗಳನ್ನು ಪಡೆಯುವುದಕ್ಕಾಗಿ 137 ದಿನ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸಿಲಿಂಡರ್, ಕೊಳವೆ ಮೂಲಕ ಪೂರೈಕೆಯ ನೈಸರ್ಗಿಕ ಅನಿಲ (ಪಿಎನ್‌ಜಿ) ಮತ್ತು ಸಿಎನ್‌ಜಿ ದರವನ್ನು ಸರ್ಕಾರವು ಸ್ಥಿರವಾಗಿಯೇ ಇರಿಸಿತ್ತು. ಕಳೆದ ಒಂದು ವಾರವು ಜನರಿಗೆ ದುಃಸ್ವಪ್ನವೇ ಆಗಿದೆ' ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳು ಮತ್ತು ರಾಜ್ಯ ಉಸ್ತುವಾರಿಗಳ ಜತೆಗೆ ದೆಹಲಿಯಲ್ಲಿ ನಡೆಸಿದ ಸಭೆಯಲ್ಲಿ ಚಳವಳಿ ನಡೆಸಲು ತೀರ್ಮಾನಿಸಲಾಯಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 27-3-1997

- 'ಧರ್ಮಕಾರಣ ಮುಟ್ಟುಗೋಲು'

ಬೆಂಗಳೂರು, ಮಾ.26– ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ವಿವಾದದ ಬಿರುಗಾಳಿಯನ್ನೇ ಎಬ್ಬಿಸಿದ್ದ ಡಾ.ಪಿ.ವಿ.ನಾರಾಯಣ ಅವರು ಬರೆದಿರುವ 'ಧರ್ಮಕಾರಣ' ಕಾದಂಬರಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ತೀರ್ಮಾನಿಸಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಅವರು ಇಂದು ವಿಧಾನಮಂಡಲದ ಉಭಯಸದನಗಳಲ್ಲಿ ಪ್ರಕಟಿಸಿದರು.

ಈ ಕೃತಿಯ ಬಗ್ಗೆ ಎರಡೂ ಸದನಗಳಲ್ಲಿ ನಡೆದ ಚರ್ಚೆ, ಸದಸ್ಯರು ವ್ಯಕ್ತಪಡಿಸಿದ ಭಾವನೆಗಳಿಗೆ ಸ್ಪಂದಿಸಿ ಸರ್ಕಾರ, ಸಿಆರ್‌ಪಿಸಿ ಸೆಕ್ಷನ್ 95ರ ಅನ್ವಯ ಈ ಕಾದಂಬರಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 27-3-1972

- ಢಾಕಾ: ಬಾಂಗ್ಲಾ ಸ್ವಾತಂತ್ರ್ಯ ಚಳವಳಿಯ ಸಂಭ್ರಮದ ಪ್ರಥಮ ವಾರ್ಷಿಕೋತ್ಸವ

ಢಾಕಾ, ಮಾ.26: ಬಾಂಗ್ಲಾದೇಶದ ಸ್ವಾತಂತ್ರ್ಯ ಘೋಷಣೆಯ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಇಂದು ನಡೆದ ಬಾಂಗ್ಲಾದೇಶ ಸಶಸ್ತ್ರ ಪಡೆಗಳ ಪರೇಡನ್ನು ಜನತೆ ಸಂಭ್ರಮ, ಉತ್ಸಾಹದಿಂದ ವೀಕ್ಷಿಸಿತು.

ಕಳೆದ ವರ್ಷ ಮಾರ್ಚ್ 26ರಂದೇ ಪಾಕಿಸ್ತಾನದ ಸೇನೆಯು ಶಸ್ತ್ರರಹಿತ ಅಸಹಾಯಕ ಬಾಂಗ್ಲಾ ಜನತೆಯ ಮೇಲೆ ಕ್ರೂರ ದಬ್ಬಾಳಿಕೆ ಆರಂಭಿಸಿ, ಸ್ವಾತಂತ್ರ್ಯಕ್ಕಾಗಿ ಎದ್ದಿದ್ದ ಕೂಗನ್ನು ಅಡಗಿಸಲು ವಂಗ ಬಂಧು ಮುಜೀಬರನ್ನು ಬಂಧಿಸಿತ್ತು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 27 ಮಾರ್ಚ್ 2022

ನಾಟಕದ ಸರಕಿನಾಗ ನೀತಿ ಸೋತಾಗ... 11

ಆಸ್ಕರ್ ಪ್ರಶಸ್ತಿಗಾಗಿ ಸಾಕ್ಷ್ಯಚಿತ್ರ ವಿಭಾಗದಲ್ಲಿ ನಾಮನಿರ್ದೇಶನಗೊಂಡಿದೆ 'ರೈಟಿಂಗ್ ವಿತ್ ಫೈರ್' ಚಿತ್ರ. ಈ ಚಿತ್ರಕ್ಕೆ ಪ್ರೇರಣೆಯಾಗಿದ್ದು 'ಖಬರ್ ಲೆಹರಿಯಾ' ಎಂಬ ಪತ್ರಿಕೆ. ಈ ಪತ್ರಿಕೆಯ ವಿಶೇಷ ಏನು ಗೊತ್ತೆ? ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ದಲಿತ ಮಹಿಳೆಯರು ರೂಪಿಸಿದ ಪತ್ರಿಕೆ ಇದು! ಪತ್ರಿಕೆಯ ಮೂಲಕ ಅಸ್ತಿತ್ವ ಕಂಡುಕೊಂಡ ಅಲಕ್ಷಿತ ದಲಿತ ಮಹಿಳೆಯರ ಸ್ಫೂರ್ತಿದಾಯಕ ಕಥನವೊಂದು ಇಲ್ಲಿದೆ

ಬೆಂಕಿಯಲ್ಲಿ ಅರಳಿದ ಹೂ ಖಬರ್ ಲೆಹರಿಯಾ

ಸತ್ಯಪ್ರಕಾಶ್ ಎಂ.ಆರ್.

1994ರಲ್ಲಿ 24 ವರ್ಷದ ಮೀರಾ ಜಾಟವ್ 'ಮಹಿಳಾ ಸಮಖ್ಯಾ' ಎಂಬ ಸರ್ಕಾರಿ ಸಾಕ್ಷರತಾ ಯೋಜನೆಯ ಮೇಲ್ವಿಚಾರಕಿಯಾಗಿ ಉದ್ಯೋಗಕ್ಕೆ ಸೇರಿದಾಗ ಆಕೆ ಓದಿದ್ದು ಹತ್ತನೆಯ ಇಯತ್ತೆಯವರೆಗೆ ಮಾತ್ರ. ಮುಂದಿನ ಕೆಲವು ವರ್ಷಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಂಪೂರ್ಣ ಮಹಿಳೆಯರೇ ನಡೆಸುವ 'ಖಬರ್ ಲೆಹರಿಯಾ' ಪತ್ರಿಕೆಯ ಸ್ಥಾಪಕ ಸಂಪಾದಕಿಯಾಗಿ ಮೀರಾ ಬೆಳೆದದ್ದು ಎಂಥವರಿಗೂ ಸ್ಫೂರ್ತಿ ತುಂಬುವ ವಿಚಾರ.

2002ರಲ್ಲಿ ಉತ್ತರ ಪ್ರದೇಶದ ಚಿತ್ರಕೂಟದಲ್ಲಿ ಮೀರಾ ಜಾಟವ್ ಮತ್ತು ಕವಿತಾ ದೇವಿ ಎಂಬ ಇಬ್ಬರು ದಿಟ್ಟ ದಲಿತ ಮಹಿಳೆಯರು ಸೇರಿ 'ಖಬರ್ ಲೆಹರಿಯಾ' ವಾರಪತ್ರಿಕೆಯನ್ನು ಆರಂಭಿಸಿದರು. ಬುಂದೇಲಿ, ಭೋಜ್‌ಪುರಿ, ಅವಧ್‌ನಂತಹ ಗ್ರಾಮ್ಯ ಭಾಷೆಗಳಲ್ಲಿ ಮಹಿಳೆಯರನ್ನು ಕುರಿತು ಮಹಿಳೆಯರೇ ವರದಿ ಮಾಡುವ ಪತ್ರಿಕೆಯನ್ನಾಗಿ ಇದನ್ನು ರೂಪಿಸುವ ಆಲೋಚನೆ ಮಾಡಿದರು. ದೆಹಲಿ ಮೂಲದ, ನಿರಂತರ್ ಸಂಸ್ಥೆಯ ಬೆಂಬಲದೊಂದಿಗೆ ಪತ್ರಿಕೆ ಪ್ರಾರಂಭವಾಯಿತು. ಆರಂಭದಲ್ಲಿ ಮಹಿಳಾ ಕೇಂದ್ರಿತ ಸುದ್ದಿ ಮಾತ್ರ ಪ್ರಕಟಿಸುತ್ತಿದ್ದ ಪತ್ರಿಕೆ ನಂತರದ ದಿನಗಳಲ್ಲಿ ನಿಜವಾದ ಅರ್ಥದಲ್ಲಿ ಗ್ರಾಮಭಾರತದ ವರದಿಗಾರಿಕೆಯ ಕಡೆಗೆ ಗಮನ ಕೊಡಲಾರಂಭಿಸಿತು.

ಮಹಿಳಾ ಸಮಖ್ಯಾ ತಂಡದ ಮೀರಾ, ಕವಿತಾ, ಮತ್ತಿತರ ಮಹಿಳೆಯರು ಸೇರಿ ಮೊದಲಿಗೆ 'ಮಹಿಳಾ ಡಾಕಿಯಾ' ಎಂಬ ನಾಲ್ಕು ಪುಟಗಳ ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಆದರೆ, ಹಣಕಾಸಿನ ಕೊರತೆಯಿಂದ ಪತ್ರಿಕೆ ಬಹಳ ದಿನಗಳ ಕಾಲ ನಡೆಯದೆ ನಿಂತುಹೋಯಿತು. ಆದರೆ 'ಮಹಿಳಾ ಡಾಕಿಯಾ' ಪತ್ರಿಕೆಯನ್ನು ನಡೆಸಿದ ಅನುಭವ, ಈ ದಿಟ್ಟ ದಲಿತ ಮಹಿಳೆಯರ ಆಶೋತ್ತರಗಳನ್ನು ನೀರೆರೆದು ಪೋಷಿಸಿತ್ತು. ಇದರ ಪರಿಣಾಮವೇ 'ಖಬರ್ ಲೆಹರಿಯಾ'. ನಿರಂತರ್ ಸಂಸ್ಥೆಯ ಬೆಂಬಲ ದೊರಕಿದ ಮೇಲಂತೂ ಹಿಂದಿ ಹೃದಯಭಾಗದ ಪತ್ರಿಕೋದ್ಯಮದಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿತು ಮೀರಾ ಮತ್ತು ಕವಿತಾ ಅವರ ತಂಡ. ಬುಂದೇಲ್‌ಖಂಡ್ ಭಾಗದ ದಲಿತ, ಆದಿವಾಸಿ ಮತ್ತು ಮುಸಲ್ಮಾನ ಸಮುದಾಯಗಳು, ಹಿಂದುಳಿದ ವರ್ಗಗಳು ಮತ್ತು ಕೆಳ ಮಧ್ಯಮವರ್ಗದ ಸಮುದಾಯದ ಬಡ ಮಹಿಳೆಯರನ್ನು ಸಮರ್ಥ ಪತ್ರಕರ್ತೆಯರನ್ನಾಗಿ ರೂಪಿಸಿ, ಮುಖ್ಯವಾಹಿನಿಯ ಪತ್ರಿಕೋದ್ಯಮದಿಂದ ಹೊರತಾದ ಪರ್ಯಾಯ ಮಾರ್ಗದ ಮೂಲಕ ಹೊಸ ಸಂಚಲನ ಸೃಷ್ಟಿಸಿದ ಕೀರ್ತಿ 'ಖಬರ್ ಲೆಹರಿಯಾ'ದ ಮೀರಾ ಮತ್ತು ಕವಿತಾ ಅವರಿಗೆ ಸಲ್ಲುತ್ತದೆ. ಪುರುಷರ ಪ್ರಾಬಲ್ಯ ಹೊಂದಿರುವ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮಹಿಳೆಯರ ದೃಷ್ಟಿಕೋನದಲ್ಲಿ ಸುದ್ದಿಯನ್ನು ಪ್ರಸ್ತುತಪಡಿಸುವ ಅಗತ್ಯತೆಯನ್ನು ಮನಗಂಡು, ಮಹಿಳೆಯರ ವೇದಿಕೆಯಾಗಿ 'ಖಬರ್ ಲೆಹರಿಯಾ' ಪತ್ರಿಕೆ ಆರಂಭವಾಗಿದ್ದು. ಇನ್ನು ಪತ್ರಿಕೆಯ ವರದಿಗಾರರಾಗಿ ಗ್ರಾಮೀಣ ಒಳನಾಡಿನ ದಲಿತ-ಆದಿವಾಸಿ ಮಹಿಳೆಯರನ್ನು ನಿಯೋಜಿಸುವುದೇ ಒಂದು ರೀತಿಯ ಕ್ರಾಂತಿಕಾರಿ ಆಲೋಚನೆಯೆಂದರೆ ತಪ್ಪಾಗಲಾರದು. ಇಂಥ ಹಲವಾರು ಪ್ರಥಮಗಳಿಗೆ ಕಾರಣವಾದ 'ಖಬರ್ ಲೆಹರಿಯಾ'ದ ಸಂಪಾದಕಿ ಮತ್ತು ಸುದ್ದಿ ನಿರೂಪಕಿ ಕವಿತಾ ದೇವಿ, ಪ್ರತಿಷ್ಠಿತ ಸಂಪಾದಕರ ಗಿಲ್ಡ್‌ನ ಸದಸ್ಯರಾಗಿ ಆಯ್ಕೆಯಾದ ಮೊತ್ತಮೊದಲ ದಲಿತ ಸಂಪಾದಕಿಯಾಗಿ ಇತಿಹಾಸ ಸೃಷ್ಟಿಸಿದ್ದಾರೆ.

ಭಿನ್ನ ಸೆಲೆಬ್ರಿಟಿ... ತಾಪ್ಸಿ ಪನ್ನು ಹಾಗೂ ಇತರರೊಂದಿಗೆ ಕವಿತಾ ದೇವಿ

ಗಟ್ಟಿಗಿತ್ತಿ ಶ್ರೀದೇವಿ

ಅತ್ತೆ ಮಾವಂದಿರ ಕಿರುಕುಳಕ್ಕೆ ಒಳಗಾಗಿ ಸಣ್ಣ ಮಗುವಿನೊಂದಿಗೆ ಮನೆಯಿಂದ ಹೊರಹಾಕಲ್ಪಟ್ಟ ಉತ್ತರ ಪ್ರದೇಶದ ದಲಿತ ಮಹಿಳೆ ಶ್ರೀದೇವಿ 'ಖಬರ್ ಲೆಹರಿಯಾ'ದ ವರದಿಗಾರ್ತಿಯರಲ್ಲಿ ಒಬ್ಬರು. ಸ್ಥಳೀಯ ನಾಯಕರ ಬೈಗುಳ, ಪೊಲೀಸರ ನಿರ್ಲಕ್ಷ್ಯ, ಮಹಿಳೆ ಎಂಬ ಕಾರಣಕ್ಕೆ ಸದಾ ಎದುರಿಸಬೇಕಾಗುವ ಗ್ರಾಮಸ್ಥರ ಹೀಯಾಳಿಕೆ, ಇದ್ಯಾವುದಕ್ಕೂ ಕುಗ್ಗದೆ, ಪುರುಷಪ್ರಧಾನ ಗ್ರಾಮೀಣ ಭಾಗದ ಸುತ್ತಲೂ ತನ್ನ ಸ್ಕೂಟರ್‌ನಲ್ಲಿ ತಿರುಗಾಡುತ್ತಾ ಅನ್ಯಾಯ, ಅಕ್ರಮ ಮತ್ತು ದೌರ್ಜನ್ಯದ ಕುರಿತು ವರದಿ ಮಾಡುತ್ತಿರುವುದು ಸಾಹಸಗಾಥೆಯೇ ಸರಿ. ಕುಟುಂಬದ ಒತ್ತಡ, ತಾಯಿಯ ಜವಾಬ್ದಾರಿ, ಮತ್ತು ಸಮಾಜದ ಸಾಂಪ್ರದಾಯಿಕ ಅಸಹನೆಯನ್ನು ಮೀರಿ ಕೆಲಸ ಮಾಡಬೇಕಾದ ಅಸಾಧ್ಯವಾದ ನಿರ್ಧಾರ ಕೈಗೊಳ್ಳಲು ಗುಂಡಿಗೆ ಗಟ್ಟಿಯಿರಲೇಬೇಕು.

ಮೀರಾ ಜಾಟವ್

ಪತ್ರಕರ್ತರ ವೃತ್ತಿಯೇ ಸವಾಲಿನದು. ಅದರಲ್ಲಿಯೂ ದಲಿತ ಮಹಿಳೆಯರು ಪತ್ರಕರ್ತರೆಂದರೆ ಸಮಾಜ ಒಪ್ಪಿಕೊಳ್ಳುವುದೇ ಕಷ್ಟ. ಸಾಂಪ್ರದಾಯಿಕ ವಾತಾವರಣ ಹೊಂದಿರುವ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರು ತಲೆಯ ಮೇಲಿನ ಸೆರಗು ಸರಿಸಿ, ಪುರುಷರೊಂದಿಗೆ ಮಾತನಾಡಿ ಮಾಹಿತಿ ಸಂಗ್ರಹಿಸುವುದು, ಹಗಲಿರುಳೆನ್ನದೆ ಅನಿಯಮಿತ ಅವಧಿಯಲ್ಲಿ ಕಾರ್ಯನಿರ್ವಹಿಸುವುದು ದೊಡ್ಡ ಸವಾಲಿನ ಕೆಲಸ. ಗ್ರಾಮೀಣ ಭಾರತದಲ್ಲಿ ಎಲ್ಲ ಸಮುದಾಯಗಳ ಮಹಿಳೆಯರಿಗೆ ನಿರ್ಬಂಧಗಳು ಸರ್ವೇಸಾಮಾನ್ಯ. ಅದರಲ್ಲಿಯೂ ದಲಿತ ಮತ್ತು ಆದಿವಾಸಿ ಸಮುದಾಯಗಳ ಮಹಿಳೆಯರಿಗೆ ಕುಟುಂಬದ ನಿರ್ಬಂಧದ ಜೊತೆಗೆ, ಸಮಾಜದ ಅಡೆತಡೆಗಳು ಇನ್ನೂ ಹೆಚ್ಚು. ಕೆಲವೊಮ್ಮೆ ಮೇಲ್ವರ್ಗದ ಅಸಹನೆಯು ಹಿಂಸೆ ಮತ್ತು ಅತ್ಯಾಚಾರದ ಸ್ವರೂಪ ಪಡೆದುಕೊಳ್ಳುವುದೂ ಉಂಟು. ಇಷ್ಟಾಗಿಯೂ ಶ್ರೀದೇವಿಯಂತಹ ಪತ್ರಕರ್ತರು ತಮ್ಮ 'ನಿಜವಾದ' ವರದಿಗಾರಿಕೆಯ ಮೂಲಕ ಮಣ್ಣಿನ ಸೊಗಡಿನ ಗ್ರಾಮೀಣ ಭಾರತದ ದರ್ಶನ ಮಾಡಿಸುತ್ತಲಿದ್ದಾರೆ.

ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳ ಹದಿಮೂರು ಜಿಲ್ಲೆಗಳಲ್ಲಿ ವ್ಯಾಪಿಸಿರುವ ಸುಮಾರು 30 ಮಹಿಳಾ ವರದಿಗಾರರ ಜಾಲವನ್ನು 'ಖಬರ್ ಲೆಹರಿಯಾ' ಹೊಂದಿದೆ. ಈ ಎಲ್ಲ ಮಹಿಳೆಯರದ್ದೂ ಶ್ರೀದೇವಿಯಂತಹದ್ದೇ ಒಂದೊಂದು ದೌರ್ಜನ್ಯದ ಕಥೆ. ಇವರಲ್ಲಿ ಬಹುತೇಕರು 10ನೇ ತರಗತಿಯ ಶೈಕ್ಷಣಿಕ ಅರ್ಹತೆ ಹೊಂದಿದವರು.

'ಖಬರ್ ಲೆಹರಿಯಾ' ಪತ್ರಿಕೆಗೆ ಸೇರಬಯಸುವ ಮಹಿಳೆಯರು ಕನಿಷ್ಠ 10ನೇ ತರಗತಿಯವರೆಗೆ ಓದಿರಬೇಕು. ದಲಿತ,ಆದಿವಾಸಿ,ಹಿಂದುಳಿದಸಮುದಾಯ,ಅಥವಾಮುಸ್ಲಿಂ ಸಮುದಾಯಕ್ಕೆ ಸೇರಿರಬೇಕು. ಸಾಮಾನ್ಯಜ್ಞಾನ, ಆತ್ಮವಿಶ್ವಾಸ ಮತ್ತು ಸ್ವಲ್ಪ ಮಟ್ಟಿಗಿನ ತಾಂತ್ರಿಕ ತಿಳಿವಳಿಕೆ ಹೊಂದಿರಬೇಕು. ಈ ಅರ್ಹತೆಗಳನ್ನು ಹೊಂದಿರುವ ಮಹಿಳೆಯರನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿ ನಂತರ ಚಿತ್ರಕೂಟದಲ್ಲಿ ತರಬೇತಿ ಮತ್ತು ಇಂಟರ್ನ್‌ಶಿಪ್‌ಗೆ ಕಳುಹಿಸಲಾಗುತ್ತದೆ. ಹೀಗೇ ಆಯ್ಕೆಯಾದ ನಾಚಿಕೆ ಸ್ವಭಾವದ, ಹಿಂಜರಿಕೆ ಗುಣದ ಮಹಿಳೆಯರು ದಿಟ್ಟ ಪತ್ರಕರ್ತರಾಗಿ ರೂಪುಗೊಂಡು ಜಾತಿ ಆಧಾರಿತ ಹಿಂಸೆ, ಮಹಿಳೆಯರ ಮೇಲಿನ ದೌರ್ಜನ್ಯ, ಮೂಲ ಸೌಕರ್ಯಗಳ ಕೊರತೆ, ಹೀಗೆ ಹತ್ತು ಹಲವು ಗುರುತರ ವಿಚಾರಗಳ ಬಗ್ಗೆ ಕಳೆದ ಎರಡು ದಶಕಗಳಿಂದ ಸುದ್ದಿ ಮಾಡುತ್ತಲಿರುವುದೇ ರೋಚಕವಾದ ಕಥನ.

ಎರಡು ದಶಕಗಳ ಹಿಂದೆ ಪೆನ್ ಮತ್ತು ಪುಸ್ತಕಗಳನ್ನು ಹಿಡಿದು ವರದಿ ಮಾಡುತ್ತಿದ್ದ ಕೈಗಳಿಗೆ ಈಗ ಸ್ಮಾರ್ಟ್‌ಫೋನ್ ಮತ್ತು ಕಂಪ್ಯೂಟರ್ ಬಂದಿದೆ. ಕೆಲಸ ಈಗ ಇನ್ನೂ ಸುಲಭವಾಗಿದೆ. ಜಿಲ್ಲಾಡಳಿತ, ಪೊಲೀಸ್ ಇಲಾಖೆಯಿಂದ ಸರಾಗವಾಗಿ ಮಾಹಿತಿ ಪಡೆಯುವ ಮಟ್ಟಕ್ಕೆ ವೃತ್ತಿಪರತೆ ಮತ್ತು ವಿಶ್ವಾಸಾರ್ಹತೆ ಸಾಧಿಸಿರುವ ದಲಿತ ಮಹಿಳಾ ಪತ್ರಕರ್ತರು, ಯಾವ ಮುಖ್ಯವಾಹಿನಿಯ ಪತ್ರಕರ್ತರಿಗೂ ಕಮ್ಮಿಯಿಲ್ಲದಂತೆ ಕಾರ್ಯನಿರ್ವಹಿಸುತ್ತಿದ್ದಾರೆ!

ಕವಿತಾ ಮತ್ತು ಮೀರಾ

'ಖಬರ್ ಲೆಹರಿಯಾ' ಈಗ ಡಿಜಿಟಲ್ ಆವೃತ್ತಿಯನ್ನು ಹೊರತರುತ್ತಿದೆ. ಡಿಜಿಟಲ್ ಆವೃತ್ತಿಯ ಸಂಪಾದಕಿಯಾಗಿ ಜವಾಬ್ದಾರಿ ಹೊತ್ತಿರುವ ಕವಿತಾ ದೇವಿಗೆ 12ನೆ ವಯಸ್ಸಿಗೇ ಮದುವೆಯಾಗಿತ್ತು. ಯಾವುದೇ ರೀತಿಯ ಔಪಚಾರಿಕ ಶಿಕ್ಷಣ ಪಡೆಯದ ಕವಿತಾ, ನಂತರದ ವರ್ಷಗಳಲ್ಲಿ ಹಲವು ಒತ್ತಡಗಳ ನಡುವೆಯೂ ಪದವಿ ಶಿಕ್ಷಣ ಪೂರೈಸಿ, ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 'ಮಹಿಳಾ ಡಾಕಿಯಾ' ಮೂಲಕ ಪತ್ರಕರ್ತರಾಗಿ ಕಾರ್ಯಾರಂಭ ಮಾಡುವ ಕವಿತಾ, ನಂತರ ಮೀರಾ ಜಾಟವ್ ಜೊತೆಗೂಡಿ 'ಖಬರ್ ಲೆಹರಿಯಾ' ಪತ್ರಿಕೆಯನ್ನು ಪ್ರಾರಂಭಿಸಿದರು. ಪ್ರಸ್ತುತ 'ಖಬರ್ ಲೆಹರಿಯಾ' ಡಿಜಿಟಲ್ ಆವೃತ್ತಿಯಲ್ಲಿ 'ದಿ ಕವಿತಾ ಶೋ' ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ. 2019ರಲ್ಲಿ ಖ್ಯಾತ ನಟ ಶಾರುಖ್ ಖಾನ್ ನಡೆಸಿಕೊಟ್ಟ ಟೆಡ್ ಸಮ್ಮೇಳನದಲ್ಲಿ ಭಾಷಣಕಾರರಾಗಿ ಭಾಗವಹಿಸಿ ರಾಷ್ಟ್ರದ ಗಮನ ಸೆಳೆದಿದ್ದರು.

ಇನ್ನು ಬುಂದೇಲ್‌ಖಂಡದ ದಲಿತ ಕುಟುಂಬದಲ್ಲಿ ಹುಟ್ಟಿದ ಮೀರಾ ಜಾಟವ್, ಡಕಾಯಿತರು, ಶಸ್ತ್ರಸಜ್ಜಿತ ದರೋಡೆಕೋರರಿಂದ ಸುತ್ತುವರೆದ ಪ್ರದೇಶದಲ್ಲಿ ಯಾವುದೇ ರೀತಿಯ ಶಿಕ್ಷಣ ಮತ್ತು ಸ್ವಾತಂತ್ರ್ಯವಿಲ್ಲದೆ, ಪುರುಷರ ಅಡಿಯಾಳಾಗಿದ್ದ ಈ ಭಾಗದ ಇತರ ಹೆಣ್ಣು ಮಕ್ಕಳಂತೆಯೇ ಬದುಕು ಸಾಗಿಸುತ್ತಿದ್ದವರು. ಆದರೆ, ಹತ್ತನೆಯ ತರಗತಿಯಲ್ಲಿ ತೇರ್ಗಡೆಯಾದ ನಂತರ 'ಮಹಿಳಾ ಸಮಖ್ಯಾ' ತಂಡಕ್ಕೆ ಸೇರ್ಪಡೆಗೊಳ್ಳುವ ಮೀರಾ, ಕವಿತಾ ದೇವಿ ಮತ್ತು ಇತರ ಐವರು ದಲಿತ ಮತ್ತು ಆದಿವಾಸಿ ಮಹಿಳೆಯರೊಂದಿಗೆ ಸೇರಿ 'ಖಬರ್ ಲೆಹರಿಯಾ' ಪತ್ರಿಕೆಯನ್ನು ಪ್ರಾರಂಭಿಸಿ ದಲಿತ ಇತಿಹಾಸದ ಜೀವಂತ ದಂತಕಥೆಯಾಗಿ ಬೆಳೆದಿದ್ದಾರೆ. ಕಳೆದ ಎರಡು ದಶಕಗಳಿಂದ ಪತ್ರಿಕೆಯು ಮಹಿಳೆಯರ ದೃಷ್ಟಿಕೋನದಿಂದ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸುದ್ದಿ ವರದಿ ಮಾಡುತ್ತಾ ಬಂದಿದೆ. ಒಬ್ಬ ದಲಿತ ಮಹಿಳೆ ಪತ್ರಿಕೆಯೊಂದರ ಸಂಪಾದಕಿಯಾಗಿ ಯಶಸ್ಸು ಸಾಧಿಸುವುದನ್ನು ಸಹಿಸದ ಪುರುಷರು, ಪುರುಷ ಪ್ರಧಾನ ವ್ಯವಸ್ಥೆ, ಮೇಲ್ಜಾತಿ ಹಿಂದೂಗಳು, ರಾಜಕಾರಣಿಗಳು ಮತ್ತು ಗೂಂಡಾಗಳಿಂದ ಬಂದ ಬೆದರಿಕೆಗಳು ಮತ್ತು ಸವಾಲುಗಳನ್ನು ದಿಟ್ಟತನದಿಂದ ಎದುರಿಸಿ ಸೈ ಎನಿಸಿಕೊಂಡವರು ಮೀರಾ ಜಾಟವ್.

ಮೀರಾ, ಕವಿತಾ, ಶ್ರೀದೇವಿ ಮತ್ತು 'ಖಬರ್ ಲೆಹರಿಯಾ'ದ ಎಲ್ಲ ಪತ್ರಕರ್ತೆಯರು ಮುಖ್ಯವಾಹಿನಿಯ ಪತ್ರಿಕೋದ್ಯಮಕ್ಕೆ ಸೆಡ್ಡು ಹೊಡೆದು ಸ್ಥಳೀಯ ಆಡಳಿತಶಾಹಿ, ಮತ್ತು ರಾಜಕೀಯ ನಾಯಕರ ಕುರಿತು ನಿಜವಾದ ಗ್ರಾಮೀಣ ವರದಿಗಾರಿಕೆ ಮಾಡುತ್ತಿರುವ ದಿಟ್ಟ ಮಹಿಳೆಯರು. ಮಹಿಳಾ ಪರ ಪತ್ರಿಕೋದ್ಯಮದ ಉದ್ದಿಶ್ಯ ಹೊಂದಿರುವ 'ಖಬರ್ ಲೆಹರಿಯಾ' ಜಾತಿ ವ್ಯವಸ್ಥೆ ಮತ್ತು ಲಿಂಗ ತಾರತಮ್ಯದ ಚೌಕಟ್ಟಿನೊಳಗೆ ಮಹಿಳೆಯರ ಮೇಲಿನ ದೌರ್ಜನ್ಯವನ್ನು ವರದಿ ಮಾಡುತ್ತಲಿದೆ. ಸಾರ್ವಜನಿಕ ವಲಯ ಮತ್ತು ವೈಯುಕ್ತಿಕ ನೆಲೆಗಟ್ಟಿನಲ್ಲಿ ಅಸ್ತಿತ್ವದಲ್ಲಿರುವ ಪುರುಷಪ್ರಧಾನ ವ್ಯವಸ್ಥೆಯನ್ನು ವರದಿಗಾರಿಕೆಯ ಮೂಲಕ ಪ್ರಶ್ನಿಸುತ್ತಿದೆ. ಅಲಕ್ಷಿತ ಮಹಿಳೆಯರೇ ಸೇರಿ ಕಟ್ಟಿ ಬೆಳೆಸಿರುವ 'ಖಬರ್ ಲೆಹರಿಯಾ'ದ ಕಥೆ ಹೊಂದಿರುವ 'ರೈಟಿಂಗ್ ವಿತ್ ಫೈರ್' ಪ್ರಶಸ್ತಿ ಪಡೆಯಲಿ ಬಿಡಲಿ, ಮೀರಾ, ಕವಿತಾ, ಶ್ರೀದೇವಿಯಂತಹ ದಲಿತ ಮಹಿಳಾ ಪತ್ರಕರ್ತರ ಕಥನ ಈ ಚಿತ್ರದ ಮೂಲಕ ಜಾಗತಿಕ ಕ್ಯಾನ್‌ವಾಸ್‌ಗೆ ಪರಿಚಿತವಾಗಿರುವುದೇ ಈ ಗಟ್ಟಿಗಿತ್ತಿಯರ ಗೆಲುವು! ಇದರ ಶ್ರೇಯ ರಿಂಟು ಥಾಮಸ್ ಮತ್ತು ಸುಶ್ಮಿತ್ ಘೋಷ್‌ಗೆ ಸಲ್ಲಲೇಬೇಕು.

ಆಸ್ಕರ್ ಪ್ರಶಸ್ತಿಗಳು ಇಂದು ಪ್ರಕಟಗೊಳ್ಳಲಿವೆ. 'ರೈಟಿಂಗ್ ವಿತ್ ಫೈರ್' ಚಿತ್ರ ಪ್ರಶಸ್ತಿ ಗೆಲ್ಲಲಿ ಬಿಡಲಿ, 'ಖಬರ್ ಲೆಹರಿಯಾ'ದ ಮೀರಾ ಜಾಟವ್, ಕವಿತಾ ದೇವಿ ಮತ್ತು ಈ ಪತ್ರಿಕೆಯ ಅಲಕ್ಷಿತ ಸಮುದಾಯದ ಮಹಿಳಾ ಪತ್ರಕರ್ತರು, ಅಸಂಖ್ಯ ಮಹಿಳೆಯರಿಗೆ ಸ್ಫೂರ್ತಿ ಒದಗಿಸುವುದಂತೂ ನಿಸ್ಸಂಶಯ



ಸುಶ್ಮಿತ್ ಘೋಷ್, ರಿಂಟು ಥಾಮಸ್

ಕರಾವಳಿ: ಮುನ್ನೆಲೆಗೆ ಬರಲಿ ಕ್ಯಾಮೆರಾ ಹಿಂದಿನ ಸೌಹಾರ್ದ

ಗುರು ಪಿ.ಎಸ್.

ವರದಿಗಾರಿಕೆಯ ಅನುಭವಗಳ ಟಿಪ್ಪಣಿಗಳು

'ಜೈ ಶ್ರೀರಾಮ್...'

ನಗುಮೊಗದಿಂದಲೇ ಹೀಗೆ ಹೇಳಿ ಕೈ ಕುಲುಕಿದರು ಆ ವ್ಯಕ್ತಿ. ಅವರು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಬಜರಂಗದಳದ ಮುಖ್ಯಸ್ಥ. ಹಿಜಾಬ್ ವಿವಾದ ಮತ್ತು ಚರ್ಚ್‌ಗಳ ಮೇಲಿನ ದಾಳಿಗೆ ಸಂಬಂಧಿಸಿದ ವಿಡಿಯೊ ಸ್ಟೋರಿಗಾಗಿ ಅವರ ಪ್ರತಿಕ್ರಿಯೆ ಪಡೆಯಲು ಹೋಗಿದ್ದೆ.

ಕ್ಯಾಮೆರಾ ಆನ್ ಆಗುವುದಕ್ಕೂ ಮುನ್ನ ತೀರಾ ಸಹಜವಾಗಿ, ಯಾವುದೇ ಭಾವಾವೇಶವಿಲ್ಲದೆ ಮಾತನಾಡುತ್ತಿದ್ದ ಅವರು, ಕ್ಯಾಮೆರಾ ಆನ್ ಆದಾಗ ಮಾತ್ರ, ಯಾವುದೋ ಯುದ್ಧಕ್ಕೆ ಹೊರಟಿರುವವರೇನೋ ಎಂಬಂತಹ ರೋಷಾವೇಶದಲ್ಲಿ ಕೆಲವು 'ನಿರ್ದಿಷ್ಟ ಸಾಲು'ಗಳನ್ನು ಪದೇ ಪದೇ ಹೇಳುತ್ತಿದ್ದರು. ಕ್ಯಾಮೆರಾ ಆಫ್ ಆದ ಕೂಡಲೇ ಶಾಂತ ಸ್ವರೂಪಿಯಾದರು!

ನಮ್ಮ ತಂಡಕ್ಕೆ ಟೀ ಕುಡಿಸಿ ಬೀಳ್ಕೊಟ್ಟರು.

***

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಬಜರಂಗದಳದ ಯುವ ಮುಖಂಡನೊಬ್ಬನನ್ನು ಮಾತನಾಡಿಸಿದಾಗಲೂ ಇಂಥದ್ದೇ ಆವೇಶಭರಿತ ಪ್ರತಿಕ್ರಿಯೆ ಕಾಣಬೇಕಾಯಿತು.

ಉಳ್ಳಾಲದ ದೈವದ ಉತ್ಸವದ ಸಂದರ್ಭದಲ್ಲಿ, 'ಇಲ್ಲಿನ ದೈವದ ಮೇಲೆ ನಂಬಿಕೆ ಹೊಂದಿದ್ದವರಿಗೆ ಮಾತ್ರ (ಮುಸ್ಲಿಮರನ್ನು ದೂರವಿಡುವ ಉದ್ದೇಶದಿಂದ) ಇಲ್ಲಿ ವ್ಯಾಪಾರಕ್ಕೆ ಅವಕಾಶ' ಎಂದು ಆ ದೈವ ಸ್ಥಾನದ ಮುಂದೆ ಬ್ಯಾನರ್ ಹಾಕಿದ್ದವರಲ್ಲಿ ಆ ಯುವಕನೂ ಒಬ್ಬ. ಆದರೆ, ಆ ದೇವಸ್ಥಾನಕ್ಕೆ ಸಂಬಂಧಿಸಿದ ಸಮಿತಿಯವರನ್ನು ಮಾತನಾಡಿಸಿದಾಗ, 'ಅಂತಹ ಬ್ಯಾನರ್ ಕಟ್ಟಲು ನಾವು ಹೇಳಿರಲಿಲ್ಲ, ಅದು ನಮ್ಮ ಗಮನಕ್ಕೂ ಬಂದಿರಲಿಲ್ಲ. ಈ ದೈವಕ್ಕೆ ಅದರದೇ ಆದ ಶಕ್ತಿ, ಮಹತ್ವ ಇದೆ. ಈ ರೀತಿಯ ಬ್ಯಾನರ್ ಕಟ್ಟುವ ಮೂಲಕ ರಾಜ್ಯದೆಲ್ಲೆಡೆ ಸುಮ್ಮನೆ ವಿವಾದ ಸೃಷ್ಟಿಸುವ ಕೆಲಸವಾಯಿತು' ಎಂದು ಬೇಸರಿಸಿದರು.

ಅವರಲ್ಲಿ ಹಿರಿಯರೊಬ್ಬರು, 'ಇದೇ ಯುವಕನ ತಾಯಿ ಮುಸ್ಲಿಮರ ಬಳಿಯೇ ಮೀನು ಖರೀದಿಸುತ್ತಾರೆ. ಆದರೆ, ಇಂತಹ ಯುವಕರು ಈ ರೀತಿ ದ್ವೇಷ ಭಾಷಣ ಮಾಡುತ್ತಾ ತಿರುಗುತ್ತಾರೆ. ಇನ್ನು, ಉಳ್ಳಾಲದಲ್ಲಿ ಮುಸ್ಲಿಮರ ಮನೆಗಳೇ ಹೆಚ್ಚು. ಅವರ ಮನೆಗಳಲ್ಲಿ ಹಿಂದೂಗಳೇ ಹೆಚ್ಚಿನ ಸಂಖ್ಯೆಯಲ್ಲಿ ಬಾಡಿಗೆ ಇದ್ದಾರೆ. ಅವರಿರಲಿಲ್ಲ ಅಂದ್ರೆ ಇವರಿಗೆ ಕಷ್ಟ, ಇವರಿರಲಿಲ್ಲ ಅಂದ್ರೆ ಅವರಿಗೆ ಕಷ್ಟ. ಒಬ್ಬರಿಗೊಬ್ಬರು ಆಗಲೇಬೇಕು' ಎಂದೂ ವಿಶ್ಲೇಷಿಸಿದರು. ಆದರೆ, ಕ್ಯಾಮೆರಾ ಮುಂದೆ ಇದನ್ನೇ ಹೇಳಲು ಹಿಂಜರಿದರು.

***

ಮಂಗಳೂರಿನ ವಿಶ್ವ ಹಿಂದೂ ಪರಿಷತ್‌ನ ಮುಖಂಡರೊಬ್ಬರ ಮುಂದೆ ಕುಳಿತಿದ್ದೆ. ಮೊದಲು ಮಾತನಾಡಿಸಿದ ಇಬ್ಬರು ಮುಖಂಡರ ಮೊಗದಲ್ಲಿದ್ದ ಆವೇಶ ಇವರಲ್ಲಿ ಕಾಣಲಿಲ್ಲ. ಮಾಧ್ಯಮದವರಿಗೆ ಹೇಗೆ ಪ್ರತಿಕ್ರಿಯಿಸಬೇಕು ಎಂದು 'ತರಬೇತಿ' ಪಡೆದವರಂತೆ ಮಾತನಾಡುತ್ತಾ ಹೋದರು.

10ನೇ ಪುಟಕ್ಕೆ...

ಕಪ್ಪಡಿ ಜಾತ್ರೆಯೆಂಬ ಕಲ್ಯಾಣದ ಯಾತ್ರೆ

ಮಹಾದೇವ ಶಂಕನಪುರ

ಮಂಟೇಸ್ವಾಮಿ ನೀಲಗಾರ ಪಂಥ ಕನ್ನಡ ನಾಡಿನ ಮಹತ್ವದ ಜನ ಸಂಸ್ಕೃತಿ ಧಾರೆಗಳಲ್ಲೊಂದು. ಹಾಗೇ ಮಂಟೇಸ್ವಾಮಿ ಜನಪದ ಕಾವ್ಯ ಕೂಡ ಸಾಹಿತ್ಯ, ಸಂಗೀತ, ಕಲೆ, ಕಲಾವಿದ, ಗಾಯಕ ಏಕೀಭರ್ವಿಸಿ ಮೈದಾಳುವ ಆಕರ್ಷಕ ಜೀವಂತ ಕಾವ್ಯನದಿ. ಮಂಟೇಸ್ವಾಮಿ ಪರಂಪರೆಯ ಜಾತ್ರೆ, ಹಬ್ಬ, ಆಚರಣೆಗಳ ಮೂಲಕ ಇಂದಿಗೂ ಆ ಸಂತರ ಶ್ರದ್ಧಾಕೇಂದ್ರಗಳಲ್ಲಿ, ಊರು ಕೇರಿಗಳಲ್ಲಿ ಈ ಕಾವ್ಯ ಮತ್ತು ಸಂಸ್ಕೃತಿಯ ಧಾರೆ ಹರಿಯುತ್ತಲೇ ಇದೆ. ಹೀಗೆ ಕಾವ್ಯ, ಸಂಸ್ಕೃತಿ ಹರಿದು ವಾಲಾಡುವ ನೀಲಗಾರರ ಶ್ರದ್ಧಾಕೇಂದ್ರಗಳಲ್ಲಿ ಕಪ್ಪಡಿ ಕ್ಷೇತ್ರವೂ ಒಂದು.

ಮೈಸೂರು ಜಿಲ್ಲೆ ಕೃಷ್ಣರಾಜನಗರ ಸಮೀಪದ ಕಾವೇರಿ ನದಿ ದಡದಲ್ಲಿರುವ ಈ ಕಪ್ಪಡಿ ಕ್ಷೇತ್ರ ಮಂಟೇಸ್ವಾಮಿ ಒಕ್ಕಲುಗಳ ಪ್ರಸಿದ್ಧ ಶ್ರದ್ಧಾ ಕೇಂದ್ರಗಳಲ್ಲೊಂದು. ಇಲ್ಲಿ ಮಂಟೇಸ್ವಾಮಿ ಶಿಶು ಮಕ್ಕಳೆನಿಸಿದ ರಾಚಪ್ಪಾಜಿ, ಚೆನ್ನಾಜಮ್ಮ ಐಕ್ಯವಾಗಿದ್ದು ಅವರ ಗೋರಿ ಗದ್ದಿಗೆಗಳಿವೆ. ಕಪ್ಪಡಿ ಕ್ಷೇತ್ರ ನೀಲಗಾರರು ಹಾಗೂ ಒಕ್ಕಲುಗಳ ಭಕ್ತ ಕೋಟಿ ಅನುಯಾಯಿಗಳ ಪಾಲಿಗೆ ಮೆಕ್ಕಾ ಮದೀನ ಇದ್ದಂತೆ. ಜೀವಮಾನದಲ್ಲಿ ಒಮ್ಮೆಯಾದರೂ ಒಕ್ಕಲಿನವರು ಕಪ್ಪಡಿ ಜಾತ್ರೆ ಮಾಡಲೇ ಬೇಕು.

ಈ ಜಾತ್ರೆ ಮತ್ತು ಮಂಟೇಸ್ವಾಮಿ ಸಂತಪಡೆ ತನ್ನದೇ ಆದ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿದೆ. ಇಂದಿಗೂ ಹಾಡುವ ಮಂಟೇಸ್ವಾಮಿ ಜನಪದ ಮಹಾಕಾವ್ಯ ಹಾಗೂ ಕೊಡೇಕಲ್ಲ ವೀರಸಂಗಪ್ಪಯ್ಯ ಬರೆದ ಕ್ರಿ.ಶ. 1589ರ 'ನಂದಿಯಾಗಮ ಲೀಲೆ' ಕೃತಿ ಈ ಬಗೆಗೆ ಬೆಳಕು ಚೆಲ್ಲುತ್ತವೆ.

ಕಪ್ಪಡಿ ರಾಚಪ್ಪಾಜಿ ಕೊಡೇಕಲ್ಲ ಬಸವಣ್ಣನ ಹಿರಿಯ ಮಗ. ಕೊಡೇಕಲ್ಲ ಬಸವಣ್ಣ 12ನೇ ಶತಮಾನದ ಕಲ್ಯಾಣದ ಬಸವಣ್ಣನ ಚಳವಳಿ ಮತ್ತು ಆಶಯಗಳನ್ನು 15ನೇ ಶತಮಾನದಲ್ಲಿ ಮುಂದುವರಿಸಿದ ಅಭಿನವ ಬಸವಣ್ಣ. ತನ್ನ ಮಡದಿ ನೀಲಮ್ಮ, ಮಕ್ಕಳಾದ ರಾಚಪ್ಪಾಜಿ, ಗುಹೇಶ್ವರ ಮತ್ತು ಸಂಗಪ್ಪಯ್ಯ, ಶಿಷ್ಯ ಮಂಟೇಸ್ವಾಮಿ ಒಳಗೊಂಡಂತೆ ಕೊಡೇಕಲ್ಲ ಪರಂಪರೆಯ ನಾಯಕ. ಉತ್ತರ ಕರ್ನಾಟಕದ ಯಾದಗಿರಿ ಜಿಲ್ಲೆಯ ಸುರಪುರ ಸಮೀಪದ ಡೋಣಿ ನದಿ ದಡದಲ್ಲಿರುವ ಕೊಡೇಕಲ್ಲು ಇವರ ಕೇಂದ್ರ ಸ್ಥಾನ.

ಹಾಗೇ ನೋಡಿದರೆ, ಉತ್ತರ ಕರ್ನಾಟಕದ ಕೊಡೇಕಲ್ಲ ಬಸವಣ್ಣನ ಪಂಥ ಮತ್ತು ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ನೀಲಗಾರ ಪಂಥ ಒಂದೇ ವೃಕ್ಷದ ಎರಡು ಕವಲುಗಳು.

ತನ್ನ ಗುರು ಗುರುಬಾರ ಲಿಂಗಯ್ಯರ ಮಾರ್ಗದರ್ಶನದಂತೆ ಮೈಸೂರು ಸೀಮೆಯ ಕಾವೇರಿ ಪರಿಸರದಿಂದ ಕೊಡೇಕಲ್ಲ ಬಸವಣ್ಣರ ಬಳಿಗೆ ತೆರಳಿ, ಶಿಷ್ಯ ಆಗಿ ಕಾಯಸಿದ್ಧಿ ಪಡೆದವರು ಮಂಟೇಸ್ವಾಮಿ. ಮಂಟೇಸ್ವಾಮಿ ಕಾವ್ಯದ ಕಲ್ಯಾಣ ಪಟ್ಟಣದ ಸಾಲಲ್ಲಿ ಬರುವಂತೆ, ಮಂಟೇಸ್ವಾಮಿ ಸಂಧಿಸುವುದು ಇದೇ ಕೊಡೇಕಲ್ಲ ಬಸವಣ್ಣ ಮತ್ತು ಅವರ ಪತ್ನಿ ನೀಲಮ್ಮ ಅವರನ್ನು. ಮಂಟೇಸ್ವಾಮಿಯ ಈ ಗುರು ದಂಪತಿ ಭೇಟಿಯನ್ನು ಸಾಂಕೇತಿಕವಾಗಿ ಇಟ್ಟುಕೊಂಡು ನೀಲಗಾರರು ಕಲ್ಯಾಣದ ಬಸವಣ್ಣ, ನೀಲಮ್ಮರ ದೃಢ ಪರೀಕ್ಷೆ ಎಂಬ ಸಾಂಸ್ಥಿಕಗೊಂಡ ವೀರಶೈವ ಲಿಂಗಾಯಿತ ವ್ಯವಸ್ಥೆಯನ್ನು ವಿಮರ್ಶೆಗೆ ಒಳಪಡಿಸುವುದನ್ನು ಕಾವ್ಯ ಕಟ್ಟಿ ಹಾಡುತ್ತಾರೆ.

ತಮ್ಮ ಮಗನ ಅಕಾಲಿಕ ಮರಣದಿಂದ ವಿಚಲಿತರಾಗುವ ರಾಚಪ್ಪಾಜಿ ಮತ್ತು ಪತ್ನಿ ದೊಡ್ಡಮ್ಮ ತಾಯಿ ಕೊಡೇಕಲ್ಲಿನಿಂದ ಮಂಟೇಸ್ವಾಮಿ ಜೊತೆ ಗೂಡಿ ದಕ್ಷಿಣದ ಮೈಸೂರು ಸೀಮೆಗೆ ಬರುತ್ತಾರೆ. ನೀಲಗಾರರು ಇದನ್ನು ಕಲ್ಯಾಣ ಪಟ್ಟಣದಿಂದ ಕತ್ತಲರಾಜ್ಯಕ್ಕೆ ಬಂದ ಪರಂಜ್ಯೋತಿ ಸಾಲು, ಉತ್ತರದೇಶ-ಕತ್ತಲರಾಜ್ಯ ಎಂಬ ಪರಿಕಲ್ಪನೆಯಲ್ಲಿ ಹಾಡುತ್ತಾರೆ. ಕತ್ತಲರಾಜ್ಯದ ಕಡೆಗಿನ ಈ ಪ್ರಯಾಣದಲ್ಲಿ ವಿಜಯನಗರ ಸಾಮ್ರಾಜ್ಯದ ಭೇಟಿಯೂ ಒಂದು. ರಾಚಪ್ಪಾಜಿ ವಿಜಯನಗರದ ಗಾರುಡಿಗರನ್ನು ತಮ್ಮ ಮೋಡಿ ವಿದ್ಯೆಯಿಂದ ಸೋಲಿಸುತ್ತಾರೆ. ಹಾಗೂ ಗೆದ್ದ ರಾಚಪ್ಪಾಜಿ ಗಾರುಡಿಗರ ಚೆನ್ನಾಜಮ್ಮನನ್ನು ಶಿಶುಮಗಳಾಗಿ ಪಡೆದು ತರುತ್ತಾರೆ.

9ನೇ ಪುಟಕ್ಕೆ

ಕಪ್ಪಡಿ ಜಾತ್ರೆಯಲ್ಲಿ ರಾಚಪ್ಪಾಜಿ ಧ್ಯಾನಪೀಠದ ಮುಂದೆ 'ಉರಿಗದ್ದುಗೆ' ಆಚರಣೆಯ ನೋಟ

ನೀಲಗಾರರು ಹಾಗೂ ಮಂಟೇಸ್ವಾಮಿ ಅನುಯಾಯಿಗಳ ಪಾಲಿಗೆ ಜೀವಮಾನದಲ್ಲಿ ಒಮ್ಮೆಯಾದರೂ ನೋಡಬೇಕಾದ ಜಾತ್ರೆ ಕಪ್ಪಡಿಯದು

ಶಾರ್ವರಿಯ ವಿ'ಪ್ಲವ' ದಾಟಿ...

ಅರ್ಪಣಾ ಎಚ್.ಎಸ್.

ಶಿವಮೊಗ್ಗ ಮೂಲದವರಾದ ನಾವು ನೆಲೆಸಿದ್ದು ಮಾತ್ರ ದಕ್ಷಿಣ ಕನ್ನಡದಲ್ಲಿ. ಭೌಗೋಳಿಕವಾಗಿ ಕರ್ನಾಟಕದ ಭಾಗವಾದರೂ ಸಾಂಸ್ಕೃತಿಕವಾಗಿ ತನ್ನದೇ ಪ್ರತ್ಯೇಕ ಗುರುತು ಹೊಂದಿರುವ ದಕ್ಷಿಣದ ಕರಾವಳಿಗೆ, ಹಬ್ಬಗಳ ವಿಷಯದಲ್ಲಿ ಕೇರಳವೇ ಹತ್ತಿರ. ಹೀಗಾಗಿ, ಬಹುತೇಕ ಹಬ್ಬಗಳನ್ನು ಘಟ್ಟದ ಮೇಲಿನವರಾದ ನಾವು ಬೇರೆಯದೇ ರೀತಿಯಲ್ಲಿ ಅಥವಾ ಬೇರೆಯದೇ ಸಮಯದಲ್ಲಿ ಆಚರಿಸುತ್ತಿದ್ದೆವು. ಯಾವುದೋ ಹಿಂದಿ ಸಿನಿಮಾದಲ್ಲಿ ಹಾಸ್ಯನಟ ಜಾನಿ ಲಿವರ್, ಮನಸ್ಸಿಗೆ ಬಂದ ಹಬ್ಬವನ್ನು ಮನಸ್ಸಿಗೆ ಬಂದಾಗ ಆಚರಿಸುತ್ತಾನಲ್ಲ, ಒಂದು ರೀತಿಯಲ್ಲಿ ಅಂತಹ ಪರಿಸ್ಥಿತಿಯಾಗಿತ್ತು ನಮ್ಮದು.

ಅದರಲ್ಲೂ ಮುಖ್ಯವಾಗಿ ಯುಗಾದಿ ಹಬ್ಬ. ನೆರೆಹೊರೆಯಲ್ಲಿ ಚಾಂದ್ರಮಾನ ಯುಗಾದಿ ಆಚರಿಸುವುದು ನಮ್ಮ ಕುಟುಂಬವೊಂದೇ. ಉಳಿದವರೆಲ್ಲರೂ ಸೂರ್ಯಮಾನ ಯುಗಾದಿ 'ವಿಶು'ವಿಗಾಗಿ ಕಾಯುತ್ತಿದ್ದರೆ, ನಮ್ಮ ಮನೆಯಲ್ಲಿ ನಾವು ಮಾತ್ರ ಬೇವು-ಬೆಲ್ಲ ತಿಂದು ಹೊಸ ವರ್ಷಕ್ಕೆ ಸ್ವಾಗತ ಕೋರುತ್ತಿದ್ದೆವು. ಈಗ ಹಬ್ಬಗಳೇ ತುಂಬಿರುವ ಸೀರಿಯಲ್‌ಗಳ ಪ್ರಭಾವವೋ ಏನೋ ಘಟ್ಟದವರ ಹಬ್ಬಗಳ ಬಗ್ಗೆ ಕರಾವಳಿಯಲ್ಲಿ ಅರಿವಿದೆ ಮತ್ತು ಕೆಲವಂತೂ ಆಚರಣೆಗೂ ಬಂದು ಬಿಟ್ಟಿವೆ. ಆದರೆ, ಆಗಿನ ಕಾಲದಲ್ಲಿ ಬೇವು-ಬೆಲ್ಲದ ಪರಿಕಲ್ಪನೆಯೇ ಇಲ್ಲದ ಕರಾವಳಿಗರು, ಅದನ್ನು ಸಂಕ್ರಾಂತಿಯ ಎಳ್ಳುಬೆಲ್ಲ ಎಂದು ತಪ್ಪಾಗಿ ತಿಳಿದು ನಮಗೂ ಕೊಡಿ ಎಂದು ಕೇಳಿ ಪಡೆದು ತಿಂದು ಪೆಚ್ಚಾಗುತ್ತಿದ್ದರು.

ನಮಗೂ ಬಾಲ್ಯದಲ್ಲಿ ಬೇವು-ಬೆಲ್ಲ ಇಷ್ಟದ ಸಂಗತಿಯೇನೂ ಆಗಿರಲಿಲ್ಲ. ಅದರ ಹಿಂದಿರುವ ಅರ್ಥ, ಸುಖ ದುಃಖದ ಮಾತುಗಳನ್ನೆಲ್ಲ ಹೇಳಿ ಕೊಟ್ಟರೂ ನಾವು ತಿನ್ನಲು ಸಿದ್ಧವಿರುತ್ತಿರಲಿಲ್ಲ. ನನಗಂತೂ 'ಏನಿದು ವಿಚಿತ್ರ? ಮುಂದಿನ ವರ್ಷಪೂರ್ತಿ ಸಿಹಿಯಾಗಿರಲಿ ಎಂದು ಹಾರೈಸಿ, ಬೆಲ್ಲ ಕೊಡುವುದು ಸರಿಯಾದ ಕ್ರಮವಲ್ಲವೇ? ಬೇವು ಇರಬೇಕೆಂದು ನಾವೇ ಏಕೆ ನಿರ್ಧರಿಸಬೇಕು' ಎಂದೆಲ್ಲಾ ಯೋಚನೆ. ಆ ಯೋಚನೆಗೆ ಸಂಜೆಯ ಯುಗಾದಿ ಪಂಚಾಗ ಶ್ರವಣ ಉತ್ತರ ಕೊಡುತ್ತಿತ್ತು. ಬೇವಿನ ಪ್ರಮಾಣ ಹೆಚ್ಚು ಕಮ್ಮಿ ಆಗಬಹುದೇ ಹೊರತು, ಬೇವಂತೂ ಇದ್ದೇ ಇರುತ್ತದೆ ಎಂಬುದರ ಅರಿವಾಗಿತ್ತು. ಸಣ್ಣವರಿದ್ದಾಗ ಪಂಚಾಂಗದಲ್ಲಿರುವ ವರ್ಷ ಭವಿಷ್ಯದ ಬಗ್ಗೆ ಭಾರೀ ಕುತೂಹಲ. ಅಂದು ಕೇಳಿ ಮರುದಿನ ಮರೆತುಬಿಡುತ್ತಿದ್ದ ಕಾರಣ, ಅದು ಎಷ್ಟರಮಟ್ಟಿಗೆ ನಿಜವಾಗಿರುತ್ತಿತ್ತೆಂಬುದು ಅರಿವಿಲ್ಲವಾದರೂ ಆ ಕ್ಷಣಕ್ಕೆ ಬೇವು-ಬೆಲ್ಲದ ನಿಜ ಅನುಭವ ಕೊಡುತ್ತಿತ್ತು.

ಯುಗಾದಿ ವಿಶೇಷವೆನಿಸಲು ಮತ್ತು ಪಂಚಾಂಗ ಶ್ರವಣಕ್ಕೆ ವಿಶೇಷ ಅರ್ಥ ಸಿಗಲು ಇನ್ನೂ ಒಂದು ಕಾರಣವಿತ್ತು. ಈ ಹಬ್ಬ ಬಹುತೇಕ ವಾರ್ಷಿಕ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲೇ ಬರುತ್ತಿತ್ತು. ಹಬ್ಬಕ್ಕೆಂದು ಸಿಕ್ಕ ರಜೆಯನ್ನು ಹಾಗೂ ಹೀಗೂ ಓದದೇ ಕಳೆದುಬಿಡುತ್ತಿದ್ದೆವು. ಹಬ್ಬ, ಅದರಲ್ಲೂ ವರ್ಷದ ಮೊದಲ ಹಬ್ಬ ಎಂಬ ಕಾರಣಕ್ಕೆ ಬೈಬಾರದು, ಹೊಡಿಬಾರದು ಎಂದು ತಮಗೆ ತಾವೇ ನಿಷೇಧಾಜ್ಞೆ ಹೇರಿಕೊಂಡಿರುತ್ತಿದ್ದ ಹಿರಿಯರು ಹೆಚ್ಚಾಗಿ ನಮ್ಮ ತಂಟೆಗೆ ಬರುತ್ತಿರಲಿಲ್ಲ. ಹೀಗಾಗಿ, ಕತ್ತಲಾಗುವ ವೇಳೆಗೆ ಏನೇನೂ ಓದಿಲ್ಲದ ಕಾರಣ, ಮರುದಿನದ ಪರೀಕ್ಷೆ ನೆನೆದು ಎದೆಯಲ್ಲಿ ಢವಡವ ಶುರುವಾಗಿರುತ್ತಿತ್ತು. ನನಗಂತೂ ಪಂಚಾಗದ ಭವಿಷ್ಯದಲ್ಲಿ ನನಗೆಷ್ಟು ಮಾರ್ಕ್ಸ್ ಬರುತ್ತದೆ ಎಂಬುದರ ಸುಳಿವು ಸಿಗಬಹುದೆಂಬ ದೂರದ ಆಶಯ. ಅಂತಹ ಸಂತಸದ ಸುದ್ದಿ ದೊರೆಯದೇ ಹೋದಾಗ ಶಾಲೆಯಲ್ಲಿ ಬಾಯಿಪಾಠ ಮಾಡಿದ್ದ ಬೇಂದ್ರೆ ಕವನ ನೆನಪಾಗುತ್ತಿತ್ತು. 'ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ ನಮ್ಮನಷ್ಟೆ ಮರೆತಿದೆ' ಎಂದು ಮನ ಅಳುತ್ತಿತ್ತು.

ಅಂತೂ ಈ ರೀತಿ, ನಮ್ಮ ಮನೆಯ ಬಾಗಿಲು ಮಾತ್ರ ಹಸಿರು ತೋರಣ ಧರಿಸಿ, ಬೇವಿನ ಎಲೆಯನ್ನು ಮುಡಿದುಕೊಂಡು ವಿಶೇಷವಾಗಿ ಕಾಣುವಾಗ, ನಮ್ಮ ತಂದೆ ಕೆಲವೊಮ್ಮೆ ಬೇರೆ ಊರಿಗೆ ಹೋಗಿ ನೆಲೆಯೂರುವ ಮಾತನಾಡುವುದಿತ್ತು. ನಮಗೆ ಅದರ ಅಗತ್ಯವೇನಿದೆ ಎಂಬ ಅರ್ಥವಾಗದೆ ಮಿಕಿ ಮಿಕಿ ನೋಡುತ್ತಿದ್ದೆವು. ಆಗೆಲ್ಲಾ ನನ್ನಪ್ಪ ಕೊಡುತ್ತಿದ್ದ ಕಾರಣ ಇದೊಂದೇ, 'ಇಲ್ಲಿ ನಮ್ಮ ಹಬ್ಬಹರಿದಿನ ಒಂದೂ ಇಲ್ಲ. ಇದ್ದರೂ ಆಚರಣೆ ಬೇರೆ ರೀತಿ. ಎಷ್ಟು ವರ್ಷ ಅಂತ ನಾವಷ್ಟೇ ಹಬ್ಬ ಮಾಡ್ಕೊಂಡು ಇರೋದು?' ನೆಲೆಸಿದ ಊರು ಬದಲಿಸುವಂತಹ ದೊಡ್ಡ ನಿರ್ಧಾರಕ್ಕೆ, ಎಲ್ಲರ ಜೊತೆ ಹಬ್ಬ ಆಚರಿಸಲು ಸಿಗೋದಿಲ್ಲ ಎಂಬ ಕಾರಣ ನೀಡುತ್ತಿದ್ದ ಅಪ್ಪ ನನಗೆ ಆಗ ಆಶ್ಚರ್ಯ ತರಿಸುತ್ತಿದ್ದರು. ಈಗ ಯೋಚಿಸುವಾಗ ಅರ್ಥವಾಗುತ್ತಾರೆ.

ನನ್ನ ಅಪ್ಪನಿಗೆ ಮಾತ್ರವಲ್ಲ, ಆ ಪೀಳಿಗೆಗೇ ಹಬ್ಬ, ಧಾರ್ಮಿಕ ಆಚರಣೆ ಎಂದರೆ ಅದೊಂದು ಭಾವನಾತ್ಮಕ ಸಂಭ್ರಮ. ಅವರು ಮಕ್ಕಳಾಗಿದ್ದ ಕಾಲಕ್ಕೆ ಹೊಟ್ಟೆ ತುಂಬ ಊಟ ಸಿಗುವುದೇ ಕಷ್ಟವಾಗಿದ್ದಾಗ, ಸಿಹಿ ತಿನ್ನಬೇಕಿದ್ದರೆ ಹಬ್ಬವೇ ಬರಬೇಕು, ಹೊಸ ಬಟ್ಟೆ ಬೇಕೆಂದರೂ ಹಬ್ಬಕ್ಕೇ ಕಾಯಬೇಕು. ಜೊತೆಗೆ, ಕೂಡು ಕುಟುಂಬಗಳಲ್ಲಿ ಹಬ್ಬಕ್ಕೊಂದು ವಿಶೇಷ ಸೊಬಗು ಸಿಗುತ್ತದೆ. ಈ ಬಾಲ್ಯದ ನೆನಪುಗಳಿಂದಾಗಿಯೇ ಇರಬೇಕು ಅವರಿಗೆ ಹಬ್ಬದೊಂದಿಗೆ ಒಂದು ಚಂದದ ನಂಟಿದೆ. ಹೀಗಾಗಿಯೇ ಇರಬೇಕು, ನಮ್ಮ ಮನೆಯಲ್ಲಿ ಹಬ್ಬದ ದಿನ ಪೂಜೆಗೆಲ್ಲ ಹೆಚ್ಚಿನ ಮಹತ್ವ ಕೊಡುತ್ತಿದ್ದ ನೆನಪಿಲ್ಲ. ನಮಗೆ ಹಬ್ಬವೆಂದರೆ ತೋರಣ, ರಂಗೋಲಿ, ಹಬ್ಬದೂಟ, ಹೊಸ ಬಟ್ಟೆ. ಒಟ್ಟು ಅದೊಂದು ಸಾಂಸ್ಕೃತಿಕ ಸಂಭ್ರಮ.

ನಮ್ಮ ಪೀಳಿಗೆಯೂ ಬಾಲ್ಯದಲ್ಲಿ ಹಬ್ಬಕ್ಕಾಗಿ ಕಾಯುತ್ತಿತ್ತು. ನಮ್ಮ ಹೆತ್ತವರಷ್ಟು ಸಂಭ್ರಮ ಇರಲಿಲ್ಲವಾದರೂ ಹಬ್ಬ ತನ್ನ ಚಾರ್ಮ್ ಕಳೆದುಕೊಂಡಿರಲಿಲ್ಲ. ನಮ್ಮ ಮಕ್ಕಳಿಗೆ, ಅಂದರೆ ಈಗಿನ ಪೀಳಿಗೆಗೆ ಮಾತ್ರ ಹಬ್ಬ ಯಾವುದೇ ದೊಡ್ಡ ಅನುಭೂತಿ ನೀಡುವುದು ಕಾಣುವುದಿಲ್ಲ. ಶಾಲೆಗೆ ರಜೆ ಎಂಬ ಸಂತೋಷವೊಂದು ಬಿಟ್ಟರೆ, ಅವರಿಗೆ ಸಿಹಿಯಾಗಲಿ, ಹೊಸ ಬಟ್ಟೆಯಾಗಲಿ ದೊಡ್ಡ ಮಟ್ಟಿನ ಸಂತಸ ತರುವುದಿಲ್ಲ. ಏಕೆಂದರೆ, ಇವು ಯಾವುವೂ ಅಪರೂಪವಾದ ವಸ್ತುಗಳಲ್ಲ ಅವರಿಗೆ. ಹಾಗೇ ನೋಡಿದರೆ, ತೋರಣ ಕಟ್ಟುವ ಕೆಲಸ ಕೊಡುತ್ತಾರೆ, ಎಣ್ಣೆ ನೀರು ಹಾಕುತ್ತಾರೆ, ಬೇಗ ಎಬ್ಬಿಸುತ್ತಾರೆ ಎಂಬಂತಹ ಸಣ್ಣ ಕಿರಿಕಿರಿಗಳೇ ಹಬ್ಬದ ಅಂಶವಾಗಿರುವಂತೆ ಕಾಣುತ್ತದೆ ಈಗಿನ ಮಕ್ಕಳಿಗೆ.


ಕಲೆ: ಪ್ರಕಾಶ್ ಶೆಟ್ಟಿ

ಇಂತಹ ಯುಗಾದಿಯಂತಹ ಯುಗಾದಿ ಹಬ್ಬವೇ ಈಗೆರಡು ವರ್ಷಗಳಿಂದ ಕಳೆ ಕಳೆದುಕೊಂಡಿದೆ. ಕೊರೊನಾ ನುಂಗಿ ಹಾಕಿದ್ದ ಮೊತ್ತಮೊದಲ ದೊಡ್ಡ ಹಬ್ಬವೇ ಯುಗಾದಿ. 2020ರ ಮಾರ್ಚ್ ತಿಂಗಳಲ್ಲಿ ಎಂದಿನಂತೆ ಭೂತಾಯಿ ಹೊಸ ಚಿಗುರುಗಳ ಮೂಲಕ, ತನ್ನ ಹಸಿರ ಹೊದಿಕೆಯನ್ನು ನವೀಕರಿಸಿಕೊಳ್ಳಲು ಆರಂಭಿಸಿಯಾಗಿತ್ತು. ಯುಗಾದಿಗೆ ಇನ್ನೇನು ಎರಡು ದಿನವಷ್ಟೇ ಬಾಕಿ ಉಳಿದಿತ್ತು. ಹಬ್ಬದ ಆಚರಣೆಗೆ ಭರ್ಜರಿ ಖರೀದಿ, ಸಿದ್ಧತೆ ನಡೆಯಬೇಕಿದ್ದ ಭಾನುವಾರದಂದು, ಜನರೆಲ್ಲಾ ಮನೆಯೊಳಗೇ ಕುಳಿತು ಜನತಾ ಕರ್ಫ್ಯೂ ಆಚರಿಸಿದ್ದರು. ಕೊರೊನಾ, ಕೋವಿಡ್, ಲಾಕ್‌ಡೌನ್ ಪದಗಳು ದಿನದ ಮಾತುಕತೆಯ ಅವಿಭಾಜ್ಯ ಅಂಗವಾಗಿ ಬಿಟ್ಟಿದ್ದವು. ಆಗ ಹಬ್ಬಕ್ಕಾಗಿ ಕಷ್ಟಬಿದ್ದು ಹೇಗೇಗೋ ಪ್ರಯಾಣಿಸಿ ತಮ್ಮೂರು ತಲುಪಿದ್ದ ಹಲವರು ಇನ್ನೂ ನಗರಕ್ಕೆ ಮರಳಿಲ್ಲ ಎಂಬುದು ಎರಡು ವರ್ಷಗಳಲ್ಲಿ ಸಂಪೂರ್ಣ ಬದಲಾದ ಬದುಕಿಗೆ ದೊಡ್ಡ ಸಾಕ್ಷಿಯಾಗಿದೆ.

ಲಾಕ್‌ಡೌನ್, ಜನತಾ ಕರ್ಫ್ಯೂಗಳೆಲ್ಲಾ ಹೊಸದಾಗಿದ್ದ, ಕೊರೊನಾ ಭಯ ಅತಿಯಾಗಿದ್ದ ಆ ಅವಧಿಯಲ್ಲೂ ಸಂವತ್ಸರದ ಮೊದಲ ಹಬ್ಬವನ್ನು, ಹೊಸ ವರ್ಷವನ್ನು ಜನ ಆಚರಿಸದೇ ಬಿಡಲಿಲ್ಲ. ನಾವಿಲ್ಲಿ ಹಬ್ಬದ ದಿನ ಮನೆಯಿಂದ ಹೊರಗೆ ಕಾಲಿಡದೆ, ಸಿಕ್ಕಿದ್ದರಲ್ಲಿ ಹಬ್ಬ ಮಾಡಿ, ಒಬ್ಬಟ್ಟಿನ ಜೊತೆ ಹಬ್ಬದೂಟ ಮುಗಿಸಿದ್ದೆವು. ಅಲ್ಲಿ ನನ್ನಪ್ಪ-ಅಮ್ಮ ಲಾಕ್‌ಡೌನ್ ತೆರವಾಗುವ ಬೆಳಗಿನ ಸಣ್ಣ ಅವಧಿಯಲ್ಲೇ ಮಾವಿನಸೊಪ್ಪು, ಮಾವಿನಕಾಯಿ ತಂದು ಹಬ್ಬಕ್ಕೆ ಏನೂ ಕೊರತೆಯಾಗದಂತೆ ನೋಡಿಕೊಂಡಿದ್ದರು. 'ಈ ಟೈಮ್‌ನಲ್ಲಿ ಯಾಕೆ ಹೊರಗೆ ಹೋಗೋಕೆ ಹೋದ್ರಿ' ಎಂಬ ಮಕ್ಕಳ ಅಸಮಾಧಾನಕ್ಕೆ 'ಮಾವಿನಕಾಯಿ ಚಿತ್ರಾನ್ನ ಇಲ್ಲದೆ ಯುಗಾದಿ ಮಾಡೋಕೆ ಆಗುತ್ತಾ? ವರ್ಷದ ಮೊದಲ ಹಬ್ಬ' ಎಂದಿದ್ದರು ಹಬ್ಬಗಳ ಅಭಿಮಾನಿ ನನ್ನಪ್ಪ.

ಮುಂದಿನ ವರ್ಷದ ಯುಗಾದಿ ವೇಳೆಗೂ ಪರಿಸ್ಥಿತಿ ಸುಧಾರಿಸಿರಲಿಲ್ಲ. ಒಂದೇ ವ್ಯತ್ಯಾಸವೆಂದರೆ ಕೊರೊನಾ ಪೀಡಿತರ ಸಂಖ್ಯೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಿಕ್ಕಾಪಟ್ಟೆ ಹೆಚ್ಚಿತ್ತು. ಆದರೆ, ಭಯ ಕಡಿಮೆಯಾಗಿತ್ತು. ಜನ ಮಾಸ್ಕ್, ಲಾಕ್‌ಡೌನ್‌ಗಳ ಜೊತೆ ಬದುಕುವುದನ್ನೂ ಕಲಿತಿದ್ದರು. ಲಾಕ್‌ಡೌನ್ ತಂದೊಡ್ಡಿದ್ದ ಸಂಕಷ್ಟದ ನಡುವೆ ನೂರಾರು ಕಿ.ಮೀ. ನಡೆದಿದ್ದ ಪಾದಗಳ ಗಾಯ ಆರಿತ್ತು. ಆದರೆ, ಮುಂದೆ ರಕ್ಕಸನಂತೆ ಕಾದು ಕುಳಿತಿದ್ದ ಕೋವಿಡ್ ಎರಡನೇ ಅಲೆಯ ವಿನಾಶಕಾರಿತ್ವದ ಬಗ್ಗೆ ಅರಿವಿರಲಿಲ್ಲ. ಹೀಗಾಗಿ, ಹಲವು ಕೊರತೆಗಳ ನಡುವೆಯೇ, ಕಳೆದ ವರ್ಷವೂ ಯುಗಾದಿ ಆಚರಿಸಲ್ಪಟ್ಟಿತು. ಆದರೆ, ಒಬ್ಬಟ್ಟಿನ ಸವಿ ಇನ್ನೂ ನಾಲಗೆಯ ಮೇಲೆ ಇರುವಾಗಲೇ ಕೋವಿಡ್ ಮುಂದಿನ ಅನಾಹುತದ ಸೂಚನೆ ನೀಡತೊಡಗಿತ್ತು. ನಂತರದ ಎರಡು ತಿಂಗಳಿನದ್ದು ಒಂದು ಕರಾಳ ಅಧ್ಯಾಯ. ಅದರ ನೆನಪು, ಅದರ ಪರಿಣಾಮ ಹಲವರ ಬದುಕಲ್ಲಿ ಶಾಶ್ವತ ಗಾಯ ಉಳಿಸಿ ಹೋಗಿದೆ.

ಈ ಎಲ್ಲಾ ಕಹಿ ನೆನಪುಗಳನ್ನು ಕೊಂಚವಾದರೂ ಮರೆಸುವಂತೆ ಯುಗಾದಿ ಮರಳಿ ಬಂದಿದೆ. ಬಹುತೇಕ ಸಾಮಾನ್ಯ ಸ್ಥಿತಿಗೆ ಮರಳಿರುವ ಜಗತ್ತಿಗೆ ಎರಡು ವರ್ಷಗಳ ನಂತರ ಮತ್ತೆ ಸಂಭ್ರಮದ ಯುಗಾದಿ ಆಚರಣೆಗೆ ಅವಕಾಶ ದೊರೆತಿದೆ. ಶಾರ್ವರಿ, ಪ್ಲವಗಳು ಕಳೆದು ಶುಭಕೃತ್ ಅಡಿಯಿಡುತಿದೆ. ಅದು ಹೆಸರಿನಲ್ಲಷ್ಟೇ ಅಲ್ಲದೆ ಎಲ್ಲರ ಬಾಳಲ್ಲೂ ಶುಭತರಲಿದೆ ಎಂಬ ಆಶಯ ನಿಜವಾಗಲಿ.

ಕಪ್ಪಡಿ ಜಾತ್ರೆಯೆಂಬ ಕಲ್ಯಾಣದ ಯಾತ್ರೆ

8ನೇ ಪುಟದಿಂದ...

ದಕ್ಷಿಣದ ಮೈಸೂರು ಸೀಮೆ ಕಡೆಗಿನ ಪ್ರಯಾಣದಲ್ಲಿ ಚಿಕ್ಕಮಗಳೂರು ಸಖರಾಯ ಪಟ್ಟಣದ ಭೇಟಿ ಮತ್ತೊಂದು. ಅಂದಿಗೆ ಮೈಸೂರು ಅರಸರ ಸಾಮಂತರಾಗಿದ್ದ ಸಖರಾಯ ಪಟ್ಟಣದ ಅರಸನ ಇಬ್ಬರು ಮಕ್ಕಳನ್ನು ಮಂಟೇಸ್ವಾಮಿ ಶಿಷ್ಯರನ್ನಾಗಿ ಪಡೆಯುತ್ತಾರೆ. ಅವರೇ ಇಂದಿನ ಮಂಟೇಸ್ವಾಮಿ ಪರಂಪರೆಯ ಉತ್ತರಾಧಿಕಾರಿ ಗುರು-ಪೀಠಾಧಿಪತಿಗಳಾಗಿರುವ ಮಳವಳ್ಳಿ ಸ್ವಾಮೀಜಿ ಹಾಗೂ ಬೊಪ್ಪೇಗೌಡನಪುರದ ಸ್ವಾಮೀಜಿಯಾಗಿದ್ದಾರೆ. ಈ ಘಟನೆಯನ್ನು ಸಖರಾಯ ಪಟ್ಟಣದ ವಿಷದ ಕಜ್ಜಾಯದ ಪ್ರಸಂಗವಾಗಿ ನೀಲಗಾರರು ಕಾವ್ಯದಲ್ಲಿ ಹಾಡುತ್ತಾರೆ.

ಮುಂದುವರೆದು ಅಂತಿಮ ಹಂತದ ಪ್ರಯಾಣದಲ್ಲಿ ಮಂಟೇಸ್ವಾಮಿ-ರಾಚಪ್ಪಾಜಿಯವರು ಮೈಸೂರು ಸಂಸ್ಥಾನವನ್ನು ತಲುಪುತ್ತಾರೆ. ಚಾರಿತ್ರಿಕವಾಗಿ ಮಂಟೇಸ್ವಾಮಿ ರಾಚಪ್ಪಾಜಿಯವರ ಮೈಸೂರು ಪ್ರವೇಶ ಬೋಳ ಚಾಮರಾಜ ಒಡೆಯ-ರಾಜ ಒಡೆಯರ ಆಳ್ವಿಕೆಯ ಕಾಲ (1578-1617). ಮೈಸೂರು ಸಂಸ್ಥಾನದ ಕಾರುಗಳ್ಳಿ ವೀರರಾಜಯ್ಯ (ಮಾರನಾಯಕ) ಮೈಸೂರು ಅರಸರ ರಾಜ್ಯಾಧಿಕಾರ ಕಬಳಿಸಿ, ರಾಜಕುಮಾರಿಯನ್ನು ವರಿಸಲು ಸಂಚು ರೂಪಿಸಿರುತ್ತಾನೆ. ಈ ವೇಳೆಗೆ ಬರುವ ಮಂಟೇಸ್ವಾಮಿ-ರಾಚಪ್ಪಾಜಿ ಅವನ ಸಂಚನ್ನು ವಿಫಲಗೊಳಿಸಿ, ಅರಸರ ಅಧಿಕಾರ ಉಳಿಸಿ, ಹರಸಿ ಮೈಸೂರು ಅರಮನೆಗೆ ಚಿನ್ನದ ಕಂಡಾಯ ಕೊಟ್ಟು ಮೈಸೂರು ಅರಸರ ಒಕ್ಕಲು ಪಡೆಯುತ್ತಾರೆ ಎಂಬ ಮಾಹಿತಿಗಳಿವೆ.

ರಾಜ ಒಡೆಯರು ದಳವಾಯಿ ವೀರ ರಾಜಯ್ಯನನ್ನು ಸೋಲಿಸಿದ ಬಗ್ಗೆ, ಸಂತರಿಬ್ಬರು ಮಾರನಾಯಕನ ಅಂತ್ಯಕ್ಕೆ ನೆರವಾದ ಬಗ್ಗೆ ತಿರುಮಲಾರ್ಯನ ಚಿಕ್ಕದೇವರಾಜ ವಿಜಯ, ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ವನಿಧಿ ಕೃತಿಗಳಲ್ಲಿ ಪೂರಕ ಉಲ್ಲೇಖಗಳಿವೆ. ಇದನ್ನೇ ಮೈಸೂರು ಮಹಾರಾಣಿ ಮನೆಯೊಳಗೆ ಮೊದಲ ಭಿಕ್ಷಾ, ಕಾರಂಜಿ ಕೆರೆಯೊಳಗೆ ಕಾವಿಡೇರೆ ಹಾಕಿದ್ದು, ಕಾರುಗಳ್ಳಿ ಮಾರನಾಯಕನ ಕಥನಗಳಾಗಿ ನೀಲಗಾರರು ಮಂಟೇಸ್ವಾಮಿ ಕಾವ್ಯದಲ್ಲಿ ಹಾಡುತ್ತಾರೆ.

ಮೈಸೂರು ಅರಸರು ಹಿಂದಿನಿಂದ ಇಂದಿನ ಯದುವೀರ್ ಕೃಷ್ಣದತ್ತ ಒಡೆಯರ್ ವರೆಗೂ ಕಪ್ಪಡಿ, ಬೊಪ್ಪೇಗೌಡನಪುರ, ಆದಿಹೊನ್ನಾಯಕನಹಳ್ಳಿ, ಚಿಕ್ಕಲ್ಲೂರು, ಕುರುಬನಕಟ್ಟೆ ಕ್ಷೇತ್ರಗಳಿಗೆ ನಡೆದುಕೊಳ್ಳುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಇಂದಿಗೂ ಸಖರಾಯಪಟ್ಟಣದ ಅರಸು ಮಕ್ಕಳಾದ ಮಳವಳ್ಳಿ-ಬೊಪ್ಪೇಗೌಡನಪುರ ಪೀಠಾಧಿಪತಿಗಳಿಗೂ, ಮೈಸೂರು ಅರಸು ಮನೆತನಕ್ಕೂ ವೈವಾಹಿಕ ಸಂಬಂಧಗಳು ಇರುವುದು ಗಮನಾರ್ಹ. ಇಂದಿನ ಮಳವಳ್ಳಿ ಸ್ವಾಮಿಗಳಾದ ವರ್ಚಸ್ವಿ ಸಿದ್ಧಲಿಂಗ ರಾಜೇ ಅರಸ್‌ರವರು ಮೈಸೂರು ಅರಸು ಮನೆತನಕ್ಕೆ ಮೊಮ್ಮಗ. ಇವರ ಮಾತೃಶ್ರೀ ಮಹಾ ರಾಜಕುಮಾರಿ ಮೀನಾಕ್ಷಿ ದೇವಿಯವರು ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಅವರ ಮಗಳು.

ಹಾಗೇ ಮಂಟೇಸ್ವಾಮಿ ಮಂಡ್ಯ ಸೀಮೆಯ ನಿಡುಘಟ್ಟ ಮಾರಳ್ಳಿ ಒಳಗೆ ಆಚಾರರ ಹುಡುಗ ಕೆಂಪಾಚಾರಿಯನ್ನು ಶಿಶುಮಗನನ್ನಾಗಿ ಪಡೆದು ನೀಲಗಾರ ದೀಕ್ಷೆಕೊಟ್ಟು ಸಿದ್ಧಪ್ಪಾಜಿಯನ್ನಾಗಿ ಮಾಡಿಸುತ್ತಾರೆ. ಅದೇ ಸಿದ್ಧಪ್ಪಾಜಿ ಮೂಲಕ ಹಲಗೂರು ಚಿಲ್ಲಾಪುರದ ಪಾಂಚಾಳ ಪಾಳೆಗಾರರ ಒಕ್ಕಲು ಪಡೆಯುತ್ತಾರೆ. ಅಷ್ಟೇ ಅಲ್ಲದೇ ಅವರಿಂದ ಕಬ್ಬಿಣದ ಭಿಕ್ಷೆ ಪಡೆದು ಮಠಮನೆ ಮಾಡುತ್ತಾರೆ. ಮುಂದುವರೆದು ಲಿಂಗಯ್ಯ ಚೆನ್ನಯ್ಯ ಎಂಬ ಶಿಷ್ಯರನ್ನು ಪಡೆದು ತಮ್ಮ ಪಂಥದ ಮೆರೆಯುವ ಕಂಡಾಯದ ದೇವರುಗಳನ್ನಾಗಿ ಮಾಡುತ್ತಾರೆ.

ಶಿವರಾತ್ರಿಯಂದು ಆರಂಭವಾದ ಕಪ್ಪಡಿ ಜಾತ್ರೆ ಸಂಭ್ರಮದಲ್ಲಿ ಸೇರಿದ್ದ ಸಾವಿರಾರು ಭಕ್ತರು

ಶಿವರಾತ್ರಿ ದಿನ ಕಪ್ಪಡಿ ಜಾತ್ರೆ ಆರಂಭವಾಗಿದೆ. ಏಪ್ರಿಲ್ 2, ಯುಗಾದಿ ಹಬ್ಬದಂದು ಬೊಪ್ಪೇಗೌಡನ ಪುರದ ಮಂಟೇಸ್ವಾಮಿ ಗದ್ದಿಗೆ ಜಾತ್ರೆಯೊಂದಿಗೆ ಮುಕ್ತಾಯವಾಗುತ್ತದೆ. ಕಪ್ಪಡಿ ಜಾತ್ರೆಯ ಕೊನೆಯ ದಿನವಾದ ಭಾನುವಾರ ಮಾದಲಿ ಪ್ರಸಾದದ ವಿತರಣೆ ನಡೆಯುತ್ತದೆ. ಮಂಟೇಸ್ವಾಮಿ ಗದ್ದಿಗೆಯಲ್ಲಿ ಎದಿರು ಸೇವೆ ಜಾತ್ರೆಯೂ ನಡೆಯುತ್ತದೆ.

ರಾಚಪ್ಪಾಜಿವರ ಧ್ಯಾನಪೀಠ 'ಉರಿಗದ್ದಿಗೆ' ಮೇಲೆ ಕೂರುವುದು ಜಾತ್ರೆಯ ಮಹತ್ವದ ಆಚರಣೆಗಳಲ್ಲೊಂದು. ಈ ಪೀಠ ಸತ್ಯ, ನ್ಯಾಯ, ನೀತಿ, ಸಮಾನತೆ, ಜಾತ್ಯಾತೀತತೆಯನ್ನು ಸಾರುವ ಪೀಠ ಎನಿಸಿದೆ. ಪ್ರಸ್ತುತ ಇಂದು ಮಳವಳ್ಳಿ ಸ್ವಾಮೀಜಿ, ಬೊಪ್ಪಣಪುರ ಸ್ವಾಮೀಜಿ ವರ್ಷ ಬಿಟ್ಟು ವರ್ಷ ಈ ಉರಿಗದ್ದಿಗೆ ಪೀಠರೋಹಣ ಮಾಡುವ ಪದ್ಧತಿ ಇದೆ. ಈ ವರ್ಷ ವರ್ಚಸ್ವಿ ಬುದ್ಧಿಯವರ ಸರದಿ ಇದೆ. ಗದ್ದಿಗೆ ಏರುವ ಈ ಆಚರಣೆ ಇಡೀ ಪರಂಪರೆಯ ಉತ್ತರಾಧಿಕಾರತ್ವದ ಪ್ರತೀಕ ಎನಿಸಿದೆ.

ಒಂದು ತಿಂಗಳು ಜರುಗುವ ಈ ಜಾತ್ರೆಯಲ್ಲಿ ನೀಲಗಾರ ದೀಕ್ಷೆಯಿಂದ ಹಿಡಿದು ವಿವಿಧ ಸೇವೆಗಳನ್ನು ಭಕ್ತರು ಸಲ್ಲಿಸುತ್ತಾರೆ. ಕರ್ನಾಟಕದ ಉದ್ದಗಲಕ್ಕೂ ಭಕ್ತಾದಿಗಳು ಜಾತಿ, ಮತ, ಧರ್ಮ, ಪಂಥ, ಪಂಗಡಗಳ ಭೇದವಿಲ್ಲದೆ ನೆರೆಯುತ್ತಾರೆ. ಬರುವ ಭಕ್ತಾದಿಗಳಿಗೆ ಒಂದು ತಿಂಗಳವರೆಗೆ ಅನ್ನ ದಾಸೋಹವನ್ನು ನಡೆಸಲಾಗುತ್ತದೆ. ಮಳವಳ್ಳಿ ವರ್ಚಸ್ವಿ ಬುದ್ಧಿಯವರು ಹೇಳುವ ಪ್ರಕಾರ, ಶಿವರಾತ್ರಿ ದಿನ ಹಚ್ಚುವ ಅನ್ನದಾಸೋಹದ ಒಲೆಯು ನಿರಂತರ ಒಂದು ತಿಂಗಳು ಕೆಡದೆ ಉರಿಯುತ್ತಿರುತ್ತದೆ. ಸುತ್ತಮುತ್ತಲ ಊರುಗಳ ಹಲವು ಮುಸ್ಲಿಮರು ಕಪ್ಪಡಿ, ಬೊಪ್ಪೇಗೌಡನಪುರ ಜಾತ್ರೆ ಗದ್ದಿಗೆ ಗಳಿಗೆ ನಡೆದುಕೊಳ್ಳುವುದಿದೆ. ರಾಚಪ್ಪಾಜಿಯನ್ನು ಸುತ್ತಾತ್ಷಾ ಎಂದು, ಚನ್ನಾಜಮ್ಮನನ್ನು ಮುನ್ನಾಕ್ಷಾ ಎಂದು, ಮಂಟೇಸ್ವಾಮಿ ಅವರನ್ನು ಮಾಂಕ್ಷಾವಲಿ ಎಂದು ಕರೆಯುವುದಾಗಿ ಮಾಹಿತಿ ಇದೆ. ಕೊಡೇಕಲ್ಲ ಬಸವಣ್ಣ ಕೂಡ ಹಿಂದೂ ಮುಸ್ಲಿಂ ಐಕ್ಯತೆ ಸೂಚಕ ಉಡುಪು ಧರಿಸಿದ ಉಲ್ಲೇಖವಿದೆ.

ಮಂಟೇಸ್ವಾಮಿ ರಾಚಪ್ಪಾಜಿಯವರ ಕಾಲಜ್ಞಾನ ಕಟ್ಟುಗಳನ್ನು ಗದ್ದಿಗೆಗಳ ಮೇಲಿಟ್ಟು ತಿಂಗಳಾನು ಕಾಲ, ವರ್ಷಾನು ಕಾಲ ಪೂಜಿಸಿಸುವುದು ಜಾತ್ರೆಗಳಲ್ಲಿ ಪದ್ಧತಿ. ಇದೊಂದು ಅಕ್ಷರ ಪರಂಪರೆ ಹಾಗೂ ಕಾಲಜ್ಞಾನ ವಚನಗಳನ್ನು ಆರಾಧಿಸುವ ಜಾತ್ರೆಯಾಗಿದೆ.

ಕೊಡೇಕಲ್ಲ ಬಸವಣ್ಣ ಮತ್ತು ಮಂಟೇಸ್ವಾಮಿ ಪರಂಪರೆಯ ಸಂತರು ಕಾಲಜ್ಞಾನಿ ಸ್ವರ ವಚನಕಾರರು. ಸ್ವತಃ ಮಂಟೇಸ್ವಾಮಿ ಬರೆದ 13 ಕಾಲಜ್ಞಾನ ವಚನಗಳು, ರಾಚಪ್ಪಾಜಿ ಬರೆದ 10 ಕೃತಿಗಳು 46 ತತ್ವಪದಗಳು ತಾಳೆಗರಿ ಹಸ್ತಪ್ರತಿ ರೂಪದಲ್ಲಿ ಕೊಡೇಕಲ್ಲು ಕ್ಷೇತ್ರದಲ್ಲಿ ದೊರೆತಿವೆ. ಮಂಟೇಸ್ವಾಮಿ ಸಂಗನಾತ್ಮಜ, ಸಂಗನಾಳು, ಚೆನ್ನ ಸಂಗನ ಕುವರ, ಮಂಟೇದಲಿಂಗ ಎಂಬ ಕಾವ್ಯ ನಾಮದಲ್ಲಿ ವಚನಗಳನ್ನು ಬರೆದರೆ, ರಾಚಪ್ಪಾಜಿ ರಾಚ, ಚಿಕ್ಕರಾಚ, ಹುಚ್ಚರಾಚ, ಬಾಲರಾಚ ಎಂಬ ಕಾವ್ಯನಾಮದಲ್ಲಿ ಸಾಹಿತ್ಯ ರಚಿಸಿದ್ದಾರೆ. ರಾಚಪ್ಪಾಜಿ ರಚಿಸಿದ 46 ತತ್ವಪದಗಳಲ್ಲಿ ಮೊದಲನೆಯದು 'ನಾವು ಕುರುಬರು ನಮ್ಮ ದೇವರು ಬೀರಯ್ಯ' ಎಂಬುದಾಗಿದೆ. ಇದು ಇಂದು ಕನಕದಾಸರು ರಚಿಸಿದ ಪದ್ಯ ಎಂದು ಜನಪ್ರಿಯಗೊಂಡಿದೆ. ಕನಕದಾಸರು ಗಹನವಾದ ವಿಷಯವೊಂದರ ಕುರಿತು ಚರ್ಚಿಸುವ ಸಲುವಾಗಿ ರಾಚಪ್ಪಯ್ಯನನ್ನು ಹುಡುಕಿಕೊಂಡು ಕೊಡೇಕಲ್ಲಿಗೆ ಬರುತ್ತಾರೆಂಬುದಾಗಿ ಇತಿಹಾಸದಲ್ಲಿ ಉಲ್ಲೇಖವಿದೆ.

ಇಂದಿಗೂ ಕಪ್ಪಡಿ, ಬೊಪ್ಪೇಗೌಡನಪುರದ ರಾಚಪ್ಪಾಜಿ-ಮಂಟೇಸ್ವಾಮಿ ಗದ್ದಿಗೆಗಳ ಮೇಲಿಟ್ಟು ಜಾತ್ರೆ ದಿನಗಳಂದು ಪೂಜಿಸುವ ವಚನಗಳ ಕಟ್ಟುಗಳು ಅವರ ಇತರೆ ಅಪ್ರಕಟಿತ ಹಸ್ತಪ್ರತಿಗಳಾಗಿವೆ ಎಂಬ ಮಾಹಿತಿ ಇದೆ. ಕಲ್ಯಾಣದ ಬಸವಣ್ಣ-ಅಲ್ಲಮ ಪ್ರಭು ಅವರ 12ನೇ ಶತಮಾನದ ವಚನ-ಶರಣ ಚಳವಳಿ ಆಶಯಗಳನ್ನು 15ನೇ ಶತಮಾನದಲ್ಲಿ ಮುಂದುವರೆಸಿ ಅನುಷ್ಠಾನಗೊಳಿಸಲು ಶ್ರಮಿಸಿದವರು ಕೊಡೇಕಲ್ಲ ಬಸವಣ್ಣ-ಮಂಟೇಸ್ವಾಮಿ-ರಾಚಪ್ಪಾಜಿಯವರು. ಇವರು ಮುನ್ನಡೆಸಿದ ಚಳವಳಿ, ಕಟ್ಟ ಬಯಸಿದ ಪಂಥವನ್ನು ಅಮರಕಲ್ಯಾಣ ಹಾಗೂ ಕಡೆಯ ಕಲ್ಯಾಣ ಎಂದು ಕರೆಯಲಾಗಿದೆ. ವೀರಸಂಗಯ್ಯನ ನಂದಿಯಾಗಮ ಲೀಲೆ ಕೃತಿಯ ಆಧಾರದ ಮೇಲೆ ಈ ಸಂತ ಪರಂಪರೆಯ ಕಾಲ ಕ್ರಿ.ಶ. 1489-1589 ಎಂದು ತಿಳಿದು ಬರುತ್ತದೆ.

12ನೇ ಶತಮಾನದ ಬಸವಣ್ಣ ಕಲ್ಯಾಣದ ಕಳಚೂರಿಗಳ ಸಖ್ಯದಲ್ಲಿದಂತೆ, ಕೊಡೇಕಲ್ಲ ಬಸವಣ್ಣ ಸುರಪುರ ಬೇಡನಾಯಕರಿಗೆ ಪೋಷಕಾರದಂತೆ, ಮಂಟೇಸ್ವಾಮಿ, ರಾಚಪ್ಪಾಜಿ ಮೈಸೂರು ಅರಸರು ಹಲಗೂರು ಪಾಳೇಗಾರರ ಬೆಂಗಾವಲಾಗಿ ಒಕ್ಕಲು ಪಡೆದು ನೀಲಗಾರ ಪರಂಪರೆಯನ್ನು ನೆಲೆಗೊಳಿಸಿ ವಿಸ್ತರಿಸಿದ್ದಾರೆ.

ಕೊಡೇಕಲ್ಲ ಬಸವಣ್ಣ ಮತ್ತು ಮಂಟೇಸ್ವಾಮಿ ಪರಂಪರೆಗಳು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ಲಕ್ಷಾಂತರ ಜನರನ್ನು ಒಕ್ಕಲು ಪಡೆದ ಕಡೆಯ ಕಲ್ಯಾಣದ ಪ್ರತೀಕಗಳು. ಇಂದಿಗೂ ಪ್ರತೀವರ್ಷ ನಡೆಯುವ ಕಪ್ಪಡಿ-ಬೊಪ್ಪೇಗೌಡನಪುರ-ಚಿಕ್ಕಲ್ಲೂರು ಜಾತ್ರೆಗಳಿಗೆ ಮೈಸೂರು ಸೀಮೆಯ ಒಕ್ಕಲುಗಳಂತೆ ಕೊಡೇಕಲ್ಲ ಪರಂಪರೆಯ ಭಕ್ತರು ಬಂದುಹೋಗುವ ಪರಿಪಾಠವಿದೆ.

ಮುನ್ನೋಟ 27-03-2022 ರಿಂದ 02-04-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿರಾಯಾಸವಾಗಿ ಕೆಲಸ ಮಾಡಲು ಸಾಕಷ್ಟು ತಾಳ್ಮೆ ಅಗತ್ಯ. ಸಂಘ-ಸಂಸ್ಥೆಗಳಲ್ಲಿ ಕೆಲಸ ಮಾಡಲು ರಾಜಕೀಯ ವ್ಯಕ್ತಿಗಳ ಶಿಫಾರಸುಗಳನ್ನು ಬಳಸಿಕೊಳ್ಳುವಿರಿ. ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಹಿನ್ನಡೆ ಕಾಣಬಹುದು. ನಿಮ್ಮ ಭರವಸೆಗಳು ಈಡೇರುವುದಕ್ಕಾಗಿ ಅತ್ಯಂತ ಶ್ರಮವಹಿಸಬೇಕಾದೀತು. ಕನ್ಯೆಯರಿಗೆ ವಿಶೇಷ ಉಡುಗೊರೆಯನ್ನು ಸ್ವೀಕರಿಸುವ ಸಂದರ್ಭವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದೇಶಿ ವ್ಯವಹಾರ ಮಾಡುವವರಿಗೆ ಉತ್ತಮ ಪ್ರೋತ್ಸಾಹದ ಜೊತೆಗೆ ಸಲಹೆ ಸೂಚನೆ ದೊರೆಯುತ್ತದೆ. ವ್ಯವಹಾರದಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಜಾಣ್ಮೆಯನ್ನು ಬಳಸಿ ಗೆಲ್ಲುವಿರಿ. ಕೌಟುಂಬಿಕ ಸಮಸ್ಯೆಯೊಂದನ್ನು ಬಗೆಹರಿಸಲು ಕರೆ ಬರಬಹುದು, ಎಚ್ಚರದಿಂದ ಭಾಗವಹಿಸಿ. ಶುಭಕಾರ್ಯಗಳು ನಿಮ್ಮ ಇಚ್ಛೆಯಂತೆ ನೆರವೇರುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಕಾಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಲೇವಾದೇವಿ ವ್ಯವಹಾರ ಮಾಡುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಕಾಣಬಹುದು. ಈಗಿನ ಸ್ಥಿತಿಯಲ್ಲಿ ದೊಡ್ಡಮಟ್ಟದ ಲೇವಾದೇವಿ ಖಂಡಿತವಾಗಿ ಬೇಡ. ವಿನಾಕಾರಣ ಮನೆಯವರೊಂದಿಗೆ ದುಡುಕಿ ಮಾತನಾಡುವ ಸಂದರ್ಭವಿದೆ, ತಾಳ್ಮೆವಹಿಸಿರಿ. ನಂಬಿ ಬಂದವರಿಗೆ ಕೈಲಾದ ಸಹಾಯ ಮಾಡಿ ಸಂತೋಷವನ್ನು ಪಡುವಿರಿ. ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿರೀಕ್ಷೆಯಂತೆ ನಿತ್ಯದ ಕಾರ್ಯಗಳು ಸಾಗಿ ನೆಮ್ಮದಿ ಇರುತ್ತದೆ. ಕ್ರೀಡಾಪಟುಗಳಿಗೆ ಬಹಳ ಯಶಸ್ಸು ಸಿಗುವ ಸಾಧ್ಯತೆ ಇದೆ. ನ್ಯಾಯವಾದಿಗಳು ನ್ಯಾಯ ತೀರ್ಮಾನ ಮಾಡುವಲ್ಲಿ ಮುತುವರ್ಜಿವಹಿಸುವುದು ಒಳ್ಳೆಯದು. ಮುಚ್ಚಿಹೋಗಿದ್ದ ನ್ಯಾಯಾಲಯದ ಕಟ್ಟಳೆಗಳು ಪುನಃ ತೆರೆದು ನಿಮಗೆ ಹೆಚ್ಚಿನ ಮಟ್ಟಿನ ಲಾಭವಾಗುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವವರ ಲಾಭ ಹೆಚ್ಚಾಗುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಹೊಸ ವಾಹನವೊಂದನ್ನು ಖರೀದಿ ಮಾಡುವ ಸಲುವಾಗಿ ಮಿತ್ರರೊಡನೆ ಚರ್ಚೆ ಮಾಡಲಿದ್ದೀರಿ. ಆದರೆ ದಾಖಲೆ ಪರಿಶೀಲನೆಯನ್ನು ಸರಿಯಾಗಿ ಮಾಡಿ. ಜಮೀನು ಅಥವಾ ನಿವೇಶನವನ್ನು ಖರೀದಿ ಮಾಡುವ ಸಾಧ್ಯತೆ ಇದೆ. ವ್ಯವಹಾರದಲ್ಲಿ ಬೇರೆಯವರ ಸಲಹೆಯಿಂದಾಗಿ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. ಹಿರಿಯರ ಸಲಹೆ ಪಡೆದು ಈ ಆಪತ್ತಿನಿಂದ ಪಾರಾಗಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಹುದಿನಗಳಿಂದ ನಡೆಯುತ್ತಿದ್ದ ಚಿತಾವಣೆಯು ಸಾರ್ವಜನಿಕರಿಗೆ ತಿಳಿದು ಅವರು ನಿಮ್ಮ ಮೇಲೆ ಜಗಳಕ್ಕೆ ಬರಬಹುದು. ಇದರಿಂದ ನಿಮ್ಮ ವ್ಯವಹಾರಗಳಲ್ಲಿ ಹಿನ್ನಡೆ ಆಗಬಹುದು. ನಿಮಗೆ ಸಾಲ ಕೊಟ್ಟವರು ಸಾಲ ವಾಪಸಾತಿಗಾಗಿ ದುಂಬಾಲು ಬೀಳಬಹುದು. ಅವರೊಡನೆ ತಾಳ್ಮೆಯಿಂದ ವರ್ತಿಸಿದಲ್ಲಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಉದ್ಯೋಗದಲ್ಲಿ ಸಾಕಷ್ಟು ಒತ್ತಡವಿದ್ದು ಚಿಂತೆಗೊಳಗಾಗುತ್ತಾರೆ. ಹಣಕಾಸಿನ ವ್ಯವಹಾರವನ್ನು ಮಾಡುವವರಿಗೆ ಸಂಕಷ್ಟಗಳು ಎದುರಾಗಬಹುದು. ಹಿರಿಯರು ತಮ್ಮ ಅಭಿರುಚಿಗೆ ತಕ್ಕಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವುದು ಒಳಿತು, ಇಲ್ಲವಾದಲ್ಲಿ ಕಾವೇರಿದ ಮಾತುಗಳು ಆಗಬಹುದು. ಮಿತ್ರವೃಂದದವರಿಂದ ಸಂತಸದ ಮಾತುಗಳು ಕೇಳಿಬರುತ್ತವೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಹಿರಿಯರ ಸಲಹೆ ಬಗ್ಗೆ ನಂಬಿಕೆ ಇಟ್ಟು ನಡೆದಲ್ಲಿ ನಿಮಗೆ ಅನುಕೂಲವಾಗುತ್ತದೆ. ಹೊಸ ಕಾರ್ಯವನ್ನು ಈಗ ಆರಂಭಿಸಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಬೇಕಾದ ಎಲ್ಲ ಸವಲತ್ತುಗಳು ದೊರೆಯುತ್ತವೆ. ಮಕ್ಕಳಿಂದ ನಿಮಗೆ ಸಾಕಷ್ಟು ಸಹಾಯ ದೊರೆಯುವ ಸಾಧ್ಯತೆ ಇದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಹೊಸ ಹೊಸ ವಿಚಾರಗಳ ಬಗ್ಗೆ ಹಿರಿಯರೊಡನೆ ಚರ್ಚಿಸಿ ಮುಂದುವರೆಯುವುದರಿಂದ ನಿಮಗೆ ಹೆಚ್ಚು ಅನುಕೂಲ. ಸದಾಚಾರ ಕಾರ್ಯಕ್ರಮಗಳಲ್ಲಿ ಸಾಕಷ್ಟು ಶ್ರದ್ಧೆಯಿಂದ ಭಾಗವಹಿಸುವಿರಿ. ಮಿತ್ರರ ನಡುವಿನ ಹಣದ ವಿಚಾರದ ಮಧ್ಯಸ್ಥಿಕೆಯನ್ನು ಮಾಡುವಾಗ ಗಂಭೀರವಾಗಿ ಆಲೋಚನೆ ಮಾಡಿರಿ. ರಾಜಕೀಯ ವ್ಯಕ್ತಿಗಳಿಗೆ ಇದ್ದ ಇರಿಸುಮುರುಸು ಪ್ರಸಂಗಗಳು ಈಗ ದೂರವಾಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವ್ಯವಹಾರದಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಆಲಸ್ಯ ಸಲ್ಲದು. ದೃಢವಾಗಿ ನಿರ್ಧಾರಗಳನ್ನು ತೆಗೆದುಕೊಂಡಲ್ಲಿ ನಿಮ್ಮ ಕೆಲಸದಲ್ಲಿ ಯಶಸ್ಸನ್ನು ಕಾಣಬಹುದು. ಬಂಧುಗಳಿಗೆ ಅವರ ತಪ್ಪಿನ ಅರಿವಾಗುವುದರಿಂದ ಇದ್ದ ದ್ವೇಷ ದೂರವಾಗುತ್ತದೆ. ಉದ್ಯೋಗದಲ್ಲಿ ನೆಮ್ಮದಿ ತರುವ ಶುಭ ವಾರ್ತೆಯೊಂದು ಕೇಳಿಬರುತ್ತದೆ. ಭೂ ವ್ಯವಹಾರವನ್ನು ಮಾಡುವವರಿಗೆ ಉತ್ತಮ ಲಾಭವಾಗುವ ಸಂದರ್ಭವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಉದ್ಯೋಗದಲ್ಲಿ ಸ್ವಲ್ಪಮಟ್ಟಿನ ಪ್ರಗತಿಯನ್ನು ಕಾಣಬಹುದು. ಲೇವಾದೇವಿ ವ್ಯವಹಾರಸ್ಥರಿಗೆ ಬಾಕಿ ವಸೂಲಿ ಆಗಬಹುದು. ಹಿರಿಯ ವ್ಯಕ್ತಿಗಳ ವಿರುದ್ಧ ಪಿತೂರಿ ಮಾಡುತ್ತಿದ್ದವರ ಬಣ್ಣ ಬಯಲಾಗಲಿದೆ. ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಮುನ್ನಡೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಯಸಿದ ಒಡವೆಯನ್ನು ಈಗ ಕೊಳ್ಳಬಹುದು. ಸರ್ಕಾರಿ ಸೌಲಭ್ಯಗಳು ಈಗ ಸರಾಗವಾಗಿ ನಿಮಗೆ ದೊರೆಯುತ್ತವೆ. ಉದ್ದಿಮೆದಾರರಿಗೆ ಹೊಸ ಯಂತ್ರೋಪಕರಣಗಳನ್ನು ಕೊಳ್ಳುವ ಯೋಗವಿದೆ. ಕಾರ್ಮಿಕರಿಗೆ ಅಧಿಕ ಕೆಲಸದ ಒತ್ತಡವಿರುತ್ತದೆ. ಕಟ್ಟಡ ಕಾರ್ಮಿಕರು ಹೆಚ್ಚು ಎಚ್ಚರದಿಂದ ಕೆಲಸ ಮಾಡಬೇಕು. ಸ್ವಂತ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಏರುಪೇರು ಕಾಣಬಹುದು.

ಪದಬಂಧ 2732



ಮೇಲಿನಿಂದ ಕೆಳಕ್ಕೆ
1. ಸ್ಥೂಲವಾದ ದೊಡ್ಡ ಕಾಯ 4
2. ಕಪ್ಪು ಸಮುದ್ರವನ್ನು ಆವರಿಸುವ ಅಗಲವಾದ ಮಹಾಪ್ರಾಣಿ 4
3. ಸಮಸ್ತ ಜನರಿಗೂ ಅನ್ವಯವಾಗುವ ವಿಷಯ 4
4. ರಾಮ ತನಯನಿಗೆ ಒಂದು ಸ್ವಲ್ಪವೂ ಸಂಶಯವಿಲ್ಲ 4
6. ಹೊಸತರಲ್ಲಿ ಹೊಸತು 3
8. ಕರಂ ಕುರುಂ ಎಂದು ಬಾಯಿ ಚಪಲಕ್ಕೆ ತಿನ್ನುವ ಕರಿದ ತಿನಿಸು 5
10. ಅಕ್ಕ ಮಹಾದೇವಿಯ ಆರಾಧ್ಯದೈವ ಶ್ರೀಶೈಲ ನಿವಾಸಿ 5
11. ಒಡೆದು ಮಿಡಿಯುವ ದೇಹ 3
12. ದೀನವಾಗಿ ಚಟ್ನಿಯಲ್ಲಿ ಸೇರುವ ಸುವಾಸಿತ ಎಲೆ 3
16. ವೀರರಾಜ ವಿಶೇಷವಾಗಿ ಶೋಭಿಸುತ್ತಾನೆ 3
17. ಹೆಣ್ಣನ್ನು ಕೀಳಾಗಿ ನೋಡುವ ಕಣ್ಣು ಕಾಣದವರು 4
18. ಒಳ್ಳೆಯ ಆನೆಯ ಮೂರಡಿ ಅಳತೆ 4
19. ಚುನಾವಣೆಯ ವೇಳೆ ಅತ್ಯಂತ ಬೆಲೆಬಾಳುವ ವೋಟಿಗ 3
20. ಕೋಪದಿಂದ ಅಲುಗಾಡದೇ ನಿಂತಿರುವ ಋಷಿ 4

ಎಡದಿಂದ ಬಲಕ್ಕೆ
1. ಮತಿಯಿಂದ ಬರುವ ಒಪ್ಪವಾದ ಒಪ್ಪಿಗೆ 4
3. ಸೂರ್ಯ ಮುಳುಗುವ ಸಾಯಂ ಸಂಜೆ 4
5. ನೆಲದ ಮೇಲೆ ನಡೆಯುವವನಲ್ಲ, ಆಕಾಶ ಸಂಚಾರಿ 5
7. ಯಶೋದ ನಂದನನ ಯಾದವ ವಂಶ 4
9. ತಾವರೆಯಿಂದ ಉದ್ಭವನಾದ ಒಡೆಯ 5
11. ವಯ್ಯಾರದ ಜೊತೆ ಸೇರುವ ಶೃಂಗಾರ 3
13. ಕಣ್ಣು ಕಾಣದವ 3
14. ದೀಪವನ್ನು ಹಿಡಿದು ದಾರಿ ತೋರುವವಳು 3
15. ಮಳೆಗೆ ಗರಿಗೆದರಿ ನರ್ತಿಸುತ್ತಾ ಈ ಹಕ್ಕಿ ಹಿಂದುಮುಂದಾಗಿದೆ 3
17. ಚಮತ್ಕಾರ ವಿದ್ಯೆಯ ಜಾದೂಗಾರ ಶ್ರೀಕೃಷ್ಣ ಗಾಡಿಯಲ್ಲಿ ಬರುತ್ತಾನೆ 4
19. ಮನಸ್ಸಿನ ಕಾಮನೆಯಿಂದ ಹುಟ್ಟಿದವನೇ ಇವ? 4
21. ಮಂದಿಯಿಂದ ಮಂದಿಗೆ ಹರಡಿ ಪ್ರಚಲಿತವಾದದ್ದು 5
22. ಮಹಾಶಿವನ ಮೂರನೆ ಕಣ್ಣು 4
23. ಒಬ್ಬರನ್ನುಳಿಸಲು ನೆತ್ತರನ್ನು ಕೊಡುವವ 4

ಪದಬಂಧ ಉತ್ತರ -2731

ಮೇಲಿಂದ ಕೆಳಕ್ಕೆ
1. ಮಧುಮೇಹ 2.ಮರೀಚಿಕೆ 3.ತರಾತುರಿ 4.ಕಮಲಾನನ 5.ಕದನವಿರಾಮ 8.ಕುತೂಹಲ 9.ಜವೇರಿ 10.ನಗುಮನ 12.ಧರ್ಮಪಾರಾಯಣ 15.ಹಸಿಮಡಕೆ 16.ಮಾವುಬೇವು 17.ಸರಸ್ವತಿ 18.ತ್ರಯಂಬಕ

ಎಡದಿಂದ ಬಲಕ್ಕೆ
1. ಮಹಿಮ 3.ತವಕ 5.ಕರ 6.ಲಾಬಿಜನ 7.ಹರಕೆಕುರಿ 9.ಜನನ 11.ಬುಧಗ್ರಹ 13.ಗುಲಾಮರು 14.ಲಹರಿ 16.ಮಾನಸಪುತ್ರ 19.ರಾಮನಾಮ 20. ಜಾಣ 21.ಕೆಲವು 22.ತಿಲಕ

ಜಗತ್ತನ್ನೇ ಒಳಗೊಂಡ ಸಂಸಾರ ಕಥನ

ಎಸ್.ಆರ್.ವಿಜಯಶಂಕರ



ನೆನಪು ಅನಂತ
ಲೇ: ಎಸ್ತರ್ ಅನಂತಮೂರ್ತಿ
ನಿರೂಪಣೆ: ಪೃಥ್ವೀರಾಜ ಕವತ್ತಾರು
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಸಂ: 8762288023
ಪು: 160 ₹180

ಎಸ್ತರ್ ಅನಂತಮೂರ್ತಿ ಅವರು 'ನೆನಪು ಅನಂತ' ಕೃತಿಯಲ್ಲಿ ಅನಂತಮೂರ್ತಿಯವರ ಪತ್ನಿಯಾಗಿ ಕಂಡ ಸಂಸಾರದ ಚಿತ್ರಗಳ ಮೂಲಕ ಅವರ ಬದುಕು-ಚಿಂತನೆಗಳ ಇನ್ನೊಂದು ಮಗ್ಗುಲನ್ನು ಕಾಣಿಸಿದ್ದಾರೆ. ಆ ಮೂಲಕ ಅನಂತಮೂರ್ತಿ ಸಾಹಿತ್ಯ ವಾಙ್ಮಯಕ್ಕೆ ತಮ್ಮ ಅನುಭವ ಕಥನದ ಹೊಸ ಕೃತಿಯೊಂದನ್ನು ನೀಡಿದ್ದಾರೆ.

ನೆನಪುಗಳ ಸ್ವರೂಪದಲ್ಲಿ ಎರಡು ಸಾಧ್ಯತೆಗಳು ಅಡಗಿಕೊಂಡಿರುತ್ತವೆ. ಮೊದಲನೆಯದಾಗಿ, ಅವು ಅಂದಿನ ಭಾವಗಳನ್ನು ಇಂದು ಉದ್ದೀಪಿಸಿ ಆ ಕಾಲಕ್ಕೆ ನಮ್ಮನ್ನು ಮರಳಿಸುತ್ತವೆ. ಎರಡನೆಯದಾಗಿ, ಇಂದಿನ ಅರಿವಿನಲ್ಲಿ ಹಿಂದಿನ ನೆನಪುಗಳನ್ನು ಹೊಸದಾಗಿ ಅರ್ಥೈಸುತ್ತವೆ. ಎಸ್ತರ್ ಅವರ ಈ ಕೃತಿ ಆ ಎರಡೂ ಸಾಧ್ಯತೆಗಳನ್ನು ಅನಂತಮೂರ್ತಿಯವರ ನೆನಪಿನಲ್ಲಿ ಸತತವಾಗಿ ಕಾಣಿಸುತ್ತಾ ಹೋಗುತ್ತದೆ. ಹಾಗಾಗಿ ಇದನ್ನು ಅನಂತಮೂರ್ತಿಯವರ ಜೀವನಕಥನ 'ಸುರಗಿ'ಯ ಮುಂದುವರಿದ ಭಾಗದಂತೆಯೂ ಗುರುತಿಸಬಹುದು. 'ಹ್ಯಾಂಡ್‌ಸಮ್ ಇಂಗ್ಲಿಷ್ ಸರ್' ಬಗ್ಗೆ, ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಸಿದ ಮಿತ ಸ್ಕಾಲರ್‌ಶಿಪ್ ಜೀವನದ ಬಗ್ಗೆ, ಮಕ್ಕಳನ್ನು ಬೆಳೆಸಿದ ತಂದೆಯ ಬಗ್ಗೆ ಎಸ್ತರ್ ಅವರು ಮಾತ್ರ ನೀಡಬಲ್ಲ ಹಲವು ಒಳನೋಟಗಳು ಇಲ್ಲಿವೆ.

ಎಸ್ತರ್ ಹಾಗೂ ಅನಂತಮೂರ್ತಿ ಇಬ್ಬರೂ ಹುಟ್ಟಿನಿಂದ ಪ್ರತ್ಯೇಕ ಧರ್ಮದವರು. ಅಂದಿನ ಸಾಮಾಜಿಕ ಪ್ರವಾಹಕ್ಕೆ ಎದುರಾಗಿ ಈಜಿ ಸಂಸಾರ ಮಾಡಿದವರು. ಹಾಗಾಗಿ ಭಾರತದ ಯಶಸ್ವಿ ಅಂತರ ಧರ್ಮೀಯ ವಿವಾಹವೊಂದಕ್ಕೂ ಈ ಕೃತಿ ಸಾಕ್ಷಿ. ಏಳು ಬೀಳುಗಳ ಸೂಚನೆಯೊಂದಿಗೆ ಪರಸ್ಪರ ಬೆಳೆಯುತ್ತಾ ಹೋದ ಅನುರಾಗದ ಸಾಂಸಾರಿಕ ಚಿತ್ರಣವಾಗಿಯೂ ಇದಕ್ಕೊಂದು ಮಹತ್ವವಿದೆ. ನಿತ್ಯ ಮನೆಗೆ ಬಂದು ಹೋಗುತ್ತಿದ್ದ ಸಾಹಿತಿಗಳು, ಸ್ನೇಹಿತರು, ಹಲವು ಪಕ್ಷಗಳ ನಾಯಕರು ಎಲ್ಲರೂ ಅವರ ಸಂಸಾರ ಕಥನದಲ್ಲಿ ಹಾದು ಹೋಗುತ್ತಾರೆ. ಅನಂತಮೂರ್ತಿಯವರ ಸಾಹಿತ್ಯ ಅಧ್ಯಯನಕ್ಕೂ ಈ ನೆನಪುಗಳು ಪೂರಕ.

ಸರ್ವಸಮಾನ ಭಾವದಲ್ಲಿ ಎಲ್ಲರನ್ನೂ ಆದರಿಸುತ್ತಿದ್ದ ಮೇಷ್ಟ್ರು ಅನಂತಮೂರ್ತಿಯವರು. ಪ್ರೊಫೆಸರ್, ವೈಸ್ ಚಾನ್ಸಲರ್ ಆದ ಬಳಿಕವೂ ಎಸ್ತರ್ ಅವರೂ ಸೇರಿದಂತೆ ಎಲ್ಲರಿಗೂ ಅನಂತಮೂರ್ತಿಯವರು ಮೇಷ್ಟ್ರು, ಸ್ನೇಹಿತರಿಗೆ ಮಾತ್ರ ಅನಂತು. ಸದಾ ಅವರ ಮನೆ ತುಂಬಾ ಭೇಟಿಗೆ ಬರುವ ಜನ, ಮಾತು, ಚರ್ಚೆಗಳಿದ್ದರೂ ಮೇಷ್ಟ್ರು ಗಂಭೀರ ವಿಚಾರಗಳಾಚೆಗೆ ಒಂದು ಕ್ಷಣವೂ ಕಳೆದವರಲ್ಲ. ಅವರು ಮಾತಿನ ಮೂಲಕವೇ ಸದಾ ವಿಚಾರ ಧ್ಯಾನದಲ್ಲಿದ್ದವರು. ನಿತ್ಯ ವ್ಯವಹಾರದ ಪ್ರಪಂಚದ ಬಗ್ಗೆ ಅಂತಹ ಗಮನವಿದ್ದವರಲ್ಲ. ಎಸ್ತರ್ ಅವರು ಇಲ್ಲಿ ಬರೆದುಕೊಂಡಿರುವಂತೆ, ಅವರು ಮದುವೆಯಾದ ಹೆಚ್ಚಿನ ಎಲ್ಲ ಹೆಣ್ಣುಮಕ್ಕಳ ಹಾಗೆ ಸದಾ ಸ್ಥಿರತೆಯ ಚಿಂತೆಯಲ್ಲಿದ್ದ ಒಬ್ಬ ಗೃಹಿಣಿ. ಪ್ರೀತಿಸಿ ಮದುವೆಯಾದ ಅವರಿಗೂ ಇಂತಹ ಜೀನಿಯಸ್ ಬರಹಗಾರ ಪತಿಯೊಡನೆ ಸಂಸಾರ ಮಾಡುವುದು ಸರಳ ವಿಚಾರವಲ್ಲ. ಎಸ್ತರ್ ಅವರು ಅನಂತಮೂರ್ತಿಯವರ ಅಂತರಂಗದ ಜೀವದ್ರವ್ಯ ಎಂಬುದರ ಅರಿವು ಅವರಿಗೆ ಇದ್ದುದರಿಂದಲೇ 'ನನ್ನದೆಂಬುದು ಏನೂ ಇಲ್ಲ, ಎಲ್ಲ ಅವರದ್ದೇ' ಎಂಬ ಸಮರ್ಪಣ ಭಾವದಲ್ಲಿ ಮೇಷ್ಟ್ರೊಡನೆ ಐದೂವರೆ ದಶಕಗಳ ಕಾಲ ಸುಗ್ಗಿ-ಸಂಕಟಗಳನ್ನು ಹಂಚಿಕೊಂಡು, ಜೀವನ ನಡೆಸಲು ಸಹಾಯ ಮಾಡಿರಬೇಕು ಎಂಬುದು ಈ ಕೃತಿ ಓದಿದಾಗ ವೇದ್ಯವಾಗುತ್ತದೆ.

ಒಳನೋಟ

ಅನಂತಮೂರ್ತಿಯವರ ಆರೋಗ್ಯವನ್ನು ಮೂರು ದಶಕಗಳಿಗೂ ಹೆಚ್ಚು ಕಾಲ ಅವರು ಜತನದಿಂದ ಕಾಪಾಡಿದರು. ಈಗ ಅವರಿಲ್ಲ ಎಂಬ ಅರಿವಿನಲ್ಲಿ ಕಾಡತೊಡಗಿದ ಖಾಲಿತನವೊಂದರಿಂದ ಬಿಡುಗಡೆ ಪಡೆಯುವುದಕ್ಕಾಗಿ ಎಸ್ತರ್ ಅವರು ಈ ನೆನಪುಗಳೊಡನೆ ಒಡನಾಡಿದರು. ಆ ನಿರೂಪಣೆಯನ್ನು ಸೊಗಸಾಗಿ ಬರೆದುಕೊಂಡು ಪೃಥ್ವೀರಾಜ ಕವತ್ತಾರು ಕನ್ನಡಕ್ಕೊಂದು ಅಪರೂಪದ ಕೃತಿ ಸಿಗಲು ಕಾರಣವಾದರು.

ಅನಂತಮೂರ್ತಿಯವರು ವೈಚಾರಿಕತೆ ಎಷ್ಟೇ ಇದ್ದರೂ ಅವರು ಸದಾ ಸಮಾನತೆಯ ಬುನಾದಿಯ ಮೇಲಿನ ಆದರ್ಶ ಸಮಾಜದ ಕನಸುಗಾರರು. ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿದ ಮಗಳನ್ನು ಎಂಬಿಬಿಎಸ್‌ಗೆ ಸೇರಿಸಲು ಹೋಗುವಾಗ ಕಾಲೇಜು ಫೀಸು ಕಟ್ಟಲು ಬೇಕಾದ ಐದುನೂರು ರೂಪಾಯಿಗಳನ್ನು ಮರೆತು ಹೋಗಬಲ್ಲವರು. ತಮ್ಮ ಸಾವನ್ನು ಸಂಭ್ರಮಿಸಿದವರನ್ನೂ ಅವರು ಕ್ಷಮಿಸಿಬಿಡಬಲ್ಲರು. ಬದುಕಿನ ಕೊನೆಯ ದಿನಗಳಲ್ಲೂ ಸೈದ್ಧಾಂತಿಕ ದೃಢತೆಯಲ್ಲಿ, ವೈಚಾರಿಕ ತನ್ಮಯತೆಯಲ್ಲಿ ತೊಡಗಿರುತ್ತಿದ್ದ ಅವರ ಸುತ್ತ ಸದಾ ಜನ. ಅವರನ್ನು 'ವೀಕ್‌ಎಂಡ್ ಹಸ್ಬೆಂಡ್' ಎಂದು ತಮಾಷೆ ಮಾಡುತ್ತಿದ್ದ ಎಸ್ತರ್ ಅವರು, ನಿರಂತರವಾಗಿ ಅವರ ಆರೋಗ್ಯವನ್ನು ಜತನ ಮಾಡುತ್ತಾ ತಮ್ಮ ಆರೋಗ್ಯವನ್ನು ಕಡೆಗಣಿಸಿದ್ದುಂಟು. ಈ ಎಲ್ಲ ನೆನಪುಗಳ ಮೂಲಕ ಪರಸ್ಪರರ ಸಂಬಂಧದ ಆಪ್ತತೆಯಲ್ಲಿ ಅನಂತಮೂರ್ತಿಯವರ ಸಾಂಸಾರಿಕ, ಸಾಮಾಜಿಕ ಮೌಲ್ಯಗಳನ್ನೂ ಎಸ್ತರ್ ಅವರು ಇಲ್ಲಿ ಕಾಣಿಸಿಕೊಡುತ್ತಾರೆ.

ಮೊದಲ ಓದು

ಜನಸಂಘ ಜನಕನ ಬದುಕಿನ ಚಿತ್ರಣ



ಶಾಮಪ್ರಸಾದ್ ಮುಖರ್ಜಿ
ಸಮಗ್ರ ಜೀವನ ಚರಿತ್ರೆ
ಇಂಗ್ಲಿಷ್ ಮೂಲ: ತಥಾಗತ ರಾಯ್
ಕನ್ನಡಕ್ಕೆ: ಬಿ.ಎಸ್.ಜಯಪ್ರಕಾಶ ನಾರಾಯಣ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಪು: 532 ₹350

ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ 'ಭಾರತೀಯ ಜನಸಂಘ' (ಈಗಿನ ಭಾರತೀಯ ಜನತಾ ಪಕ್ಷ) ಎಂಬ ಪಕ್ಷವನ್ನು ಅಸ್ತಿತ್ವಕ್ಕೆ ತಂದ ಶಾಮಪ್ರಸಾದ್ ಮುಖರ್ಜಿ ಅವರ ವ್ಯಕ್ತಿತ್ವದ ಚಿತ್ರಣವನ್ನು ಕಟೆದಿಡುವ ಕೃತಿ 'ಶಾಮಪ್ರಸಾದ್ ಮುಖರ್ಜಿ-ಸಮಗ್ರ ಜೀವನ ಚರಿತ್ರೆ'.

ಪಶ್ಚಿಮ ಬಂಗಾಳದ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದ, ಬಳಿಕ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದ ಲೇಖಕ ತಥಾಗತ ರಾಯ್ ಅವರು ಇಂಗ್ಲಿಷ್‌ನಲ್ಲಿ ರಚಿಸಿದ್ದ ಕೃತಿಯನ್ನು, ಬಿ.ಎಸ್.ಜಯಪ್ರಕಾಶ ನಾರಾಯಣ ಅವರು ಕನ್ನಡಕ್ಕೆ ತಂದಿದ್ದಾರೆ. ಕಥಾನಾಯಕ ಶಾಮಪ್ರಸಾದ್ ಮುಖರ್ಜಿ, ಅವರ ಪೂರ್ವಜರ ಬದುಕು, ಶಾಮಪ್ರದಾದ್ ಅವರ ವಿದ್ಯಾರ್ಥಿ ಜೀವನದಿಂದ ಹಿಡಿದು ಅವರ ನಿಧನದವರೆಗೆ ಮತ್ತು ನಂತರದ ಬೆಳವಣಿಗೆಗಳ ಸಮಗ್ರ ಚಿತ್ರಣವನ್ನೂ ಈ ಕೃತಿ ಕಟ್ಟಿಕೊಟ್ಟಿದೆ.

'ಈ ಕೃತಿಯ ಮೂಲಕ ತಥಾಗತ ರಾಯ್ ಅವರು ಇತಿಹಾಸಕ್ಕೆ ನ್ಯಾಯ ಸಲ್ಲಿಸಿದ್ದಾರೆ. ಮುಖರ್ಜಿಯವರ ಜೀವನ-ಸಾಧನೆಗಳ ಕುರಿತು ಅಪಾರ ಮಾಹಿತಿಯನ್ನು ಕಲೆ ಹಾಕಿರುವ ರಾಯ್ ಅವರು, ನಿಜವಾದ ಅರ್ಥದಲ್ಲಿ ಒಂದು ಸಮಗ್ರ ಜೀವನಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ' ಎಂದು ಎಲ್.ಕೆ.ಅಡ್ವಾಣಿ ಅವರು ಮುನ್ನುಡಿ ಬರೆದಿದ್ದಾರೆ. ಮುಖರ್ಜಿ ಅವರ ರಾಜಕೀಯ ಪ್ರವೇಶ, ಪೂರ್ವ ಬಂಗಾಳದ ನರಮೇಧ ಹಾಗೂ ಈ ಘಟನೆ ಬೆನ್ನಲ್ಲೇ ಮುಖರ್ಜಿ ಅವರ ರಾಜೀನಾಮೆ, ಹೊಸ ಪಕ್ಷದ ಸ್ಥಾಪನೆ, ಜಮ್ಮು-ಕಾಶ್ಮೀರದ ಪೊಲೀಸರಿಂದ ಮುಖರ್ಜಿ ಅವರ ಬಂಧನ, ಕಾರಾಗೃಹದ ದಿನಗಳು ಕುರಿತಂತೆ ಪ್ರತಿಯೊಂದು ವಿವರವೂ ಇಲ್ಲಿದೆ. 1950ರ ಏಪ್ರಿಲ್ 19ರಂದು ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಲೋಕಸಭೆಯನ್ನು ಉದ್ದೇಶಿಸಿ ಮುಖರ್ಜಿ ಅವರು ಮಾಡಿದ ಭಾಷಣ, ನರಮೇಧದ ಸಂತ್ರಸ್ತರ ಮೇಲಿದ್ದ ಅವರ ಕಾಳಜಿಯನ್ನು ವ್ಯಕ್ತಪಡಿಸಿತ್ತು. ಈ ಭಾಷಣ ಸೇರಿದಂತೆ ಹಲವು ವಿಷಯಗಳನ್ನು ಇಲ್ಲಿ ದಾಖಲೆಯನ್ನು ಉಲ್ಲೇಖಿಸಿ ಬರೆಯಲಾಗಿದೆ. ಮೂಲ ಕೃತಿಯ ಅನುವಾದದೊಂದಿಗೆ ಈಗಿನ ಬೆಳವಣಿಗೆಗಳನ್ನೂ ಅನುವಾದಕರು ಇಲ್ಲಿ ಸೇರಿಸಿದ್ದಾರೆ.

ಮುಖರ್ಜಿ ಅವರ ನಿಧನ ಇನ್ನೂ ಒಗಟಾಗಿಯೇ ಇದೆ. ಕಾರಾಗೃಹದಲ್ಲಿದ್ದ ಸಂದರ್ಭದಲ್ಲಿ ಮುಖರ್ಜಿ ಅವರಿಗೆ ದೊರೆತ ಚಿಕಿತ್ಸೆ, ಔಷಧಿಗಳ ಬಗ್ಗೆ ಇನ್ನೂ ಹಲವು ಸಂದೇಹಗಳಿವೆ. ಮುಖರ್ಜಿ ಅವರ ನಿಧನಕ್ಕೆ ಸಂಬಂಧಿಸಿದಂತೆ 'ಆರ್ಗನೈಸರ್' ಪತ್ರಿಕೆಯಲ್ಲಿ ಬಂದ ವರದಿ, ಕಾಶ್ಮೀರ ಸರ್ಕಾರದ ವರದಿ, ಮುಖರ್ಜಿ ಅವರಿಗೆ ಚಿಕಿತ್ಸೆ ನೀಡಿದ್ದ ಶುಶ್ರೂಷಕಿಯ ಜೊತೆ ಮುಖರ್ಜಿ ಅವರ ಹಿರಿಯ ಮಗಳು ಸವಿತಾ ಅವರು ನಡೆಸಿದ ಮಾತುಕತೆ, ನಿಧನದ ಕುರಿತು ಸ್ವತಂತ್ರ ತನಿಖೆ ನಡೆಸಬೇಕೆಂದು ಮುಖರ್ಜಿ ಅವರ ತಾಯಿ ಜೋಗೋಮಾಯಾ ಅವರು ಅಂದಿನ ಪ್ರಧಾನಿ ನೆಹರೂ ಅವರಿಗೆ ಬರೆದ ಪತ್ರ, ಇದಕ್ಕೆ ನೆಹರೂ ಅವರ ಉತ್ತರ... ಹೀಗೆ ಸುದೀರ್ಘವಾದ ವಿವರಣೆ, ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ.

ಹೊಗೆಯ ಹೊಳೆಯ ಒಳಹೊರಗಿನ ತಳಮಳಗಳು

ಪದ್ಮನಾಭ ಭಟ್



ಹೊಗೆಯ ಹೊಳೆಯಿದು ತಿಳಿಯದು
ಲೇ: ಚಿದಾನಂದ ಸಾಲಿ
ಪ್ರ: ಅಂಕಿತ ಪುಸ್ತಕ
(www.ankitapustaka.com)
ಪು: 168 ₹175

ಕವಿತೆ, ಗಜಲ್, ವಿಮರ್ಶೆ, ಸಂಶೋಧನೆ, ಕಾದಂಬರಿ, ಅನುವಾದ – ಹೀಗೆ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಅಡ್ಡಾಡಿರುವ ಚಿದಾನಂದ ಸಾಲಿ ಅವರ ಎರಡನೇ ಕಥಾಸಂಕಲನ 'ಹೊಗೆಯ ಹೊಳೆಯಿದು ತಿಳಿಯದು'. ಮೊದಲ ಕಥಾಸಂಕಲನ 'ಧರೆಗೆ ನಿದ್ರೆಯು ಇಲ್ಲ' (2008) ಬಂದ ಹದಿನಾಲ್ಕು ವರ್ಷಗಳ ನಂತರ ಎರಡನೇ ಕಥಾಸಂಕಲನ ಪ್ರಕಟಗೊಂಡಿದೆ. ಈ ಸಂಕಲನದಲ್ಲಿ ಇರುವುದೂ ಆರೇ ಕಥೆಗಳು. ಈ ಸುದೀರ್ಘ ಅವಧಿ ಮತ್ತು ಕಥೆಗಳ ಸಂಖ್ಯೆ, ಸಣ್ಣಕಥೆಗಳ ಕುರಿತು ಲೇಖಕರಿಗೆ ಇರುವ ಸಂಯಮ ಮತ್ತು ಶ್ರದ್ಧೆಯನ್ನೂ ಸೂಚಿಸುತ್ತದೆ.

ಸಂಯಮ ಮತ್ತು ಶ್ರದ್ಧೆ ಇಲ್ಲಿನ ಬಹುತೇಕ ಕಥೆಗಳಲ್ಲಿ ಕಾಣಿಸುವ ಗುಣವೂ ಹೌದು. ಬದುಕಿನಲ್ಲಿ ನಮ್ಮ ಊಹೆಗೂ ಮೀರಿ ಘಟಿಸುವ ಸಂಗತಿಗಳು ಮತ್ತು ಅದರಿಂದ ಹುಟ್ಟುವ ಕಾಣ್ಕೆಗಳನ್ನು ಹಿಡಿದಿಡುವ ಪ್ರಯತ್ನವನ್ನು ಈ ಕಥೆಗಳು ಮಾಡುತ್ತವೆ. ಚಿಟ್ಟೆಯಂಥ ಕಥೆಗಳು, ಕೆಲವೊಮ್ಮೆ ಕಥೆಗಾರರಿಗೆ ಸಿಕ್ಕೇಬಿಟ್ಟಿತು ಎಂಬ ಭಾವ ಹುಟ್ಟಿಸಿ ಬೆರಳತುದಿಯಿಂದ ಸರಕ್ಕನೆ ತಪ್ಪಿಸಿಕೊಂಡು ಹಾರಿಹೋಗಿವೆ; ಇನ್ನು ಸಿಗಲಾರದು ಎಂದು ಸುಮ್ಮನಾದಾಗ, ಹೆಗಲ ಮೇಲೆಯೇ ಬಂದು ಕೂತು ರೆಕ್ಕೆಯರಳಿಸಿ ಪುಳಕ ಹುಟ್ಟಿಸಿದ್ದೂ ಇದೆ. ಹಾಗಾಗಿಯೇ ಇಲ್ಲಿನ ಹಲವು ಕಥೆಗಳ ಕುರಿತು ಯಶಸ್ವಿ ಎಂದಾಗಲಿ, ವಿಫಲ ಎಂದಾಗಲಿ ಒಂದು ಸಾಲಿನ ನಿರ್ಣಯ ಕೊಡುವುದು ಸಾಧ್ಯವಿಲ್ಲ.

ಮೊದಲ ಕಥೆ 'ಯಾನ'ವನ್ನೇ ಈ ಮಾತಿಗೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ಕಥೆಯ ನಾಯಕ, ಒಬ್ಬ ವೃದ್ಧರೊಂದಿಗೆ ದೆಹಲಿಯಿಂದ ಹುಬ್ಬಳ್ಳಿಗೆ ಹೊರಟಿದ್ದಾನೆ. ಆ ನಾಯಕನ ಹಿನ್ನೆಲೆಯಾಗಲಿ, ವೃದ್ಧರ ಹಿನ್ನೆಲೆಯಾಗಲಿ ಇಡೀ ಕಥೆಯಲ್ಲಿ ಎಲ್ಲಿಯೂ ಬರುವುದಿಲ್ಲ. ಒಂದು ಮದುವೆಗೆ, ಟಿಕೆಟ್ ಕನ್ಫರ್ಮ್ ಆಗದೆ ರೈಲು ಹತ್ತಿ ಹೊರಟಿದ್ದಾರೆ. ರೈಲಿನಲ್ಲಿ ಅವರ ಹಾಗೆಯೇ 'ಹಿನ್ನೆಲೆಯಿಂದ ಕತ್ತರಿಸಿಕೊಂಡು' ಟ್ರೇನು ಹತ್ತಿದ ಅಸಂಖ್ಯಾತ ಜನರಿದ್ದಾರೆ. ಅಲ್ಲಿ ನಾಯಕನಿಗೆ ಒಬ್ಬಳು ಮಾದಕ ಸುಂದರಿಯ ಪರಿಚಯವವೂ ಆಗುತ್ತದೆ. ಇಕ್ಕಟ್ಟಿನ ಪರಿಸ್ಥಿತಿಗಳು, ಅಲ್ಲಿಯೇ ಹೊಸದಾಗಿ ಹುಟ್ಟಿಕೊಳ್ಳುವ ಸಂಬಂಧಗಳು, ಸಣ್ಣತನಗಳು, ಔದಾರ್ಯಗಳ ಹಲವು ಬಿಡಿ ಸಂಗತಿಗಳ ಮೂಲಕ ಒಂದು ಅಖಂಡ ಚಿತ್ರವನ್ನು ಕೆತ್ತುತ್ತ ಹೋಗುವ ಕಥೆ ಕೊನೆಯಲ್ಲಿ ಒಂದು ಕ್ಷುಲ್ಲಕ ಅನಿಸಬಹುದಾದ ಅಂತ್ಯದಿಂದ ಕುಸಿದುಹೋಗುತ್ತದೆ. ಸುಂದರ ಹುಡುಗಿಯೊಬ್ಬಳು ಮಾದಕತೆಯಿಂದ ಮೋಡಿ ಮಾಡಿ ವಂಚಿಸುವ ಘಟನೆಯೇ ಅದುವರೆಗೆ ಘನವಾಗಿ ಬೆಳೆದಿದ್ದ ಕಥೆಯ ಶಿಲ್ಪವನ್ನು ಭಗ್ನಗೊಳಿಸುತ್ತದೆ.

ಮಾಯಾವಾಸ್ತವ ಎಂದು ಹೇಳಬಹುದಾದ ವಾತಾವರಣದಲ್ಲಿ ಬಿಚ್ಚಿಕೊಳ್ಳುವ 'ನೆರಳು' ಕಥೆ, ಒಂದರ ನಂತರ ಇನ್ನೊಂದು ಪಾತ್ರವನ್ನು ಓದುಗರ ಎದುರಿಗೆ ತಂದು ಪರಿಚಯಿಸುತ್ತದೆ. ಕಥೆಯ ನಿರೂಪಕ ಪರಿಚಯಿಸಿಕೊಳ್ಳುವುದೇ ಅರ್ಧದಲ್ಲಿ. ಚದುರಿದ ಚಿತ್ರದ ಹಾಗೆಯೇ ಬೆಳೆಯುತ್ತ ಹೋಗುವ ಈ ನಿರೂಪಣಾ ತಂತ್ರವೇ ಕಥೆಯ ಶಿಲ್ಪವನ್ನು ಸಡಿಲಗೊಳಿಸಿದೆ. ಹಲವು ಪಾತ್ರಗಳ ಬಿಡಿ ಚಿತ್ರಗಳು ಹುಟ್ಟಿಸುವ ಗೊಂದಲವೇ ಆ ಪ್ರಪಂಚದೊಳಗೆ ಪೂರ್ಣವಾಗಿ ಇಳಿಯಲು ತೊಡಕಾಗುತ್ತದೆ. ಶಾರದೆಯನ್ನು ತನಿಖಾ ಅಧಿಕಾರಿಯಾಗಿಸಿರುವುದು ಕೊನೇ ಕ್ಷಣದ ರೋಚಕತೆಯ ಹೊರತಾಗಿ ಮಹತ್ವದ್ದೇನನ್ನೂ ಕಥೆಗೆ ಸೇರಿಸುವುದಿಲ್ಲ. ಅಷ್ಟು ಸಂಯಮದಿಂದ, ಶ್ರದ್ಧೆಯಿಂದ ಕಥೆಯನ್ನು ಬೆಳೆಸುವ ಕಥೆಗಾರರು ಕೊನೆಗೆ ಒಮ್ಮೆಲೇ ಸುಸ್ತಾಗಿ, ಅವಸರದ ಮುಕ್ತಾಯಕ್ಕೆ ಬಲಿಯಾಗುವುದು ಅಚ್ಚರಿ ಹುಟ್ಟಿಸುತ್ತದೆ.

ವಿಮರ್ಶೆ

ಒಂದು ಕಲಾಕೃತಿಯ ಮೂಲಕ ಹೆಣ್ಣೊಬ್ಬಳ ಬದುಕಿನ ಗ್ರಾಫ್ ಅನ್ನು ಚಿತ್ರಿಸಲು ಹೊರಡುವ ಕಥೆ 'ಹೊಗೆ'. ನಿರೂಪಣೆ, ವಸ್ತು, ಭಾಷೆ ಎಲ್ಲದರಲ್ಲಿಯೂ ಈ ಸಂಕಲನದ ಉಳಿದ ಕಥೆಗಳಿಗಿಂತ ಭಿನ್ನವಾದದ್ದು. ಆದರೆ ಆ ಭಿನ್ನತೆ ಕಥೆಯನ್ನು ಯಶಸ್ವಿಗೊಳಿಸಿಲ್ಲ. ನಾಯಕಿಯ ಆರೋಪಪಟ್ಟಿಯನ್ನು ಪೇರಿಸುತ್ತ ಹೋಗುವ ಕಥೆ, ಅದಕ್ಕೆ ಇರಬಹುದಾದ ಇನ್ನೊಂದು ಆಯಾಮಕ್ಕೆ ಸಂಪೂರ್ಣ ವಿಮುಖವಾಗಿದೆ. ಹಾಗಾಗಿಯೇ ಕೃತಕವೂ ಆಗಿದೆ.

'ಜಡ್ಡು' ಈ ಸಂಕಲನದ ಯಶಸ್ವಿ ಕಥೆ. ಸಾವಿನಿಂದ ಇನಿತೇ ದೂರದಲ್ಲಿ ಸಂಜೆಗತ್ತಲಂತೆ ಬೆಳೆಯುತ್ತ ಹೋಗುವ ಈ ಕಥೆ, ಮನುಷ್ಯ ಸಂಬಂಧಗಳನ್ನು, ಅದರದ್ದೇ ವಿಸ್ತರಣೆಯಾದ ಸಾಮಾಜಿಕ ವ್ಯವಸ್ಥೆಯನ್ನು, ಆ ವ್ಯವಸ್ಥೆಯನ್ನು ಹೊತ್ತಿರುವ ಮತ್ತು ಶಿಥಿಲಗೊಳಿಸುತ್ತಿರುವ ನಂಬಿಕೆಗಳನ್ನು ಗಾಢವಾಗಿ ಶೋಧಿಸುತ್ತ ಹೋಗುತ್ತದೆ. ಈ ಸಂಕಲನದ ಇನ್ನೊಂದು ಕುತೂಹಲಕಾರಿ ಕಥೆ 'ಹುಗ್ಗಿ'ಗೂ ಈ ಕಥೆಗೂ ವಿಚಿತ್ರ ಸಂಬಂಧವಿದೆ.

ಆಧುನಿಕ ಕನ್ನಡಕದ ಕಣ್ಣಿನಲ್ಲಿ ಮೌಢ್ಯವಾಗಿ, ಪೊಳ್ಳಾಗಿ ಕಾಣಿಸುತ್ತಿರುವ ಗ್ರಾಮೀಣರ ಜಗತ್ತಿನಲ್ಲಿ ನಮಗೆ ಕಾಣದಿರುವ ಸತ್ಯಗಳೂ ಅಡಗಿರಬಹುದೇ ಎಂಬ ಅನುಮಾನ ಈ ಸಂಕಲನದ 'ನೆರಳು' ಕಥೆಯಲ್ಲಿಯೂ ಸುಳಿದು ಹೋಗುತ್ತದೆ. 'ಹುಗ್ಗಿ' ಕಥೆಯಲ್ಲಿ, ವೈಜ್ಞಾನಿಕ ಮನೋಭಾವ ಮತ್ತು ನಾವು ಮೌಢ್ಯ ಎಂದು ಕರೆಯುವ ನಂಬುಗೆಗಳ ಮನಸ್ಥಿತಿಗಳ ಮುಖಾಮುಖಿ ತುಸು ವಾಚ್ಯವಾಗಿಯೇ ಆಗುತ್ತದೆ. 'ಇಂದು ರಾತ್ರಿ ನೀನು ಹುಗ್ಗಿ ಉಣ್ಣುವೆ' ಎಂದು ಭವಿಷ್ಯ ನುಡಿಯುವ ಸೈಕಲ್ ತಾತನ ಮಾತನ್ನು ಸುಳ್ಳಾಗಿಸಲು ಶತಾಯಗತಾಯ ಪ್ರಯತ್ನಿಸುವ ನಾಯಕ ಕೊನೆಗೂ ಸೋಲುತ್ತಾನೆ. ಜಾನಪದ ಕಥೆಗಳ ಸೊಗಡನ್ನೂ ಮೈದುಂಬಿಕೊಂಡು ಬೆಳೆಯುವ ಈ ಕಥೆ ರಂಜನೀಯವೂ ರೋಚಕವೂ ಆಗಿ ಓದಿಸಿಕೊಂಡು ಹೋಗುತ್ತದೆ. ಆದರೆ ಕೊನೆಗೂ ಅದು ಪಂಥದ ಆಟವಾಗುವುದರ ಆಚೆ, ಘನವಾದ ದರ್ಶನವನ್ನೇನೂ ಹೊಳೆಯಿಸುವುದಿಲ್ಲ.

ಆದರೆ 'ಜಡ್ಡು' ಕಥೆಯಲ್ಲಿ ಇದೇ ಸಂಘರ್ಷ ಬದುಕಿನ ಆಳವಾದ ಮತ್ತು ಅಷ್ಟೇ ಆಪ್ತವಾದ ಅನುಭವದೊಂದಿಗೆ ಮುಖಾಮುಖಿಯಾಗಿವೆ. ಹಾಗಾಗಿಯೇ ಈ ಕಥೆ ಎರಡು ಮನಸ್ಥಿತಿಗಳ ಸಂಘರ್ಷವಷ್ಟೇ ಆಗಿ ಉಳಿಯದೆ ಬದುಕಿನ ಸಂಕೀರ್ಣತೆಯನ್ನೂ ನಿಗೂಢತೆಯನ್ನೂ ಕಾಣಿಸುವ ಶಕ್ತಿಯನ್ನು ಪಡೆದುಕೊಂಡಿದೆ. ತನ್ನ ವಾದಕ್ಕೆ ಹೊಂದುವಂಥ ಘಟನೆಗಳನ್ನು ಹೊಂದಿಸುತ್ತ ಲಂಬಿಸಿರುವ ಕೆಲಭಾಗಗಳನ್ನು ಕತ್ತರಿಸಿದ್ದರೆ ಈ ಕಥೆಯ ಶಿಲ್ಪ ಇನ್ನಷ್ಟು ಗಟ್ಟಿಗೊಳ್ಳುತ್ತಿತ್ತು. ಸಾಲಿ ಅವರ ಕಥನಸಂಯಮ ಮತ್ತು ಶ್ರದ್ಧೆಗಳು 'ಜಡ್ಡು' ಕಥೆಯಲ್ಲಿ ಒಂದು ಸಾರ್ಥಕಬಿಂದುವನ್ನು ತಲುಪಿವೆ ಮತ್ತು ಆ ಕಾರಣದಿಂದಲೇ ಅವರ ಮುಂದಿನ ಕಥೆಗಳ ಬಗ್ಗೆ ಇನ್ನಷ್ಟು ಕುತೂಹಲವನ್ನೂ ನಿರೀಕ್ಷೆಯನ್ನೂ ಹುಟ್ಟಿಸುತ್ತವೆ.

ಕ್ರೀಡಾಸಕ್ತರಿಗೆ ಉಪಯುಕ್ತ ಕೈಪಿಡಿ

ಕ್ರೀಡಾ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟುಗಳು
ಲೇ ಮತ್ತು ಪ್ರ: ಎಂ.ಕೆ. ರಂಗಪ್ಪ ಮಾದಲಗೆರೆ
ಸಂ: 9945003903
ಪು: 356 ₹400

ಕನ್ನಡದಲ್ಲಿ ಕ್ರೀಡೆಗೆ ಸಂಬಂಧಿಸಿದ ಕೃತಿಗಳು ಬರುವುದು ವಿರಳ. ವಾಲಿಬಾಲ್ ಆಟಗಾರ ಹಾಗೂ ಈ ಆಟದ ಕನ್ನಡ ವೀಕ್ಷಕ ವಿವರಣೆಯಲ್ಲಿ ಹೆಸರು ಮಾಡಿರುವ ಬೆಂಗಳೂರಿನ ಎಂ.ಕೆ.ರಂಗಪ್ಪ ಮಾದಲಗೆರೆ (ರಾಜು) ಅವರು ಬರೆದಿರುವ 'ಕ್ರೀಡಾ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟುಗಳು' ಕ್ರೀಡಾಸಕ್ತರಿಗೆ ಉಪಯುಕ್ತ ಕೃತಿ. ಕೈಪಿಡಿಯ ರೀತಿಯಲ್ಲಿದೆ.

ವಿಶ್ವದ ಅಗ್ರಮಾನ್ಯ ಕ್ರೀಡಾಪಟುಗಳ ಸಂಕ್ಷಿಪ್ತ ವಿವರ, ಅವರ ಸಾಧನೆ, ಹಾಕಿ, ಕ್ರಿಕೆಟ್, ಫುಟ್‌ಬಾಲ್, ಬ್ಯಾಡ್ಮಿಂಟನ್ ಸೇರಿ ವಿವಿಧ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಖ್ಯಾತನಾಮ ಆಟಗಾರರು, ಕ್ರೀಡೆಗಳನ್ನು ಕಂಡುಹಿಡಿದವರು, ಒಲಿಂಪಿಕ್ಸ್, ಏಷ್ಯನ್ ಗೇಮ್ಸ್ ವಿವರಗಳು, ಖೇಲ್ ರತ್ನ, ಅರ್ಜುನ, ದ್ರೋಣಾಚಾರ್ಯ, ಏಕಲವ್ಯ ಪ್ರಶಸ್ತಿ ಪುರಸ್ಕೃತರ ಪಟ್ಟಿ, ವಿವಿಧ ದೇಶಗಳ ರಾಷ್ಟ್ರೀಯ ಕ್ರೀಡೆಗಳು... ಹೀಗೆ ಹಲವು ವಿವರಗಳನ್ನು ರಂಗಪ್ಪ ಅವರು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಸಮಗ್ರ ವಿವರಗಳನ್ನು ಒಂದೆಡೆ ತರುವ ಲೇಖಕರ ಶ್ರಮ ಶ್ಲಾಘನೀಯ.

ಈ ಕೃತಿಯಲ್ಲಿ ಪದಗಳ ಉಚ್ಚಾರಣೆ, ಕನ್ನಡ, ಇಂಗ್ಲಿಷ್ ಪದಗಳ ಅಕ್ಷರ ದೋಷಗಳ ಜತೆಗೆ ಕೆಲ ತಪ್ಪು ಮಾಹಿತಿಗಳೂ ನುಸುಳಿವೆ. ಟೆನಿಸ್ ದಂತಕತೆ ಬ್ಯೋನ್ ಬೋರ್ಗ್ ಅವರು ಸ್ವಿಜರ್ಲೆಂಡ್‌ನವರು ಎಂದು ಉಲ್ಲೇಖವಾಗಿದೆ. ಅವರ ರಾಷ್ಟ್ರೀಯತೆ ಸ್ವೀಡನ್. ಒಲಿಂಪಿಕ್ಸ್ ನಡೆದ ವರ್ಷ ವಿಭಾಗದಲ್ಲಿ 1968ರ ಒಲಿಂಪಿಕ್ಸ್ ಮೆಕ್ಸಿಕೊ ಸಿಟಿಯಲ್ಲಿ ನಡೆದಿದ್ದು, ದೇಶ ಅಮೆರಿಕ ಎಂದು ಪ್ರಕಟವಾಗಿದೆ. ಅದು ಮೆಕ್ಸಿಕೊ ಆಗಬೇಕಿತ್ತು. ಇವು ಒಂದೆರಡು ಉದಾಹರಣೆಗಳು. ಇಂಥ ದೋಷಗಳನ್ನು ತಪ್ಪಿಸುವಲ್ಲಿ ಲೇಖಕರು ಮುತುವರ್ಜಿ ವಹಿಸಿದ್ದರೆ ಕೃತಿಯ ಮೌಲ್ಯ ಇನ್ನೂ ಹೆಚ್ಚಾಗುತ್ತಿತ್ತು.

ಕಥೆ
ಮಲ್ಲಪ್ಪ ಫ ಕರೆಣ್ಣನವರ ಅವರು ಬರೆದ ಆಹುತಿ...
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸದಾಶಿವ್ ಸೊರಟೂರು ಅವರ ಗಾಯಗೊಂಡ ಸಾಲುಗಳು...
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಮೂಲಭಾವ ಹಿಡಿದಿಡುವ 'ಸುನೀತಮಾಲೆ'

ಸುಶೀಲಾ ಡೋಣೂರ

'ಷೇಕ್ಸ್‌ಪಿಯರನ ಸುನೀತಮಾಲೆ'
(ಅನುವಾದ ಮತ್ತು ನಿರ್ವಚನ)
ಲೇ: ಡಾ. ಬಸವರಾಜ ನಾಯ್ಕರ
ಪ್ರ: ಗೀತಾಂಜಲಿ ಪ್ರಕಾಶನ
ಸಂ:9740066842
ಪು: 336 ₹350

ಹಾಗೆ ನೋಡಿದರೆ ದೂರದ ಇಂಗ್ಲೆಂಡಿನ ಮಧ್ಯಭಾಗದಲ್ಲಿರುವ ಸ್ಟ್ರಾಟ್‌ಫರ್ಡ್‌ಗೂ, ಭಾರತದ ದಕ್ಷಿಣಾತ್ಯ ರಾಜ್ಯಗಳಲ್ಲೊಂದಾದ ಕರ್ನಾಟಕಕ್ಕೂ ಭೌಗೋಳಿಕವಾಗಿ ಬಹಳ ದೊಡ್ಡ ಅಂತರವಿದೆ. ಆದರೆ, ಸಾಹಿತ್ಯದ ವಿಚಾರಕ್ಕೆ ಬಂದಾಗ, ಅಲ್ಲಿನ ಸಾಹಿತ್ಯದೊಂದಿಗೆ ನಮ್ಮ ಕನ್ನಡ ಸಾಹಿತ್ಯ ನಿರಂತರವಾಗಿ ಅನುಸಂಧಾನ ಮಾಡುತ್ತಲೇ ಬಂದಿದೆ. ದೂರದ ಸ್ಟ್ರಾಟ್‌ಫರ್ಡ್‌ನಲ್ಲಿ ಹುಟ್ಟಿ-ಬೆಳೆದ ಷೇಕ್ಸ್‌ಪಿಯರನ ನಾಟಕ ಹಾಗೂ ಕಾವ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನ ಕಾಲದುದ್ದಕ್ಕೂ ನಡೆದುಬಂದಿದೆ. ಷೇಕ್ಸ್‌ಪಿಯರನ ನಾಟಕಗಳಷ್ಟು ಅವನ ಸುನೀತಗಳು ಕನ್ನಡದ ಕನ್ನಡಿಯಲ್ಲಿ ಮೂಡಿಬಂದಿಲ್ಲವಾದರೂ ಆಗೀಗ ಕೆಲವು ಪ್ರಯತ್ನಗಳಂತೂ ನಡೆದಿವೆ. ಡಾ.ಬಸವರಾಜ ನಾಯ್ಕರರ 'ಷೇಕ್ಸ್‌ಪಿಯರನ ಸುನೀತಮಾಲೆ' ಅಂಥ ಗಂಭೀರ ಪ್ರಯತ್ನಗಳಲ್ಲೊಂದು.

ಸಾನೆಟ್ ಎನ್ನುವ ಇಂಗ್ಲಿಷಿನ ಹದಿನಾಲ್ಕು ಸಾಲುಗಳ ಭಾವಗೀತೆಯ ತೀವ್ರತೆ ಹೊಂದಿರುವ ಕಾವ್ಯರೂಪವನ್ನು ಅಷ್ಟೇ ಸಾಲುಗಳಲ್ಲಿ, ಅಷ್ಟೇ ಪದಗಳಲ್ಲಿ ಕನ್ನಡಕ್ಕೆ ಇಳಿಸುವುದು ಸವಾಲಷ್ಟೇ ಅಲ್ಲ, ಅಸಾಧ್ಯವೂ ಆಗಿದೆ. ಹೀಗಾಗಿ, ಈ ಲಕ್ಷ್ಮಣ ರೇಖೆಯನ್ನು ದಾಟಿ ತಮ್ಮದೇ ಶೈಲಿಯಲ್ಲಿ ಇಂಗ್ಲಿಷಿನ ಸಾನೆಟ್‌ಗಳ ಭಾವಭಂಗವಾಗದಂತೆ ಕನ್ನಡ ಓದುಗರ ಕೈಗಿಟ್ಟಿದ್ದಾರೆ ಡಾ. ಬಸವರಾಜ. ಈ ಸುನೀತಗಳನ್ನು, ಅರ್ಥವತ್ತಾಗಿ, ರಂಜನೀಯವಾಗಿ, ಮೂಲಭಾವಕ್ಕೆ ಕುಂದುಂಟಾಗದಂತೆ ಓದುಗರ ಮುಂದಿಡುವುದು ಅವರ ಮುಖ್ಯ ಉದ್ದೇಶವಾಗಿದೆ ಮತ್ತು ಈ ದಿಸೆಯಲ್ಲಿ ಅವರು ಬಹುಮಟ್ಟಿನ ಯಶಸ್ಸು ಸಾಧಿಸಿದ್ದಾರೆ.

ತೀವ್ರತೆ ಮತ್ತು ಆರ್ದ್ರತೆ ಷೇಕ್ಸ್‌ಪಿಯರನ ಬರಹಗಳಲ್ಲಿ ಅಯಾಚಿತವಾಗಿ ವ್ಯಕ್ತವಾಗುವ ಭಾವಗಳು. ಸಂಬಂಧಗಳ ಆಳವನ್ನು, ಸಿನಿಕತೆಯನ್ನು, ಅಸಹಾಯಕತೆಯನ್ನು, ಸ್ವಾರ್ಥವನ್ನು ಷೇಕ್ಸ್‌ಪಿಯರ್ ತನ್ನ ಸುನೀತಗಳಲ್ಲಿ ದಾಖಲಿಸಿದ ರೀತಿ ಅನನ್ಯ. ಸಾನೆಟ್‌ಗಳಲ್ಲಿ ಷೇಕ್ಸ್‌ಪಿಯರ್ ಬಳಸಿದ ಪ್ರತಿಮೆಗಳನ್ನು, ರೂಪಕಗಳನ್ನು ಕನ್ನಡ ಭಾಷೆಗೆ ಒಗ್ಗಿಸಬೇಕಾದರೆ ಸಾಕಷ್ಟು ಅಧ್ಯಯನಶೀಲತೆ ಬೇಕಾಗುತ್ತದೆ. ದಶಕಗಳ ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಬಸವರಾಜ ಅವರು 'ಷೇಕ್ಸ್‌ಪಿಯರನ ಸುನೀತಮಾಲೆ'ಯಲ್ಲಿ ಮೂಲ ಭಾವ ಮುಕ್ಕಾಗದಂತೆ ಬಹಳಷ್ಟು ಎಚ್ಚರಿಕೆಯಿಂದ ಈ ಕೆಲಸ ಮಾಡಿದ್ದಾರೆ. ಪ್ರೀತಿ, ಸಾವು, ವೃದ್ಧಾಪ್ಯ, ಪ್ರೀತಿ ಮತ್ತು ಸ್ನೇಹದ ಹೆಸರಿನಲ್ಲಿ ನಡೆಯುವ ದ್ರೋಹದ ಬಗ್ಗೆ ಷೇಕ್ಸ್‌ಪಿಯರನ ಸುನೀತಗಳು ಬಹಳ ದೃಢವಾಗಿ, ಖಚಿತವಾಗಿ ಮಾತನಾಡುತ್ತವೆ. ಅಂತಹ 154 ಸುನೀತಗಳು ಹಾಗೂ ಅವುಗಳ ವಿವರಣೆ ಇಲ್ಲಿದೆ. ಈ ಪುಸ್ತಕ ಕನ್ನಡ ಓದುಗರ ಅನುಭವಕ್ಕೆ ಹೊಸ ಸೆಲೆ ಒದಗಿಸುತ್ತದೆ ಮತ್ತು ಓದುಗರ ತಿಳಿವಳಿಕೆಯನ್ನು ವಿಸ್ತೃತಗೊಳಿಸುತ್ತದೆ.

ಕ್ಯಾಮೆರಾ ಹಿಂದಿನ ಸೌಹಾರ್ದ



8ನೇ ಪುಟದಿಂದ...

ಮಾತಿನ ದಾಟಿ 'ಶಾರ್ಪ್' ಆಗಿರದಿದ್ದರೂ, ಹಿಂದುತ್ವದ ವಿಚಾರಗಳು ಮಾತ್ರ ಅವರಿಬ್ಬರಿಗಿಂತ 'ತೀವ್ರ'ವಾಗಿದ್ದವು !

ಬೆಚ್ಚನೆಯ ಟೀ ಕುಡಿದು ಅಲ್ಲಿಂದ ಹೊರಟೆವು. ಈ ಮೂವರು ಹಿಂದೂ ಮುಖಂಡರೂ ಹಿಂದುಳಿದ ಮತ್ತು ಅತಿ ಹಿಂದುಳಿದ ಸಮುದಾಯಕ್ಕೆ ಸೇರಿದವರು ಎಂಬುದು ನನಗೆ ನಂತರ ಗೊತ್ತಾಯಿತು.

***

ನಂತರ, ನಮ್ಮ ತಂಡ ಕಾಲಿಟ್ಟಿದ್ದು ಮಂಗಳೂರಿನ ಮದರಸ ಒಳಗೆ. ಒಂದೆಡೆ, ಮುಸ್ಲಿಂ ವಿದ್ಯಾರ್ಥಿಗಳು ಕುರಾನ್ ಪಠಿಸುತ್ತಿದ್ದರು. ಮದರಸದೊಳಗೇ ಇದ್ದ ಮತ್ತೊಂದು ಕೋಣೆಯಲ್ಲಿ ಒಂದಿಬ್ಬರು ಮಹಿಳೆಯರೂ ಪ್ರಾರ್ಥನೆ ಮಾಡುತ್ತಿದ್ದರು.

ವಿದ್ಯಾರ್ಥಿಗಳಿಗೆ ಕುರಾನ್ ಕಂಠಪಾಠ ಮಾಡಿಸುತ್ತಿದ್ದ ಶಿಕ್ಷಕರೊಬ್ಬರನ್ನು ಮಾತಿಗೆಳೆದೆ. 'ಮದರಸದಲ್ಲಿ ನೀವು ಮಕ್ಕಳಿಗೆ ಭಯೋತ್ಪಾದನೆ ಕಲಿಸ್ತೀರಂತೆ, ದೇಶಕ್ಕಿಂತ ಧರ್ಮವೇ ದೊಡ್ಡದು ಅಂತಾ ಹೇಳಿಕೊಡ್ತೀರಂತೆ' ಎಂದು ಕೇಳ್ದೆ! ಈ ಪ್ರಶ್ನೆಯಿಂದ ಅವರು ಸಿಟ್ಟಿಗೇಳಬಹುದು ಅಥವಾ ಇದೆಂಥ ಮೂರ್ಖ ಪ್ರಶ್ನೆ ಕೇಳ್ತಿದಿರಿ ಅಂತಾ ಬಯ್ಯಬಹುದು ಎಂದುಕೊಂಡು ಅವರನ್ನೇ ನೋಡ್ತಾ ನಿಂತೆ.

ನಸುನಕ್ಕ ಅವರು, 'ಮದರಸಗಳ ಬಗ್ಗೆ ಬಹುತೇಕರು ಇಂತಹ ಅಭಿಪ್ರಾಯ ಹೊಂದಿದ್ದಾರೆ. ಆದರೆ, ನಾವು ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತ್ರವಲ್ಲದೆ, ಹಿಂದೂ ಮತ್ತು ಮುಸ್ಲಿಂ ನಾಯಕರು ಒಗ್ಗೂಡಿ ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದರು ಎಂಬುದನ್ನು ಬೋಧಿಸುತ್ತೇವೆ. ದೇಶಭಕ್ತಿಯ ಬಗ್ಗೆ ಹೇಳುತ್ತೇವೆ' ಎಂದು ಸ್ಪಷ್ಟಪಡಿಸಿದರು.

***

ಕರಾವಳಿಯ ಕೋಮು ರಾಜಕೀಯದ ಬಗ್ಗೆ ಹೆಚ್ಚು ತಿಳಿದಿದ್ದ ಮುಸ್ಲಿಂ ಮುಖಂಡರೊಬ್ಬರ ಪ್ರತಿಕ್ರಿಯೆಗಾಗಿ ಅವರ ಮುಂದೆ ಕುಳಿತೆವು. ಕರಾವಳಿಯಲ್ಲಿ ಕೋಮು ಸಂಘರ್ಷ ಯಾಕಿಷ್ಟು ಹೆಚ್ಚು ಎನ್ನುವುದನ್ನು ಹೇಳುತ್ತಾ ಹೋದ ಅವರು, 'ಹಿಂದೂ' ಮತ್ತು 'ಇಸ್ಲಾಂ' ಮೂಲಭೂತವಾದಗಳೆರಡೂ ಇಲ್ಲಿ ತೀವ್ರವಾಗಿರುವುದರಿಂದಲೇ ಸಂಘರ್ಷಗಳು ಹೆಚ್ಚಾಗುತ್ತಿವೆ. ಮಕ್ಕಳ ಭವಿಷ್ಯಕ್ಕಾಗಿ, ಕರಾವಳಿಯ ನೆಮ್ಮದಿಗಾಗಿ ಎರಡೂ ಕಡೆಯವರು ಸ್ವಲ್ಪ 'ಸಾಫ್ಟ್' ಆಗಬೇಕು ಎಂದರು.

ಅಲ್ಲಿಯೂ 'ಚಹಾ' ಸಂಪನ್ನವಾಯಿತು.

***

ಹಿಜಾಬ್ ವಿವಾದ ಪ್ರಾರಂಭವಾಗಿದ್ದ ಉಡುಪಿಗೆ ಹೋದೆವು. ಹಿಜಾಬ್ ಕುರಿತು ಹೈಕೋರ್ಟ್ ಮಧ್ಯಂತರ ತೀರ್ಪು ನೀಡಿದ ನಂತರ, ಕಾಲೇಜುಗಳು ಪುನರಾರಂಭವಾದ ಮೊದಲ ದಿನ ಅದು. ಹಿಜಾಬ್‌ಗೆ ಸಂಬಂಧಿಸಿದಂತೆ ಅಲ್ಲಿನ ಪದವಿ ಕಾಲೇಜೊಂದರಲ್ಲಿ ಗಲಾಟೆ ಶುರುವಾಯಿತು.

ಅಲ್ಲಿ, ಮಾಧ್ಯಮದವರು ಇದ್ದಲ್ಲಿಗೇ ಬಂದ ಮುಸ್ಲಿಂ ವಿದ್ಯಾರ್ಥಿನಿಯ ಪೋಷಕರೊಬ್ಬರು, 'ನಮಗೆಲ್ಲ ನೀವು ಮಾತಾಡಿಸಲ್ಲ, ನಾನು ಹೇಳಿದ್ದನ್ನೂ ಪ್ರಸಾರ ಮಾಡಲ್ಲ. ನಿಮಗೆ ಬೇಕಾದವರಿಗೆ ಮಾತ್ರ ಪ್ರಚಾರ ಕೊಡ್ತೀರಿ' ಎಂದೆನ್ನುತ್ತಾ ಮುಂದಡಿ ಇಡತೊಡಗಿದರೂ ಯಾರಾದರೂ ಒಬ್ಬರು ಮಾತನಾಡಿಸಲಿ ಎಂಬಂತೆ ಕ್ಯಾಮೆರಾಗಳನ್ನೇ ನೋಡತೊಡಗಿದರು. ಏನು ಮಾತನಾಡ್ತೀರೋ ಮಾತಾಡಿ ಎಂದು, 'ಲೈವ್' ಮಾಡಲು ಕ್ಯಾಮೆರಾಮನ್‌ಗೆ ಹೇಳಿದೆ. ಫೇಸ್‌ಬುಕ್ 'ಲೈವ್' ಪ್ರಾರಂಭವಾಯ್ತು. ಅವರ ಕೆಲವು ಮಾತುಗಳು ಸರಿ ಇದ್ದರೂ, ಕೊನೆಕೊನೆಗೆ ವಿದ್ಯಾರ್ಥಿನಿಯ ಪೋಷಕ ಎನ್ನುವುದಕ್ಕಿಂತ ಹೆಚ್ಚಾಗಿ ರಾಜಕಾರಣಿಯ ರೀತಿ ಮಾತನಾಡತೊಡಗಿದರು. ಬೇಗ 'ಲೈವ್' ಮುಗಿಸಿದೆವು.

***

ಅಲ್ಲಿಂದ ಸೀದಾ ಹೋಗಿದ್ದು, ಎಸ್‌ಡಿಪಿಐ ಲೀಡರ್ ಒಬ್ಬರಿಗೆ ಸೇರಿದ ಹೋಟೆಲ್‌ಗೆ. ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಅವರ ಪ್ರತಿಕ್ರಿಯೆ ಪಡೆಯಬೇಕಾಗಿತ್ತು. ಮಾತೆಲ್ಲ ಮುಗಿದ ನಂತರ ಕ್ಯಾಮೆರಾ ಆಫ್ ಆಯಿತು. ತಣ್ಣನೆಯ ನಿಂಬೆ ಜ್ಯೂಸ್ ಬಂತು. 'ನೀವು ಬೆಳಿಗ್ಗೆ ಲೈವ್ ಮಾಡಿದ್ರಂತಲ್ವ, ಅಲ್ಲಿ ಮಾತನಾಡಿದವನು ನಮ್ಮವನೇ. ಅವನ ಮಗಳು ಅದೇ ಕಾಲೇಜಿನಲ್ಲಿ (ಪದವಿ ಕಾಲೇಜಿನಲ್ಲಿ) ಓದುತ್ತಿದ್ದಾಳೆ. ಹೇಗೆ ಮಾತಾಡಿದೆ ಕೇಳಿಸಿಕೊಂಡ್ರಾ ಅಂದ. ತುಂಬಾ ಚೆನ್ನಾಗಿ ಮಾತಾಡಿದಿಯಾ ಎಂದೆ' ಎಂಬುದಾಗಿ ಆ ಎಸ್‌ಡಿಪಿಐ ಮುಖಂಡ ಹೇಳಿದ್ರು. 'ಪ್ರಪಂಚ ಎಷ್ಟು ಚಿಕ್ಕದಲ್ವ' ಅನಿಸಿತು!

***

ಕಾರ್ಕಳ ಸಮೀಪದ ನಕ್ರೆಯ ಪ್ರಾರ್ಥನಾ ಮಂದಿರದ ಮೇಲಿನ ದಾಳಿ ಪ್ರಕರಣದ ವರದಿಗಾಗಿ ಅಲ್ಲಿಗೆ ಹೋದೆವು. ಆ ಪ್ರಾರ್ಥನಾ ಮಂದಿರದ ಮೇಲೆ ಬಜರಂಗದಳದ ಕಾರ್ಯಕರ್ತರು ದಾಳಿ ಮಾಡಿ, ಅವಾಚ್ಯವಾಗಿ ನಿಂದಿಸಿದರು ಎಂದು ಅಲ್ಲಿದ್ದ ಮಹಿಳೆಯರು ಆರೋಪಿಸಿದರು. ಅವರಲ್ಲಿ ಬಹುತೇಕರು, ಹೆಚ್ಚು ಭಾವೋದ್ವೇಗಕ್ಕೆ ಒಳಗಾದವರಂತೆಯೂ ಕಂಡುಬಂದರು. ದಾಳಿಗೆ ಗುರಿಯಾಗಿದ್ದೂ ಕಾರಣವಿರಬಹುದು. ಕ್ಯಾಮೆರಾ ಆಫ್ ಆದ ನಂತರ ಆ ಪ್ರಾರ್ಥನಾ ಮಂದಿರದಲ್ಲಿಯೇ ಕುಳಿತು ಜ್ಯೂಸ್ ಕುಡಿದೆವು. ಆ ಮಂದಿರದಲ್ಲಿ ಯೇಸುವಿನ ಪ್ರತಿಮೆಯಾಗಲಿ, ಶಿಲುಬೆಯಾಗಲಿ ನನಗೆ ಕಾಣಲಿಲ್ಲ. ನಾನು ಮಾತನಾಡಿಸಿದ ಬಹುತೇಕ ಮಹಿಳೆಯರದು ಹಿಂದೂ ಹೆಸರುಗಳೇ ಆಗಿದ್ದವು.

***

ಕರಾವಳಿಯ ಕೋಮು ರಾಜಕೀಯದ ಕುರಿತು ಉಡುಪಿಯ ಚಿಂತಕರೊಬ್ಬರನ್ನು ಮಾತಿಗೆಳೆದೆ. ಕರಾವಳಿಯಲ್ಲಿ ಹಿಂದೂ ಮತ್ತು ಇಸ್ಲಾಂ ಮೂಲಭೂತವಾದಗಳೆರಡೂ ಹೆಚ್ಚಾಗುತ್ತಿರುವ ಕಾರಣದಿಂದಲೇ ಇಲ್ಲಿ ಘರ್ಷಣೆ ಜಾಸ್ತಿಯಾಗುತ್ತಿದೆಯಂತಲ್ಲವೇ ಎಂದು ಕೇಳಿದೆ. 'ಇಸ್ಲಾಂ ಮೂಲಭೂತವಾದಕ್ಕಿಂತ ಹಿಂದೂ ಮೂಲಭೂತವಾದವೇ ಇಷ್ಟೆಲ್ಲ ಗಲಾಟೆಗೆ ಕಾರಣ' ಎಂದು ಅವರು ವಾದಿಸಿದರು. ಮಾನವೀಯತೆ ಮತ್ತು ಮಾನವ ಧರ್ಮದ ಬಗ್ಗೆಯೂ ತುಂಬಾ ಹೊತ್ತು ಮಾತನಾಡಿದರು ಆ ಚಿಂತಕರು. ಮಧ್ಯಾಹ್ನ 3ರಿಂದ ಸಂಜೆ ಸುಮಾರು 6 ಗಂಟೆಯವರೆಗೆ ಸುದೀರ್ಘವಾಗಿ ಅವರ ಜೊತೆ ಮಾತನಾಡಿದ್ದರಿಂದ ಬಾಯಾರಿಕೆ ಆಗುತ್ತಿತ್ತು. ಟೀ ಕುಡಿಯಬೇಕು ಎನಿಸುತ್ತಿತ್ತು. ಆದರೆ, ಅದ್ಯಾವುದೂ ಸಿಗಲಿಲ್ಲ!

***

'ನನಗೆ ಮುಸ್ಲಿಂ ಫ್ರೆಂಡ್ ಒಬ್ಬಳಿದಾಳೆ ಸರ್, ಬಿಎಸ್‌ಸಿ ನರ್ಸಿಂಗ್ ಮಾಡ್ತಿದಾಳೆ. ಅವರಮ್ಮ ಸಾಲಸೋಲ ಮಾಡಿ ಕಷ್ಟಪಟ್ಟು ಅವಳನ್ನ ಓದಿಸ್ತಿದ್ದಾರೆ. ಆದರೆ, ಈ ಹಿಜಾಬ್ ಗಲಾಟೆಯಿಂದ ಅವಳ ಓದಿಗೆ ಎಲ್ಲಿ ಅಡ್ಡಿ ಆಗುತ್ತೋ ಅಂತಾ ಅವರು ಚಿಂತೆ ಮಾಡ್ತಿದಾರೆ' ಅಂತ ಉಡುಪಿಯ ಕಾಲೇಜೊಂದರ ಹಿಂದೂ ವಿದ್ಯಾರ್ಥಿನಿ ಹೇಳಿದಳು. 'ಹೊರಗಡೆ ಪ್ರೊಟೆಸ್ಟ್ ನಡೀತಿದ್ರು ಕಾಲೇಜೊಳಗೆ ನನ್ನ ಫ್ರೆಂಡ್ ಹಿಜಾಬ್ ಹಾಕಿಕೊಂಡೇ ಕುಳಿತಿದ್ದಾಳೆ. ಅದರಿಂದ ನಮಗೇನೂ ಸಮಸ್ಯೆಯಾಗಿಲ್ಲ. ಲೆಕ್ಚರರ್ ಕೂಡ ಏನೂ ಹೇಳಲಿಲ್ಲ. ನೋಡಿಯೂ ನೋಡದಂತೆ ಪಾಠ ಮುಂದುವರಿಸಿದರು. ನಮ್ಮ ಬೇರೆ ಫ್ರೆಂಡ್ಸ್ ಕೂಡ ಅವಳಿಗೆ ತೊಂದರೆ ಮಾಡಲಿಲ್ಲ' ಎಂದೂ ಆ ವಿದ್ಯಾರ್ಥಿನಿ ಹೇಳಿದಳು.

***

ಉಡುಪಿಯ ಕೃಷ್ಣಮಠ, ಮಂಗಳೂರಿನ ಮದರಸ, ಕಾರ್ಕಳದ ಚರ್ಚ್‌ನಲ್ಲಿ ಕುಳಿತೆದ್ದು ಬಂದೆ. ಈ ಮೂರೂ ಧಾರ್ಮಿಕ ಕೇಂದ್ರಗಳಲ್ಲಿಯೂ ಹೆಚ್ಚು ನೆಮ್ಮದಿ, ಮನಃಶಾಂತಿ ಸಿಕ್ಕಿತು. ಆದರೆ, ಕುಕ್ಕಂದೂರಿನಲ್ಲಿನ ಆ ಪ್ರಾರ್ಥನಾ ಮಂದಿರದಲ್ಲಿ ಕುಳಿತಾಗ ನನಗೆ ಅಂತಹ ಅನುಭವವಾಗಲಿಲ್ಲ!

ಕೃಷ್ಣಮಠ, ಮದರಸ, ಚರ್ಚ್‌ನಲ್ಲಿನ ಅವರ ಆಚರಣೆ, ಭಕ್ತಿ ತೀರಾ ಸಹಜ ಅನಿಸಿತು. ಪೂಜೆ, ನಮಾಜ್, ಪ್ರೇಯರ್‌ನಲ್ಲಿ ತೊಡಗಿದ್ದವರ ಮುಖದಲ್ಲಿಯೂ ಯಾವುದೇ ಒತ್ತಡ, ಉದ್ವೇಗ ಕಾಣಲಿಲ್ಲ. ಆದರೆ, ಯಾವುದೇ ಧಾರ್ಮಿಕ ಆಚರಣೆಗೆ ಸಂಬಂಧಿಸಿದಂತೆ ಅನ್ಯರ ಹಸ್ತಕ್ಷೇಪವಾದಾಗ ಅಥವಾ ಬ್ರೇನ್ ವಾಶ್ ಆದಾಗ, ಆ ವ್ಯಕ್ತಿಯು ಯಾವುದೋ ಪ್ರಭಾವಕ್ಕೆ ಒಳಗಾದವನಂತೆ, ಉದ್ವೇಗಗೊಂಡವನಂತೆ ಪ್ರತಿಕ್ರಿಯಿಸುತ್ತಾನೆ ಎಂದೆನಿಸತೊಡಗಿತು.

***

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಓಡಾಡಿ ಅನೇಕರನ್ನು ಮಾತನಾಡಿಸಿದೆ. ಮುಸ್ಲಿಮರಲ್ಲಿ ಅನೇಕರಿಗೆ, ತಮ್ಮ ಮಕ್ಕಳು ಹಿಜಾಬ್ ಧರಿಸಿಯೇ ತರಗತಿಯೊಳಗೆ ಕೂರಬೇಕು ಎಂಬ ಹಟವೇನಿಲ್ಲ. ಆದರೆ, ಕ್ಯಾಮೆರಾ ಮುಂದೆ ಈ ಮಾತುಗಳನ್ನು ಹೇಳಲು ಅವರಿಗಾಗಲಿಲ್ಲ.

ಅದೇ ರೀತಿ, 'ಹಿಜಾಬ್ ತಾನೆ, ಹಾಕಿಕೊಂಡು ಬಂದರೆ ಬರಲಿ ಬಿಡಿ, ಅದರಿಂದ ನಮಗೇನೂ ಸಮಸ್ಯೆ ಇಲ್ಲ' ಎಂಬ ಭಾವನೆ ಅನೇಕ ಹಿಂದೂ ಪೋಷಕರಲ್ಲಿಯೂ ಇದೆ. ಮಾಧ್ಯಮಗಳ ಮುಂದೆ ಇದನ್ನೇ ಹೇಳಲು ಅವರಿಗೂ ಹಿಂಜರಿಕೆ. ಅಲ್ಲೊಬ್ಬರು, ಇಲ್ಲೊಬ್ಬರು ಬಹಿರಂಗವಾಗಿ ಇಂತಹ ಅಭಿಪ್ರಾಯ ವ್ಯಕ್ತಪಡಿಸಲು ಮುಂದಾದರೂ ಕೆಲವು ರಾಜಕಾರಣಿಗಳು, ಧಾರ್ಮಿಕ ಮುಖಂಡರಿಗೆ ಇದು ಬೇಕಿಲ್ಲ. ಇಂತಹ ಧಾರ್ಮಿಕ ಮುಖಂಡರು, ರಾಜಕಾರಣಿಗಳು, ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮವೇ ಈ ವಿವಾದ ಇಷ್ಟು ದೊಡ್ಡದಾಗಲು ಕಾರಣ. ಇವರೆಲ್ಲರೂ ಸುಮ್ಮನಾದರೆ ಯಾವ ವಿವಾದವೂ ಇರದು ಎನ್ನುತ್ತಾರೆ ಪೋಷಕರು.

ಮಕ್ಕಳ ಬಗ್ಗೆ, ಅವರ ಶಿಕ್ಷಣದ ಬಗ್ಗೆ ಹೀಗೆ ನಾಲ್ಕು ಗೋಡೆಗಳ ಮಧ್ಯೆ ವ್ಯಕ್ತವಾಗುತ್ತಿರುವ ಕಾಳಜಿ, ನಾಲ್ಕು ಗೋಡೆಗಳಾಚೆಗೂ ಬಂದರೆ ಎಲ್ಲ ವಿದ್ಯಾರ್ಥಿಗಳಿಗೂ, ಸಮಾಜಕ್ಕೂ ಉತ್ತಮವಲ್ಲವೇ ಎಂದು ಯೋಚಿಸುತ್ತಾ ಬೆಂಗಳೂರಿನತ್ತ ಮುಖ ಮಾಡಿದೆ.

ನಾಟಕದ ಸರಕಿನಾಗ ನೀತಿ ಸೋತಾಗ...

ಮಲ್ಲಿಕಾರ್ಜುನ ಕಡಕೋಳ

ವರ್ತಮಾನದ ರಂಗಭೂಮಿ, ಸಿನೆಮಾ, ಕಿರುತೆರೆ, ಸಾಮಾಜಿಕ ಜಾಲತಾಣ ಹೀಗೆ ಬಹುಪಾಲು ದೃಶ್ಯಮಾಧ್ಯಮಗಳು ಹೊರಳು ಹಾದಿಯಲ್ಲಿವೆ. ಅವು ಸಾಂಸ್ಕೃತಿಕ ಸ್ವಾಯತ್ತತೆ ಕಳೆದುಕೊಳ್ಳುತ್ತಿವೆ. ದುರಂತವೆಂದರೆ ಅದನ್ನು ಅಭಿವ್ಯಕ್ತಿ ಮಾಧ್ಯಮದ ಕ್ರಾಂತಿಯಂತೆ ಬಿಂಬಿಸಲಾಗುತ್ತಿದೆ. ಜನಾಭಿರುಚಿ ಜಲಪಾತದಂತೆ ಜರ್ನೆ ಜರಿದು ಪತನದ ಹಾದಿ ಹಿಡಿಯುವಲ್ಲಿ ಅವುಗಳ ಪಾತ್ರ ಹಿರಿದು. ಅದಕ್ಕಾಗೇ ಕೆಲವು ಮಾಧ್ಯಮಗಳು ಟೊಂಕಕಟ್ಟಿ ನಿತಾಂತ ನಿಂತಿರುವುದು ನಿಗೂಢವೇನಲ್ಲ.

ಒಂದು ಕಾಲದಲ್ಲಿ ಅವಿಭಜಿತ ಕುಟುಂಬ ಪ್ರೀತಿ, ಖರೇ ಖರೇ ದೇಶಭಕ್ತಿ, ಸಮಷ್ಟಿ ಗೌರವ, ರಸಾನುಭೂತಿ, ಅಂತಃಕರಣಗಳ ಭಾವಾಭಿವ್ಯಕ್ತಿಯಂತಿದ್ದ ಲೋಕಪ್ರಿಯ ನಾಟಕಗಳು ಹೃದಯಸ್ಪರ್ಶಿ ಸಂವೇದನೆಗಳನ್ನು ಕಳಕೊಂಡು ಸದಭಿರುಚಿ ಸಂಸ್ಕೃತಿಯಿಂದ ದೂರ ಸರಿದಿವೆ. ಅರ್ಥದ ಅಪಮೌಲ್ಯದಿಂದ ಅವುಗಳ ಆತ್ಮದ ಸ್ವರೂಪ ಸೊರಗಿ ಸುಣ್ಣವಾಗಿದೆ. ಅವಕ್ಕೆ ಅಸ್ಮಿತೆಯ ಸವಾಲು ಒಂದೆಡೆಯಾದರೆ, ಒಟ್ಟು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅವಲೋಕಿಸಿದಾಗ ಜಾಗತೀಕರಣದ ಘೋರ ಪರಿಣಾಮಗಳು ರಂಗಭೂಮಿಯನ್ನು ಧೃತಿಗೆಡಿಸಿರುವುದು ದೃಗ್ಗೋಚರ. ವಿದ್ಯುನ್ಮಾನ ಮಾಧ್ಯಮ 'ಷೋ'ಗಳ ಜತೆಗಿನ ಪೈಪೋಟಿಗಿಳಿದು ಡಿಜಿಟಲ್ ತಲ್ಲಣದ ಸುಂಟರಗಾಳಿಗೆ ಸಿಲುಕಿವೆ.

> ಹತ್ತು ಹಲವು ಅಪಸವ್ಯಗಳ ನಡುವೆಯೂ ವೃತ್ತಿರಂಗಭೂಮಿ ಬಗ್ಗೆ ಗ್ರಾಮೀಣ ಜನರು ಉತ್ಕಟ ಪ್ರೀತಿ, ಭರವಸೆ ಉಳಿಸಿಕೊಂಡಿದ್ದಾರೆ. ಆದರೆ ಅದೊಂದು ಕಲಾರಂಗ ಪ್ರಕಾರವಾಗಿ ಸಾಂಸ್ಕೃತಿಕ ಸ್ವಾಯತ್ತತೆ ಕಳೆದುಕೊಂಡಿದೆ. ಅಳ್ಳಕಗೊಳ್ಳುತ್ತಿರುವ ಅದರ ಸಾಧ್ಯತೆಯ ಕ್ಷಿತಿಜ ವಿಸ್ತಾರಗೊಳ್ಳುತ್ತಲಿದೆ.

ಆ ಕುರಿತು ಅಧ್ಯಯನಗಳ ಅಗತ್ಯವಿದೆ. ಇದುವರೆಗಿನ ಅಧ್ಯಯನಗಳು ವೃತ್ತಿರಂಗ ಪ್ರಕಾರ (form) ಕುರಿತಾದ ಚಾರಿತ್ರಿಕ ಅಂಶಗಳು, ಬಯೋಪಿಕ್ ಮಾದರಿಯ ಕಥನಗಳು ಮಾತ್ರ. ವಿಶ್ಲೇಷಣಾತ್ಮಕ ಮತ್ತು ತಾರ್ಕಿಕ ಸಂವಾದಗಳು ಜರುಗಿಲ್ಲ. ವೃತ್ತಿ ರಂಗಭೂಮಿಯ 'ಚೈತನ್ಯ' ಗುರುತಿಸುವ ವೈಜ್ಞಾನಿಕ ಅಧ್ಯಯನ ಆಗಿಲ್ಲ. ನಾನಾ ಜ್ಞಾನಸಾರ ಶಿಸ್ತುಗಳ ಚಾಳೀಸು ಮೂಲಕ ನೋಡುವುದು ದುಸ್ತರದ ಮಾತೇ ಸರಿ. ವಿಶ್ವವಿದ್ಯಾಲಯಗಳ ಪಿ.ಎಚ್‌ಡಿ. ಪ್ರಬಂಧಗಳು ನೌಕರಿಗೆ ಮೀಸಲಾದ ಅವಾರ್ಡುಗಳಷ್ಟೇ.

ವೃತ್ತಿ ರಂಗನಾಟಕಗಳನ್ನು ಪ್ರಯೋಗ - ಪ್ರದರ್ಶನಗಳಿಗೆ ಮಿತಿಗೊಳಿಸಿ ಅವುಗಳ ಮಹತ್ವ ನಿರ್ಧರಿಸಲಾಗದು. ಅದರಾಚೆ ಅವುಗಳಿಗೆ ಸಾಮಾಜಿಕವಾದ ಬಹುದೊಡ್ಡ ಆಯಾಮಗಳಿವೆ. ಸಾಂಸ್ಕೃತಿಕ ಅಂತರ್ ಸಂಬಂಧಗಳಿವೆ. ಜನಸಾಮಾನ್ಯರ ಬದುಕಿನೊಳಗೆ ಹಾಸುಹೊಕ್ಕಾದ ಪ್ರಜಾಸತ್ತಾತ್ಮಕ ಬಾಹುಳ್ಯದ ಪ್ರೀತ್ಯಾದರಗಳಿವೆ. ಲೋಕಸಂಸ್ಕೃತಿಯ ದಟ್ಟಪ್ರಭಾವದ ಬೇರುಗಳಿವೆ. ಅಂತಹ ಅಸ್ಮಿತೆಯ ಹುಡುಕಾಟ, ಸಂಶೋಧನೆ ಅಗತ್ಯವಿದೆ.

ವಚನ ಚಳವಳಿ ಕಾಲದ ಬಹುರೂಪಿ ಚೌಡಯ್ಯನ ಕಾಯಕವೇ ಬಹುರೂಪದ ರಂಗವೃತ್ತಿ. ಆತ ಪ್ರಪಂಚದ ಪ್ರಪ್ರಥಮ ವೃತ್ತಿ ರಂಗಕರ್ಮಿ. ಇಂತಹ ಬಹುಳ ಪ್ರಜ್ಞೆಯ ಕಾಯಕ ಪ್ರಕಾರವನ್ನು ರಂಗೇತಿಹಾಸಕಾರರು ಪ್ರಧಾನ ಸಂಸ್ಕೃತಿ ಧಾರೆಗೆ ನೇಪುರ್ಗೊಳಿಸಲಿಲ್ಲ. ವಿಸ್ತೃತ ಚರ್ಚೆಗಳು ಜರುಗಲಿಲ್ಲ. ಅಷ್ಟೇ ಯಾಕೆ ಕನ್ನಡದ ಸಮಗ್ರ ರಂಗಸಂಸ್ಕೃತಿಯ ಅರಿವು, ಆಲೋಚನೆಗಳನ್ನು ಕಟ್ಟುವ ಗಂಭೀರ ಚಿಂತನೆಗಳು

ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ಪ್ರದರ್ಶನಗೊಂಡ 'ಶಹೀದ್ ಉಧಮ್ ಸಿಂಗ್ ಅಜಾದ್' ನಾಟಕದ ನೋಟ. 'ಮೂಕನ ಮಕ್ಕಳು' ನಾಟಕದ ದೃಶ್ಯ (ಕೆಳಚಿತ್ರ)

ಇದುವರೆಗೂ ನಡೆದಿಲ್ಲ.

ಅಚ್ಚರಿಯೆಂದರೆ ಮೀಮಾಂಸಕರು ಅಂಥದ್ದೊಂದು ಸಾಂಸ್ಕೃತಿಕ ಚಿಂತನೆಯನ್ನೇ ಸಂದೇಹಿಸಿದರು. ಇನ್ನೊಂದೆಡೆ ಪ್ರಯೋಗಶೀಲ, ವೈಚಾರಿಕ ನೆಲೆಗಟ್ಟಿನ ಹೊಸ ಅಲೆಯ ಬಹುಪಾಲು ನಾಟಕಗಳು (ಎಲೈಟ್ ಮಂದಿಯ ತಲಸ್ಪರ್ಶಿ ಥಿಯೇಟರ್) ಬೌದ್ಧಿಕ ತಂತ್ರಗಳ ಸಾಹಚರ್ಯದಲ್ಲಿ ಕಳೆದು ಹೋದವು. ಜನಮಾನಸಕ್ಕೆ ಮುಟ್ಟದಿರುವುದೇ ಪ್ರಸ್ತಾಪಿತ ಅಧ್ಯಯನಗಳ ಅಗತ್ಯಗಳನ್ನು ಒತ್ತಿ ಹೇಳುತ್ತದೆ. ಇಂತಹ ಹತ್ತು ಹಲವು ಅಪಸವ್ಯಗಳ ನಡುವೆಯೂ ವೃತ್ತಿರಂಗಭೂಮಿ ಬಗ್ಗೆ ಗ್ರಾಮೀಣ ಜನಸಾಮಾನ್ಯರು ಉತ್ಕಟ ಪ್ರೀತಿ, ಭರವಸೆ ಉಳಿಸಿಕೊಂಡಿದ್ದಾರೆ. ಆದರೆ ಅದೊಂದು ಕಲಾರಂಗ ಪ್ರಕಾರವಾಗಿ ಸಾಂಸ್ಕೃತಿಕ ಸ್ವಾಯತ್ತತೆ ಕಳೆದುಕೊಂಡಿದೆ. ಡೈಲ್ಯೂಟ್ ಆಗುತ್ತಿರುವ ಅದರ ಸಾಧ್ಯತೆಯ ಕ್ಷಿತಿಜ ವಿಸ್ತಾರಗೊಳ್ಳುತ್ತಲಿದೆ.

ಬದಲಾದ ಕಾಲಘಟ್ಟದಲ್ಲಿ ವೃತ್ತಿರಂಗ ನಾಟಕಗಳ ಸ್ವರೂಪ, ವೃತ್ತಿಪರತೆ ಮತ್ತು ವೃತ್ತಿನಿರತೆ ಬದಲಾಗಿವೆ. ಈ ಬದಲಾವಣೆ ಸಾಂಸ್ಕೃತಿಕ ಸ್ಥಿತ್ಯಂತರವಲ್ಲ. ಬದಲಾಗಿ ಅದೊಂದು ಅಸ್ವಾಸ್ಥ್ಯ ಬೆಳವಣಿಗೆ. ಗಲ್ಲಾಪೆಟ್ಟಿಗೆ ಕೇಂದ್ರಿತ ಏಕ ಶಿಲಾಕೃತಿಯ ತೇಜೀ ಮಂದೀ ಪ್ರವಾಹದಾಟ. ಯಾವುದೇ ಕಲೆಗಳು ಕಮರ್ಷಿಯಲ್ ಆದಾಗ ಸಾಂಸ್ಕೃತಿಕ ಮಾಧುರ್ಯ, ಅಂತಃಸ್ಫುರಣದ ಸೃಜನಶೀಲತೆ ಕಳಕೊಳ್ಳುತ್ತವೆ.

ವೃತ್ತಿರಂಗ ನಟಿಯೊಬ್ಬಳು ನಿರ್ದೇಶಿಸಿ, ನಟಿಸಿದ ಅರಿಶಿಣಗೋಡಿಯವರ 'ಬಸ್ ಕಂಡಕ್ಟರ್' ಎಂಬ ಸಾಮಾಜಿಕ ಕಾಳಜಿಯ ಸುಂದರ ನಾಟಕವನ್ನು ಅವರು ತಮ್ಮ ಶಕ್ತಿಮೀರಿ ವಿಕೃತಗೊಳಿಸಿದ್ದಾರೆ. ಸಖೇದಾಶ್ಚರ್ಯ ಎಂದರೆ ಸ್ಟುಡಿಯೋವೊಂದು ಇದರ ಕ್ಯಾಸೆಟ್ ತಯಾರಿಸಿ ಯಥೇಚ್ಛ ಹಣ ಗಳಿಸಿದೆ. ಇಂತಹ ಹತ್ತಾರು ನಿದರ್ಶನಗಳಿವೆ.

ಲೋಕೋಪಯೋಗಿ ಸರಕಿನಂತೆ ಕ್ಯಾಸೆಟ್ಟುಗಳು ಹವ್ಯಾಸಿ ರಂಗಭೂಮಿಯ ಗ್ರಾಮೀಣರಿಗೆ ರೋಲ್ ಮಾಡೆಲ್. ಇಂತಹ ಹತ್ತಾರು ದುರ್ಚಾಳಿಯ ಮಾಡೆಲ್ಲುಗಳಿವೆ. ತನ್ಮೂಲಕ ಕವಿ ಮತ್ತು ರಂಗಸಂಸ್ಕೃತಿಗೆ ಅಪಚಾರ. ಈಗಲೂ ರಾಜ್ಯದ ಹಳ್ಳಿ ಹಳ್ಳಿಗಳಲ್ಲಿ ವರ್ಷಕ್ಕೆ ಅಜಮಾಸು ಹದಿನೈದು ಸಾವಿರಕ್ಕೂ ಹೆಚ್ಚು ಇಂತಹ ರಂಗನಾಟಕಗಳ ಪ್ರದರ್ಶನ. ದುರಂತವೆಂದರೆ ಅದಕ್ಕಾಗಿ ಗ್ರಾಮೀಣ ಹವ್ಯಾಸಿ ಕಲಾವಿದರು ಸರ್ಕಾರದ ಕಿಲುಬು ಕಾಸಿಗೆ ಜೋತುಬೀಳದೇ ಸ್ವಂತ ಖರ್ಚಿನಲ್ಲೇ ಇಂತಹ ಸಡಗರ ಮೆರೆಯುತ್ತಾರೆ.

ಅಭಿನಯ, ರಂಗಸಂಗೀತ, ರಂಗಸಜ್ಜಿಕೆಯ ಪ್ರಮುಖ ಪರಂಪರೆಗೆ ಕೊಡಲಿಪೆಟ್ಟು. ಬದಲಿಗೆ ಚಲನಚಿತ್ರಗಳ ಅತಿರೇಕದ ಅನುಕರಣೆ. ಅಲ್ಲೆಲ್ಲೂ ಕಂದಪದ್ಯ, ರಂಗಗೀತೆಗಳ ಸುಳಿವಿಲ್ಲ. ಅಧಿಕಾರಿಗಳ ಕೆಂಗಣ್ಣಿನಿಂದಾಗಿ ಐಟಂ ನೃತ್ಯಗೀತೆಗಳಿಲ್ಲವಷ್ಟೇ. ಆ ಕೆಲಸ ಸುಲಭದಲ್ಲೇ ಹಾಸ್ಯನಟಿಯೋ, ಇಲ್ಲವೆ ಹೀರೋಯಿನ್ ಅನಾಯಾಸ ನಿಭಾಯಿಸುತ್ತಾರೆ. ಇಂತಹ ಅನೇಕಾನೇಕ ಸವಾಲುಗಳ ನಡುವೆಯೂ ಗದುಗಿನ ಗವಾಯಿಗಳ ಕಂಪನಿ, ಒಂದೆರಡು ಕಂಪನಿಗಳು ಪರಂಪರೆಯ ದ್ಯೋತಕವಾಗಿವೆ. ಕೆಲವು ಜಾತ್ರೆಗಳ ಕ್ಯಾಂಪುಗಳಲ್ಲಿ ನಾಟಕ ಕಂಪನಿಗಳು ಪರಾಧೀನ. ಅಲ್ಲೆಲ್ಲ ಖಾಸಗಿ ಕಲ್ಚರಲ್ ಮಾಫಿಯಾಗಳದ್ದೇ ಕಪಿಮುಷ್ಟಿ. ಇದರಿಂದ ಕಂಪನಿಗಳಿಗೆ ತೀವ್ರ ಹಿನ್ನಡೆ. ಮುಖ್ಯವಾಗಿ ಕಲಾವಿದರ ಹೊಟ್ಟೆಪಾಡಿನ ಪ್ರಶ್ನೆ. ಹೀಗಿರುವಾಗ ಸಾಂಸ್ಕೃತಿಕ ಸ್ವಾಯತ್ತತೆ ಸಾಧ್ಯವೇ.? ಹೊಸ ಅಲೆಯ ಪ್ರಯೋಗಶೀಲ ರಂಗಭೂಮಿ, ಕಿರುತೆರೆ, ಸಿನೆಮಾಗಳು ಸಹಿತ ಸಾಂಸ್ಕೃತಿಕ ಸ್ವಾಯತ್ತತೆ ಉಳಿಸಿಕೊಳ್ಳಲಾಗಿಲ್ಲ.

ಇತ್ತೀಚೆಗೆ ಮೇಲುಗೈ ಸ್ಥಾಪಿಸುತ್ತಿರುವ ಕಿರುತೆರೆಯ ಕೆಲವು ಕಾಮೆಡಿ ಶೋಗಳದು ಇಂಥದೇ ಮಲಿನ ಮಾತುಕತೆ. ಕಾಮಿಡಿ ಷೋಗಳ ಒಂದೆರಡು ಸ್ಯಾಂಪಲ್ ಆನುಷಂಗಿಕವಾಗಿ ಓದಲೇಬೇಕು:

'ನಿಮ್ಮಣ್ಣ ನಿನಗ ಖರ್ಚಿಗೆ ಹಣ ಕೊಡ್ಲಿಲ್ಲಂತ, ನೀನು ಅವನ ಒಂದ್ ಕೈ ಕಟ್ ಮಾಡಿದಿ. ಅಕಸ್ಮಾತ್ತಾಗಿ ನಿಮ್ಮಣ್ಣಗ ಮಕ್ಕಳಾಗದಿದ್ರ ಏನ್ ಕಟ್ ಮಾಡ್ತಿದ್ದಿ....''ಜಗ್ಗಣ್ಣ ಒಂದ್ ವಿಷಯ ಗೊತ್ತಾ.? ಮದುವಿಗಿಂತ ಮೊದ್ಲು ನನ್ ಬಂದೂಕು ಹೀಂಗ ನೆಟ್ಟಗ ನಿಂತ್ಕೊತಿತ್ತು ಅಂತ ಮುಷ್ಟಿ ಮಾಡಿ ಮೊಳದುದ್ದ ಕೈ ನೆಟ್ಟಗೆ ನಿಲ್ಲಿಸಿ, ಮದುವಿ ಆದಮ್ಯಾಲ ನನ್ನ ಬಂದೂಕ ಠುಸ್ಸಂತ ಮಲಗಿತು' ಎಂದು ನೆಟ್ಟಗಿನ ಮುಷ್ಟಿ ಕೆಳಗಿಳಿಸುತ್ತಾನೆ ಆ ಕಲಾವಿದ. ಸದ್ಯ ಇವೆರಡೇ ಉದಾಹರಣೆ ಸಾಕು.

ನಾಟಕಕಾರನ ರಂಗಕೃತಿಯ ಮೂಲ ಆಶಯಗಳೆಲ್ಲ ಮಣ್ಣುಪಾಲಾಗುತ್ತಿವೆ. ಔಚಿತ್ಯವನ್ನೇ ಕಂಗೆಡಿಸುವ ಕೈಗಂಟು ಸಂಭಾಷಣೆಗಳ ಕಿಲುಬಾಟ. ಪಾತ್ರ ಮತ್ತು ಪೂರ್ಣಪ್ರಮಾಣದ ರಂಗಪಠ್ಯ ಆವಾಹನೆ ಮಾಡಿಕೊಂಡು ಅಭಿನಯ ಬದುಕುವುದನ್ನು ಅರಿಯದಿದ್ದರೆ ಅದು ನಟನೆ ಆಗಬಹುದೇ ಹೊರತು ಅಭಿನಯವಲ್ಲ. ಅಭಿನಯವೆಂಬುದು ನಟನು ವಿನಯವಂತನಾಗುವುದು. ಮತ್ತೊಂದು ಉಲ್ಲೇಖಾರ್ಹ ಕಮೆಂಟ್ ಏನೆಂದರೆ: ಯಾವುದೋ ಕಾಲದ ಸವಕಲಾದ ರಂಗಧಾತುಗಳ ಮರುಕಳಿಕೆ.

ಪ್ರತಿನಾಯಕನ ಬದಲಿಗೆ ಖಳನಾಯಕನ ಖದರ್. ಅತಿರೇಕದ ಆಗರ. ಅಬ್ಬಾ! ಅಲ್ಲಿ ಖಳನಾಯಕನ ಆಗಮನವೆಂದರೆ ಥೇಟ್ ಸಿನೆಮಾ ವಿಲನ್ ಎಂಟ್ರಿಯೇ. ತುಟಿಯಂಚಲಿ ಸಿಗರೇಟಂತೂ ಕಾಯಂ. ಅಪ್ಡೇಟ್ ಏನೆಂದರೆ ಇತ್ತೀಚಿನ ತೆಲುಗು, ಹಿಂದಿ ವಿಲನ್ ಸ್ಟೈಲ್. ಪ್ರೇಕ್ಷಕರ ಕಿವಿಗಡಚಿಕ್ಕುವ ವಾದ್ಯಗಳ ಕಿರುಚಾಟ. ಖಳನಾಯಕನ ದೇಹ ಮತ್ತು ಧ್ವನಿಗಳ ಕಲಾತ್ಮಕತೆ ನೆಗೆದು ಬಿದ್ದು ಹುಳಿಗಟ್ಟುವ ಆರ್ಭಟ.

ಸಕಾರಾತ್ಮಕವಾದ ಸಾಂಸ್ಕೃತಿಕ ಸ್ಥಿತ್ಯಂತರಗಳ ಕೊರತೆ ಢಾಳಾಗಿ ಕಾಣುತ್ತಿದೆ. ಆದರೆ ಹಳೇ ಮೈಸೂರು ಪ್ರಾಂತ್ಯದಲ್ಲಿ ಪೌರಾಣಿಕ ನಾಟಕಗಳು ಸೃಜನಶೀಲತೆ ಮತ್ತು ರಂಗಶಿಸ್ತು ಕಾಪಿಟ್ಟುಕೊಂಡಿರುವುದು ಖಂಡಿತಾ ಶ್ಲಾಘನೀಯ.

ವೃತ್ತಿ ನಾಟಕಕಾರರೆಂದರೆ ಕರುಳಿನ ಕಥೆಗಾರರು. ಹಾಗಾಗಿ ಅವರನ್ನು ಕವಿಗಳೆಂದು ಕರೆಯಲಾಯಿತು. ಅವರು ವೃತ್ತಿರಂಗಭೂಮಿಯ ಪೂರ್ವಸೂರಿಗಳು. ಅವರ ಗಂಭೀರ ಓದು ಮತ್ತು ಸಾಹಿತ್ಯಾಧ್ಯಯನ ಸಮಕಾಲೀನ ಕವಿಗಳಲ್ಲಿ ಇಲ್ಲ. ಹೀಗಾಗಿ ಇಂದಿನವರು ಸಿದ್ಧಸಾಹಿತ್ಯ ಸೂತ್ರದ ನಾಟಕಕಾರರು. ಕುವೆಂಪು, ಅನಕೃ, ತರಾಸು, ಬೇಂದ್ರೆ, ಬೀಚಿಯಂತಹ ವಾಙ್ಮಯ ಲೋಕದ ಪ್ರಾಜ್ಞರು, ವಿದ್ವಜ್ಜನರು, ಸಾಹಿತಿಗಳು ವೃತ್ತಿ ನಾಟಕಗಳಿಗೆ ಮುಖಾಮುಖಿಗೊಂಡು ಪರಂಪರೆಯನ್ನು ಪ್ರೀತಿಸಿ ಪೊರೆದ ಕಾಲವಿತ್ತು. ಈಗ ಯಾಕಿಲ್ಲವೆಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ.

ಹಳೆಯ ನಾಟಕಗಳಿಂದ ಚೂರುಪಾರು ಎತ್ತಿಕೊಂಡು, ಉಳಿದಂತೆ ತೆಲುಹಾಸ್ಯವೆಲ್ಲ ಕಲಾವಿದರ ಕೊಡುಗೆ. ಇದು ಸಮಕಾಲೀನ ಕೆಲವರ ನಾಟಕ ರಚನೆಯ ತಂತ್ರಗಾರಿಕೆ. ಇಷ್ಟಕ್ಕೆ ಸಮಾಧಾನಗೊಳ್ಳದೆ, ಹಳೆಯ ನಾಟಕಗಳಿಗೇ ಕೆಟ್ಟ ಕೆಟ್ಟದಾದ ಹೊಸ ಹೆಸರಿಡುವ ಪೊಗರಿನ ಪರಿಪಾಟ.

'ಮಾವ ಮಂದ್ಯಾಗ ಸೊಸೆ ಸಂದ್ಯಾಗ', 'ನೋಡ್ಯಾಳ ರೊಕ್ಕ ಬಂದಾಳ ಪಕ್ಕ', 'ಹೆಣ್ಣಿಗೆ ಹಟ ಗಂಡಿಗೆ ಚಟ', 'ಹೌದಲೇ ರಂಗಿ ಊದಲೇನ ಪುಂಗಿ', 'ನಿಶೆ ಏರಿಶ್ಯಾಳ ನವರಂಗಿ', 'ಮಬ್ಬ ಹಿಡಿಸ್ಯಾಳ ಮದರಂಗಿ', 'ಸಾರಾಯಿ ಅಂಗಡಿ ಸಂಗವ್ವ'... ಇವು ಕೆಲವು ಹೊಸ ನಾಟಕಗಳ ಹೊಸ ಹೆಸರುಗಳು. ಈ ಹೆಸರುಗಳಲ್ಲಿ ಅಕ್ಷರಶಃ ಬಳಕೆಗಮ್ಯ ಗ್ರಾಹಕತ್ವದ ಗುಣವಿದೆ. ನಾಟಕದ ಹೆಸರಲ್ಲೇ ಹೆಣ್ಣಿನ ಶೋಷಣೆಯ ಧ್ವನಿ ಇದೆ. ಹೆಣ್ಣಿನ ಹೆಸರನ್ನು ಸರಕಿನಂತೆ ಬಳಸುತ್ತಿರುವುದು ಖಂಡನೀಯ. ಅತಿರೇಕಗಳ ಭಾರಕ್ಕೆ ಥಿಯೇಟರ್ ಎಥಿಕ್ಸ್ ಕುಸಿಯುತ್ತಿದೆ. ಸಹಪಾತ್ರಗಳಿಗೆ ಅವಕಾಶವಿಲ್ಲದ ಹಾಸ್ಯಪಾತ್ರಗಳ ಪುರುಷಾಧಿಪತ್ಯ.

ಹಾಸ್ಯ ಖುಷಿಗಳ ಕಾಲಬೇಡ. ನಮ್ಮ ಕಾಲಮಾನದ ಮಾಸ್ಟರ್ ಹಿರಣ್ಣಯ್ಯ, ತೀರ್ಥಹಳ್ಳಿ ಶಾಂತಕುಮಾರ್, ವರವಿ ಫಕೀರಪ್ಪ, ಬಿ. ಓಬಳೇಶ್ ಅಂಥವರು ನಿರಂತರ ಓದಿನಿಂದ ಆರ್ಜಿಸಿಕೊಂಡ ರಾಜಕೀಯ ಪ್ರಜ್ಞೆಯ ಮೊನಚು ಮರೆಯಲುಂಟೇ.? ಅಂದಂದಿನ ಸಮಾಜೋಧಾರ್ಮಿಕ, ರಾಜಕೀಯ ಸಂಗತಿಗಳ ಮೇಲೆ ಅವರ 'ಕ್ಷ' ಕಿರಣ, ಕುಟುಕುವ ವಿಡಂಬನೆ, ಹಾಸ್ಯದ ಚುರುಕುತನವಿತ್ತು.

ಕೊರೊನಾ ದುರಿತಕಾಲದ ಸಂಕಟಗಳು, ದಿಲ್ಲಿಯ ಐತಿಹಾಸಿಕ ರೈತ ಚಳವಳಿ, ಬಹುತ್ವ ಭಾರತದ ಇತರೆ ಸಂಗತಿಗಳ ಕುರಿತು ಸದಭಿರುಚಿಯ ಸತ್ವಯುತ ನಾಟಕಗಳು ಹುಟ್ಟಬೇಕೆಂದರೆ ನಾಟಕ ಕಾರನಿಗೆ ವರ್ತಮಾನದ ವೃತ್ತಾಂತಗಳ ಅರಿವು, ಸಾಮಾಜಿಕ ಎಚ್ಚರ, ಜನಚಳವಳಿಗಳ ಅಧ್ಯಯನ, ಅನುಸಂಧಾನಗಳಾಗಬೇಕು. ಮಹಾನ್ ನಾಟಕಕಾರರ ಪ್ರತಿಭೆಯ ಕಡಲು ಆಗಿದ್ದ ಅದೀಗ ಬತ್ತಿದ ಒಡಲಾಗಿದೆ. ಸೋಜಿಗವೆಂದರೆ ವೃತ್ತಿರಂಗದಲ್ಲಿ ಪ್ರತಿಭಾಶಾಲಿ ಕಲಾವಿದರಿದ್ದಾರೆ. ಅಂತಹ ಪ್ರತಿಭೆಗಳ ಸದ್ಬಳಕೆಗೆ ತೋರಬೇಕಾದ ವಿವೇಕ, ನುರಿತ ನಿರ್ದೇಶನದ ತೀವ್ರಕೊರತೆ. ಇಂತಹ ಬಿಕ್ಕಟ್ಟುಗಳಿಗೆ ಪರಿಹಾರ ದೊರಕಿಸಬೇಕಿದ್ದ ರಂಗಪ್ರಜ್ಞೆ ಗಡದ್ದಾಗಿ ಉಂಡು ಮಲಗಿದೆ. ❖



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸಂಕಲನ ವ್ಯವಕಲನ ಗುಣಾಕಾರ ಭಾಗಾಕಾರ

ಆಡಾಡ್ತಾ ಕಲಿ

ಬೇರೆ ಬೇರೆಯಾಗಿರುವ ಮೂರು ಸಂಖ್ಯೆ ಹಚ್ಚಿಕೊಳ್ಳಿ. ಅವುಗಳನ್ನು 6ರಿಂದ ಗುಣಿಸಿ, ಬಂದ ಉತ್ತರಕ್ಕೆ 9 ಕೂಡಿಸಿ, ಬಂದ ಉತ್ತರಕ್ಕೆ 3ರಿಂದ ಭಾಗಿಸಿ, ಅಲ್ಲಿ ಬಂದ ಉತ್ತರಕ್ಕೆ 15 ಕೂಡಿಸಿ, ಬಂದ ಉತ್ತರಕ್ಕೆ 2ರಿಂದ ಭಾಗಿಸಿ ಆ ಉತ್ತರಕ್ಕೆ ಮೊದಲು ಹಚ್ಚಿಕೊಂಡ ಸಂಖ್ಯೆಗಳನ್ನು ಕಳೆಯಿರಿ. ಈಗ ಉತ್ತರ ಎಲ್ಲವೂ 9 ಬಂದಿರುತ್ತದೆ. ಯಾವಾಗಲೂ 9 ಬಂದಿರುತ್ತದೆ.

ಉದಾ:

	5	7	8
	X 6	X 9	X 6
	30	42	48
	+9	+9	+9
	39	51	57
	÷ 3	÷ 3	÷ 3
	13	17	19
	+15	+15	+15
	28	32	34
	÷ 2	÷ 2	÷ 2
ಮೊದಲ ಸಂಖ್ಯೆ	14	16	17
ಕಳೆದಾಗ	−5	−7	−8
(ಸ್ಥಿರ ಸಂಖ್ಯೆ) 9	9	9	9

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳನ್ನು ಬಳಸಿ ಚೌಕಗಳಲ್ಲಿ ಕೊಟ್ಟಿರುವ ಪದಗಳಿಗೆ ಸಮಾನ ಅರ್ಥದ ಪದಗಳನ್ನು ಬರೆಯಿರಿ

	ತ	ಳ	
1			ಭುಜ
2			ಒಂದು ಪ್ರಾಣಿ
3			ಅರಿತುಕೋ
4			ಸಹಿಸಿಕೋ
5			ಮಾಂಗಲ್ಯ

ಪದವಿನೋದ

ಈ ಪದಗಳನ್ನು ಎಡದಿಂದಲೂ ಓದು, ಬಲದಿಂದಲೂ ಓದು ಎರಡೂ ಬೇರೆ ಬೇರೆ ಪದಗಳಾಗಿವೆ.

1 → ಕಲಿಮಾನವ ←

2 → ದರ ಇಳಿಸು ←

3 → ದರ ಏರಿಕೆ ←

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಪದಗಳಿಗೂ ಅರ್ಥಗಳಿಗೂ ಹೊಂದಿಸಿ

ಪದ- ಅರ್ಥಗಳು

1	ಕರಿ	A	ಅರಳು
2	ಮುರಿ	B	ಧಾನ್ಯಗಳ ಸಣ್ಣ ನುಚ್ಚು
3	ಹುರಿ	C	ಕೇವಲ
4	ಸಿರಿ	D	ವಿಷ್ಣು
5	ದರಿ	E	ಬೆಟ್ಟ
6	ನರಿ	F	ಹಾನಿ, ಕೆಡಕು
7	ಗರಿ	G	ಸಲ
8	ಜರಿ	H	ಯೋಗ್ಯ
9	ತರಿ	I	ಪಥ
10	ಪರಿ	J	ಭಿಕ್ಷೆ ಬೇಡು
11	ಬರಿ	K	ಸ್ತ್ರೀ
12	ಹರಿ	L	ರೀತಿ
13	ದಾರಿ	M	ಭಯ
14	ನಾರಿ	N	ಜಂಬುಕ
15	ಬಾರಿ	O	ರೆಕ್ಕೆ
16	ಮಾರಿ	P	ಹೊಸೆದು ಮಾಡಿದ ಹಗ್ಗ
17	ಸರಿ	Q	ಆಳವಾದ ಕಂದಕ
18	ಗಿರಿ	R	ತುಂಡುಮಾಡು
19	ಚಿರಿ	S	ಆನೆ
20	ಬಿರಿ	T	ಸಂಪತ್ತು

ಡಜ್ಜ ಚಕ್ಕುಕೇಲ್ರಿಪ್ಪು ಕಥೆಯ — ದುಶ್ಯಂತ- ಶಕುಂತಲೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಕಣ್ವ ಮಹರ್ಷಿಗೆ ಕಾಡಿನಲ್ಲಿ ಶಕುಂತಪಕ್ಷಿಗಳ ಮಧ್ಯೆ ಇದ್ದ ಹೆಣ್ಣು ಮಗುವೊಂದು ಸಿಕ್ಕಿತು. ಆ ಮಗುವನ್ನು ಕಣ್ವರು ತಮ್ಮ ಆಶ್ರಮಕ್ಕೆ ತಂದು ಬೆಳೆಸಿದರು. ಶಕುಂತ ಪಕ್ಷಿಗಳ ಮಧ್ಯೆ ದೊರಕಿದ ಕಾರಣ ಮಗುವಿಗೆ ಶಕುಂತಲೆ ಎಂದು ಹೆಸರಿಟ್ಟರು

ಒಮ್ಮೆ ರಾಜ ದುಷ್ಯಂತನು ಬೇಟೆಗಾಗಿ ಕಾಡಿಗೆ ಬಂದಾಗ ಶಕುಂತಲೆಯನ್ನು ಕಂಡು ಪ್ರೀತಿಸಿದ. ಅಲ್ಲೇ ಗಾಂಧರ್ವ ವಿವಾಹವಾದ. ತನ್ನ ಉಂಗುರವನ್ನು ಅವಳಿಗೆ ಕೊಟ್ಟು ಅರಮನೆಗೆ ಕರೆದೊಯ್ಯುವ ಭರವಸೆ ನೀಡಿದ

ಶಕುಂತಲೆ ಸದಾ ದುಷ್ಯಂತನ ನೆನಪಿನಲ್ಲಿ ಮಗ್ನಳಾಗಿರುತ್ತಿದ್ದಳು. ಒಮ್ಮೆ ದೂರ್ವಾಸರು ಬಂದರು. ಅದನ್ನು ಅವಳು ಗಮನಿಸಲಿಲ್ಲ. 'ನಿನ್ನ ಮನಸ್ಸಿನಲ್ಲಿರುವವನು ನಿನ್ನನ್ನು ಮರೆಯುವಂತಾಗಲಿ' ಎಂದು ಅವರು ಶಪಿಸಿದರು. ಶಕುಂತಲೆ ಕ್ಷಮೆಯಾಚಿಸಿದಳು

ಗರ್ಭಿಣಿಯಾದ ಶಕುಂತಲೆಯನ್ನು ಕಣ್ವ ಮುನಿಗಳು ದುಶ್ಯಂತನಿದ್ದಲ್ಲಿಗೆ ಕಳುಹಿಸಿದರು. ದೋಣಿಯಲ್ಲಿ ಸಾಗುವಾಗ ಶಕುಂತಲೆಯ ಉಂಗುರ ನೀರಿಗೆ ಬಿತ್ತು. ಅದನ್ನು ಮೀನೊಂದು ನುಂಗಿತು



ಶಕುಂತಲೆ ದುಷ್ಯಂತನ ಆಸ್ಥಾನಕ್ಕೆ ಬಂದಾಗ, ಅವಳನ್ನು ಆತ ಗುರುತಿಸಲಿಲ್ಲ. ಆಕೆಗೆ ಮುನಿಯ ಶಾಪದ ನೆನಪಾಯಿತು. ಆದರೆ ಆಕೆಯ ಕೈಯಲ್ಲಿ ಅವನು ಕೊಟ್ಟ ಉಂಗುರ ಇರಲಿಲ್ಲ. ಹಾಗಾಗಿ ದುಷ್ಯಂತ ಅವಳನ್ನು ಗುರುತಿಸಲಿಲ್ಲ



ಶಕುಂತಲೆ ಕಣ್ವರ ಆಶ್ರಮದಲ್ಲಿ ಮಗ ಭರತನಿಗೆ ಜನ್ಮ ನೀಡಿದಳು. ಹುಲಿ ಸಿಂಹಗಳ ಜೊತೆ ಆಡುತ್ತಿದ್ದ. ಒಮ್ಮೆ ಬೆಸ್ತರಿಗೆ ಸಿಕ್ಕಿದ ಮೀನಿನ ಹೊಟ್ಟೆಯೊಳಗೆ ದುಶ್ಯಂತನ ಉಂಗುರ ಸಿಕ್ಕಿತು. ಅದನ್ನು ರಾಜನಿಗೆ ಒಪ್ಪಿಸಿದರು. ದುಶ್ಯಂತ- ಶಕುಂತಲೆ ಕುಟುಂಬ ಒಂದಾಯಿತು

ಬಾಲ ವಿಜ್ಞಾನ ಬಣ್ಣದ ಬೆಡಗು

ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು ಎಂಬ ಹಾಡು ಎಲ್ಲರಿಗೂ ಗೊತ್ತು. ಇದನ್ನು ಮೊದಲು ಕಂಡು ಹಿಡಿದವನು ಸರ್ ಐಸಾಕ್ ನ್ಯೂಟನ್. ಕಾಮನಬಿಲ್ಲನ್ನು ಅನೇಕಸಲ ವೀಕ್ಷಿಸಿ ಯೋಚಿಸಿದಾಗ ಆತ ಈ ಅಂಶವನ್ನು ಪತ್ತೆ ಮಾಡಿದ. ಅನಂತರ ನ್ಯೂಟನ್ ಸೂರ್ಯನ ಕಿರಣವನ್ನು ಪಟ್ಟಕದ ಮೂಲಕ ಹಾಯಿಸಿದಾಗ ಅದು ವಿಭಜನೆಯಾಗಿ ನೇರಳೆ, ಊದಾ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಬಣ್ಣದ ಕಿರಣಗಳಾಗಿ ವಿಭಜನೆ ಆದದ್ದನ್ನು ವೀಕ್ಷಿಸಿದ. ಕಾಮನಬಿಲ್ಲಿನ ಏಳು ಬಣ್ಣಗಳನ್ನು ಸುಲಭವಾಗಿ ಹೀಗೆ ನೆನಪಿಡಬಹುದು.

ನೇರವಾಗಿ ಊಟಕ್ಕೆ ನೀನು ಹಸಿರು ಹಣ್ಣು ಕಿತ್ತರೆ ಕೆಂಡ ಕಾರಣೆ – ಪ್ರತಿ ಪದದ ಮೊದಲ ಅಕ್ಷರ ಬಣ್ಣ ಹೇಳುತ್ತವೆ.

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ- 20 ಮ್ಯಾಚ್: 1-L 2-G 3-T 4-O 5-I 6-D 7-G 8-K 9-F 10-M 11-P 12-R 13-A 14-S 15-N 16-J 17-H 18-E 19-C 20-B

ಜಾಣಪದ ಆಟ : 1- ಕಾಡು 2 – ಕೇಡು 3 – ಕಡಿ 4-ಕಿಡಿ 5- ಕಡು

ಆಲೋಚನೆಗೆ ಆಹಾರ : 1 NO 2 ACDT

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಶ್ರಾವಣಿ, ಗಾಯತ್ರಿನಗರ ಬೆಂಗಳೂರು

ಪ್ರಣವ್ ಕೂಲಿ, ಹಾವೇರಿ

ನೇಸರ ಬಿ.ಎಸ್, ಹಾಸನ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಬಿ.ಜಿ. ಜಯಮ್ಮರವರು
ಲೇಟ್, ಬಿ.ಜಿ. ಗಂಗಯ್ಯನವರ ಧರ್ಮಪತ್ನಿ
ಇವರು ದಿ: 21.03.2022ರ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ: 31.03.2022ನೇ ಗುರುವಾರ ಬೆ. 11.30ಕ್ಕೆ ನಮ್ಮ ಸ್ವಗೃಹ, #21, 2ನೇ ಮೇನ್, 3ನೇ ಕ್ರಾಸ್, ಕೆಂಗೇರಿ ಉಪನಗರ, ಬೆಂಗಳೂರು. ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು
ಬಿ.ಜಿ.ರಾಜಶೇಖರ್ -9606261727

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಗೌರಮ್ಮ
W/o ಎನ್. ರಾಮಯ್ಯ (Ex Chairman)
ಹುಲಿಮಂಗಲ
ಇವರು ದಿನಾಂಕ: 26.03.2022 ರಂದು ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಅಂತ್ಯಕ್ರಿಯೆಯನ್ನು ದಿನಾಂಕ: 27.03.2022 ರಂದು ಮಧ್ಯಾಹ್ನ 1 ಘಂಟೆಗೆ ಹುಲಿಮಂಗಲ, ಬೆಂಗಳೂರು ಇಲ್ಲಿ ನೆರವೇರಿಸಲಾಗುತ್ತದೆ.
ದುಃಖತಪ್ತರು: ಕುಟುಂಬಸ್ಥರು.

10ನೇ ವರ್ಷದ ಚಿರಸ್ಮರಣೆ

ಆರ್. ಪಾರ್ವತಮ್ಮನವರು
ನಿಧನ : 27-03-2012
ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೆಯವಾಗಿ ಉಳಿದಿದೆ
ಇಂತಿ : ಎನ್. ಲೋಕೇಶ್ ಮತ್ತು ಮಕ್ಕಳು ಸೊಸೆಯಂದಿರು ಹಾಗೂ ಮೊಮ್ಮಕ್ಕಳು
ಸುಂಕದಕಟ್ಟೆ, ಬೆಂಗಳೂರು–560091

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre

ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. (ಮನೆಯಿಂದಲೇ ಕೆಲಸ) ನಿಗದಿತ ಸಂಬಳ ರೂ. 10,000/- ಉತ್ತಮ ಇನ್ಸೆಂಟಿವ್ಸ್ ಸಂಪರ್ಕಿಸಿ : 9087880999.

Cook

ಸಸ್ಯಾಹಾರಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಸೂಕ್ತ ಸಂಬಳ ಜೊತೆಗೆ ಊಟ ಮತ್ತು ವಸತಿ ನೀಡಲಾಗುವುದು. ಸಂಪರ್ಕಿಸಿ: ಫೋನ್: 6360079117

ಸಮೃದ್ಧಿ ಗ್ರಾಂಡ್ ಹೋಟೆಲ್ ಗೆ ಜ್ಯೂಸ್ ಮತ್ತು ಚಾಟ್ಸ್ ತಯಾರಿಸುವವರು ಬೇಕಾಗಿದ್ದಾರೆ Kamakshipalya ಬೆಂಗಳೂರು. Contact: 9342552428

ತುಮಕೂರಿನ ಮಹಿಳಾ ಹಾಸ್ಟೆಲ್ ಗೆ ಅಡುಗೆ ಮಾಡಲು ಗಂಡ ಹೆಂಡತಿ (ಲಿಂಗಾಯತ) ಬೇಕಾಗಿದ್ದಾರೆ . ಸಂಪರ್ಕಿಸಿ : 9900545854 .

General

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,25 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ, ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary + OT. 17,800-68,000/-. 8884666597, 8884666594.

ಕಚರಕನಹಳ್ಳಿಯಲ್ಲಿರುವ ನಮ್ಮ ಮನುಷ್ಯಾಕೃತಿ ತಯಾರಿಕಾ ಘಟಕಕ್ಕೆ ಫೈಬರ್‌ಗ್ಲಾಸ್ ಸ್ಪ್ರೇ ಪೇಂಟರ್ ಅಗತ್ಯವಿದೆ, ತುಂಡು ಕೆಲಸದ ಆಧಾರದ ಮೇಲೆ ವಾರಕ್ಕೊಮ್ಮೆ ಅಥವಾ ಮಾಸಿಕ ಪಾವತಿ ಮಾಡಲಾಗುತ್ತದೆ. ದಯವಿಟ್ಟು ನಮಗೆ 8971322466 ಗೆ ಕರೆ ಮಾಡಿ

Marketing & Sales

KRISHNA FOOD PRODUCTS
Experienced FMCG SALES OFFICER
Required to Manage sales in super markets and Hyper Markets in Karnataka.
Salary : 25000+ Incentive
99402 25924
98940 70435

V&SML ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ರಾಜ್ಯಾದ್ಯಂತ ಬೇಕಾಗಿದ್ದಾರೆ ವಯೋಮಿತಿ 18 ರಿಂದ 30. ಸಂಬಳ 15,000/ ರಿಂದ 30,000/.ಸಂಪರ್ಕಿಸಿ: 7338368136. vedhidol@gmail.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಬೆಂಗಳೂರು ಮನೆ ಕೆಲಸ ಮಾಡುವ ಮಹಿಳೆ ಮನೆಯಲ್ಲಿ ಉಳಿದುಕೊಂಡು, ಮಕ್ಕಳು ಇಲ್ಲದವರು ಊಟವಸತಿ, ಉತ್ತಮ ಸಂಬಳ ಸ್ಥಳ: ಜಿಗಣಿ: 9901931555

ಸಮಸ್ಯೆ ಬಗೆಹರಿಸಲು, ಸಮಸ್ಯೆಗಳ ವಿಚಾರದಲ್ಲಿ ಭೂತ ಭವಿಷ್ಯ, ವರ್ತಮಾನ ಕಾಲದ ಭವಿಷ್ಯ ಹೇಳಲು ದೈವ ಶಕ್ತಿಯುಳ್ಳವರಾದ ಗಾಯತ್ರಿ ವಶಕಾರಕರು ಬೇಕಾಗಿದ್ದಾರೆ. ಮಂತ್ರವಾದಿಗಳು ಹಾಗೂ ವಾಮಾಚಾರ ವ್ಯಕ್ತಿಗಳು ಬೇಡ. ಸಂಪರ್ಕಿಸಿ: 8073446346

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

J P Nagar

2 BHK flat in JP Nagar 7th Phase, 60 Lakhs , Contact: 9449788764

Residential/ Commercial

Out-Station

FOR SALE
Prime Residential (Approx.2625.75 sqft) cum Commercial (Approx.756 sqft) property is for sale measuring total 3381.75 sqft and built-up area of 2400 sqft with Semi furnished 4BHK Ample parking facility building suitated at 8th cross,Vinoba Road Subhash Nagar, **Mandya**-571401 Near by to DC office, RTO office and 100 feet Road
Contact: 9980768180 / 8792121292

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Sites

Tumkur

ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ (ರಿ), ಮಹಾಲಕ್ಷ್ಮಿಪುರಂ, ಬೆಂಗಳೂರು86. ಫೋನ್ 08023490073. ತುಮಕೂರು ಕ್ಯಾತ್ಸಂದ್ರ ಜಂಕ್ಷನ್ ನಿಂದ ಗುಬ್ಬಿ ಗೇಟ್ ರಸ್ತೆ, 31 ವಾರ್ಡಿನ 30x50 ಅಳತೆ ಉಳ್ಳ ಎರಡು ನಿವೇಶನಗಳು ಮಾರಾಟಕ್ಕೆ ಇದೆ. ಆಸಕ್ತಿ ಉಳ್ಳವರು ಈ ಕೆಳಗಿನ ಮೊಬೈಲ್ ನಂಬರಿಗೆ ಸಂಪರ್ಕಿಸಿ. ಮೊ: 9900959516, 9448153982.

ರೆಂಟಲ್ ಪ್ರಾಪರ್ಟೀಸ್

Accommodation Available

Commercial

SPACE FOR RENT- 20x100sqft (15 HP Power) Industrial/ Commercial. Address: P.B.Road, Avaragere, Davanagere. Contact:- 7204577823

PROPERTY CORNER

LAND DEVELOPERS ARE REQUIRED FOR A 100ACRE APPROVED LAND IN HASSAN, KARNATAKA, AND ALSO NEED TO DO DRAINAGE, CLUB HOUSE, WATER AND ROAD ACCESS FACILITIES ALSO REQUIRE CONSTRUCTION MATERIAL SUPPLIERS INTERESTED CAN CONTACT THE BELOW NUMBERS:
+91 99408 95915/+91 99805 17089
AN ISO 9001: 2015 LEADING PROPERTY DEVELOPERS & CONSTRUCTION COMPANY BANGALORE.

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★||ಶ್ರೀದುರ್ಗಾಪರಮೇಶ್ವರಿ||★ ಆರಾಧನೆಯಿಂದ ಗಂಡಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಪ್ರೀತಿಯಲ್ಲಿಮೋಸ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಶ್ರೀರಾಘವೇಂದ್ರಗುರೂಜಿ. 8050061378

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

★★ಅಂಭಾಭವಾನಿ★★ **ಜ್ಯೋತಿಷ್ಯಾಲಯ ಕೊಳ್ಳೆಗಾಲದ** ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಗುಪ್ತ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು,ಚಿತ್ರದುರ್ಗ 9008867041

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊದಿಗೆ 09.05.2022, 22.05.2022 ರಿಂದ 11ದಿನಗಳು ಕಾಶಿ,ನೇಪಾಳ. 01.05.2022, 21.05.2022 ರಿಂದ 12ದಿನಗಳು ಶಿಮ್ಲಾ, ಮನಾಲಿ, ವೈಷ್ಣೊದೇವಿ. 26.05.2022, 11.06.2022 ರಿಂದ 15ದಿನಗಳು ಚಾರ್‌ಧಾಮ್ ಯಾತ್ರೆ. ಗ್ರೂಪ್ ಪ್ರವಾಸಗಳು ಹಾಗು ಫ್ಯಾಮಿಲಿ ಪ್ರವಾಸಗಳಿಗೆ ಸಂಪರ್ಕಿಸಿ: 'ಆನಂದ್ ವಿಹಾರಿ' ಬೆಂಗಳೂರು-23. 8088887677, 080-23385837

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಾಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಏಪ್ರಿಲ್ 1ರಿಂದ ಶೇ 4ರವರೆಗೆ ಬೆಲೆ ಏರಿಕೆ: ಟೊಯೋಟ

ನವದೆಹಲಿ (ಪಿಟಿಐ): ಟೊಯೋಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ತನ್ನೆಲ್ಲಾ ಮಾದರಿಗಳ ಬೆಲೆಯನ್ನು ಶೇ 4ರವರೆಗೆ ಹೆಚ್ಚಿಸುವುದಾಗಿ ಶನಿವಾರ ತಿಳಿಸಿದೆ.

ತಯಾರಿಕಾ ವೆಚ್ಚದಲ್ಲಿ ಏರಿಕೆ ಆಗಿರುವುದರಿಂದ ವಾಹನಗಳ ಬೆಲೆ ಹೆಚ್ಚಳದ ನಿರ್ಧಾರಕ್ಕೆ ಬರಲಾಗಿದೆ. ಗ್ರಾಹಕರ ಮೇಲೆ ಹೆಚ್ಚುತ್ತಿರುವ ವೆಚ್ಚವನ್ನು ಕಡಿಮೆ ಮಾಡಲು ಎಲ್ಲಾ ರೀತಿಯ ಪ್ರಯತ್ನಗಳನ್ನೂ ನಡೆಸಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬಿಎಂಡಬ್ಲ್ಯು, ಔಡಿ ಮತ್ತು ಮರ್ಸಿಡಿಸ್ ಬೆಂಜ್ ಕಂಪನಿಗಳು ಸಹ ಏಪ್ರಿಲ್ 1 ರಿಂದ ಬೆಲೆ ಏರಿಕೆ ಮಾಡುವುದಾಗಿ ಈಗಾಗಲೇ ಘೋಷಿಸಿವೆ.

‘ಜೂನ್‌ನಿಂದ ಆಕಾಸಾ ಏರ್ ಕಾರ್ಯಾಚರಣೆ’

ಹೈದರಾಬಾದ್ (ಪಿಟಿಐ): ಆಕಾಸಾ ಏರ್‌ನ ಮೊದಲ ವಿಮಾನವು ಜೂನ್‌ನಿಂದ ಕಾರ್ಯಾಚರಣೆ ಆರಂಭಿಸುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದು ಕಂಪನಿಯ ಸಿಇಒ ವಿನಯ್ ದುಬೆ ತಿಳಿಸಿದ್ದಾರೆ.

5 ವರ್ಷಗಳಲ್ಲಿ ಒಟ್ಟಾರೆ 72 ವಿಮಾನಗಳನ್ನು ಹೊಂದುವ ಯೋಜನೆ ರೂಪಿಸಲಾಗಿದೆ ಎಂದೂ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹425

ಸಂಕ್ಷಿಪ್ತ ಸುದ್ದಿ

ನಾಳೆಯಿಂದ ಜೈಶಂಕರ್ ಶ್ರೀಲಂಕಾ ಪ್ರವಾಸ

ಕೊಲಂಬೊ(ಪಿಟಿಐ): ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ದ್ವಿಪಕ್ಷೀಯ ಮಾತುಕತೆಗಾಗಿ ಇದೇ 28ರಿಂದ 30ರವರೆಗೆ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದ್ದಾರೆ.

ಇದೇ ವೇಳೆ ಅವರು ಬಿಮ್‌ಸ್ಟೆಕ್ (ಬಿಐಎಂಎಸ್‌ಟಿಇಸಿ) ಶೃಂಗಸಭೆಯಲ್ಲಿಯೂ ಪಾಲ್ಗೊಳ್ಳಲಿದ್ದಾರೆ ಎಂದು ಕೊಲಂಬೊದಲ್ಲಿರುವ ಭಾರತದ ಹೈ ಕಮಿಷನ್ ಕಚೇರಿ ತಿಳಿಸಿದೆ.

ಲಂಕಾಕ್ಕೆ ಭಾರತ ಆರ್ಥಿಕ ನೆರವು ಘೋಷಿಸಿದ ಬಳಿಕ ವಿದೇಶಾಂಗ ಸಚಿವರು ಅಲ್ಲಿಗೆ ಕೈಗೊಳ್ಳುತ್ತಿರುವ ಮೊದಲ ಪ್ರವಾಸ ಇದಾಗಿದೆ.

ನೇಪಾಳ ಪ್ರಧಾನಿ ಏಪ್ರಿಲ್ 1ರಿಂದ ಭಾರತ ಪ್ರವಾಸ: ನೇಪಾಳ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ಏಪ್ರಿಲ್ 1ರಿಂದ 3 ದಿನಗಳ ಭಾರತದ ಪ್ರವಾಸ ಕೈಗೊಳ್ಳಲಿದ್ದಾರೆ.

ದ್ವಿಪಕ್ಷೀಯ ಸಂಬಂಧ ವೃದ್ಧಿಗಾಗಿ ಭಾರತದ ಪ್ರವಾಸ ಕೈಗೊಳ್ಳಲಿರುವ ದೇವುಬಾ ಅವರು, ಏಪ್ರಿಲ್ 2ರಂದು ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಬಜೆಟ್ ನಂತರ ಚುನಾವಣೆಗೆ ಹೋಗಿ’

ಇಸ್ಲಾಮಾಬಾದ್ (ಪಿಟಿಐ): ಈ ವರ್ಷದ ಬಜೆಟ್ ಮಂಡಿಸಿದ ಬಳಿಕ ಚುನಾವಣೆಗೆ ಹೋಗುವಂತೆ ಪಾಕ್‌ನ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಅಲ್ಲಿನ ಒಳಾಡಳಿತ ಸಚಿವ ಶೇಖ್ ರಷೀದ್ ಸಲಹೆ ನಿಡಿದ್ದಾರೆ.

ಇದು ನನ್ನ ವೈಯಕ್ತಿಕ ಅಭಿಪ್ರಾಯವೇ ಹೊರತು ಆಡಳಿತಾರೂಢ ಪಾಕಿಸ್ತಾನ್ ತಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷದ ಅಭಿಪ್ರಾಯವಲ್ಲ ಎಂದೂ ಅವರು ಹೇಳಿದ್ದಾರೆ.

ಪ್ರಧಾನಿ ವಿರುದ್ಧ ಪ್ರತಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಲು ನೋಟಿಸ್ ನೀಡಿದ ನಂತರದಿಂದ ದೇಶದಲ್ಲಿ ಪ್ರಧಾನಿ ಅವರ ಜನಪ್ರಿಯತೆ ಹೆಚ್ಚಾಗಿದೆ ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿ ಪ್ರತಿ ವರ್ಷ ಜೂನ್ 30ರಂದು ಬಜೆಟ್ ಮಂಡಿಸಲಾಗುತ್ತದೆ.

ಪ್ರಧಾನಿ ವಿರುದ್ಧ ಪ್ರತಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಲು ನೋಟಿಸ್ ನೀಡಿದ ನಂತರದಿಂದ ದೇಶದಲ್ಲಿ ಪ್ರಧಾನಿ ಅವರ ಜನಪ್ರಿಯತೆ ಹೆಚ್ಚಾಗಿದೆ ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿ ಪ್ರತಿ ವರ್ಷ ಜೂನ್ 30ರಂದು ಬಜೆಟ್ ಮಂಡಿಸಲಾಗುತ್ತದೆ.

ಯೆಮೆನ್‌ನಲ್ಲಿ ಸೌದಿ ವಾಯುದಾಳಿ: 7 ಮಂದಿ ಬಲಿ

ಸನಾ(ಎಪಿ): ಸೌದಿ ಅರೇಬಿಯಾ ನೇತೃತ್ವದ ಮಿತ್ರ ಪಡೆಗಳು ಯೆಮೆನ್ ರಾಜಧಾನಿ ಸನಾ ಹಾಗೂ ಕೆಂಪು ಸಮುದ್ರ ದಂಡೆಯ ಹೊದಿಡಾ ನಗರದ ಮೇಲೆ ಶನಿವಾರ ವಾಯುದಾಳಿ ನಡೆಸಿದ್ದು, ಕನಿಷ್ಠ 7 ಮಂದಿ ಬಲಿಯಾಗಿದ್ದಾರೆ. ಇರಾನ್ ಬೆಂಬಲಿತ ಹೂತಿ ಬಂಡುಕೋರರನ್ನು ಗುರಿಯಾಗಿಸಿ ಈ ದಾಳಿ ನಡೆದಿದೆ. ಸೌದಿಯ ಜೆಡ್ಡಾ ನಗರದಲ್ಲಿ ತೈಲ ಸಂಗ್ರಹಾಗಾರವೊಂದರ ಮೇಲೆ ಹೂತಿ ಬಂಡುಕೋರರು ದಾಳಿ ನಡೆಸಿದ ಮಾರನೇ ದಿನವೇ ಈ ಪ್ರತೀಕಾರದ ದಾಳಿ ನಡೆದಿದೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1495 (1495)
ಸೂರ್ಯಕಾಂತಿ (ರಿಫೈನ್ಡ್)	₹1750 (1750)
ಪಾಮೋಲಿನ್	₹1468 (1470)

ಮುಂಬೈ ಧಾರಣೆ

ಶೇಂಗಾ

26-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1450 (1452)
ಪಾಮ್ ವಾರದ ಡೆಲಿವರಿ	1468 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,850 (51,600)
ಬೆಳ್ಳಿ ಕೆ.ಜಿ 68,400 (68,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಸದೀಯ ಸ್ಥಾಯಿ ಸಮಿತಿ ವರದಿ

ಷೇರು ವಿಕ್ರಯ: ಅವಾಸ್ತವಿಕ ಗುರಿ ನಿಗದಿ ಸರಿಯಲ್ಲ

● ಅನ್ನಪೂರ್ಣಾ ಸಿಂಗ್

ಮುಖ್ಯಾಂಶಗಳು
- ಷೇರು ವಿಕ್ರಯದ ಪರಿಷ್ಕೃತ ಗುರಿಯೂ ಕಷ್ಟ
- ಮುಂದಿನ ಹಣಕಾಸು ವರ್ಷಕ್ಕೆ ಎಲ್‌ಐಸಿ ಐಪಿಒ

ನವದೆಹಲಿ: ಬಜೆಟ್ ಕೊರತೆಗಳನ್ನು ಪರಿಹರಿಸಲು ಷೇರುವಿಕ್ರಯದ ಅವಾಸ್ತವಿಕ ಗುರಿಗಳನ್ನು ನಿಗದಿಪಡಿಸುವುದು ಸರ್ಕಾರದ ಹಿತದೃಷ್ಟಿಯಿಂದ ಸರಿಯಲ್ಲ. ಸಾರ್ವಜನಿಕ ವಲಯದ ಉದ್ಯಮಗಳ ಷೇರುಗಳ ಮೌಲ್ಯ ಕುಸಿತಕ್ಕೆ ಇದು ಕಾರಣವಾಗಬಹುದು ಎಂದು ಸಂಸದೀಯ ಸಮಿತಿಯು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಷೇರು ವಿಕ್ರಯದ ಗುರಿ ತಲುಪುವುದು ಬಜೆಟ್‌ಗೆ ಮುಖ್ಯವಾಗಿದೆ. ಆದರೆ, ಅದರ ಅಂದಾಜನ್ನು ತಗ್ಗಿಸುವುದರಿಂದ ವಿತ್ತೀಯ ಸಮತೋಲನದಲ್ಲಿ ವ್ಯತ್ಯಾಸಕ್ಕೆ ಕಾರಣ ಆಗಬಹುದು ಎಂದು ಸ್ಥಾಯಿ ಸಮಿತಿಯು ಲೋಕಸಭೆಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಮೂಲಕ ₹ 1.75 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿತ್ತು. ಆ ಬಳಿಕ ಅದನ್ನು ₹ 78 ಸಾವಿರ ಕೋಟಿಗಳಿಗೆ ಪರಿಷ್ಕರಣೆ ಮಾಡಲಾಗಿದೆ. ಆದಾಗ್ಯೂ ಈವರೆಗೆ ಸಂಗ್ರಹ ಆಗಿರುವುದು ₹ 12,434 ಕೋಟಿ ಮಾತ್ರ.

ಕೇಂದ್ರ ಸರ್ಕಾರವು ಷೇರುವಿಕ್ರಯದ ಗುರಿ ತಲುಪಲು ಎಲ್‌ಐಸಿ ಐಪಿಒ ಮೇಲೆ ಹೆಚ್ಚು ಅವಲಂಬಿತವಾಗಿದೆ. ಆದರೆ, ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಷೇರುಮಾರುಕಟ್ಟೆಯಲ್ಲಿ ಅಸ್ಥಿರತೆ ಮೂಡಿದ್ದು, ಎಲ್‌ಐಸಿ ಐಪಿಒ ಅನ್ನು ಅನಿವಾರ್ಯವಾಗಿ ಮುಂದಿನ ಹಣಕಾಸು ವರ್ಷಕ್ಕೆ ಮುಂದೂಡುವಂತಾಗಿದೆ.

ಸಾರ್ವಜನಿಕ ಆಸ್ತಿಯನ್ನು ಯಾವ ರೀತಿ ನಿರ್ವಹಣೆ ಮಾಡಲಾಗಿದೆ ಎನ್ನುವ ಕುರಿತು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ವಾರ್ಷಿಕ ವರದಿ ಬಿಡುಗಡೆ ಮಾಡುವ ಅಗತ್ಯವನ್ನೂ ಸಮಿತಿಯು ಒತ್ತಿ ಹೇಳಿದೆ. ಮುಖ್ಯವಾಗಿ ಸಾರ್ವಜನಿಕ ಆಸ್ತಿಯ ಮೌಲ್ಯ ಹೆಚ್ಚಾಗಿದೆಯೇ ಅಥವಾ ಕಡಿಮೆ ಆಗಿದೆಯೇ ಎನ್ನುವ ಮಾಹಿತಿಯು ವರದಿಯಲ್ಲಿ ಇರಬೇಕು ಎಂದು ಸಮಿತಿಯು ವರದಿಯಲ್ಲಿ ಹೇಳಿದೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಶನಿವಾರವೂ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಐದು ದಿನಗಳಲ್ಲಿ ನಾಲ್ಕನೇ ಬಾರಿಗೆ ದರ ಹೆಚ್ಚಳ ಮಾಡಿದಂತಾಗಿದ್ದು, ಇದರಿಂದ ಪ್ರತಿ ಲೀಟರಿಗೆ ₹ 3.20ರಷ್ಟು ಹೆಚ್ಚಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ದರ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ಶನಿವಾರ ಪೆಟ್ರೋಲ್ ದರ ಲೀಟರಿಗೆ ₹ 98.61 ಮತ್ತು ಡೀಸೆಲ್ ದರ ಲೀಟರಿಗೆ ₹ 89.87ಕ್ಕೆ ತಲುಪಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 103.91 ಮತ್ತು ಡೀಸೆಲ್ ದರ ಲೀಟರಿಗೆ ₹ 88.12ಕ್ಕೆ ಏರಿಕೆ ಆಗಿದೆ.

ಐದು ರಾಜ್ಯಗಳ ಚುನಾವಣೆಯ ಕಾರಣಕ್ಕಾಗಿ 2021ರ ನವೆಂಬರ್ 4ರಿಂದ 2022ರ ಮಾರ್ಚ್ 21ರವರೆಗೆ ಬೆಲೆ ಪರಿಷ್ಕರಣೆಯನ್ನು ತಡೆಹಿಡಿಯಲಾಗಿತ್ತು. ಈ ಅವಧಿಯಲ್ಲಿ ಕಚ್ಚಾತೈಲ ದರವು ಬ್ಯಾರಲ್‌ಗೆ 82 ಡಾಲರ್‌ಗಳಿಂದ 117 ಡಾಲರ್‌ಗಳಿಗೆ ಏರಿಕೆ ಆಗಿದೆ.

ಕೋಟಕ್ ಇನ್‌ಸ್ಟಿಟ್ಯೂಷನಲ್ ಈಕ್ವಿಟೀಸ್ ಕಂಪನಿಯ ಪ್ರಕಾರ, ಕಚ್ಚಾತೈಲ ದರವು ಬ್ಯಾರಲ್‌ಗೆ 100–120 ಡಾಲರ್‌ಗಳ ಮಟ್ಟದಲ್ಲಿ ಇರುವುದರಿಂದ ತೈಲ ಕಂಪನಿಗಳು ಪ್ರತಿ ಲೀಟರ್ ಪೆಟ್ರೋಲ್ ದರವನ್ನು ₹ 10.6 ರಿಂದ ₹ 22.3ರವರೆಗೆ ಹಾಗೂ ಡೀಸೆಲ್ ದರವನ್ನು ₹ 13.1 ರಿಂದ ₹ 24.9ರವರೆಗೆ ಹೆಚ್ಚಿಸಬೇಕಿದೆ.

ಕಚ್ಚಾ ತೈಲದ ಸರಾಸರಿ ದರವು ಬ್ಯಾರಲ್‌ಗೆ 100 ಡಾಲರ್‌ಗಳ ಮಟ್ಟದಲ್ಲಿ ಇದ್ದರೆ ಇಂಧನದ ರಿಟೇಲ್ ಮಾರಾಟ ದರವು ಪ್ರತಿ ಲೀಟರಿಗೆ ₹ 9 ರಿಂದ ₹ 12ರವರೆಗೆ ಹೆಚ್ಚಿಸಬೇಕಾಗಲಿದೆ. ಒಂದೊಮ್ಮೆ ಕಚ್ಚಾತೈಲ ದರವು ಬ್ಯಾರಲ್‌ಗೆ 110–120 ಡಾಲರ್‌ಗಳ ಮಟ್ಟದಲ್ಲಿ ಏರಿಕೆ ಕಂಡರೆ ಆಗ ಪ್ರತಿ ಲೀಟರ್ ಇಂಧನ ದರವನ್ನು ₹ 15 ರಿಂದ ₹ 20ರವರೆಗೆ ಹೆಚ್ಚಿಸಬೇಕಾಗುತ್ತದೆ ಎಂದು ಕ್ರಿಸಿಲ್ ರಿಸರ್ಚ್ ಹೇಳಿದೆ.

ದೇಶದ ಒಟ್ಟಾರೆ ಇಂಧನ ಬೇಡಿಕೆಯ ಶೇ 85ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ರಿಲಯನ್ಸ್ ಪವರ್, ರಿಲಯನ್ಸ್ ಇನ್ಫ್ರಾ ನಿರ್ದೇಶಕ ಸ್ಥಾನಕ್ಕೆ ಅನಿಲ್ ರಾಜೀನಾಮೆ

ನವದೆಹಲಿ (ಪಿಟಿಐ): ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಅವರು ರಿಲಯನ್ಸ್ ಪವರ್ ಮತ್ತು ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಕಂಪನಿಗಳ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಷೇರುಪೇಟೆಯಲ್ಲಿ ನೋಂದಾಯಿತ ಯಾವುದೇ ಕಂಪನಿಗಳೊಂದಿಗೆ ಗುರುತಿಸಿಕೊಳ್ಳದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಮಧ್ಯಂತರ ಆದೇಶ ಹೊರಡಿಸಿರುವುದರಿಂದ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಕಂಪನಿಯ ಹಣ ದುರ್ಬಳಕೆ ಮಾಡಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರಿಲಯನ್ಸ್ ಹೋಮ್ ಫೈನಾನ್ಸ್ (ಆರ್‌ಎಚ್‌ಎಫ್‌ಎಲ್), ಉದ್ಯಮಿ ಅನಿಲ್ ಅಂಬಾನಿ ಮತ್ತು ಇತರ ಮೂವರನ್ನು ಸಾಲಪತ್ರ ಮಾರುಕಟ್ಟೆಯಿಂದ ‘ಸೆಬಿ’ ನಿಷೇಧಿಸಿದೆ.

ಸೆಬಿಯಲ್ಲಿ ನೋಂದಾಯಿತ ಯಾವುದೇ ಮಧ್ಯವರ್ತಿಗಳ ಜೊತೆ ವ್ಯವಹರಿಸುವಂತಿಲ್ಲ. ಅಲ್ಲದೆ, ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಉದ್ದೇಶ ಇಟ್ಟುಕೊಂಡಿರುವ ಯಾವುದೇ ಸಾರ್ವಜನಿಕ ಕಂಪನಿ ಅಥವಾ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು/ಪ್ರವರ್ತಕರೊಂದಿಗೆ ತನ್ನ ಮುಂದಿನ ಆದೇಶದವರೆಗೆ ವ್ಯವಹರಿಸುವಂತೆ ಇಲ್ಲ ಎಂದು ತನ್ನ ಮಧ್ಯಂತರ ಆದೇಶದಲ್ಲಿ ‘ಸೆಬಿ’ ತಿಳಿಸಿದೆ.

ರಿಲಯನ್ಸ್ ಪವರ್ ಮತ್ತು ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಕಂಪನಿಗಳಿಗೆ ರಾಹುಲ್ ಸರಿನ್ ಅವರನ್ನು ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ಈ ನೇಮಕಕ್ಕೆ ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರ ಒಪ್ಪಿಗೆ ದೊರೆಯಬೇಕಿದೆ ಎಂದು ಎರಡೂ ಕಂಪನಿಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಕುಂದಾಪುರ	
ಹಳೆಚಾಲಿ	51500-52500
ಹೊಸಚಾಲಿ	43500-44500
ತಿಪಟೂರು ಕೊಬ್ಬರಿ	
ಕನಿಷ್ಠ	16000
ಗರಿಷ್ಠ	16700
ಮಾದರಿ	16500
ಒಟ್ಟು ಆವಕ(ಕ್ವಿಂಟಲ್)	860.43
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	266-760
ದ್ವಿತಳಿ	366-922

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15500	15550	221.85 ಸೆಂಟ್ಸ್
ಎಸಿ	---	7900	8200	
ಆರ್‌ಪಿ	---	8800	9050	ಲಂಡನ್
ಆರ್‌ಸಿ	---	3950	4025	2136 ಡಾಲರ್ಸ್

ಸೌದಿ ಅರೇಬಿಯಾ ಎಫ್‌1 ನಿರಾತಂಕ

ಜಿದ್ದಾ, ಸೌದಿ ಅರೇಬಿಯ (ಎಪಿ): ಯೆಮನ್‌ನ ಹೂತಿ ಬಂಡುಕೋರರು ಆಕ್ರಮಣ ನಡೆಸಿದರೂ ಇಲ್ಲಿ ಆಯೋಜಿಸಲುದ್ದೇಶಿಸಿರುವ ಎಫ್‌1 ರೇಸ್ ನಿರಾತಂಕವಾಗಿ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಎಫ್‌1 ಸರ್ಕೀಟ್‌ನ 11 ಕಿಲೊಮೀಟರ್ ದೂರದಲ್ಲಿ ಆಕ್ರಮಣ ನಡೆದಿತ್ತು. ಈ ಸಂದರ್ಭದಲ್ಲಿ ರೇಸ್‌ನ ಮೊದಲ ಅಭ್ಯಾಸ ನಡೆಯುತ್ತಿತ್ತು. ಕೆಲವು ತಾಸುಗಳ ನಂತರ 20ರಷ್ಟು ಚಾಲಕರು ಸಭೆ ಸೇರಿ ಮುಂದಿನ ಹಾದಿ ಬಗ್ಗೆ ಚರ್ಚೆ ನಡೆಸಿದ್ದರು.

ಹುಬ್ಬಳ್ಳಿಯಲ್ಲಿ ಕಪಿಲ್ ಮೇನಿಯಾ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ಶನಿವಾರ ನಡೆದ ಟೈಕಾನ್ ಸಮಾವೇಶದ ‘ಇವನಿಂಗ್ ವಿತ್ ಲೆಜೆಂಡ್’ ಕಾರ್ಯಕ್ರಮದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಕ್ರಿಕೆಟ್ ಪ್ರೇಮಿಗಳ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು.

ಕಪಿಲ್ ದೇವ್ ಬರುವುದು ಗೊತ್ತಿದ್ದರಿಂದ ಅಭಿಮಾನಿಗಳು ಪಾಲ್ಗೊಂಡಿದ್ದರು. ಅವರಿಂದ ಆಟೊಗ್ರಾಫ್ ಪಡೆಯಲು ಹಾಗೂ ಸೆಲ್ಫಿ ತೆಗೆಯಿಸಿಕೊಳ್ಳಲು ಮುಗಿಬಿದ್ದರು. ಅಭಿಮಾನಿಗಳನ್ನು ನಿಯಂತ್ರಿಸಲು ಸಂಘಟಕರು ಪರದಾಡಬೇಕಾಯಿತು.

ನೆನಪು: 1983ರ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ದಿನಗಳನ್ನು ಅವರು ನೆನಪಿಸಿಕೊಂಡರು.

ಕಾಯರ್ಕ್ರಮದಲ್ಲಿ ಕಪಿಲ್ ದೇವ್ ಮಾತನಾಡಿದರು

‘ಮಕ್ಕಳಿಗೆ ಚಾಕೊಲೇಟ್ ತಿನ್ನುವ ತನಕ ಅದರ ರುಚಿ ಹೇಗೆ ಗೊತ್ತಿರುವುದಿಲ್ಲವೊ; ಅದೇ ರೀತಿ ಚೊಚ್ಚಲ ವಿಶ್ವಕಪ್ ಗೆಲ್ಲುವ ತನಕ ಅದರ ಖುಷಿ ಏನೆಂಬುದು ಗೊತ್ತಿರಲಿಲ್ಲ. ಕ್ರಿಕೆಟ್ ಪ್ರೀತಿ ಮತ್ತು ದೇಶವನ್ನು ಪ್ರತಿನಿಧಿಸಿದ್ದ ಹೆಮ್ಮೆಯ ಭಾವ ಇದ್ದ ಕಾರಣ ಆ ವಿಶ್ವಕಪ್‌ನ ಫೈನಲ್ ಒತ್ತಡವೆನಿಸಿರಲಿಲ್ಲ’ ಎಂದರು.

‘ಕೃಷಿ ಕುಟುಂಬದಿಂದ ಬಂದ ನನಗೆ ಕ್ರಿಕೆಟ್ ಸಂಸ್ಕೃತಿಯಾಗಿತ್ತು. ನೀವು ಸಾಧನೆ ಮಾಡಲು ಬಯಸುವ ಕ್ಷೇತ್ರದ ಬಗ್ಗೆ ಶಿಸ್ತು, ಕಠಿಣ ಪರಿಶ್ರಮ ಹಾಗೂ ಬದ್ಧತೆ ಹೊಂದಿರಬೇಕು’ ಎಂದು ಕಿವಿಮಾತು ಹೇಳಿದರು.

ತಮ್ಮ ಜೀವನ ಕಥೆ ಆಧರಿಸಿ ಬಂದಿರುವ ‘83’ ಸಿನಿಮಾ ಕುರಿತು ಪ್ರತಿಕ್ರಿಯಿಸಿ ‘ಸಿನಿಮಾದಲ್ಲಿರುವ ಶೇ 98ರಷ್ಟು ಅಂಶಗಳು ಸತ್ಯವಾಗಿವೆ’ ಎಂದರು.

ಬಾಕ್ಸಿಂಗ್: ಸತ್ನಾಮ್ ಸಿಂಗ್ ಚಾಂಪಿಯನ್

ನವದೆಹಲಿ (ಪಿಟಿಐ): ಭಾರಿ ಪೈಪೋಟಿ ಕಂಡುಬಂದ ಸ್ಪರ್ಧೆಯಲ್ಲಿ ದೆಹಲಿಯ ಸತ್ನಾಮ್ ಸಿಂಗ್ ಅವರು ಅಮೇಯ್ ನಿತಿನ್ ವಿರುದ್ಧ ಜಯ ಗಳಿಸಿ ಡಬ್ಲ್ಯುಬಿಸಿ ಇಂಡಿಯಾ ಫೆದರ್‌ವೇಟ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡರು.

10 ಸುತ್ತುಗಳ ಹಣಾಹಣಿಯಲ್ಲಿ ಉಭಯ ಬಾಕ್ಸರ್‌ಗಳು ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಹೀಗಾಗಿ ಫಲಿತಾಂಶ ಪ್ರಕಟಿಸುವುದು ನಿರ್ಣಾಯಕರಿಗೆ ಸವಾಲಾಗಿತ್ತು. ಇಬ್ಬರು ರೆಫರಿಗಳು ಸತ್ನಾಮ್ ಪರವಾಗಿ ತೀರ್ಪು ನೀಡಿದರೆ ಮತ್ತೊಬ್ಬರು ಪಂದ್ಯ ಡ್ರಾ ಎಂದು ಸಾರಿದರು. ಬಹುಮತದ ಹಿನ್ನೆಲೆಯಲ್ಲಿ ಸತ್ನಾಮ್ ಅವರನ್ನು ವಿಜಯಿ ಎಂದು ಘೋಷಿಸಲಾಯಿತು.

ಕನಸು ನನಸಾದಾಗ ಎಂಬ ಬರಹದೊಂದಿಗೆ ಡಬ್ಲ್ಯುಬಿಸಿ ಅಧ್ಯಕ್ಷ ಮೌರಿಷಿಯೊ ಸುಲೇಮಾನ್ ಟ್ವೀಟ್ ಮಾಡಿರುವ ಸತ್ನಾಮ್ ಸಿಂಗ್ ಚಿತ್ರ

ಆರಂಭದ ಸುತ್ತುಗಳಲ್ಲಿ ಸತ್ನಾಮ್ ಪಾರಮ್ಯ ಮೆರೆದಿದ್ದರು. ಮಹಾರಾಷ್ಟ್ರದ ಅಮೇಯ್ ನಿತಿನ್ ಪುಟಿದೆದ್ದು ಕೆಲವು ಸುತ್ತುಗಳಲ್ಲಿ ತಿರುಗೇಟು ನೀಡಿದರು. ಸ್ಪರ್ಧೆ ಕೊನೆಯ ಹಂತದತ್ತ ಸಾಗುತ್ತಿದ್ದಂತೆ ಸತ್ನಾಮ್ ಮತ್ತೊಮ್ಮೆ ಮೇಲುಗೈ ಸಾಧಿಸಿದರು. ಈ ಜಯದೊಂದಿಗೆ 25 ವರ್ಷದ ಸತ್ನಾಮ್ ಇತ್ತೀಚಿನ 11 ಪಂದ್ಯಗಳ ಪೈಕಿ 10ರಲ್ಲಿ ಜಯ ಗಳಿಸಿದ ಸಾಧನೆ ಮಾಡಿದರು.

ಗುರುವಾಂವ್‌ನಲ್ಲಿ ಶುಕ್ರವಾರ ರಾತ್ರಿ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಅಂಗವಾಗಿ ನಡೆದ ಮತ್ತೊಂದು ಸ್ಪರ್ಧೆಯಲ್ಲಿ ಸೌರಭ್ ಕುಮಾರ್ ಏಕಪಕ್ಷೀಯವಾಗಿ ಆದಿಲ್ ರಾಜೇಶ್ ವಿರುದ್ಧ ಜಯ ಗಳಿಸಿದರು. ಅಮರನಾಥ್ ಯಾದವ್ ಎದುರು ರಾಕೇಶ್ ಲೋಚನ್ ಗೆದ್ದರು.

ಫಫ್ ಡುಪ್ಲೆಸಿ ಬಳಗ – ಪಂಜಾಬ್ ಕಿಂಗ್ಸ್ ಮುಖಾಮುಖಿ ಇಂದು; ವಿರಾಟ್ ಕೊಹ್ಲಿ, ಶಿಖರ್ ಧವನ್ ಮೇಲೆ ಕಣ್ಣು

ರಾಯಲ್ ಚಾಲೆಂಜರ್ಸ್‌ಗೆ ಬೆಂಗಳೂರು ಹುಡುಗನ ಸವಾಲು

ನವಿ ಮುಂಬೈ (ಪಿಟಿಐ): ಮಯಂಕ್ ಅಗರವಾಲ್ ಅವರು ಪಂಜಾಬ್ ಕಿಂಗ್ಸ್ ತಂಡಕ್ಕೆ ಪೂರ್ಣಾವಧಿ ನಾಯಕತ್ವ ವಹಿಸಿಕೊಂಡ ನಂತರ ಮೊದಲ ಪಂದ್ಯದಲ್ಲಿಯೇ ತಮ್ಮ ತವರಿನ ಬಳಗದ ಸವಾಲು ಎದುರಿಸಲಿದ್ದಾರೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮಯಂಕ್ ಬಳಗವು ಫಫ್ ಡುಪ್ಲೆಸಿ ನಾಯಕತ್ವದ ರಾಯಲ್ ಚಾಲೆಂಜರ್ ಬೆಂಗಳೂರು ವಿರುದ್ಧ ಕಣಕ್ಕಿಳಿಯಲಿದೆ. ಕೆ.ಎಲ್. ರಾಹುಲ್ ಲಖನೌ ತಂಡದ ನಾಯಕರಾಗಿ ಹೋದ ನಂತರ ಪಂಜಾಬ್ ತಂಡವನ್ನು ಮುನ್ನಡೆಸುವ ಹೊಣೆ ಆರಂಭಿಕ ಬ್ಯಾಟರ್ ಮಯಂಕ್ ಅವರ ಹೆಗಲಿಗೆ ಬಿದ್ದಿದೆ. ಬೆಂಗಳೂರು ತಂಡದ ನಾಯಕತ್ವವನ್ನು ವಿರಾಟ್ ಕೊಹ್ಲಿ ಬಿಟ್ಟುಕೊಟ್ಟದ್ದರಿಂದ ದಕ್ಷಿಣ ಆಫ್ರಿಕಾದ ಫಫ್ ಮುಂದಾಳತ್ವ ವಹಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಬೆಂಗಳೂರು ತಂಡವೇ ಗೆಲ್ಲುವ ನೆಚ್ಚಿನ ತಂಡವಾಗಿ ಕಾಣುತ್ತಿದೆ. ಏಕೆಂದರೆ, ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವನ್ನು ಮುನ್ನಡೆಸಿದ ಮತ್ತು ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿ ಆಡಿದ ಅನುಭವ ಫಫ್ ಬೆನ್ನಿಗೆ ಇದೆ.

ಅಲ್ಲದೇ ತಂಡದಲ್ಲಿ ವಿರಾಟ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ದಿನೇಶ್ ಕಾರ್ತಿಕ್ ಅವರಂತಹ ಅನುಭವಿ ಬ್ಯಾಟರ್‌ಗಳಿದ್ದಾರೆ. 'ಆಪದ್ಬಾಂಧವ' ಎಬಿ ಡಿವಿಲಿಯರ್ಸ್ ಈ ಸಲ ಇಲ್ಲ. ಆದ್ದರಿಂದ ಅನುಭವಿ ಬ್ಯಾಟರ್‌ಗಳ ಒತ್ತಡ ಹೆಚ್ಚಿದೆ.

ಕಳೆದ 2 ವರ್ಷಗಳಿಂದ ಯಾವುದೇ ಮಾದರಿಯಲ್ಲಿ ಶತಕ ಗಳಿಸದ ವಿರಾಟ್, ಇಲ್ಲಿ ಲಯ ಕಂಡುಕೊಳ್ಳುವರೇ ಕಾದು ನೋಡಬೇಕಿದೆ.

ಮಧ್ಯಮವೇಗಿ ಮೊಹಮ್ಮದ್ ಸಿರಾಜ್, ಹೋದ ಸಲ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್ ಹರ್ಷಲ್ ಪಟೇಲ್ ಮತ್ತು ಜೋಷ್ ಹ್ಯಾಜಲ್‌ವುಡ್ ಇರುವುದು ಬೌಲಿಂಗ್ ಬಲ ಹೆಚ್ಚಿಸಿದೆ. ಆದರೆ, ಯಜುವೇಂದ್ರ ಚಾಹಲ್ ಜಾಗವನ್ನು ತುಂಬುವ ಅವಕಾಶ ಶ್ರೀಲಂಕಾದ ಲೆಗ್‌ಬ್ರೇಕ್ ಬೌಲರ್ ವಣಿಂದು ಹಸರಂಗಾಗೆ ಇದೆ.

ಫಫ್ ಮತ್ತು ಮಯಂಕ್ ಇಬ್ಬರೂ ಐಪಿಎಲ್‌ನಲ್ಲಿ ತಲಾ 100 ಪಂದ್ಯಗಳನ್ನು ಆಡಿರುವ ಅನುಭವಿಗಳು. ಆದರೆ, ಮಯಂಕ್‌ಗೆ ನಾಯಕತ್ವದ ಅನುಭವ ಹೆಚ್ಚು ಇಲ್ಲ. ರಾಹುಲ್ ಗೈರಿನಲ್ಲಿ ಕೆಲವು ಪಂದ್ಯಗಳಲ್ಲಿ ಅವರು ತಂಡವನ್ನು ಮುನ್ನಡೆಸಿದ್ದರು. ಈ ಬಾರಿ ಅವರ ತಂಡದಲ್ಲಿಯೂ ಪ್ರಮುಖ ಬದಲಾವಣೆಗಳಾಗಿವೆ. ಅನುಭವಿ ಬ್ಯಾಟರ್ ಶಿಖರ್ ಧವನ್, ವೇಗಿ ಕಗಿಸೊ ರಬಾಡ, ಲಿಯಾಮ್ ಲಿವಿಂಗ್‌ಸ್ಟೋನ್, ಜಾನಿ ಬೆಸ್ಟೊ ಮತ್ತು ಸ್ಪಿನ್ನರ್ ರಾಹುಲ್ ಚಾಹರ್ ಅವರ ಬಲ ಇದೆ. ಉಳಿದಂತೆ ಯುವ ಆಟಗಾರರ ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಮಯಂಕ್ ಅವರಿಗೆ ಮಾರ್ಗದರ್ಶನ ನೀಡಲು ಅನಿಲ್ ಕುಂಬ್ಳೆ ಇದ್ದಾರೆ.ಹೋದ ವರ್ಷದ ಟೂರ್ನಿಯಲ್ಲಿ ಆರ್‌ಸಿಬಿ ಕ್ವಾಲಿಫೈಯರ್ ಪ್ರವೇಶಿಸಿತ್ತು. ಆದರೆ, ಪಂಜಾಬ್ ವಿಫಲವಾಗಿತ್ತು. ಟೂರ್ನಿಯ ಇತಿಹಾಸದಲ್ಲಿ ಎರಡೂ ತಂಡಗಳು ಒಂದು ಬಾರಿಯೂ ಪ್ರಶಸ್ತಿ ಜಯಿಸಿಲ್ಲ. ಈ ಸಲ ಗೆಲ್ಲುವ ನಿರೀಕ್ಷೆ ಯೊಂದಿಗೆ ಅಭಿಯಾನ ಆರಂಭಿಸಲಿವೆ.

ಪಂದ್ಯ ಆರಂಭ: ರಾತ್ರಿ 7.30

ವಿರಾಟ್ ಕೊಹ್ಲಿ

207 ಪಂದ್ಯ | 5 ಶತಕ
6,283 ರನ್
113 ಶ್ರೇಷ್ಠ | 42 ಅರ್ಧಶತಕ
546 ಬೌಂಡರಿ | 210 ಸಿಕ್ಸರ್

ಬಲಾಬಲ 28 ಪಂದ್ಯ | 13 ಆರ್‌ಸಿಬಿ ಜಯ | 15 ಪಂಜಾಬ್ ಕಿಂಗ್ಸ್ ಜಯ

ನಾಯಕರ ಬಲಾಬಲ	ಮಯಂಕ್ ಅಗರವಾಲ್ (ಪಂಜಾಬ್ ಕಿಂಗ್ಸ್)	ಫಫ್ ಡುಪ್ಲೆಸಿ (ಆರ್‌ಸಿಬಿ)
ಪಂದ್ಯ	100	100
ರನ್	2135	2935
ಶ್ರೇಷ್ಠ	106	96
ಸ್ಟ್ರೈಕ್‌ರೇಟ್	135.73	131.09
ಶತಕ	1	-
ಅರ್ಧಶತಕ	11	22
ಬೌಂಡರಿ	204	265
ಸಿಕ್ಸರ್	85	96

ತಂಡಗಳ ಇದುವರೆಗಿನ ಸಾಧನೆ

ತಂಡ	ಪಂದ್ಯ	ಜಯ	ಸೋಲು	ಟೈ	ಫಲಿತಾಂಶ ಇಲ್ಲ
ರಾಯಲ್ ಚಾಲೆಂಜರ್ಸ್ ಬೆಂಗಳೂರು	211	98	106	3	4
ಪಂಜಾಬ್ ಕಿಂಗ್ಸ್	204	91	109	3	1

ಮಯಂಕ್ ಅಗರವಾಲ್– ಪಿಟಿಐ ಚಿತ್ರ

ಫಫ್ ಡುಪ್ಲೆಸಿ

ರೋಹಿತ್–ರಿಷಭ್ ಪಂತ್ ಹಣಾಹಣಿಗೆ ವೇದಿಕೆ ಸಿದ್ಧ

ಮುಂಬೈ–ಡೆಲ್ಲಿ ಮುಖಾಮುಖಿ ಇಂದು

ರಿಷಭ್ ಪಂತ್

ರೋಹಿತ್ ಶರ್ಮಾ

ಮುಂಬೈ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ಇನ್ನೂ ಒಂದು ಸಲವೂ ಪ್ರಶಸ್ತಿ ಜಯಿಸದ ಡೆಲ್ಲಿ ಕ್ಯಾಪಿಟಲ್ಸ್ ಭಾನುವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಮುಂಬೈಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವಿಕೆಟ್‌ಕೀಪರ್ ರಿಷಭ್ ಪಂತ್ ಡೆಲ್ಲಿ ತಂಡದ ಮುಂದಾಳತ್ವ ವಹಿಸುತ್ತಿದ್ದಾರೆ. ರೋಹಿತ್ ರಾಷ್ಟ್ರೀಯ ತಂಡದ ನಾಯಕತ್ವ ವಹಿಸಿಕೊಂಡ ನಂತರ ಆಡುತ್ತಿರುವ ಮೊದಲ ಐಪಿಎಲ್ ಪಂದ್ಯ ಇದಾಗಿದೆ.

ಮೆಗಾ ಹರಾಜಿನಲ್ಲಿ ದುಬಾರಿ ಬೆಲೆ ಗಳಿಸಿದ ಇಶಾನ್ ಕಿಶಾನ್ (₹ 15.25 ಕೋಟಿ) ಮುಂಬೈ ತಂಡದ ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ರೋಹಿತ್ ಮತ್ತು ಇಶಾನ್ ಇನಿಂಗ್ಸ್ ಆರಂಭಿಸಲಿದ್ದಾರೆ. ಆದರೆ ಸೂರ್ಯಕುಮಾರ್ ಯಾದವ್ ಗಾಯಗೊಂಡಿರುವುದರಿಂದ ಈ ಪಂದ್ಯದಲ್ಲಿ ಕಣಕ್ಕಿಳಿಯುವುದಿಲ್ಲ. ಅವರ ಜಾಗದಲ್ಲಿ ಫ್ಯಾಬಿಯನ್ ಅಲೆನ್ ಆಡುವುದು ಬಹುತೇಕ ಖಚಿತವಾಗಿದೆ. ಬ್ಯಾಟಿಂಗ್‌ನಲ್ಲಿ ಕೀರನ್ ಪೊಲಾರ್ಡ್ ಬಿಟ್ಟರೆ ಉಳಿದವರೆಲ್ಲರೂ ಹೊಸಬರೇ ಆಗಿದ್ದಾರೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಬೌಲಿಂಗ್ ಪಡೆಯ ಸಾರಥ್ಯ ವಹಿಸುವರು. ಅವರೊಂದಿಗೆ ಜಯದೇವ್ ಉನದ್ಕತ್ ಜೊತೆಗೂಡುವರು.

ಪ್ರಸ್ತುತ ಮುಂಬೈ ತಂಡಕ್ಕಿಂತ ಡೆಲ್ಲಿ ತಂಡವೇ ಹೆಚ್ಚು ಸಮತೋಲನದಿಂದ ಕೂಡಿದಂತೆ ಕಾಣುತ್ತಿದೆ. ಡೇವಿಡ್ ವಾರ್ನರ್ ಅವರು ಇನ್ನೂ ತಂಡವನ್ನು ಕೂಡಿಕೊಂಡಿಲ್ಲ. ಆದ್ದರಿಂದ ರಿಷಭ್ ಮತ್ತು ಪೃಥ್ವಿ ಶಾ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ. ಸರ್ಫರಾಜ್ ಖಾನ್, ಯುವ ಬ್ಯಾಟರ್ ಯಶ್ ಧುಳ್, ಬೌಲರ್‌ಗಳಾದ ಎನ್ರಿಚ್ ನಾಕಿಯಾ, ಲುಂಗಿ ಗಿಡಿ, ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ತಂಡದ ಶಕ್ತಿ ಹೆಚ್ಚಿಸಿದ್ದಾರೆ. ಇದರಿಂದಾಗಿ ರೋಹಿತ್ ಬಳಗಕ್ಕೆ ಕಠಿಣ ಸವಾಲೊಡ್ಡುವ ವಿಶ್ವಾಸದಲ್ಲಿ ಡೆಲ್ಲಿ ತಂಡವಿದೆ. ಮಧ್ಯಾಹ್ನವೇ ಪಂದ್ಯ ಆರಂಭವಾಗಿ ಮುಸ್ಸಂಜೆಗೆ ಮುಗಿಯುವುದರಿಂದ ಇಬ್ಬನಿ ಸಮಸ್ಯೆ ಇರುವುದಿಲ್ಲ. ಆದ್ದರಿಂದ ಟಾಸ್ ಗೆದ್ದ ತಂಡವು ಮೊದಲು ಬ್ಯಾಟಿಂಗ್ ಮಾಡುವತ್ತ ಮನಸ್ಸು ಮಾಡಬಹುದು.

ಪಂದ್ಯ ಆರಂಭ: ಮಧ್ಯಾಹ್ನ 3.30.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಹಾಟ್‌ಸ್ಟಾರ್

ನಾಯಕತ್ವದ ಮೊದಲ ಪಂದ್ಯದಲ್ಲಿ ಜಡೇಜಗೆ ನಿರಾಶೆ: ಶ್ರೇಯಸ್ ಅಯ್ಯರ್ ಬಳಗಕ್ಕೆ ಜಯ

ಕೋಲ್ಕತ್ತ ನೈಟ್ ರೈಡರ್ಸ್ ಶುಭಾರಂಭ

ಮುಂಬೈ: ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಮೊದಲ ಪಂದ್ಯವಾಡಿದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಶನಿವಾರ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರು 6 ವಿಕೆಟ್‌ಗಳಿಂದ ಕೋಲ್ಕತ್ತ ತಂಡವು ಜಯಿಸಿತು. ಇದೇ ಮೊದಲ ಬಾರಿಗೆ ಚೆನ್ನೈ ತಂಡದ ನಾಯಕತ್ವ ವಹಿಸಿದ ರವೀಂದ್ರ ಜಡೇಜಗೆ ನಿರಾಶೆ ಕಾಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಟಾಸ್ ಗೆದ್ದ ಕೋಲ್ಕತ್ತ ತಂಡದ ನಾಯಕ ಶ್ರೇಯಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅವರ ಈ ನಿರ್ಧಾರ ಫಲ ನೀಡಿತು. ಬೌಲರ್‌ಗಳು ಚೆನ್ನೈ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಮಹೇಂದ್ರಸಿಂಗ್ ಧೋನಿ ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 131 ರನ್ ಗಳಿಸಿತು. ಅದಕ್ಕುತ್ತರವಾಗಿ ಕೋಲ್ಕತ್ತ ತಂಡವು 18.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 133 ರನ್ ಗಳಿಸಿತು. ಹೋದ ಸಲದ ಟೂರ್ನಿಯ ಫೈನಲ್‌ನಲ್ಲಿ ಚೆನ್ನೈ ಎದುರಿನ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. ಇನಿಂಗ್ಸ್ ಆರಂಭಿಸಿದ ಅಜಿಂಕ್ಯ ರಹಾನೆ (44; 34ಎಸೆತ) ಉಪಯುಕ್ತ ಕಾಣಿಕೆ ನೀಡಿದರು.

ಧೋನಿ ಜವಾಬ್ದಾರಿಯುತ ಬ್ಯಾಟಿಂಗ್: ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿದ ಚೆನ್ನೈಗೆ ನಿಕಟಪೂರ್ವ ನಾಯಕ ಮಹೇ ದ್ರ ಸಿಂಗ್ ಮಹೇಂದ್ರಸಿಂಗ್ ಧೋನಿ (ಔಟಾಗದೆ 50; 38ಎ, 4X7, 6X1) ಆಸರೆಯಾದರು. ನಾಯಕತ್ವದ ಹೊಣೆಯಿಂದ ಒತ್ತಡದಲ್ಲಿದ್ದಂತೆ ಕಂಡುಬಂದ ಜಡೇಜ ಅವರ ಕೈಬಲಪಡಿಸಲು ಪ್ರಯತ್ನಿಸಿದರು. ತಂಡವು 10.5 ಓವರ್‌ಗಳಲ್ಲಿ 61 ರನ್‌ಗಳಿಗೆ 5 ವಿಕೆಟ್ ಕಳೆದು ಕೊಂಡ ಸಂದರ್ಭ ಧೋನಿ ಕ್ರೀಸ್‌ಗೆ ಬಂದರು.

ಆರಂಭದಲ್ಲಿ ನಿಧಾನಗತಿಯಲ್ಲಿ ರನ್ ಗಳಿಸಿದ ಅವರು, ದೊಡ್ಡ ಹೊಡೆತಗಳಿಗೆ ಕೈಹಾಕಲಿಲ್ಲ. ಆದರೆ, ಕೊನೆಯ ಹಂತದ ಓವರ್‌ಗಳಲ್ಲಿ ರನ್‌ಗಳಿಕೆ ವೇಗ ಹೆಚ್ಚಿಸಿದರು. ಇದರಿಂದಾಗಿ ಅವರು 38 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಒಂದು ಸಿಕ್ಸರ್ ಕೂಡ ಎತ್ತಿದರು. ಆದರೆ ಇನ್ನೊಂದೆಡೆ ಜಡೇಜ ಮಾತ್ರ ತಮ್ಮ ನೈಜ ಶೈಲಿಯ ಬ್ಯಾಟಿಂಗ್‌ಗೆ ಕಡಿವಾಣ ಹಾಕಿದರು.

ಕೋಲ್ಕತ್ತ ತಂಡದ ಮಧ್ಯಮವೇಗಿ

ಉಮೇಶ್ ಯಾದವ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ಓವರ್‌ನಲ್ಲಿ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ವಿಕೆಟ್ ಗಳಿಸಿದ ಅವರು 5ನೇ ಓವರ್‌ನಲ್ಲಿ ಡೆವೊನ್ ಕಾನ್ವೆಗೂ ಪೆವಿಲಿಯನ್ ಹಾದಿ ತೋರಿಸಿದರು. ಇನ್ನೊಂದೆಡೆಯಿಂದ ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ ಮತ್ತು ಸುನೀಲ್ ನಾರಾಯಣ ಬ್ಯಾಟರ್‌ಗಳ ಮೇಲೆ ಒತ್ತಡ ಹೆಚ್ಚಿಸಿದರು. ಇದರ ನಡುವೆಯೂ ರಾಬಿನ್ ಉತ್ತಪ್ಪ (28; 21ಎ) ಮತ್ತು ಅಂಬಟಿ ರಾಯುಡು (15; 17ಎ) ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ 8ನೇ ಓವರ್‌ನಲ್ಲಿ ವರುಣ್ ಎಸೆತಕ್ಕೆ ಬೀಟ್ ಆದ ಉತ್ತಪ್ಪ ಕ್ರೀಸ್‌ಗೆ ಮರಳಿ ಹೆಜ್ಜೆಯಿಡುವ ಮುನ್ನವೇ ವಿಕೆಟ್‌ಕೀಪರ್ ಶೆಲ್ಡನ್ ಜಾಕ್ಸನ್ ಬೇಲ್ಸ್ ಎಗರಿಸಿದರು.

ಬ್ರಾವೊ ದಾಖಲೆ: ಸಾಧಾರಣ ಮೊತ್ತವನ್ನು ಬೆನ್ನತ್ತಿದ ಕೋಲ್ಕತ್ತ ತಂಡಕ್ಕೆ ತುಸು ಆತಂಕ ಮೂಡಿಸುವಲ್ಲಿ ಚೆನ್ನೈ ಬೌಲರ್ ಡ್ವೇನ್ ಬ್ರಾವೊ (20ಕ್ಕೆ3) ಯಶಸ್ವಿಯಾದರು. ಐಪಿಎಲ್‌ನಲ್ಲಿ ಒಟ್ಟು 170 ವಿಕೆಟ್ ಸಾಧನೆ ಮಾಡಿದರು. ಮಾಜಿ ಅಟಗಾರ ಲಸಿತ್ ಮಾಲಿಂಗ ಅವರ ದಾಖಲೆಯನ್ನು ಸರಿಗಟ್ಟಿದರು.

ಅಜಿಂಕ್ಯ ರಹಾನೆ ಬ್ಯಾಟಿಂಗ್ ಶೈಲಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 5ಕ್ಕೆ 131 (20 ಓವರ್)

ಋತುರಾಜ್ ಸಿ ರಾಣಾ ಬಿ ಉಮೇಶ್ 0 (4 ಎ), ಡೇವಾನ್ ಸಿ ಶ್ರೇಯಸ್ ಬಿ ಉಮೇಶ್ 3 (8 ಎ), ರಾಬಿನ್ ಸ್ಟಂಪ್ಡ್ ಶೆಲ್ಡನ್ ಬಿ ವರುಣ್ 28 (21 ಎ, 4x2, 6x2), ಅಂಬಟಿ ರನ್ ಔಟ್ (ಶ್ರೇಯಸ್/ ನಾರಾಯಣ್) 15 (17 ಎ, 4x1, 6x1), ರವೀಂದ್ರ ಔಟಾಗದೆ 26 (28 ಎ, 6x1), ಶಿವಂ ಸಿ ನಾರಾಯಣ್ ಬಿ ರಸೆಲ್ 3 (6 ಎ), ಧೋನಿ ಔಟಾಗದೆ 50 (38 ಎ. 4x7, 6x1)

ಇತರೆ ((ನೋಬಾಲ್ 2, ವೈಡ್ 4) 6

ವಿಕೆಟ್ ಪತನ: 1-2 (ಋತುರಾಜ್ ಗಾಯಕವಾಡ್, 0.3), 2-28 (ಡೇವಾನ್ ಕಾನ್ವೆ, 4.1), 3-49 (ರಾಬಿನ್ ಉತ್ತಪ್ಪ, 7.5), 4-52 (ಅಂಬಟಿ ರಾಯುಡು, 8.4), 5-61 (ಶಿವಂ ದುಬೆ, 10.5)

ಬೌಲಿಂಗ್: ಉಮೇಶ್ ಯಾದವ್ 4-0-20-2, ಶಿವಂ ಮಾವಿ 4-0-35-0, ವರುಣ್ ಚಕ್ರವರ್ತಿ 4-0-23-1, ಸುನಿಲ್ ನಾರಾಯಣ್ 4-0-15-0, ಆ್ಯಂಡ್ರೆ ರಸೆಲ್ 4-0-38-1

ಕೋಲ್ಕತ್ತ ನೈಟ್ ರೈಡರ್ಸ್ 4ಕ್ಕೆ 133 (18.3 ಓವರ್)

ಅಜಿಂಕ್ಯ ಸಿ ಜಡೇಜ ಬಿ ಸ್ಯಾಂಟನರ್ 44 (34ಎ, 4X6, 6X1), ವೆಂಕಟೇಶ್ ಸಿ ಧೋನಿ ಬಿ ಬ್ರಾವೊ 16 (16ಎ, 4X2), ರಾಣಾ ಸಿ ರಾಯುಡು ಬಿ ಬ್ರಾವೊ 21 (17ಎ, 4X2, 6X1), ಶ್ರೇಯಸ್ ಔಟಾಗದೆ 20 (20ಎ, 4X1), ಬಿಲ್ಲಿಂಗ್ಸ್ ಸಿ ತುಷಾರ್ ಬಿ ಬ್ರಾವೊ 25 (21ಎ, 4X1, 6X1), ಶೆಲ್ಡನ್ ಔಟಾಗದೆ 3 (3ಎ)

ಇತರೆ (ಬೈ 4) 4

ವಿಕೆಟ್ ಪತನ: 1-43 (ವೆಂಕಟೇಶ್ ಅಯ್ಯರ್, 6.2), 2-76 (ನಿತೀಶ್ ರಾಣಾ, 9.6), 3-87 (ಅಜಿಂಕ್ಯ ರಹಾನೆ, 11.4), 4-123 (ಸ್ಯಾಮ್ ಬಿಲ್ಲಿಂಗ್ಸ್, 17.3)

ಬೌಲಿಂಗ್: ತುಷಾರ್ ದೇಶಪಾಂಡೆ 3-0-23-0, ಆ್ಯಡಂ ಮಿಲ್ನೆ 2.3-0-19-0, ಮಿಚೆಲ್ ಸ್ಯಾಂಟನರ್ 4-0-31-1, ಡ್ವೇನ್ ಬ್ರಾವೊ 4-0-20-3, ಶಿವಂ ದುಬೆ 1-0-11-0, ರವೀಂದ್ರ ಜಡೇಜ 4-0-25-0

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 6 ವಿಕೆಟ್‌ಗಳ ಜಯ

ತಂಡಗಳಿಗೆ ವಿಶೇಷ ಭದ್ರತೆ

ಮುಂಬೈ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಆಡುತ್ತಿರುವ ತಂಡಗಳ ಆಟಗಾರರಿಗೆ ಮುಂಬೈ ಪೊಲೀಸರು ವಿಶೇಷ ಭದ್ರತೆ ಒದಗಿಸಿದ್ದಾರೆ. ತಂಡಗಳ ಸುಗಮ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ ಹಸಿರು ಮಾರ್ಗದ ವ್ಯವಸ್ಥೆ ಮಾಡಿದ್ದಾರೆ.

ಮುಂಬೈನ ಮೂರು ಮತ್ತು ಪುಣೆಯ ಒಂದು ಕ್ರೀಡಾಂಗಣದಲ್ಲಿ ಟೂರ್ನಿಯ ಪಂದ್ಯಗಳನ್ನು ಆಯೋಜಿಸಲಾಗಿದೆ. ಮೈದಾನಗಳಿಗೆ ಅಭ್ಯಾಸ ಮತ್ತು ಪಂದ್ಯಗಳಿಗೆ ತೆರಳಲು ವಿಶೇಷ ಮಾರ್ಗಗಳನ್ನು ಗುರುತಿಸಲಾಗಿದೆ. ಸಂಜೆ ಹೊತ್ತಿನ ವಾಹನ ದಟ್ಟಣೆಯಿಂದ ಆಟಗಾರರ ಬಸ್‌ಗಳ ಪ್ರಯಾಣಕ್ಕೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಹೋಟೆಲ್, ರಸ್ತೆ, ಮೈದಾನಗಳಲ್ಲಿ ಭದ್ರತೆಗಾಗಿ 1100 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐಪಿಎಲ್ ಟೂರ್ನಿಯ ಪಂದ್ಯಗಳ ಮೇಲೆ ಭಯೋತ್ಪಾದನಾ ದಾಳಿ ನಡೆಯಲಿದೆ ಎಂಬ ವರದಿ ಇತ್ತೀಚೆಗೆ ಕೇಳಿಬಂದಿತ್ತು. ಆದರೆ ಇದು ಸುಳ್ಳು ಮಾಹಿತಿ ಎಂದು ಮಹಾರಾಷ್ಟ್ರ ಗೃಹ ಸಚಿವರು ಸ್ಪಷ್ಟಪಡಿಸಿದ್ದರು. ಆದರೆ ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಮುಂದಿನ ವರ್ಷ ಮಹಿಳಾ ಐಪಿಎಲ್

ಮುಂದಿನ ವರ್ಷ ಮಹಿಳೆಯರ ಐಪಿಎಲ್ ಟೂರ್ನಿಗೆ ಚಾಲನೆ ನೀಡಲು ಬಿಸಿಸಿಐ ನಿರ್ಧರಿಸಿದೆ ಎಂದು ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದಾರೆ.

'ಮಹಿಳಾ ಐಪಿಎಲ್‌ಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಲಭಿಸಿದೆ. ಮುಂದಿನ ವರ್ಷ ಆರಂಭಿಸುವುದು ಬಹುತೇಕ ಖಚಿತ' ಎಂದು ಗಂಗೂಲಿ ಹೇಳಿದ್ದಾರೆ. 'ಮಹಿಳಾ ಐಪಿಎಲ್ ಪ್ರಕ್ರಿಯೆಗಳು ಆರಂಭಗೊಂಡಿದ್ದು ಐದರಿಂದ ಆರು ತಂಡಗಳು ಪಾಲ್ಗೊಳ್ಳಲಿವೆ' ಎಂದು ಐಪಿಎಲ್ ಅಧ್ಯಕ್ಷ ಬ್ರಿಜೇಶ್ ಪಟೇಲ್ ತಿಳಿಸಿದ್ದಾರೆ.

ಸಿಂಧು, ಪ್ರಣಯ್ ಫೈನಲ್‌ಗೆ ಲಗ್ಗೆ

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಶ್ರೀಕಾಂತ್‌ಗೆ ಸೋಲು

ಬಾಸೆಲ್ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್ ಮತ್ತು ಪಿ.ವಿ.ಸಿಂಧು ಅವರು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಶನಿವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಪ್ರಣಯ್, ಇಂಡೊನೇಷ್ಯಾದ ಆ್ಯಂಟನಿ ಸಿನಿಸುಕ ಗಿಂಟಿಂಗ್ ಎದುರು 21-19, 19-21, 21-18ರಲ್ಲಿ ಜಯ ಗಳಿಸಿದರು.

ಮಹಿಳೆಯರ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಿಂಧು 21–18, 15–21, 21–19ರಲ್ಲಿ ಥಾಯ್ಲೆಂಡ್‌ನ ಸುಪನಿಡ ಕಾಥೆತಾಂಗ್ ವಿರುದ್ಧ ಗೆಲುವು ಸಾಧಿಸಿದರು. ಒಂದು ತಾಸು 11 ನಿಮಿಷಗಳ ಕಾಲ ನಡೆದ ಪುರುಷರ ವಿಭಾಗದ ಪಂದ್ಯದ ಮೊದಲ ಗೇಮ್‌ನ ಆರಂಭದಲ್ಲಿ 6-3ರ ಮುನ್ನಡೆ ಸಾಧಿಸಿದ ಪ್ರಣಯ್ ನಂತರ ಮುನ್ನಡೆಯನ್ನು 19–12ಕ್ಕೆ ಹಿಗ್ಗಿಸಿ ಗೇಮ್ ಗೆದ್ದುಕೊಂಡರು. ಎರಡನೇ ಗೇಮ್‌ನಲ್ಲಿ ಉಭಯ ಆಟಗಾರರು ಆಕ್ರಮಣಕಾರಿ ಆಟವಾಡಿದರು. ಆದರೆ ಜಯ ಗಿಂಟಿಂಗ್ ಅವರದಾಯಿತು. ನಿರ್ಣಾಯಕ ಮೂರನೇ ಗೇಮ್‌ನಲ್ಲಿ ಪ್ರಣಯ್ 8–5ರ ಆರಂಭಿಕ ಮುನ್ನಡೆ ಸಾಧಿಸಿದರು. ನಂತರ ಅದು 14–8ಕ್ಕೇರಿತು. ಆದರೆ ಸತತ ತಪ್ಪುಗಳನ್ನು ಎಸಗಿ ಎದುರಾಳಿಗೆ ಪಾಯಿಂಟ್‌ಗಳನ್ನು ಬಿಟ್ಟುಕೊಟ್ಟರು. ಕೊನೆಗೆ ಮೋಹಕ ಸ್ಮ್ಯಾಷ್‌ಗಳ ಮೂಲಕ ಮಿಂಚಿ ಗೇಮ್ ಮತ್ತು ಪಂದ್ಯ ಗೆದ್ದುಕೊಂಡರು. ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ ಅವರು 21-18 7-21 13-21ರಿಂದ ಇಂಡೊನೇಷ್ಯಾದ ಜೋನಾಥನ್ ಕ್ರಿಸ್ಟಿ ಎದುರು ಸೋತರು.

ಎಚ್.ಎಸ್. ಪ್ರಣಯ್ –ಪಿಟಿಐ ಚಿತ್ರ

ಪ್ರಶಸ್ತಿ ವಿಜೇತ ಲಯನ್ಸ್ ಕ್ರಿಕೆಟ್ ಕ್ಲಬ್ ತಂಡ: ನಿಂತವರು (ಎಡದಿಂದ)– ಸಯ್ಯದ್ ನವಾಜ್, ಪ್ರಮೋದ್, ನರಸಿಂಹ ಮೂರ್ತಿ, ಹೇಮಂತ್, ನಾರಾಯಣ ಸ್ವಾಮಿ, ಮನೋಜ್ ಕುಮಾರ್ ಆರ್, ಮನೋಜ್ ಕುಮಾರ್ ಎಸ್, ನರೇಂದ್ರ, ಅಕ್ಷಯ್ ಕುಮಾರ್ ಎಂ, ವಿಶ್ವನಾಥ್ ಗೋಪಾಲ್. ಕುಳಿತವರು– ವೆಂಕಟೇಶ್ ಆರ್, ಮುನಿರಾಜ್ ಆರ್, ಗೌತಮ್ ಆರ್. ರೆಡ್ಡಿ, ಪುರುಷೋತ್ತಮ್ ವಿ, ರಾಘವೇಂದ್ರ ಎಚ್, ಶಿವಕುಮಾರ್ ವಿ, ವಿನೋದ್ ಕುಮಾರ್ ಎಂ.

ಲಯನ್ಸ್ ಕ್ರಿಕೆಟ್ ಕ್ಲಬ್‌ಗೆ ಪ್ರಶಸ್ತಿ

ಬೆಂಗಳೂರು: ಗೌತಮ್ ರೆಡ್ಡಿ ಆಲ್‌ರೌಂಡ್ ಆಟದ ಬಲದಿಂದ ಲಯನ್ಸ್ ಕ್ಲಬ್ ತಂಡವು ಜೆ.ಬಿ. ಮಲ್ಲಾರಾಧ್ಯ ಟ್ರೋಫಿಗಾಗಿ ನಡೆದ ಕೆಎಸ್‌ಸಿಎ ಒಂದರಿಂದ ಐದನೇ ಡಿವಿಷನ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಎಎಂಸಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಲಯನ್ಸ್ 39 ರನ್‌ಗಳಿಂದ ಜೈದೂರ್ ಕ್ರಿಕೆಟರ್ಸ್ ತಂಡವನ್ನು ಮಣಿಸಿತು.ಮೊದಲು ಬ್ಯಾಟ್ ಮಾಡಿದ ಲಯನ್ಸ್ 50 ಓವರ್‌ಗಳಲ್ಲಿ ಒಂಬತ್ತು ವಿಕೆಟ್ ಕಳೆದುಕೊಂಡು 303 ರನ್ ಗಳಿಸಿತು. ಜೈದೂರ್ ತಂಡವನ್ನು 264 ರನ್‌ಗಳಿಗೆ ನಿಯಂತ್ರಿಸಿತು.

ಜೈದೂರ್ ತಂಡದ ಜಿಬಿನ್ ಜಾನ್ (147) ಶತಕ ಸಿಡಿಸಿದರು. ಲಯನ್ಸ್ ತಂಡದ ಗೌತಮ್ ಆರ್. ರೆಡ್ಡಿ (59ಕ್ಕೆ 5, 63 ರನ್)) ಬೌಲಿಂಗ್‌ಮತ್ತು ಬ್ಯಾಟಿಂಗ್‌ನಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಲಯನ್ಸ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 303 (ರಾಘವೇಂದ್ರ ಎಚ್. 28, ಎಂ. ವಿನೋದ್ ಕುಮಾರ್ 41, ಗೌತಮ್ ಆರ್. ರೆಡ್ಡಿ 63, ನಾರಾಯಣಸ್ವಾಮಿ ಎಚ್.ಸಿ. 35; ಪ್ರತಾಪ್ 60ಕ್ಕೆ 3, ಶರತ್ ಎಸ್.ಯು. 18ಕ್ಕೆ 2). ಜೈದೂರ್ ಕ್ರಿಕೆಟರ್ಸ್: 47.1 ಓವರ್‌ಗಳಲ್ಲಿ 264 (ಜಿಬಿನ್ ಜಾನ್ 147, ವಿನಯ್ ಕುಮಾರ್ ಕೆ. 24; ಗೌತಮ್ ಆರ್. ರೆಡ್ಡಿ 59ಕ್ಕೆ 5, ಅಕ್ಷಯ್ ಕುಮಾರ್ ಎಂ. 32ಕ್ಕೆ 2).

ರಾಷ್ಟ್ರೀಯ ಜಿಮ್ನಾಸ್ಟಿಕ್ಸ್: ಸೃಷ್ಟಿಗೆ ಅಗ್ರಸ್ಥಾನ

ಬೆಂಗಳೂರು: ಮಹಾರಾಷ್ಟ್ರದ ಸೃಷ್ಟಿ ಹಾಗೂ ಮಣಿಪುರದ ತೋಹೆನ್‌ಬಾ ಹೀಗ್ರುಜಾಮ್ ಅವರು ರಾಷ್ಟ್ರೀಯ ಏರೋಬಿಕ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಮಹಿಳಾ ಮತ್ತು ಪುರುಷರ ವಿಭಾಗಗಳಲ್ಲಿ ಅಗ್ರಸ್ಥಾನ ಗಳಿಸಿದರು.

ಗೋಪಾಲನ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಪುರುಷರ ವೈಯಕ್ತಿಕ ವಿಭಾಗದಲ್ಲಿ ತೋಹೆನ್‌ಬಾ ಹೀಗ್ರುಜಾಮ್ 15.90 ಕಲೆಹಾಕಿದರು. ಮಹಾರಾಷ್ಟ್ರದ ಆರ್ಯನ್ ಫುಲೆ ಎರಡನೇ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಸೃಷ್ಟಿ 16.85 ಪಾಯಿಂಟ್ಸ್ ಗಳಿಸಿದರು. ಎರಡನೇ ಸ್ಥಾನವು ಪಶ್ಚಿಮ ಬಂಗಾಳದ ಶರ್ಮಿಷ್ಠಾ ಅವರ ಪಾಲಾಯಿತು. ಮಿಶ್ರ ಜೋಡಿ ವಿಭಾಗದಲ್ಲಿ ಮಹಾರಾಷ್ಟ್ರದ ಪ್ರಜ್ವಲ್– ಗೌರಿ ಮತ್ತು ತ್ರಿವಳಿ ವಿಭಾಗದಲ್ಲಿ ಅದೇ ರಾಜ್ಯದ ಸರ್ವಜ್ಞ, ಋತುರಾಜ್, ಸರ್ವಜ್ಞ ಮೊದಲ ಸ್ಥಾನ ಗಳಿಸಿದರು.

ನ್ಯೂಜಿಲೆಂಡ್‌ಗೆ ಮಣಿದ ಪಾಕ್

ಕ್ರೈಸ್ಟ್ ಚರ್ಚ್, ನ್ಯೂಜಿಲೆಂಡ್ (ಎಎಫ್‌ಪಿ): ಭರ್ಜರಿ ಶತಕದ ಮೂಲಕ ಆರಂಭಿಕ ಬ್ಯಾಟರ್ ಸೂಝಿ ಬೇಟ್ಸ್ ಮಿಂಚಿದರು. ಮಧ್ಯಮ ವೇಗಿ ಹನಾ ರೋವ್ ಐದು ವಿಕೆಟ್‌ಗಳ ಗೊಂಚಲು ಗಳಿಸಿ ಸಂಭ್ರಮಿಸಿದರು. ಇದರ ಪರಿಣಾಮ, ನ್ಯೂಜಿಲೆಂಡ್ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ 71 ರನ್‌ಗಳಿಂದ ಜಯ ಗಳಿಸಿತು.

ಶುಕ್ರವಾರ ಹೆಗ್ಲಿ ಓವಲ್‌ನಲ್ಲಿ ನಡೆದ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಬೇಟ್ಸ್ (126; 135 ಎಸೆತ, 14 ಬೌಂಡರಿ) ಶತಕದ ಬಲದಿಂದ ನ್ಯೂಜಿಲೆಂಡ್ 8 ವಿಕೆಟ್‌ಗಳಿಗೆ 265 ರನ್ ಕಲೆ ಹಾಕಿತು. ಗುರಿ ಬೆನ್ನತ್ತಿದ ಪಾಕಿಸ್ತಾನ 9 ವಿಕೆಟ್‌ಗಳಿಗೆ 194 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 8ಕ್ಕೆ 265 (ಸೂಝಿ ಬೇಟ್ಸ್ 126, ಅಮೇಲಿಯ ಕೆರ್ 24, ಮ್ಯಾಡಿ ಗ್ರೀನ್ 23, ಬ್ರೂಕ್ ಹಾಲಿಡೆ 29, ಕ್ಯಾಟಿ ಮಾರ್ಟಿನ್ ಔಟಾಗದೆ 30; ಆನಮ್ ಅಮೀನ್ 58ಕ್ಕೆ1, ಫಾತಿಮಾ ಸನಾ 69ಕ್ಕೆ1, ನಶ್ರಾ ಸಂಧು 50ಕ್ಕೆ1, ನಿದಾ ದರ್ 39ಕ್ಕೆ3) ಪಾಕಿಸ್ತಾನ: 50 ಓವರ್‌ಗಳಲ್ಲಿ 9ಕ್ಕೆ 194 (ಮುನೀಬಾ ಅಲಿ 29, ಬಿಸ್ಮಾ ಮರೂಫ್ 38, ನಿದಾ ದರ್ 50; ಹನಾ ರೋವ್ 55ಕ್ಕೆ5, ಫ್ರಾನ್ಸಿಸ್ ಮೆಕೆ 29ಕ್ಕೆ2, ರೋಸ್‌ಮೇರಿ ಮೇರ್ 29ಕ್ಕೆ1, ಅಮೇಲಿಯಾ ಕೆರ್ 36ಕ್ಕೆ1). ಫಲಿತಾಂಶ: ನ್ಯೂಜಿಲೆಂಡ್‌ಗೆ 71 ರನ್‌ಗಳ ಜಯ.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್	ರನ್‌ರೇಟ್
ಆಸ್ಟ್ರೇಲಿಯಾ	7	7	0		14	+1.283
ದ.ಆಫ್ರಿಕಾ	6	4	1	1	9	+0.092
ವೆಸ್ಟ್ ಇಂಡೀಸ್	7	3	3	1	7	-0.885
ಇಂಗ್ಲೆಂಡ್	6	3	3		6	+0.778
ಭಾರತ	6	3	3		6	+0.768
ನ್ಯೂಜಿಲೆಂಡ್	7	3	4		4	+0.227
ಬಾಂಗ್ಲಾದೇಶ	6	1	5		2	-0.809
ಪಾಕಿಸ್ತಾನ	7	1	6		2	-1.313

ಶಂಕರ್ ನಾರಾಯಣ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ಶಂಕರ್ ನಾರಾಯಣ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ವಿಜಯನಗರ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಶನಿವಾರ ನಡೆದ 'ಡಿ' ಗುಂಪಿನ ಹಣಾಹಣಿಯಲ್ಲಿ ವಿಜಯನಗರ 8–0ಯಿಂದ ವಿವೇಕಾನಂದ ಎಫ್‌ಸಿ ತಂಡವನ್ನು ಸೋಲಿಸಿತು. ಶಂಕರ್ 23, 41 ಮತ್ತು 46ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಹರಿಹರನ್ (9, 38ನೇ ನಿ.) ಭೂಪತಿ ಕೆ. (10, 13ನೇ ನಿ.) ಕೂಡ ಮಿಂಚಿದರು. ಶಿವ ವೇಲನ್ (24ನೇ ನಿ.) ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಕಾರ್ತಿಕ್‌ರಾಮ್ ಗಳಿಸಿದ ಮೂರು ಗೋಲುಗಳಿಂದ ಯಂಗ್ ಡೈನಮೊಸ್ ಎಫ್‌ಸಿ 7–0ಯಿಂದ ಬಸವನಗುಡಿ ಎದುರು ಗೆದ್ದಿತು. 'ಐ' ಗುಂಪಿನ ಪಂದ್ಯದಲ್ಲಿ ಸರ್ವಜ್ಞ ನಗರ ಎಫ್‌ಸಿ 4–2ರಿಮದ ಕ್ವೀನ್ಸ್ ಸ್ಟಾರ್ ವಿರುದ್ಧ ಜಯಿಸಿತು.

ರ‍್ಯಾಲಿ: ಕರ್ಣ–ನಿಖಿಲ್ ಜೋಡಿ ಮುನ್ನಡೆ

ಚೆನ್ನೈ (ಪಿಟಿಐ): ಪ್ರತಿಕೂಲ ಪರಿಸ್ಥಿತಿಯಲ್ಲೂ ಎದೆಗುಂದದೆ ಮುನ್ನುಗ್ಗಿದ ಬೆಂಗಳೂರಿನ ಕರ್ಣ ಕಡೂರು ಮತ್ತು ಸಹ ಚಾಲಕ ನಿಖಿಲ್ ಪೈ ಅವರು ದಕ್ಷಿಣ ಭಾರತ ರ‍್ಯಾಲಿಯಲ್ಲಿ ಮುನ್ನಡೆ ಉಳಿಸಿಕೊಂಡರು. ಎಫ್‌ಐಎ ಏಷ್ಯಾ ಪೆಸಿಫಿಕ್ ರ‍್ಯಾಲಿಯ ಭಾಗವಾಗಿ ನಡೆಯುತ್ತಿರುವ ಸ್ಪರ್ಧೆ, ಅಖಿಲ ಭಾರತ ರ‍್ಯಾಲಿ ಚಾಂಪಿಯನ್‌ಷಿಪ್‌ನ ಕೊನೆಯ ಘಟ್ಟವೂ ಆಗಿದೆ.

ಪ್ರಶಸ್ತಿ ಗೆಲ್ಲುವ ನೆಚ್ಚಿನ ಚಾಲಕ ಹಾಗೂ ಏಳು ಬಾರಿಯ ಚಾಂಪಿಯನ್ ಗೌರವ್ ಗಿಲ್ ಶನಿವಾರದ ಸ್ಪರ್ಧೆಯಲ್ಲಿ ಪಾಲ್ಗೊಂಡಿರಲಿಲ್ಲ. ಕರ್ಣ ಮತ್ತು ನಿಖಿಲ್ ಅವರ ವಾಹನದಲ್ಲಿ ಹಾದಿ ಮಧ್ಯೆ ತೊಂದರೆ ಕಾಣಿಸಿಕೊಂಡಿತ್ತು. ಆದರೂ ಧೈರ್ಯದಿಂದ ಮುನ್ನುಗ್ಗಿ ಸಂಭ್ರಮದ ನಗೆ ಸೂಸಿದರು.

ಕೇರಳದ ಕೊಲ್ಲಂನ ಯೂನುಸ್ ಇಲಿಯಾಸ್ ಮತ್ತು ಕೋಲ್ಕತ್ತದ ಅಮಿತ್ ರಜಿತ್ ಘೋಷ್ ಅವರಿಗಿಂತ 19 ಸೆಕೆಂಡುಗಳ ಮುನ್ನಡೆಯನ್ನು ಉಳಿಸಿಕೊಂಡು ಕರ್ಣ ಜೋಡಿ ಸಾಮರ್ಥ್ಯ ಮೆರೆದರು.



ಕರ್ಣ ಕಡೂರು

ಮಿಥಾಲಿ ಪಡೆಗೆ ಸೆಮಿಫೈನಲ್ ಕನಸು

ಮಹಿಳಾ ವಿಶ್ವಕಪ್: ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಕ್ರೈಸ್ಟ್ ಚರ್ಚ್ (ಪಿಟಿಐ): ಅನಿಶ್ಚಿತತೆಯಲ್ಲಿರುವ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಿರ್ಣಾಯಕ ಪಂದ್ಯದಲ್ಲಿ ಭಾನುವಾರ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ. ಸೆಮಿಫೈನಲ್ ಪ್ರವೇಶಿಸಬೇಕಾಗದರೆ ಈ ಪಂದ್ಯದಲ್ಲಿ ಮಿಥಾಲಿ ರಾಜ್ ಬಳಗಕ್ಕೆ ಜಯ ಅನಿವಾರ್ಯ.

ಕಳೆದ ಬಾರಿಯ ರನ್ನರ್ ಅಪ್ ಭಾರತಕ್ಕೆ ಈ ಆವೃತ್ತಿಯಲ್ಲಿ ಇದುವರೆಗೆ ನಿರೀಕ್ಷಿತ ಸಾಮರ್ಥ್ಯ ಪ್ರದರ್ಶನ ತೋರಲು ಸಾಧ್ಯವಾಗಿಲ್ಲ. ಆರು ಪಂದ್ಯಗಳ ಪೈಕಿ ಮೂರರಲ್ಲಿ ಮಾತ್ರ ಗೆಲ್ಲಲು ತಂಡಕ್ಕೆ ಸಾಧ್ಯವಾಗಿದೆ. ಹೀಗಾಗಿ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಕುಸಿದಿದೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸಿದರೆ ವೆಸ್ಟ್ ಇಂಡೀಸ್ ತಂಡವನ್ನು ಹಿಂದಿಕ್ಕಿ ಅಂತಿಮ ನಾಲ್ಕರಲ್ಲಿ ಸ್ಥಾನ ಪಡೆದುಕೊಳ್ಳಬಹುದಾಗಿದೆ.

ಒಂದು ವೇಳೆ ದಕ್ಷಿಣ ಆಫ್ರಿಕಾ ಗೆದ್ದರೂ ಇದಕ್ಕೂ ಮೊದಲು ನಡೆಯಲಿರುವ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶಕ್ಕೆ ಇಂಗ್ಲೆಂಡ್ ಸುಲಭವಾಗಿ ಮಣಿದರೆ ಭಾರತದ ಕನಸು ನನಸಾಗಲಿದೆ. ಟೂರ್ನಿಯಲ್ಲಿ ಭಾರತದ ಬ್ಯಾಟಿಂಗ್ ವಿಭಾಗದ ಸತತ ವೈಫಲ್ಯ ಕಂಡಿದೆ. ಬೌಲಿಂಗ್‌ನಲ್ಲೂ ಅತ್ಯುತ್ತಮ ಸಾಧನೆ ಈ ವರೆಗೆ ಮೂಡಿಬಂದಿಲ್ಲ. ನಾಯಕಿ ಮಿಥಾಲಿ ರಾಜ್ ರನ್ ಗಳಿಸಲು ವಿಫಲರಾಗುತ್ತಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ಅವರು ಒಂದಂಕಿ ಮೊತ್ತಕ್ಕೆ ಔಟಾಗಿದ್ದಾರೆ. ತಲಾ ಒಂದೊಂದು ಶತಕ ಗಳಿಸಿದ್ದು ಬಿಟ್ಟರೆ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರಿಗೂ ಗಮನಾರ್ಹ ಸಾಧನೆ ಮಾಡಲು ಆಗಲಿಲ್ಲ.

ಬೌಲಿಂಗ್ ವಿಭಾಗದಲ್ಲಿ ಮಧ್ಯಮ ವೇಗಿ ಮೇಘನಾ ಸಿಂಗ್ ಬದಲಿಗೆ ಸ್ಪಿನ್ನರ್ ಪೂನಂ ಯಾದವ್ ಅವರಿಗೆ ಅವಕಾಶ ನೀಡಿರುವುದರಿಂದ ತಂಡಕ್ಕೆ ಹೆಚ್ಚು ಪ್ರಯೋಜನವೇನೂ ಆಗಲಿಲ್ಲ. ದಕ್ಷಿಣ ಆಫ್ರಿಕಾ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದೆ.

ಪಂದ್ಯ ಆರಂಭ: ಬೆಳಿಗ್ಗೆ 6.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮಿಥಾಲಿ ರಾಜ್ –ಎಎಫ್‌ಪಿ ಚಿತ್ರ